ಶುಕ್ರವಾರ, ಡಿಸೆಂಬರ್ 19, 2025 | ₹ 7.00

prajavani.net prajavani

www.prajavani.net

ಸಿಹಿ ಹಂಚಿದ ದೀದಿ

‘ಕೋಲ್ಕತ್ತ ಕ್ರಿಸ್‌ಮಸ್ ಹಬ್ಬ–2025’ಕ್ಕೆ ಗುರುವಾರ ಚಾಲನೆ ನೀಡಿದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸಿಹಿ ಹಂಚಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಾತ್ವಿಕ್– ಚಿರಾಗ್ ಶೆಟ್ಟಿ ಮುನ್ನಡೆ

ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಟೂರ್ ಫೈನಲ್ಸ್‌ನ ಗುಂಪು ಹಂತದ 2ನೇ ಪಂದ್ಯದಲ್ಲಿ ಇಂಡೊನೇಷ್ಯಾದ ಫಜರ್ ಅಲ್ಫಿಯಾನ್– ಮೊಹಮ್ಮದ್ ಫಿಕ್ರಿ ಜೋಡಿಯನ್ನು ಮಣಿಸಿತು

ಸುಸ್ಥಿರ ಸಮಾಜಕ್ಕೆ ಮಾಹೆ ತಂತ್ರಜ್ಞಾನದ ಸ್ಪರ್ಶ

ಮಾಹೆ 33ನೇ ಘಟಿಕೋತ್ಸವದಲ್ಲಿ ವಿವಿಧ ಗಣ್ಯರ ಒಕ್ಕೊರಲ ಅಭಿಪ್ರಾಯ, ಮಣಿಪಾಲ, ಬೆಂಗಳೂರು ಕ್ಯಾಂಪಸ್‌ನಲ್ಲಿ ಒಟ್ಟು 5 ದಿನಗಳ ಕಾರ್ಯಕ್ರಮ, 170 ಪಿಎಚ್‌ಡಿ ಪ್ರಶಸ್ತಿ ಪುರಸ್ಕೃತರು ಸೇರಿದಂತೆ 4,944 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ.

ಬೆಂಗಳೂರು : ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ), ಇನ್ಸ್ಟಿಟ್ಯೂಷನ್ ಆಫ್ ಎಮಿನೆನ್ಸ್ ಡೀಮ್ಡ್ ವಿಶ್ವವಿದ್ಯಾಲಯವು ನ.21ರಿಂದ 23ರವರೆಗೆ ಮಣಿಪಾಲದಲ್ಲಿ ಮತ್ತು ನ.29ರಿಂದ 30ರವರೆಗೆ ಬೆಂಗಳೂರಿನಲ್ಲಿ ಒಟ್ಟು ಐದು ದಿನಗಳ ಕಾಲ ತನ್ನ 33 ನೇ ಘಟಿಕೋತ್ಸವವನ್ನು ನಡೆಸಿತು. ಸಮಾರಂಭದಲ್ಲಿ 170 ಪಿಎಚ್‌ಡಿ ಪ್ರಶಸ್ತಿ ಪುರಸ್ಕೃತರು ಸೇರಿದಂತೆ 4,944 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಮಣಿಪಾಲ ಕ್ಯಾಂಪಸ್‌ನಲ್ಲಿ ವಿವಿಧ ವಿಭಾಗಗಳಲ್ಲಿ 11 ಅತ್ಯುನ್ನತ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಡಾ.ಟಿಎಂಎ ಪೈ ಚಿನ್ನದ ಪದಕವನ್ನು ನೀಡಿ ಗೌರವಿಸಲಾಯಿತು. ಬೆಂಗಳೂರು ಕ್ಯಾಂಪಸ್‌ನಲ್ಲಿ, 12 ಪಿಎಚ್‌ಡಿ ಪ್ರಶಸ್ತಿ ಪುರಸ್ಕೃತರು ಮತ್ತು 3 ಡಾ.ಟಿಎಂಎ ಪೈ ಚಿನ್ನದ ಪದಕಗಳು ಸೇರಿದಂತೆ 2,285 ವಿದ್ಯಾರ್ಥಿಗಳಿಗೆ ಪದವಿಗಳನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಮಾಹೆ ವೈಸ್‌ಛಾನ್ಸಲರ್ ಲೆ. ಜ. (ಡಾ.) ಎಂ. ಡಿ. ವೆಂಕಟೇಶ್, ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಗತಿಯೊಂದಿಗೆ ನವೋದ್ಯಮಗಳ ಮತ್ತು ಆವಿಷ್ಕಾರಗಳ ಮೂಲಕ ಅತ್ಯುತ್ತಮ ಭವಿಷ್ಯ ರೂಪಿಸಿಕೊಳ್ಳುವ ಕುರಿತು ಕಿವಿಮಾತು ಹೇಳಿದರು. ಜತೆಗೆ, ಮಾಹೆ ಪ್ರಸ್ತುತ ತಂತ್ರಜ್ಞಾನ ಯುಗದಲ್ಲಿರುವ ಎಲ್ಲಾ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡು ದೃಢ ಮತ್ತು ಸುಸ್ಥಿರ ಹೆಜ್ಜೆಗಳನ್ನಿಡುತ್ತಿರುವ ಕುರಿತ ವಿವರಗಳನ್ನು ತಿಳಿಸಿದರು. ಮಾಹೆಯ 32ಮೆಗಾವ್ಯಾಟ್ ಸೋಲಾರ್ ಪವರ್ ಸೌಕರ್ಯದ ಕುರಿತು ವಿವರಿಸಿದರು. ವಿಶೇಷವಾಗಿ ಶೈಕ್ಷಣಿಕ ಕ್ಷೇತ್ರ ಮಾತ್ರವಲ್ಲದೆ ಜಾಗತಿಕ ದೃಷ್ಟಿಕೋನದಲ್ಲಿ ಕಲಿಕಾ ವಿಧಾನ ಅಳವಡಿಕೆ, ವಿದ್ಯಾರ್ಥಿಗಳ ಕಲಿಕೆಗೆ ಪೂರಕ ವಾತಾವರಣ ನಿರ್ಮಾಣ, ಅಗತ್ಯ ಸಂಶೋಧನೆ, ತಂತ್ರಜ್ಞಾನದ ವಿಕಸನಕ್ಕೆ ಅಗತ್ಯ ಸಂಪನ್ಮೂಲಗಳ ಕ್ರೋಢೀಕರಣ ವ್ಯವಸ್ಥೆ ಸಹಕಾರಿಯಾಗುತ್ತದೆ ಎಂದರು. ಸಹಕುಲಾಧಿಪತಿಗಳಾದ ಪ್ರೊ.ಡಾ.ಎಚ್.ಎಸ್.ಬಲ್ಲಾಳ್, ಮಾಹೆ ಟ್ರಸ್ಟಿ ವಸಂತಿ ರಾಮದಾಸ ಪೈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಾಹೆ ಭವಿಷ್ಯದ ಯೋಜನೆಗಳು: ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ) ವತಿಯಿಂದ ಸಾಕಷ್ಟು ವಿನೂತನ ಯೋಜನೆಗಳನ್ನು ರೂಪಿಸಲಾಗುತ್ತಿದೆ. 7-ಕ್ಯುಬಿಟ್ ಕ್ವಾಂಟಮ್ ಕಂಪ್ಯೂಟಿಂಗ್ ಸೌಲಭ್ಯ, ಸ್ಮಾರ್ಟ್ ಉತ್ಪಾದನೆಗಾಗಿ ಐ-ಫ್ಯಾಕ್ಟರಿ, ರೊಬೊಟಿಕ್ಸ್ ಮತ್ತು ಎಐಗಾಗಿ ಹುಮನಾಯ್ಡ್ ಲ್ಯಾಬ್ ಮತ್ತು ಭವಿಷ್ಯದ ಪೀಳಿಗೆಗಾಗಿ 6G ಟೆಸ್ಟ್‌ಬೆಡ್ ವ್ಯವಸ್ಥೆ ಒದಗಿಸಲಾಗಿದೆ. ಮಣಿಪಾಲ್ ಯೂನಿವರ್ಸಲ್ ಟೆಕ್ನಾಲಜಿ ಬಿಸಿನೆಸ್ ಇನ್ಕ್ಯುಬೇಟರ್ (ಯುಟಿಬಿಐ) ಮೂಲಕ ಸ್ಟಾರ್ಟ್‌ಅಪ್‌ಗಳು ಮತ್ತು ತಂತ್ರಜ್ಞಾನ ಇನ್ಕ್ಯುಬೇಶನ್ ಬೆಂಬಲಿಸಲು ಬೆಂಗಳೂರಿನಲ್ಲಿ ಸ್ಯಾಟಲೈಟ್ ಕೇಂದ್ರವನ್ನು ತೆರೆಯುತ್ತದೆ. ಪ್ರಮುಖ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳೊಂದಿಗೆ ಹೊಸ ಡ್ಯುಯಲ್-ಡಿಗ್ರಿ, ಜಂಟಿ-ಡಿಗ್ರಿ ಮತ್ತು ಪಾಥ್‌ವೇ ಕಾರ್ಯಕ್ರಮಗಳೊಂದಿಗೆ ಶೈಕ್ಷಣಿಕ ವಿಸ್ತರಣೆಗೆ ಅವಕಾಶ ನೀಡಲಾಗುತ್ತದೆ. ಜತೆಗೆ, ಉದ್ಯಮ ಸಹಯೋಗ ಮತ್ತು ಅನ್ವಯಿಕ ಸಂಶೋಧನೆಯನ್ನು ಹೆಚ್ಚಿಸಲು ಎಐ-ಆಧಾರಿತ ಸಲಹಾ ಕೇಂದ್ರವೂ ಇರುತ್ತದೆ.

ಅಂಚೆ ಚೀಟಿ ಬಿಡುಗಡೆ

ಮಾಹೆ 33ನೇ ಘಟಿಕೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕುಲಾಧಿಪತಿಗಳಾದ ಡಾ.ರಾಮದಾಸ್ ಎಂ. ಪೈ ಅವರ 90ನೇ ಜನ್ಮದಿನದ ಅಂಗವಾಗಿ ಭಾರತೀಯ ಅಂಚೆ ಹೊರಡಿಸಿದ್ದ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಲಾಯಿತು. (ಎಡದಿಂದ ಬಲಕ್ಕೆ) ಮೌಲ್ಯಮಾಪನ ಕುಲಸಚಿವ ಡಾ. ವಿನೋದ್ ವಿ ಥಾಮಸ್, ಆರೋಗ್ಯ ವಿಜ್ಞಾನ ವಿಭಾಗದ ಪ್ರೊವೈಸ್ ಚಾನ್ಸಲರ್ ಡಾ.ಶರತ್ ರಾವ್, ತಂತ್ರಜ್ಞಾನ ಮತ್ತು ವಿಜ್ಞಾನ ಪ್ರೊವೈಸ್ ಚಾನ್ಸಲರ್ ಡಾ.ನಾರಾಯಣ ಸಭಾಹಿತ್, ಮುಖ್ಯ ಅತಿಥಿ ವೈಸ್‌ಛಾನ್ಸಲರ್ ಲೆ. ಜ. (ಡಾ.) ಎಂ. ಡಿ. ವೆಂಕಟೇಶ್, ಶಿವ ನಾಡಾರ್ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಅನನ್ಯಾ ಮುಖರ್ಜಿ, ಸಹಕುಲಾಧಿಪತಿಗಳಾದ ಡಾ.ಎಚ್.ಎಸ್.ಬಲ್ಲಾಳ, ಮಾಹೆ ಟ್ರಸ್ಟಿ ವಸಂತಿ ರಾಮದಾಸ ಪೈ, ಮಂಗಳೂರು ಮಾಹೆ ಕ್ಯಾಂಪಸ್‌ನ ಪ್ರೊವೈಸ್ ಛಾನ್ಸಲರ್ ಡಾ.ದಿಲೀಪ್.ಜಿ ನಾಯಕ್ ಮತ್ತು ಮಾಹೆಯ ಕುಲಸಚಿವರಾದ ಡಾ. ಗಿರಿಧರ್ ಕಿಣಿ ಇದ್ದರು.

ಕಾರ್ಯಕ್ರಮದಲ್ಲಿ ಗಣ್ಯರ ಮಾತಿನ ಝಲಕ್

'ಪ್ರಸ್ತುತ ಜಗತ್ತಿನಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್‌ಅನ್ನು ಉಪಯುಕ್ತ ಆವಿಷ್ಕಾರವನ್ನಾಗಿ, ವಿಧ್ವಂಸಕ ಶಕ್ತಿಯನ್ನಾಗಿ ನೋಡುವ ಎರಡು ಪ್ರತ್ಯೇಕ ವರ್ಗಗಳಿವೆ. ಜತೆಗೆ, ಮನುಷ್ಯನ ಉದ್ಯೋಗವನ್ನೇ ಕಸಿಯಲಿದೆ ಎಂಬ ಆತಂಕ ಸೃಷ್ಟಿಯಾಗಿದೆ. ಈ ರೀತಿಯ ಅಭಿಪ್ರಾಯಗಳನ್ನಾಧರಿಸಿ ನಾವು ಒಂದು ನಿರ್ಣಯಕ್ಕೆ ಬರಬಾರದು. ನಮ್ಮ ನಿರ್ಧಾರಗಳನ್ನು ಕೈಗೊಳ್ಳಲು ಎಐ ಮತ್ತು ಕಂಪ್ಯೂಟೇಶನಲ್ ತಂತ್ರಜ್ಞಾನಗಳನ್ನು ಬಳಸಿಕೊಳ್ಳಬೇಕು. ಜತೆಗೆ, ಅತಿಮುಖ್ಯವಾಗಿ ನೈತಿಕ ಚಿಂತನೆಗಳ ಆಯ್ಕೆಗಳ ವಿಷಯವನ್ನು ಮನುಷ್ಯ ಕೈಗೊಳ್ಳುವಂತಿರಬೇಕು.'

-**ಡಾ.ಅನನ್ಯಾ ಮುಖರ್ಜಿ,** ಕುಲಪತಿಗಳು, ಶಿವ ನಾಡಾರ್ ವಿಶ್ವವಿದ್ಯಾಲಯ, ದೆಹಲಿ ಎನ್‌ಸಿಆರ್.

'ತಂತ್ರಜ್ಞಾನವನ್ನು ಸುಖಾಸುಮ್ಮನೆ ರಚಿಸುವುದು ಅಥವಾ ಬಳಸುವುದು ಸರಿಯಲ್ಲ. ಅತ್ಯಂತ ಜವಾಬ್ದಾರಿಯುತವಾಗಿ ಬಳಸಿಕೊಳ್ಳುವ ಜಾಣ್ಮೆ ಮುಖ್ಯ.' ಜತೆಗೆ, ತಂತ್ರಜ್ಞಾನದ ವಿಷಯದಲ್ಲಿ 'ಇದನ್ನು ಮಾಡೋಣವೇ? ಇದನ್ನು ಬಳಸೋಣವೇ?' ಎಂದು ಕೇಳುವುದಕ್ಕಿಂತ, 'ಇದನ್ನು ಮಾಡಬೇಕೆ? ಇದನ್ನು ಬಳಸಬೇಕೆ?' ಎಂದು ಕೇಳುವುದು ಸೂಕ್ತ. ನಿಮ್ಮ ತಂತ್ರಜ್ಞಾನದ ಕೌಶಲ್ಯಗಳು ಕೇವಲ ನಿಮ್ಮ ಪ್ರಗತಿಗೆ ಮಾತ್ರ ಬಳಕೆಯಾಗದೇ ಸಮಾಜಕ್ಕೂ ಕೊಡುಗೆಯನ್ನು ನೀಡುವಂತಿರಬೇಕು.

-**ಬಿಕ್ರಂ ಸಿಂಗ್ ಬೇಡಿ,** ಉಪಾಧ್ಯಕ್ಷರು, ಏಷ್ಯಾ ಪೆಸಿಫಿಕ್ ಸ್ಟ್ರಾಟರ್ಜಿಕ್ ಇನಿಶಿಯೇಟಿವ್, ಗೂಗಲ್ ಕ್ಲೌಡ್.



'ಪ್ರತಿಯೊಬ್ಬರ ಜ್ಞಾನವು ಉಪಯುಕ್ತ ರೀತಿಯಲ್ಲಿ ಬಳಕೆಯಾಗಬೇಕೆಂದರೆ ಅದಕ್ಕೆ ಪರಿಣಾಮಕಾರಿ ಸಂವಹನ ಸಾಮರ್ಥ್ಯ ಮಹತ್ವ ಪಾತ್ರ ವಹಿಸಿ, ಸೇತುವೆಯಂತೆ ಕೆಲಸ ಮಾಡುತ್ತದೆ. ಜತೆಗೆ, ಮಾನವೀಯ ನೆಲೆಗಟ್ಟಿನಲ್ಲಿ ಚಿಂತಿಸುವ ನೈಜ ಸಂಬಂಧಗಳು ಜೊತೆಯಾದಾಗ ಮಾತ್ರ ಜ್ಞಾನ ಮತ್ತು ವಿಜ್ಞಾನಗಳು ನಿಜವಾದ ಅರ್ಥ ಪಡೆಯುತ್ತವೆ.'

-**ಡಾ.ಹ್ಯಾನಿ ಎಟೀಬಾ,** ಅಧ್ಯಕ್ಷರು, ರಾಯಲ್ ಕಾಲೇಜು ಆಫ್ ಫಿಸೀಶಿಯನ್ಸ್ ಆ್ಯಂಡ್ ಸರ್ಜನ್ಸ್, ಗ್ಲ್ಯಾಸ್ಗೋ.

'ಯಂತ್ರಗಳು ಮಾಹಿತಿ, ದತ್ತಾಂಶಗಳಿಂದ ಕಲಿಯುತ್ತವೆ. ಮನುಷ್ಯ ತನ್ನ ಸತತ ಪ್ರಯತ್ನಗಳಿಂದ ಕಲಿಯುತ್ತಾನೆ. ಯಾರಲ್ಲಿ ಕುತೂಹಲ, ವಿಷಯಗಳ ಕುರಿತು ಸ್ಪಷ್ಟತೆಯ ನಿರೀಕ್ಷೆ, ಮಾಡುವ ಕೆಲಸಗಳಲ್ಲಿ ಚಿಂತನಾಶೀಲತೆವುಳ್ಳವರಿಗೆ ಭವಿಷ್ಯದ ತಂತ್ರಜ್ಞಾನ ಮೀಸಲಿರಲಿದೆ.

-**ರಾಜ್‌ಕಮಲ್ ವೆಂಪಾಟಿ,** ಮುಖ್ಯಸ್ಥರು, ಗ್ರೂಪ್ ಎಕ್ಸಿಕ್ಯೂಟಿವ್ ಮತ್ತು ಮಾನವ ಸಂಪನ್ಮೂಲ ವಿಭಾಗ, ಆಕ್ಸಿಸ್ ಬ್ಯಾಂಕ್.



'ಶ್ರೇಷ್ಠ ಸಂಸ್ಥೆಗಳನ್ನು ಕೇವಲ ಅಸ್ತಿತ್ವಕ್ಕಲ್ಲ, ಪರಂಪರೆಗಾಗಿ ನಿರ್ಮಿಸಲಾಗುತ್ತದೆ.' ಈ ಪರಂಪರೆಯ ಸೊಬಗನ್ನು ಹೆಚ್ಚಿಸಬೇಕೆಂದರೆ ಜವಾಬ್ದಾರಿಯುತ ನಡೆ ಮುಖ್ಯವಾಗುತ್ತದೆ. ಈ ಹಂತದಲ್ಲಿ ಸಂಸ್ಕೃತಿಗಳನ್ನು ಗೌರವಿಸುವುದು ಮುಖ್ಯ. ಸಾಂಸ್ಕೃತಿಕ ಹಿನ್ನೆಲೆಯಿಲ್ಲದ ತಂತ್ರಜ್ಞಾನ ಸೋಲುತ್ತದೆ. ಪ್ರಾದೇಶಿಕ ಪದ್ಧತಿಗಳು, ಭಾಷೆಗಳು, ದೈನಂದಿನ ಜೀವನ ಶೈಲಿಗಳನ್ನು ಕಡೆಗಣಿಸುವ ಮಾದರಿಗಳು ಜನರಿಗೆ ನಿಜವಾದ ಸೇವೆ ಸಲ್ಲಿಸಲು ಸಾಧ್ಯವಿಲ್ಲ. ಏಕೆಂದರೆ, ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವ ತಂತ್ರಜ್ಞಾನ ಮಾತ್ರ ಸಂಸ್ಕೃತಿಯಷ್ಟೇ ಪ್ರಭಾವಶಾಲಿಯಾಗುತ್ತದೆ. ಸಂಸ್ಥೆಗಳು ಸಂಸ್ಕೃತಿ, ಸಮಗ್ರತೆಗೆ ಹೆಚ್ಚಿನ ಮಹತ್ವ ನೀಡಬೇಕಾಗುತ್ತದೆ. ಜತೆಗೆ, ನಿಧಾನವಾಗಿ ಗಳಿಸಿದ ನಂಬಿಕೆ, ತ್ವರಿತ ವೇಗಕ್ಕಿಂತ ಹೆಚ್ಚು ಮೌಲ್ಯಯುತವಾಗಿರುತ್ತದೆ ಎನ್ನುವ ಅಂಶಗಳನ್ನು ಮಾರ್ಗಸೂಚಿಗಳನ್ನಾಗಿಸಿಕೊಳ್ಳಬೇಕು.

-**ಪರೋಮಾ ಚಟರ್ಜಿ,** ಸಿಇಒ, ರಿವೊಲ್ಯೂಟ್ ಇಂಡಿಯಾ.

ಡಾ.ಟಿಎಂಎ ಪೈ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು

- ಪೊನ್ನಮ್ಮ.ಎಂ.ಎಂ, ಎಂ.ಎಸ್ಸಿ. ವೈದ್ಯಕೀಯ ಜೈವಿಕ ತಂತ್ರಜ್ಞಾನ, ಎಂಎಸ್‌ಎಲ್‌ಎಸ್ ಮಣಿಪಾಲ,
- ನಿಕಿತಾ ಮರೀನಾ ಸಲ್ಡಾನ್ಹಾ, ಬಿ.ಫಾರ್ಮ್, ಎಂಸಿಒಪಿಎಸ್ ಮಣಿಪಾಲ
- ಸಿರಿಲ್ ಬಿಜಿ, ಎಂ.ಎಸ್ಸಿ. ಬಯೋಸ್ಟಾಟಿಸ್ಟಿಕ್ಸ್, ಪಿಎಸ್‌ಪಿಹೆಚ್, ಮಣಿಪಾಲ
- ವಿಂಧ್ಯಾ ಎಸ್. ಬಾದಲ್, ಬಿ.ಎಸ್ಸಿ, ಕ್ಲಿನಿಕಲ್ ನ್ಯೂಟ್ರಿಷನ್ ಮತ್ತು ಡಯೆಟಿಕ್ಸ್, ಎಂಸಿಎಚ್‌ಪಿ, ಮಣಿಪಾಲ
- ರಾಶಿ ಗೋಯೆಲ್, ಬಿ.ಟೆಕ್, ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್, ಎಂಐಟಿ ಮಣಿಪಾಲ.
- ನೇಹಾ ಶ್ರೀಕುಮಾರ್, ಬಿ.ಎಸ್ಸಿ ನರ್ಸಿಂಗ್, ಎಂಸಿಒಎನ್, ಮಣಿಪಾಲ
- ಮಂದಿರ, ಬಿ.ಎ, ಮಾಧ್ಯಮ ಮತ್ತು ಸಂವಹನ, ಎಂಐಸಿ ಮಣಿಪಾಲ.
- ನಿಧಿ ಎಸ್. ಎಂಇ, ಬಿಗ್ ಡೇಟಾ ಅನಾಲಿಟಿಕ್ಸ್, ಎಂಎಸ್‌ಐಎಸ್ ಮಣಿಪಾಲ.
- ಇಶಾ ಜೊನಾಥನ್ ವಿಲ್ಸನ್, ಬಿಎಚ್‌ಎಂ, ಡಬ್ಲ್ಯೂಜಿಎಸ್‌ಎಚ್‌ಎ, ಮಣಿಪಾಲ.
- ಕಾಶಿಕ ಅನಿಲ್ ಕಿಣಿ – ಬಿ.ಕಾಮ್ ಪ್ರೊಫೆಷನಲ್, ಎಂಎಸ್‌ಸಿಇ, ಮಣಿಪಾಲ
- ಝುರಾ ಮೊಹಿದ್ದೀನ್ - ಐಪಿಎಂ, ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಮಣಿಪಾಲ
- ರಿಯಾನ್ನಾ ಚಟ್ಟೋಪಾಧ್ಯಾಯ - ಬ್ಯಾಚುಲರ್ ಆಫ್ ಡಿಸೈನ್, ಎಸ್‌ಎಂಐ.
- ಮೊಹ್ನಿಶ್ರಾಜ.ಕೆ – ಎಲ್.ಎಲ್.ಎಂ. ಡೇಟಾ ಪ್ರೈವಸಿ ಮತ್ತು ಐಟಿ, ಎಂಎಲ್‌ಎಸ್.
- ದಿಬ್ಯಾಭಾ ದೇಬ್ - ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್, ಎಂಐಟಿ

MANIPAL
ACADEMY of HIGHER EDUCATION
(Institution of Eminence Deemed to be University)

ಜಾಗತಿಕ ಮಟ್ಟದಲ್ಲಿ ಮಾಹೆ ಸಾಧನೆ

ರಾಷ್ಟ್ರ ಮಟ್ಟದ ರ‍್ಯಾಂಕಿಂಗ್‌ಗಳು (ಎನ್‌ಐಆರ್‌ಎಫ್ 2025)

- ವಿಶ್ವವಿದ್ಯಾಲಯ ವಿಭಾಗದಲ್ಲಿ 3ನೇ ಸ್ಥಾನ
- ಒಟ್ಟಾರೆ 14ನೇ ಸ್ಥಾನ
- ಸಂಶೋಧನಾ ಸಂಸ್ಥೆಗಳ ವಿಭಾಗದಲ್ಲಿ 19ನೇ ಸ್ಥಾನ
- ನಾವೀನ್ಯತಾ ವಿಭಾಗದಲ್ಲಿ 11-50
- ಎಸ್‌ಡಿಜಿ ಸಂಸ್ಥೆ ವಿಭಾಗದಲ್ಲಿ 5ನೇ ಸ್ಥಾನ

ಸಾಂಸ್ಥಿಕ ರ‍್ಯಾಂಕಿಂಗ್‌ಗಳು

- ಫಾರ್ಮಸಿ ವಿಭಾಗದಲ್ಲಿ 8ನೇ ಸ್ಥಾನ (ಎಂಸಿಒಪಿಎಸ್, ಮಣಿಪಾಲ್)
- ವಾಸ್ತುಶಿಲ್ಪ ವಿಭಾಗದಲ್ಲಿ 27ನೇ ಸ್ಥಾನ (ಎಂಎಸ್‌ಎಪಿ, ಮಣಿಪಾಲ್)
- ದಂತ ವೈದ್ಯಕೀಯ ವಿಭಾಗದಲ್ಲಿ 5ನೇ ಸ್ಥಾನ (ಎಂಸಿಒಡಿಎಸ್, ಮಣಿಪಾಲ್)
- ಎಂಜಿನಿಯರಿಂಗ್ ವಿಭಾಗದಲ್ಲಿ 59ನೇ ಸ್ಥಾನ (ಎಂಐಟಿ, ಮಣಿಪಾಲ್)
- ಮ್ಯಾನೇಜ್‌ಮೆಂಟ್ ವಿಭಾಗದಲ್ಲಿ 39ನೇ ಸ್ಥಾನ (ಟಿಎಪಿಎಂಐ, ಮಣಿಪಾಲ್)
- ವೈದ್ಯಕೀಯ ವಿಭಾಗದಲ್ಲಿ 10ನೇ ಸ್ಥಾನ (ಕೆಎಂಸಿ, ಮಣಿಪಾಲ್)
- ದಂತ ವೈದ್ಯಕೀಯ ವಿಭಾಗದಲ್ಲಿ 11ನೇ ಸ್ಥಾನ (ಎಂಸಿಒಡಿಎಸ್, ಮಂಗಳೂರು)
- ವೈದ್ಯಕೀಯ ವಿಭಾಗದಲ್ಲಿ 35ನೇ ಸ್ಥಾನ (ಕೆಎಂಸಿ, ಮಂಗಳೂರು)

ವಿಶೇಷ ಹಿರಿಮೆ!
ಎನ್‌ಐಆರ್‌ಎಫ್ 2025 ಶ್ರೇಯಾಂಕದಲ್ಲಿ ಮಾಹೆ ವಿಶ್ವವಿದ್ಯಾಲಯ ರಾಷ್ಟ್ರ ಮಟ್ಟದಲ್ಲಿ 3ನೇ ಸ್ಥಾನ ಪಡೆಯುವ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನ ಛಾಪು ಮೂಡಿಸಿದೆ

ಜಾಗತಿಕ ರ‍್ಯಾಂಕಿಂಗ್‌ಗಳು

- ಏಷ್ಯನ್ ವಿಶ್ವವಿದ್ಯಾಲಯ ರ‍್ಯಾಂಕಿಂಗ್‌ಗಳು 2025: 197ನೇ ಸ್ಥಾನ
- ಜಗತ್ತಿನ ವಿಶ್ವವಿದ್ಯಾಲಯ ರ‍್ಯಾಂಕಿಂಗ್‌ಗಳು 2026: 851–900ರ ಸ್ಥಾನ
- ಫಾರ್ಮಸಿ ವಿಭಾಗದಲ್ಲಿ 101-150 (ವಿಶ್ವಾದ್ಯಂತ)
- ವೈದ್ಯಕೀಯ ವಿಭಾಗದಲ್ಲಿ : 251–300 (ವಿಶ್ವಾದ್ಯಂತ)
- ದಂತವೈದ್ಯಶಾಸ್ತ್ರ ವಿಭಾಗದಲ್ಲಿ 51-120 (ವಿಶ್ವಾದ್ಯಂತ)
- ಜೀವ ವಿಜ್ಞಾನ ಮತ್ತು ಔಷಧ ವಿಭಾಗದಲ್ಲಿ 293 (ವಿಶ್ವಾದ್ಯಂತ)
- ರಸಾಯನಶಾಸ್ತ್ರ ವಿಭಾಗದಲ್ಲಿ 501–550 (ವಿಶ್ವಾದ್ಯಂತ)
- ಕಂಪ್ಯೂಟರ್ ವಿಜ್ಞಾನ ವಿಭಾಗದಲ್ಲಿ 601–650 (ವಿಶ್ವಾದ್ಯಂತ)
- ಅರ್ಥಶಾಸ್ತ್ರ ವಿಭಾಗದಲ್ಲಿ 551–700 (ವಿಶ್ವಾದ್ಯಂತ)
- ಯಂಗ್ ಯೂನಿವರ್ಸಿಟಿ ರ‍್ಯಾಂಕಿಂಗ್‌ಗಳು 2024: 175ನೇ ಸ್ಥಾನ
- ವೈದ್ಯಕೀಯ ಮತ್ತು ಆರೋಗ್ಯ: ವಿಶ್ವಾದ್ಯಂತ 301–400
- ಗುಣಮಟ್ಟದ ಶಿಕ್ಷಣ: ವಿಶ್ವಾದ್ಯಂತ 43ನೇ ಸ್ಥಾನ
- ಲಿಂಗ ಸಮಾನತೆ: ವಿಶ್ವಾದ್ಯಂತ 11ನೇ ಸ್ಥಾನ
- ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ: ವಿಶ್ವಾದ್ಯಂತ 74ನೇ ಸ್ಥಾನ
- ಸಾರ್ವಜನಿಕ ಆರೋಗ್ಯ: ವಿಶ್ವಾದ್ಯಂತ 301–400
- ಕ್ಲಿನಿಕಲ್ ಔಷಧ: ವಿಶ್ವಾದ್ಯಂತ 401–500

ಅಂಚೆ ಲಕೋಟೆ ಬಿಡುಗಡೆ

ಮಾಹೆ ಕುಲಾಧಿಪತಿಗಳಾದ ಡಾ.ರಾಮದಾಸ ಎಂ.ಪೈರವರ 90ನೇ ಜನ್ಮದಿನದ ಅಂಗವಾಗಿ ಭಾರತೀಯ ಅಂಚೆ ಇಲಾಖೆ ಬಿಡುಗಡೆಗೊಳಿಸಿದ 'ಅಂಚೆ ಲಕೋಟೆ'.

ಮಾಹೆ ಪ್ರಗತಿಯ ಯೋಜನೆಗಳು

- **ನೈಸರ್ಗಿಕ ಇಂಧನ ಬಳಕೆ:** ಕ್ಯಾಂಪಸ್‌ನಲ್ಲಿ ಇಂಧನ ಉಳಿಕೆ ಮತ್ತು ಹಸಿರು ವಿದ್ಯುತ್ ಅಳವಡಿಕೆ ಹೆಚ್ಚಿಸುವ ಸಲುವಾಗಿ 132MW ಸೋಲಾರ್ ಕೇಂದ್ರ ಸ್ಥಾಪನೆ.
- **ಕೌಶಲ್ಯಗಳಿಗೆ ಕ್ರಾಂತಿಕಾರಕ ಸೌಕರ್ಯ:** ಭವಿಷ್ಯದ ಕೌಶಲ್ಯಗಳಿಗೆ ವೇದಿಕೆಯನ್ನು ಕಲ್ಪಿಸುವ ನಿಟ್ಟಿನಲ್ಲಿ 500ಕೋಟಿ ರೂ. ವೆಚ್ಚದಲ್ಲಿ ಮೈಕ್ರೋ ಕ್ರೆಡೆನ್ಶಿಯಲ್‌ಗಳಿಗೆ ಪ್ರತ್ಯೇಕ ಕೇಂದ್ರ ವೃದ್ಧಿ.
- **ಅನ್ವೇಷಣೆಗೆ ಆದ್ಯತೆ:** ಸಂಶೋಧನೆ ಮತ್ತು ಆಧುನಿಕ ಆವಿಷ್ಕಾರಗಳಿಗೆ ಸಹಕಾರಿಯಾಗುವಂತೆ ಹೈಟೆಕ್ ಬಾಹ್ಯಾಕಾಶ ತಂತ್ರಜ್ಞಾನ ಕೇಂದ್ರಗಳಲ್ಲಿ ಹೂಡಿಕೆ.
- **ಕ್ರೀಡೆಗೆ ಪ್ರೋತ್ಸಾಹ:** ಕ್ಯಾಂಪಸ್‌ನಲ್ಲಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು ಮತ್ತು ವಿಶ್ವದರ್ಜೆಯ ಸೌಕರ್ಯಗಳನ್ನು ಕಲ್ಪಿಸುವುದು. ಜತೆಗೆ, ಕ್ರೀಡಾಪಟುಗಳಿಗೆ ನೆರವಾಗುವ ಸುಧಾರಿತ ಕ್ರಮಗಳನ್ನು ಅನುಸರಿಸುವುದು.
- **ಆವಿಷ್ಕಾರಕ್ಕೆ ವೇಗ ;** ಸಂಶೋಧನೆ ಮತ್ತು ಆವಿಷ್ಕಾರದ ಚಿಂತನೆಗಳಿಗೆ ವಾರ್ಷಿಕ 400ಕೋಟಿ ರೂ. ಮೀಸಲಿಡುವ ಮೂಲಕ ವೈಜ್ಞಾನಿಕ ವಲಯಕ್ಕೆ ಉತ್ತೇಜನ.

ಜಾರ್ಖಂಡ್ ಚಾಂಪಿಯನ್
ನಾಯಕ ಇಶಾನ್ ಕಿಶನ್ ಅವರ ಶತಕದ ಬಲದಿಂದ ಜಾರ್ಖಂಡ್ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟ್ರೋಫಿ ಫೈನಲ್‌ನಲ್ಲಿ ಗುರುವಾರ ಹರಿಯಾಣ ತಂಡವನ್ನು ಮಣಿಸಿ ಚಾಂಪಿಯನ್ ಆಯಿತು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 84,481 | ನಿಫ್ಟಿ 25,815 | $/₹ 90.20 | ಚಿನ್ನ (Std. 10g) ₹1,38,890 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,13,700 (ಬೆಂಗಳೂರು)

‘ಜಿ ರಾಮ್ ಜಿ’ಗೆ ಅಂಗೀಕಾರ

ವಿಪಕ್ಷ ಸದಸ್ಯರ ತೀವ್ರ ವಿರೋಧ; ಮಸೂದೆ ಪ್ರತಿ ಹರಿದುಹಾಕಿ ಆಕ್ರೋಶ

ನವದೆಹಲಿ (ಪಿಟಿಐ): ‘ನರೇಗಾ’ ಯೋಜನೆಗೆ ಪರ್ಯಾಯವಾಗಿ ರೂಪಿಸಿರುವ ‘ವಿಕಸಿತ ಭಾರತ–ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ–ಜಿ ರಾಮ್ ಜಿ) ಮಸೂದೆಯನ್ನು ವಿರೋಧ ಪಕ್ಷಗಳ ತೀವ್ರ ಪ್ರತಿರೋಧದ ನಡುವೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಗುರುವಾರ ಅಂಗೀಕರಿಸಲಾಯಿತು.

ಲೋಕಸಭೆಯಲ್ಲಿ ಮಸೂದೆ ಬಗ್ಗೆ ಎಂಟು ಗಂಟೆ ನಡೆದ ವಿಸ್ತೃತ ಚರ್ಚೆಗೆ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಉತ್ತರಿಸಿ, ‘ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಮಹಾತ್ಮ ಗಾಂಧಿಯವರ ಆದರ್ಶಗಳನ್ನು ಎತ್ತಿಹಿಡಿಯುತ್ತದೆ’ ಎಂದು ಪ್ರತಿಪಾದಿಸಿದರು.

‘ಮಸೂದೆಯನ್ನು ವಿರೋಧಿಸುವ ಕಾಂಗ್ರೆಸ್ ಪಕ್ಷವು ಗಾಂಧೀಜಿ ಪ್ರತಿಪಾದಿಸಿದ ಆದರ್ಶಗಳನ್ನು ಹಲವು ಬಾರಿ ‘ಕೊಂದಿದೆ’ ಮತ್ತು ಅವರ ಹೆಸರನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಂಡಿದೆ’ ಎಂದು ಆರೋಪಿಸಿದರು.

ಚೌಹಾಣ್ ಅವರು ಮಾತನಾಡುತ್ತಿರುವಾಗ ವಿರೋಧ ಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಮಸೂದೆಯ ಪ್ರತಿ ಹರಿದು ಹಾಕಿದರು. ಮಸೂದೆಗೆ ಅಂಗೀಕಾರ ಲಭಿಸಿದ ಕೂಡಲೇ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು. ಸಂಸತ್ತಿನ ಚಳಿಗಾಲದ ಅಧಿವೇಶನ ಶುಕ್ರವಾರ ಕೊನೆಗೊಳ್ಳಲಿದೆ.

ಗ್ರಾಮೀಣ ಭಾಗದ ಬಡ ಜನರಿಗೆ ಉದ್ಯೋಗ ಖಾತರಿಪಡಿಸುವ ‘ನರೇಗಾ’ (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ) ಯೋಜನೆಯಿಂದ ಗಾಂಧೀಜಿ ಹೆಸರು ಕೈಬಿಟ್ಟಿರುವುದಕ್ಕೆ ವಿರೋಧ ಪಕ್ಷಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದವು.

ವಿಪಕ್ಷಗಳ ಟೀಕೆಗೆ ಪ್ರತಿಕ್ರಿಯಿಸಿದ ಚೌಹಾಣ್, ‘ಎನ್‌ಡಿಎಯು ಪ್ರಧಾನ ಮಂತ್ರಿ ಆವಾಸ್ ಯೋಜನೆ ಮೂಲಕ ನಿರ್ಮಿಸಿರುವ ಮನೆಗಳು, ಉಜ್ವಲ ಯೋಜನೆ, ಸ್ವಚ್ಛ ಭಾರತ ಮಿಷನ್ ಮತ್ತು ಆಯುಷ್ಮಾನ್ ಭಾರತ್ ಅಡಿಯಲ್ಲಿ ಗಾಂಧೀಜಿ ಅವರ ಆದರ್ಶಗಳು ಜೀವಂತವಾಗಿರುವುದನ್ನು ಖಚಿತಪಡಿಸಿದೆ’ ಎಂದು ಬಡವರ ಕಲ್ಯಾಣಕ್ಕಾಗಿ ಸರ್ಕಾರ ಜಾರಿಗೊಳಿಸಿದ ಯೋಜನೆಗಳನ್ನು ಪಟ್ಟಿ ಮಾಡಿದರು.

ಯುಪಿಎ ಆಳ್ವಿಕೆಯಲ್ಲಿ ‘ನರೇಗಾ’ ಯೋಜನೆ ಭ್ರಷ್ಟಾಚಾರದಿಂದ ತುಂಬಿತ್ತು. ಗೊತ್ತುಪಡಿಸಿದ ಕೆಲಸಗಳಿಗೆ ಸಾಮಗ್ರಿಗಳ ಖರೀದಿಗೆ ನಿರೀಕ್ಷಿತ ಪ್ರಮಾಣದ ಹಣವನ್ನು ಖರ್ಚು ಮಾಡಲಾಗಿಲ್ಲ ಎಂದು ಆರೋಪಿಸಿದರು. ▶11

> **ಮಸೂದೆ ಅಂಗೀಕರಿಸುವಾಗ ವಿಪಕ್ಷಗಳ ಸದಸ್ಯರ ವರ್ತನೆ ಗೂಂಡಾಗಿರಿಯಂತೆ ಇತ್ತು. ಅವರ ನಡವಳಿಕೆ ಪ್ರಜಾಪ್ರಭುತ್ವವನ್ನು ಅವಮಾನಿಸಿದೆ**
> **ಶಿವರಾಜ್ ಸಿಂಗ್ ಚೌಹಾಣ್,** ಗ್ರಾಮೀಣಾಭಿವೃದ್ಧಿ ಸಚಿವ

> **ಈ ದಬ್ಬಾಳಿಕೆಯ ವಿರುದ್ಧ ನಾವು ಬೀದಿಗಿಳಿದು ಹೋರಾಡುತ್ತೇವೆ. ಇದು ‘ನರೇಗಾ’ದ ಮರುನಾಮಕರಣವಷ್ಟೇ ಅಲ್ಲ. ಬದಲಾಗಿ, ಇದು ವಿಶ್ವದ ಅತಿದೊಡ್ಡ ಉದ್ಯೋಗ ಯೋಜನೆಯ ವ್ಯವಸ್ಥಿತ ಹತ್ಯೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಶಿವರಾಜ್ ಸಿಂಗ್ ಚೌಹಾಣ್ ಮಾತನಾಡುತ್ತಿರುವಾಗ ವಿಪಕ್ಷಗಳ ಸದಸ್ಯರು ಮಸೂದೆಯ ಪ್ರತಿಯನ್ನು ಹರಿದು ಎಸೆದರು –ಪಿಟಿಐ ಚಿತ್ರ

ಮನವಿ ತಿರಸ್ಕರಿಸಿದ ಸ್ಪೀಕರ್

- ಮಸೂದೆಯನ್ನು ಸಂಸದೀಯ ಸ್ಥಾಯಿ ಸಮಿತಿಗೆ ಒಪ್ಪಿಸುವಂತೆ ಕಾಂಗ್ರೆಸ್‌ನ ಕೆ.ಸಿ.ವೇಣುಗೋಪಾಲ್ ಅವರಿಂದ ಸ್ಪೀಕರ್ ಓಂ ಬಿರ್ಲಾ ಅವರಿಗೆ ಮನವಿ
- ಎಂಟು ಗಂಟೆ ಚರ್ಚೆ ನಡೆದಿದ್ದು, ವಿವಿಧ ಪಕ್ಷಗಳ 98 ಸದಸ್ಯರು ಮಸೂದೆ ಬಗ್ಗೆ ಮಾತನಾಡಿದ್ದಾರೆ ಎಂದು ಹೇಳಿ ಮನವಿ ತಳ್ಳಿಹಾಕಿದ ಸ್ಪೀಕರ್
- ವಿಪಕ್ಷಗಳ ತೀವ್ರ ವಿರೋಧದ ನಡುವೆಯೇ ಧ್ವನಿಮತದ ಮೂಲಕ ಮಸೂದೆಗೆ ಅಂಗೀಕಾರ

ಒಳಮೀಸಲು ರಕ್ಷಣೆ ಮಸೂದೆಗೆ ಒಪ್ಪಿಗೆ

ಸುವರ್ಣ ವಿಧಾನಸೌಧ (ಬೆಳಗಾವಿ): ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಮೂರು ಪ್ರವರ್ಗಗಳಾಗಿ ವರ್ಗೀಕರಿಸಿ ಒಳ ಮೀಸಲಾತಿ ನೀಡುವ ಸರ್ಕಾರದ ಆದೇಶಕ್ಕೆ ಕಾನೂನು ಬಲ ನೀಡಲು ರೂಪಿಸಿದ ಮಸೂದೆಗೆ ವಿಧಾನಸಭೆ ಗುರುವಾರ ಅಂಗೀಕಾರ ನೀಡಿತು.

ಸುದ್ದಿ 6



ಬಿಜೆಪಿ, ಜೆಡಿಎಸ್ ಸದಸ್ಯರ ತೀವ್ರ ವಿರೋಧದ ಮಧ್ಯೆಯೇ ಅಂಗೀಕಾರದ ಮುದ್ರೆ

ದ್ವೇಷ ಭಾಷಣ ತಡೆ ಮಸೂದೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ವಿರೋಧ ಪಕ್ಷದ ಸದಸ್ಯರ ತೀವ್ರ ವಿರೋಧ, ವಾಕ್ಸಮರ, ಕೋಲಾಹಲ, ಗದ್ದಲದ ನಡುವೆಯೇ ದ್ವೇಷ ಭಾಷಣ ಮತ್ತು ದ್ವೇಷಾಪರಾಧ ಎಸಗುವವರನ್ನು ಶಿಕ್ಷೆಗೆ ಗುರಿಪಡಿಸುವ ಮಸೂದೆಗೆ ವಿಧಾನಸಭೆ ಗುರುವಾರ ಅಂಗೀಕಾರ ನೀಡಿತು.

‘ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆ–2025’ಗೆ ಅನುಮೋದನೆ ನೀಡುವಂತೆ ಗೃಹ ಸಚಿವ ಜಿ. ಪರಮೇಶ್ವರ ಪ್ರಸ್ತಾಪಿಸಿದರು.

ಮಸೂದೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ಕೇಂದ್ರ ಸರ್ಕಾರ ಜಾರಿಗೆ ತಂದ ಬಿಎನ್‌ಎಸ್ ಕಾಯ್ದೆಯು ದ್ವೇಷ ಭಾಷಣ ತಡೆಗೆ ಅವಕಾಶ ಕಲ್ಪಿಸಿದೆ. ಹಾಗಿದ್ದರೂ ಎದುರಾಳಿಗಳನ್ನು ಹತ್ತಿಕ್ಕಲು ಮಸೂದೆ ತರಲಾಗುತ್ತಿದೆ’ ಎಂದರು.

ಪರ–ವಿರೋಧದ ಚರ್ಚೆಯ ಮಧ್ಯೆಯೇ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ‘ಕರಾವಳಿಯಲ್ಲಿ ಬೆಂಕಿ ಹಚ್ಚಿದ್ದೀರ, ಇಲ್ಲಿಯೂ ಬೆಂಕಿ ಹಚ್ಚುತ್ತೀರ’ ಎಂದು ಹೇಳಿದ್ದು, ಕರಾವಳಿ ಭಾಗದ ಬಿಜೆಪಿ ಸದಸ್ಯರನ್ನು ಕೆರಳಿಸಿತು. ಸಚಿವರು ಕ್ಷಮೆ ಯಾಚಿಸಬೇಕು ಎಂದು ಬಿಜೆಪಿ ಸದಸ್ಯರು ಪಟ್ಟುಹಿಡಿದರು. ಈ ವೇಳೆ ಮಾತಿನ ಚಕಮಕಿ ನಡೆಯಿತು.

‘ಸಚಿವರ ಹೇಳಿಕೆಯನ್ನು ಕಡತದಿಂದ ತೆಗೆದುಹಾಕುತ್ತೇನೆ’ ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಭರವಸೆ ನೀಡಿದರು. ಅದಕ್ಕೆ ಸಮಾಧಾನಗೊಳ್ಳದ ಬಿಜೆಪಿ ಸದಸ್ಯರು, ಸಭಾಧ್ಯಕ್ಷರ ಪೀಠದ ಮುಂಭಾಗಕ್ಕೆ ಬಂದು ಘೋಷಣೆ ಕೂಗಿದರು. ಈ ವೇಳೆ ಅಶೋಕ ಅವರು ಮಸೂದೆ ಪ್ರತಿ ಹರಿದುಹಾಕಿದರು. ಗದ್ದಲದ ಮಧ್ಯೆಯೇ ಪರಮೇಶ್ವರ ಅವರು ಮಸೂದೆಗೆ ಅಂಗೀಕಾರ ಪಡೆದರು. ▶11

ಶಿಕ್ಷೆ ಪ್ರಮಾಣ ಎಷ್ಟು

- ಮೊದಲ ಬಾರಿಯ ಕೃತ್ಯಕ್ಕೆ 1 ವರ್ಷದಿಂದ 7 ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹50 ಸಾವಿರ ದಂಡ
- ಪುನರಾವರ್ತಿತವಾದರೆ 2 ವರ್ಷದಿಂದ 10 ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಲು ಮೊದಲು ಅವಕಾಶ ಕಲ್ಪಿಸಲಾಗಿತ್ತು. ಮಸೂದೆ ಅಂಗೀಕರಿಸುವಾಗ, ಪುನರಾವರ್ತಿತ ಪ್ರಕರಣದಲ್ಲಿ ಜೈಲು ಶಿಕ್ಷೆಯನ್ನು 2 ವರ್ಷದಿಂದ 7 ವರ್ಷಗಳವರೆಗೆ ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ.

ಬಿಜೆಪಿ–ಜೆಡಿಎಸ್ ಸಭಾತ್ಯಾಗ

ಮಸೂದೆಯ ಕುರಿತು ತಮ್ಮ ಸದಸ್ಯರಿಗೆ ಮಾತನಾಡಲು ಅವಕಾಶ ನೀಡದ್ದನ್ನು ವಿರೋಧಿಸಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾತ್ಯಾಗ ನಡೆಸಿದರು.

ತರಾತುರಿಯಲ್ಲಿ ಮಸೂದೆ ಅಂಗೀಕಾರ ಮಾಡಿದ್ದನ್ನು ಖಂಡಿಸಿ ಭೋಜನ ವಿರಾಮದ ಬಳಿಕ ಬಿಜೆಪಿ–ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು. ತಮ್ಮನ್ನು ಮತ್ತು ಆಡಳಿತ ಪಕ್ಷದವರನ್ನು ಕರೆಸಿ ಚರ್ಚೆ ನಡೆಸುವಂತೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಬಿಜೆಪಿಯ ವಿ.ಸುನಿಲ್‌ಕುಮಾರ್ ಸಲಹೆ ನೀಡಿದರು. ಬಳಿಕ ಸಭಾಧ್ಯಕ್ಷ ಖಾದರ್ ಅವರು ಕಲಾಪ ಮುಂದೂಡಿ ಸಭೆಯನ್ನು ಕರೆದರು. ಕಲಾಪ ಸೇರಿದಾಗ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಸದನ ಸಮಿತಿಗೆ ಒಪ್ಪಿಸುವಂತೆ ಒತ್ತಾಯಿಸಿದರು. ಸರ್ಕಾರ ಇದಕ್ಕೆ ಒಪ್ಪದೇ ಇದ್ದಾಗ ವಿರೋಧಪಕ್ಷಗಳು ಸಭಾತ್ಯಾಗ ನಡೆಸಿದವು.

ಪೊಲೀಸರು ಹಿಟ್ಲರ್ ಆಗುತ್ತಾರೆ: ಅಶೋಕ

ಕಾಯ್ದೆ ಜಾರಿಯಾದರೆ ಅಭಿವ್ಯಕ್ತಿ ಸ್ವಾತಂತ್ರ್ಯ ಮರೆಯಾಗಿ, ಪೊಲೀಸರು ಹಿಟ್ಲರ್‌ಗಳಂತೆ ವರ್ತಿಸತೊಡಗುತ್ತಾರೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಮಸೂದೆ ವಿರೋಧಿಸಿ ಮಾತನಾಡಿದ ಅವರು, ‘ದ್ವೇಷ ಭಾಷಣಕ್ಕೆ ಬಿಎನ್‌ಎಸ್ ಕಾಯ್ದೆಯಡಿ ಶಿಕ್ಷೆ ವಿಧಿಸುವ ಅವಕಾಶ ಇದೆ. ರಾಜಕೀಯ ದ್ವೇಷ ತೀರಿಸಿಕೊಳ್ಳಲು ಮಸೂದೆ ಬ್ರಹ್ಮಾಸ್ತ್ರವಾಗಲಿದೆ. ಮಸೂದೆ ತಂದಿರುವುದರ ಹಿಂದೆ ಮತ ಬ್ಯಾಂಕ್ ರಾಜಕಾರಣವಿದೆ. ಯಾರನ್ನೋ ಸಂತೃಪ್ತಿಪಡಿಸಲು ಯಾರನ್ನೋ ಜೈಲಿಗೆ ಹಾಕಲಾಗುತ್ತದೆ. ಲೋಕಸಭೆಯಲ್ಲಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ಕಾಂಗ್ರೆಸ್ ಇಲ್ಲಿ ಸ್ವಾತಂತ್ರ್ಯ ಹತ್ತಿಕ್ಕಲಿದೆ’ ಎಂದರು. ▶11

ಯುಪಿಎಸ್‌ಸಿ: ಇಎಸ್‌ಇ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ಕೇಂದ್ರ ಲೋಕ ಸೇವಾ ಆಯೋಗವು (ಯುಪಿಎಸ್‌ಸಿ) ಎಂಜಿನಿಯರಿಂಗ್ ಸೇವಾ ಪರೀಕ್ಷೆ (ಇಎಸ್‌ಇ) 2025ರ ಫಲಿತಾಂಶವನ್ನು ಗುರುವಾರ ಪ್ರಕಟಿಸಿದ್ದು, 458 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ಸಿವಿಲ್ ಎಂಜಿನಿಯರಿಂಗ್ ಅಡಿಯಲ್ಲಿ ಅತ್ಯಧಿಕ ಅಂದರೆ 202 ಅಭ್ಯರ್ಥಿಗಳು, ಎಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯುನಿಕೇಷನ್‌ನಲ್ಲಿ 116, ಎಲೆಕ್ಟ್ರಿಕಲ್‌ನಲ್ಲಿ 79 ಮತ್ತು ಮೆಕ್ಯಾನಿಕಲ್‌ನಲ್ಲಿ 61 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ. ಆಗಸ್ಟ್‌ನಲ್ಲಿ ಲಿಖಿತ ಮತ್ತು ನವೆಂಬರ್‌ನಲ್ಲಿ ವ್ಯಕ್ತಿತ್ವ ಪರೀಕ್ಷೆ ನಡೆಸಲಾಗಿತ್ತು.

ಫಲಿತಾಂಶ: www.upsc.gov.in

ಹಾಸ್ಟೆಲ್‌ನಲ್ಲಿ ಬುಡಕಟ್ಟು ವಿದ್ಯಾರ್ಥಿ ಹತ್ಯೆ

ಬಕೆಟ್ ವಿಷಯಕ್ಕೆ ಜಗಳ

ಭುವನೇಶ್ವರ (ಪಿಟಿಐ): ಸ್ನಾನಗೃಹದಲ್ಲಿ ತಮ್ಮೊಂದಿಗೆ ಬಕೆಟ್ ಹಂಚಿಕೊಳ್ಳಲು ನಿರಾಕರಿಸಿದ 9ನೇ ತರಗತಿಯ, 14 ವರ್ಷದ ಬುಡಕಟ್ಟು ವಿದ್ಯಾರ್ಥಿಯನ್ನು ಕತ್ತು ಬಿಗಿದು ಕೊಲೆ ಮಾಡಿದ ಪ್ರಕರಣದಲ್ಲಿ, ಒಡಿಶಾ ಪೊಲೀಸರು ಭುವನೇಶ್ವರದ ಕಳಿಂಗ ಸಮಾಜ ವಿಜ್ಞಾನ ಸಂಸ್ಥೆಯ (ಕೆಐಎಸ್‌ಎಸ್) ಎಂಟು ಶಿಕ್ಷಕ ಸಿಬ್ಬಂದಿ ಹಾಗೂ ಕಾನೂನಿನ ಸಂಘರ್ಷಕ್ಕೆ ಒಳಗಾದ ಮೂವರು ಬಾಲಕರನ್ನು ವಶಕ್ಕೆ ಪಡೆದಿದ್ದಾರೆ.

ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕರ ವಿರುದ್ಧ ಬಿಎನ್‌ಎಸ್ ಸೆಕ್ಷನ್ 106 (1), ಬಾಲ ನ್ಯಾಯ ಕಾಯ್ದೆ–2015ರ ಅಡಿ ಪ್ರಕರಣ ದಾಖಲಾಗಿದೆ. ▶11

8 ಮಂದಿ ವಿರುದ್ಧ ಕೊಲೆ ಪ್ರಕರಣ

ಬಾಲಕನ ಹತ್ಯೆ ಪ್ರಕರಣದಲ್ಲಿ, ಕೆಐಎಸ್‌ಎಸ್‌ನ ಎಂಟು ಮಂದಿ ಸಿಬ್ಬಂದಿ ವಿರುದ್ಧ ಬಿಎನ್‌ಎಸ್ ಸೆಕ್ಷನ್ 103 (1) (ಕೊಲೆ), 238 (ಸಾಕ್ಷ್ಯ ನಾಶಪಡಿಸುವಿಕೆ) 296 (ಅಸಭ್ಯ ಕೃತ್ಯ), 232 (ಬೆದರಿಕೆ, ಸುಳ್ಳು ಸಾಕ್ಷ್ಯ), 249 ಎ (ಅಪರಾಧಿಗೆ ರಕ್ಷಣೆ) ಮತ್ತು ಬಾಲ ನ್ಯಾಯ ಕಾಯ್ದೆಯ ಸೆಕ್ಷನ್ 351 (3) (ಕ್ರಿಮಿನಲ್ ಬೆದರಿಕೆ) ಆರೋಪಗಳಡಿ ಪ್ರಕರಣದ ದಾಖಲಿಸಲಾಗಿದೆ.

ಕಾನೂನು ಸಂಘರ್ಷಕ್ಕೆ ಒಳಗಾದವರನ್ನು ಬಾಲ ನ್ಯಾಯ ಮಂಡಳಿ ಮತ್ತು ಇತರೆ ಎಂಟು ಮಂದಿ ಆರೋಪಿಗಳನ್ನು ಕೋರ್ಟ್ ಮುಂದೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ರಾಜ್ಯಕ್ಕಿಲ್ಲ ₹16,863 ಕೋಟಿ

ಸ್ವಂತ ಸಂಪನ್ಮೂಲದಿಂದಲೇ ಪೂರ್ಣಗೊಳಿಸಿ: ಕೇಂದ್ರ ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಲ ಜೀವನ್ ಮಿಷನ್‌ನ (ಜೆಜೆಎಂ) ಮಾರ್ಗಸೂಚಿ ಪ್ರಕಾರ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವ ಸಲ್ಲಿಸಲು ವಿಳಂಬ ಮಾಡಿರುವ ಕಾರಣ ನೀಡಿ ಕರ್ನಾಟಕಕ್ಕೆ ₹16,863 ಕೋಟಿ ಅನುದಾನ ನೀಡಲು ಕೇಂದ್ರ ಜಲಶಕ್ತಿ ಸಚಿವಾಲಯ ನಿರಾಕರಿಸಿದೆ.

ಗ್ರಾಮೀಣ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶ ಹೊಂದಿರುವ ಈ ಯೋಜನೆಗೆ ಜಲಶಕ್ತಿ ಸಚಿವಾಲಯವು ರಾಜ್ಯಕ್ಕೆ 2019ರಿಂದ 2025ರ ಅವಧಿಗೆ ₹28,623 ಕೋಟಿ (ಕೇಂದ್ರದ ಪಾಲು) ಹಂಚಿಕೆ ಮಾಡಿತ್ತು. ಆದರೆ, ಈವರೆಗೆ ₹11,760 ಕೋಟಿ ಬಿಡುಗಡೆ ಮಾಡಿದೆ. ▶11

ಜೆಜೆಎಂ–ಕೇಂದ್ರದ ಪಾಲು (₹ಕೋಟಿಗಳಲ್ಲಿ)



ಚಿನಕುರುಳಿ ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಜಕ್ಕೂರು: 'ಎಕ್ಸಿಕ್ಯೂಟಿವ್ ಕ್ಲಬ್'ಗೆ ಮರುಜೀವ!

'ಏರೋಸ್ಪೋರ್ಟ್ಸ್ ಸೊಸೈಟಿ' ಸ್ಥಾಪಿಸಲು 2018ರಲ್ಲಿ ಆದೇಶ, 2021ರಲ್ಲಿ ವಾಪಸ್

• ಆರ್. ಮಂಜುನಾಥ್

ಬೆಂಗಳೂರು: ಜಕ್ಕೂರು ವಾಯುನೆಲೆ ಪ್ರದೇಶದ 25 ಎಕರೆ ಭೂಮಿಯನ್ನು 'ಎಕ್ಸಿಕ್ಯೂಟಿವ್ ಕ್ಲಬ್'ಗೆ ನೀಡುವ ಸಂಬಂಧ 2018ರಲ್ಲಿ ಹೊರಡಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ 2021ರಲ್ಲಿ ವಾಪಸ್ ಪಡೆದಿತ್ತು. ಆದರೆ, ಈಗ ಆ ಯೋಜನೆಯು ಮತ್ತೊಂದು ರೂಪದಲ್ಲಿ ಮರುಜೀವಪಡೆದುಕೊಂಡಿದೆ.

'ಎಕ್ಸಿಕ್ಯೂಟಿವ್ ಕ್ಲಬ್' ಯೋಜನೆ ರದ್ದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ 2021ರಲ್ಲಿ ತಿಳಿಸಿತ್ತು. ಆದರೆ, ಈಗ ಜಕ್ಕೂರು ವೈಮಾನಿಕ ತರಬೇತಿ ಶಾಲೆಯನ್ನೇ ಸ್ಥಳಾಂತರಿಸುವ ವಿಷಯ ಚಾಲ್ತಿಗೆ ಬಂದಿದ್ದು ಈ ಸಂಬಂಧ ನವೆಂಬರ್‌ನಿಂದ ಸಭೆಗಳನ್ನು ನಡೆಸಲಾಗುತ್ತಿದೆ.

ಜಕ್ಕೂರು ವಾಯುನೆಲೆಯ 25 ಎಕರೆ ಜಾಗದಲ್ಲಿ 'ರಾಜೀವ್ ಗಾಂಧಿ ಏರೋಸ್ಪೋರ್ಟ್ಸ್ ಸೊಸೈಟಿ'ಯನ್ನು ಸಾಹಸ ಕ್ರೀಡೆಗಳ ಹೆಸರಿನಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಸ್ಥಾಪಿಸಲು 2018ರ ಮಾರ್ಚ್ 3ರಂದು ಸಚಿವ ಸಂಪುಟದಲ್ಲಿ ಅನುಮೋದನೆ ನೀಡಲಾಗಿತ್ತು. ಅದರಂತೆ, ಮಾರ್ಚ್ 13ರಂದು, ಸೊಸೈಟಿಯ ಆಡಳಿತ ಮಂಡಳಿಯಲ್ಲಿ ಒಂಬತ್ತು ಸದಸ್ಯರು, ಕಾರ್ಯನಿರ್ವಾಹಕ ಸಮಿತಿಯಲ್ಲಿ ಐದು ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಿ ಆದೇಶ ಹೊರಡಿಸಲಾಗಿತ್ತು.

ಜಕ್ಕೂರು ವೈಮಾನಿಕ ತರಬೇತಿ ಶಾಲೆಯನ್ನು 'ರಾಜೀವ್ ಗಾಂಧಿ ಏರೋಸ್ಪೋರ್ಟ್ಸ್ ಸೊಸೈಟಿ'ಯನ್ನಾಗಿ ಸ್ಥಾಪಿಸುವ ಉದ್ದೇಶದ 2018ರ ಆದೇಶವನ್ನು, 2021ರ ಸೆಪ್ಟೆಂಬರ್ 4ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಬಿಡಲಾಗಿದೆ. ಆದರೆ, ಪಿಪಿಪಿ ಮಾದರಿಯಲ್ಲಿ ವೈಮಾನಿಕ ತರಬೇತಿ ಶಾಲೆಯನ್ನು ಅಭಿವೃದ್ಧಿಗೊಳಿಸಲು ಅನುಮೋದನೆ ನೀಡಲಾಗಿದೆ ಎಂದು 2022ರ ಮಾರ್ಚ್ 8ರಂದು ಆಗಿನ ಯುವ ಸಬಲೀಕರಣ, ಕ್ರೀಡಾ ಸಚಿವ ನಾರಾಯಣಗೌಡ ಅವರು ವಿಧಾನಸಭೆಯಲ್ಲಿ ಕೃಷ್ಣಬೈರೇಗೌಡ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ತಿಳಿಸಿದ್ದರು.

'ಮೈಸೂರು ಮಹಾರಾಜರ ಕಾಲದಲ್ಲಿ ಸ್ಥಾಪನೆಯಾಗಿರುವ ಜಕ್ಕೂರು ವೈಮಾನಿಕ ಶಾಲೆ ಬಗ್ಗೆ ಹಿಂದಿನ ಸರ್ಕಾರದಲ್ಲಿ ತಪ್ಪಾಗಿದೆ. ಈಗಿರುವ ಟರ್ಫ್ ಕ್ಲಬ್, ಗಾಲ್ಫ್ ಕ್ಲಬ್ ಸಾಲದೆಂದು, 100 ಶಾಸಕರು, 100 ಐಎಎಸ್–ಐಪಿಎಸ್ ಅಧಿಕಾರಿಗಳು, 100 ಸರ್ಕಾರಿ ಅಧಿಕಾರಿಗಳು, 50 ನ್ಯಾಯಮೂರ್ತಿಗಳನ್ನು ಸೇರಿಸಿ ಕ್ಲಬ್ ಮಾಡಲು ಸರ್ಕಾರ ತೀರ್ಮಾನಿಸಿತ್ತು. 200 ಎಕರೆ ಭೂಮಿ ಪಿಪಿಪಿ ಅವರ ಕೈಗೆ ಹೋದರೆ ಅಲ್ಲಿ ಅವರು ಏನೇನು ಚಟುವಟಿಕೆ ಮಾಡುತ್ತಾರೆನ್ನುವುದು ಯಾರಿಗೆ ಗೊತ್ತು? ಒಂದು ಬಾರಿ ಖಾಸಗಿಯವರ ಕೈಗೆ ಜಮೀನು ಹೋದರೆ, ನಾಳೆಯ ದಿನ ನಾವೆಲ್ಲರೂ ಹೊರಗಡೆ ಉಳಿಯಬೇಕಾಗುತ್ತದೆ. ಇದು ದೊಡ್ಡ ಹಗರಣವೇ ಆಗುತ್ತದೆ. ದಯಮಾಡಿ ಸರ್ಕಾರವೇ ವೈಮಾನಿಕ ಶಾಲೆಯನ್ನು ನಡೆಸಬೇಕು. ಸ್ಥಳೀಯವಾಗಿ ಸಹಕಾರ, ಸಹಾಯವನ್ನು ನಾವು ಮಾಡುತ್ತೇವೆ' ಎಂದು ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ ಶಾಸಕರಾದ ಕೃಷ್ಣಬೈರೇಗೌಡ ಹೇಳಿದ್ದರು. ಇದಕ್ಕೆ, ನಾರಾಯಣಗೌಡ ಅವರು ಸಮ್ಮತಿಸಿ, ಪಿಪಿಪಿ ಯೋಜನೆ ಕೈಬಿಡಲಾಗಿದೆ ಎಂದು ಹೇಳಿದ್ದರು.

ವಿಧಾನಸಭೆಯಲ್ಲಿ ಇಷ್ಟೆಲ್ಲ ಚರ್ಚೆಯಾಗಿ, ಜಕ್ಕೂರು ವೈಮಾನಿಕ ತರಬೇತಿ ಶಾಲೆ ಹಾಗೂ ವಾಯುನೆಲೆಯನ್ನು ಹಾಗೆಯೇ ಉಳಿಸಿಕೊಳ್ಳಲು ನಿರ್ಧಾರವಾದ ಮೂರು ವರ್ಷದ ನಂತರ, ಅದೇ ಇಲಾಖೆಯ ಅಧಿಕಾರಿಗಳು ವೈಮಾನಿಕ ತರಬೇತಿ ಶಾಲೆಯನ್ನು ಮೈಸೂರಿಗೆ ಸ್ಥಳಾಂತರಿಸಲು ಚರ್ಚೆ ಆರಂಭಿಸಿದ್ದಾರೆ. ವೈಮಾನಿಕ ಪ್ರದೇಶವನ್ನೂ ಇತರೆ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಮುಂದಾಗಿದ್ದಾರೆ.

2022ರಲ್ಲಿ ಸರ್ಕಾರವೇ ತರಬೇತಿ ಶಾಲೆಯನ್ನು ನಡೆಸಬೇಕು ಎಂದು ಒತ್ತಾಯಿಸಿದ್ದ, ಪ್ರಸ್ತುತ ಕಂದಾಯ ಸಚಿವರಾಗಿರುವ ಕೃಷ್ಣಬೈರೇಗೌಡ ಅವರ ಪ್ರತಿಕ್ರಿಯೆ ಪಡೆಯಲು ಸಂಪರ್ಕಿಸಿದಾಗ, ಅವರು ಸ್ಪಂದಿಸಲಿಲ್ಲ.

ಜಕ್ಕೂರು ವೈಮಾನಿಕ ನೆಲೆಯಲ್ಲಿರುವ ರನ್‌ವೇ

'ಆಸ್ತಿ ಉಳಿಸಿಕೊಳ್ಳಲಾಗುತ್ತದೆ ಎಂದಿದ್ದ ನಾರಾಯಣಗೌಡ'

'ಜಕ್ಕೂರಿನ ವೈಮಾನಿಕ ತರಬೇತಿ ಶಾಲೆ ದೇಶಕ್ಕೇ ಮೊದಲನೆಯದು. 100 ಮಕ್ಕಳು ಇಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಆರು ವಿಮಾನಗಳನ್ನು ದುರಸ್ತಿ ಮಾಡಿಸಿ, ಮಕ್ಕಳಿಗೆ ತರಬೇತಿ ನೀಡಲು ಮುಂದಾಗಿದ್ದೇವೆ. 10 ಎಕರೆ ಭೂಸ್ವಾಧೀನ ಮಾಡಿಕೊಂಡು, ರನ್‌ವೇಯನ್ನು 350 ಮೀಟರ್ ವಿಸ್ತರಿಸಿ, ಆರು ಆಸನ ಮತ್ತು 11 ಆಸನಗಳ ವಿಮಾನಗಳ ಕಾರ್ಯಾಚರಣೆ ಮಾಡಿ, 'ಏರ್ ಆಂಬುಲೆನ್ಸ್' ವ್ಯವಸ್ಥೆ ಕಲ್ಪಿಸಿ ಪ್ರವಾಸೋದ್ಯಮಕ್ಕೆ ಶಕ್ತಿ ತುಂಬುವ ಕೆಲಸವನ್ನು ಪಿಪಿಪಿ ಮಾದರಿಯಲ್ಲಿ ಮಾಡಲಾಗುತ್ತದೆ. ಇದರಿಂದ ನಷ್ಟವಾಗುವುದಾದರೆ ಸರ್ಕಾರ ಆಸ್ತಿಯನ್ನು ಉಳಿಸಿಕೊಂಡು, ಅದನ್ನು ಅಭಿವೃದ್ಧಿಪಡಿಸಲಾಗುತ್ತದೆ' ಎಂದು ಕ್ರೀಡಾ ಸಚಿವರಾಗಿದ್ದ ನಾರಾಯಣಗೌಡ ಅವರು 2022ರ ಮಾರ್ಚ್ 8ರಂದು ವಿಧಾನ ಸಭೆಯಲ್ಲಿ ತಿಳಿಸಿದ್ದರು.

'ಸರ್ಕಾರದ್ದೇ ತಪ್ಪು ಎಂದಿದ್ದ ಕೃಷ್ಣ ಬೈರೇಗೌಡ'

'ಹಿಂದೆ ಮಾಡಿದ್ದು ತಪ್ಪು, ನಮ್ಮ ಸರ್ಕಾರವೇ ಆದರೂ ಅದು ತಪ್ಪು. ಅದನ್ನು ವಾಪಸ್ ತೆಗೆದುಕೊಂಡಿದ್ದಕ್ಕೆ ನಿಮಗೆ ಧನ್ಯವಾದ...' ಹೀಗೆಂದು, 2022ರ ಮಾರ್ಚ್ 8ರಂದು ವಿಧಾನಸಭೆಯಲ್ಲಿ ಕೃಷ್ಣ ಬೈರೇಗೌಡ ಹೇಳಿದ್ದರು.

ಗಮನ ಸೆಳೆಯುವ ಸೂಚನೆಯಡಿ, 'ವೈಮಾನಿಕ ಮತ್ತು ಇತರೆ ಸಾಹಸ ಕ್ರೀಡೆಗಳ ಹೆಸರಿನಲ್ಲಿ ಹೊಸ ಸೊಸೈಟಿಯನ್ನು ಹುಟ್ಟುಹಾಕಿ, ₹500 ಕೋಟಿಗೂ ಹೆಚ್ಚು ಬೆಲೆಬಾಳುವ 25 ಎಕರೆ ಸರ್ಕಾರಿ ಜಾಗವನ್ನು 'ಎಕ್ಸಿಕ್ಯೂಟಿವ್ ಕ್ಲಬ್' ಮಾಡಲು ನೀಡಲಾಗುತ್ತಿದೆ. ಜನಸಾಮಾನ್ಯರಿಗೆ ಪ್ರವೇಶ ಇಲ್ಲದಂತೆ ಮಾಡಿ, ಕೇವಲ ಅಧಿಕಾರಿಗಳು, ರಾಜಕಾರಣಿಗಳು, ಶ್ರೀಮಂತರು, ನ್ಯಾಯಾಧೀಶರ ಮೋಜಿಗಾಗಿ ಸರ್ಕಾರಿ ಜಾಗವನ್ನು ನೀಡಿ, ಸರ್ಕಾರದ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ' ಎಂದು ಯುವ ಸಬಲೀಕರಣ ಮತ್ತು ಕ್ರಿಡಾ ಇಲಾಖೆ ಸಚಿವ ನಾರಾಯಣಗೌಡ ಅವರನ್ನು ಪ್ರಶ್ನಿಸಿದ್ದರು.

'ನಿಮ್ಮ ಸರ್ಕಾರವಿದ್ದಾಗಲೇ ಅದನ್ನು ಖಾಸಗಿಯವರಿಗೆ ನೀಡಿದ್ದು, ಅದನ್ನು ನಾವು ವಾಪಸ್ ಪಡೆದುಕೊಂಡಿದ್ದೇವೆ' ಎಂದು ನಾರಾಯಣಗೌಡ ಹೇಳಿದಾಗ, ಅದಕ್ಕೆ ಧನ್ಯವಾದ ಸಲ್ಲಿಸಿದ್ದ ಕೃಷ್ಣ ಬೈರೇಗೌಡ, '25 ಎಕರೆ ಬದಲು 200 ಎಕರೆ ಜಾಗ ಹೋಗುವ ಪರಿಸ್ಥಿತಿಯಾಗಿದೆ. ಬಹುಶಃ ಯಾರು ಕ್ಲಬ್ ಮಾಡಬೇಕೆಂದು ಹೊರಟಿದ್ದರೋ ಅವರೇ ಪಿಪಿಪಿಗೆ ಒಂದು ಕಂಪನಿಯನ್ನು ರೆಡಿ ಮಾಡಿ ಈ ರೀತಿ ಕಬ್ಜಾ ತೆಗೆದುಕೊಳ್ಳಲಿಕ್ಕೆ ಹೊರಟಿರಲೂ ಬಹುದು' ಎಂದಿದ್ದರು.

ಇಂದಿನಿಂದ ವಾರ್ಷಿಕ ಸೇವಾ ಸಂಕಲ್ಪ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಯ ಸೇವಾ ಫೌಂಡೇಷನ್ ಸಂಸ್ಥೆಯ 2026ರ ಸೇವೆಗಳ ಸಂಕಲ್ಪಕ್ಕಾಗಿ, ಡಿ.19, 20 ಮತ್ತು 21ಕ್ಕೆ ರಾಜಾಜಿನಗರದ ರಾಮ ಮಂದಿರ ಆಟದ ಮೈದಾನದಲ್ಲಿ ವಾರ್ಷಿಕ ಸೇವಾ ಸಂಕಲ್ಪ ಕಾರ್ಯಕ್ರಮ ಆಯೋಜಿಸಲಾಗಿದೆ.

ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಉಮೇಶ್ ಶೆಟ್ಟಿ ಎಂ.ಬಿ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಡಿ. 21ರಂದು ನಡೆಯುವ ಆರೋಗ್ಯ ಸೇವಾ ಉಚಿತ ಶಿಬಿರದಲ್ಲಿ 20ಕ್ಕೂ ಅಧಿಕ ಆಸ್ಪತ್ರೆಗಳ ವೈದ್ಯರು, ಸಿಬ್ಬಂದಿ ಪಾಲ್ಗೊಳ್ಳಲಿದ್ದಾರೆ. ಅಂಧತ್ವ ಮುಕ್ತ ಆಂದೋಲನಾ, ಕೃತಕ ಕೈ, ಕಾಲು ಜೋಡಣೆ ಕಾರ್ಯಗಳು ಜರುಗಲಿವೆ. ಸಿಎಸ್‌ಸಿ, ಆಯುಷ್ಮಾನ್ ಭಾರತ್ ಹಾಗೂ ಆರೋಗ್ಯ ಅಭಾ ಕಾರ್ಡಿನ ಉಪಯೋಗಗಳ ಕುರಿತು ಕಾರ್ಯಾಗಾರ ನಡೆಯಲಿದೆ' ಎಂದು ಹೇಳಿದರು.

ವಿವಿಧ ಧಾರ್ಮಿಕ ಆಚರಣೆಗಳು ಮತ್ತು ಸಾಂಸ್ಕೃತಿಕ ಕಲೆಗಳು ಪ್ರದರ್ಶನಗೊಳ್ಳಲಿದ್ದು, ನಿರಂತರ ಅನ್ನ ದಾಸೋಹ ಇರಲಿದೆ ಎಂದು ತಿಳಿಸಿದರು.

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34.

TENDER NOTICE

Quotations are invited from various Companies for below said works :

A) For Supply and installation of CCTV data, Telephone and public address system to Karnataka Reddyjana Sangha Hospital building at Kasavanhalli.

B) Regarding Construction works (Civil) at Marasuru and Kasavanhalli Site of Karantaka Reddyjana Sangha.

Sealed quotations are to be submit within 7 days of this publication.

For more details, Visit our website www.reddyjanasangha.org or Contact: 080-25534194 or +91 90352 44612

Sd/- President | Sd/- General Secretary

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಾಧಿಕರಣ-2, ಬೆಂಗಳೂರು
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು - 560 001.

ಟಿಆರ್‌ಸಿ ನಂ. 1492/2018 ಫಾರಂ ನಂ. 14 (ರೆಗ್ಯುಲೇಷನ್ 33(2))

ಕರ್ನಾಟಕ ಬ್ಯಾಂಕ್ ಲಿ., ಸಾರಕ್ಕಿ ಲೇಔಟ್ ಶಾಖೆ : ನಂ. 219, ಗಜಾನನ ಟವರ್ಸ್, 9ನೇ ಅಡ್ಡ ರಸ್ತೆ, ಕೆಎಸ್‌ಆರ್‌ಟಿಸಿ ಲೇಔಟ್, ಜೆ. ಪಿ. ನಗರ, 2ನೇ ಘಟ್ಟ, ಬೆಂಗಳೂರು– 560 078. ... ಸರ್ಟಿಫಿಕೇಟ್ ಹೋಲ್ಡರ್ ಬ್ಯಾಂಕ್

ವಿರುದ್ಧ

ಮೆ. ಶ್ರೀ ಲಕ್ಷ್ಮಿ ಇಂಡಸ್ಟ್ರೀಸ್ ... ಸರ್ಟಿಫಿಕೇಟ್ ಡೆಟರ್ಸ್/ಪ್ರತಿವಾದಿಗಳು ಬ್ಯಾಂಕ್

ಡಿಮ್ಯಾಂಡ್ ನೋಟೀಸು

ಇವರಿಗೆ :

1. **ಮೆ. ಶ್ರೀ ಲಕ್ಷ್ಮಿ ಇಂಡಸ್ಟ್ರೀಸ್,** ಪ್ರತಿನಿಧಿಸುವವರು ಇದರ ಮಾಲೀಕರಾದ ಶ್ರೀ ಪ್ರದೀಪ್ ಬಿ. ಉತ್ತ್ವಲ್ ಬಿನ್ ಎ. ಆರ್. ಬದ್ರಿನಾಥ್, ನಂ. 111/3, ಪಂತರಪಾಳ್ಯ, ಮೈಸೂರು ರಸ್ತೆ, ನಾಯಂಡಹಳ್ಳಿ ಬೆಂಗಳೂರು – 560 039.

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ಪ್ರಾಧಿಕಾರ, ಬೆಂಗಳೂರು ಇವರು ದಿನಾಂಕ 08/27/2016 **ರಂದು ಒ.ಎ. ನಂ. 2139/2014**ರಲ್ಲಿ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ **ರೂ.17,30,606.30** (ರೂಪಾಯಿ ಹದಿನೇಳು ಲಕ್ಷದ ಮೂವತ್ತು ಸಾವಿರದ ಆರು ನೂರ ಆರು ಮತ್ತು ಪೈಸೆ ಮೂವತ್ತು ಮಾತ್ರ) ಜೊತೆಗೆ ಒ.ಎ ಜಾರಿ ಮಾಡಿದ ದಿನಾಂಕದಿಂದ ಪೂರ್ತಿಪಾವತಿಯ ದಿನಾಂಕದವರೆಗಿನ ರಿಕವರಿ ಸರ್ಟಿಫಿಕೇಟ್‌ನಲ್ಲಿನ ಮೊತ್ತ, ಬಡ್ಡಿ ಮತ್ತು ಇತರ ವೆಚ್ಚ ನಿಮ್ಮಿಂದ ಬಾಕಿ ಇರುತ್ತದೆ.

ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ನೀವು ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನುಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ, ಮತ್ತು ಇತರ ಪ್ರಕ್ರಿಯೆ ಹಾಗೂ ಸಾಲವನ್ನು ವಸೂಲಿ ಮಾಡುವಲ್ಲಿ ತಗಲುವ ಎಲ್ಲ ಖರ್ಚು ಮತ್ತು ವೆಚ್ಚಗಳನ್ನು ಪಾವತಿಸಲು ಬಾಧ್ಯರಾಗುತ್ತೀರಿ:

ನೀವು ಸದರಿ ಮೊತ್ತವನ್ನು ಈ ಪ್ರಕಟಣೆ ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು.

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **24.01.2020** ರಂದು ಕೊಡಲ್ಪಟ್ಟಿದೆ.

ಸಹಿ/- ವಸೂಲಾತಿ ಅಧಿಕಾರಿ- 1
ಸಾಲ ವಸೂಲಾತಿ ನ್ಯಾಯಾಧಿಕರಣ -2, ಬೆಂಗಳೂರು

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ : 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ. 3) ನೀವು ಕಳೆದ 5 ವರ್ಷಗಳ ಆದಾಯ ತೆರಿಗೆ ಪಾವತಿಯ ದಾಖಲೆಗಳೊಂದಿಗೆ ನಿಮ್ಮ ಸ್ಥಿರ ಮತ್ತು ಚರಾಸ್ತಿಗಳ ವಿವರಗಳನ್ನು ಈ ನ್ಯಾಯಾಧಿಕರಣಕ್ಕೆ ಸಲ್ಲಿಸಬೇಕಾಗಿದೆ.

ಜಗಣಿ ಪುರಸಭಾ ಕಾರ್ಯಾಲಯ
ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560105. ದೂ: 080–27825780/29760400
E-Mail: itstaff_ulb_jigani@yahoo.com
ಸ್ವಚ್ಛ ಭಾರತ

ಸಂ:ಜಿ.ಪುಕಾ/ಆ.ಶಾ/ಸಿ.ಆರ್/23/2025–26 ದಿನಾಂಕ: 18.12.2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಮುಖ್ಯಾಧಿಕಾರಿ, ಪುರಸಭೆ, ಜಿಗಣಿರವರಿಂದ ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 & 2000ರ ಪ್ರಕಾರ 2025–26ನೇ ಸಾಲಿನ ಪುರಸಭಾ ನಿಧಿಯ ಶೇ.24.10ರ ಎಸ್.ಸಿ.ಎಸ್.ಪಿ. ಶೇ.5% ವೈಯಕ್ತಿಕ ಅನುದಾನದಡಿ ಮತ್ತು ಪುರಸಭಾ ನಿಧಿಯಡಿಯಲ್ಲಿ ಈ ಕೆಳಕಂಡ ವಿವರಗಳಂತೆ ಟೆಂಡರ್ ಕರೆಯಲಾಗಿರುತ್ತದೆ.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
2025–26ನೇ ಸಾಲಿನ ಪುರಸಭಾ ನಿಧಿ (ಶೇ.24.10ರ ಎಸ್.ಸಿ.ಪಿ ಮತ್ತು ಶೇ.5ರ ಅನುದಾನ)		
1	Indent No-DMA/2025-26/IND5739	5.00
2	Indent No-DMA/2025-26/SE6791	6.89
2025–26ನೇ ಸಾಲಿನ ಪುರಸಭಾ ನಿಧಿ		
3	Indent No-DMA/2025-26/SE6790	8.98
4	Indent No-DMA/2025-26/SE6792	5.04
5	Indent No-DMA/2025-26/SE6794	10.80

ಕ್ರಮ ಸಂಖ್ಯೆ: 01 ಮತ್ತು 02ರವರೆಗೆ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29.12.2025ರ ಸಂಜೆ 4:30 ಗಂಟೆಯವರೆಗೆ. ಬಿಡ್ ತೆರೆಯುವ ದಿನಾಂಕ: 31.12.2025ರ ಬೆಳಿಗ್ಗೆ 11.00 ಗಂಟೆಗೆ. ಕ್ರಮ ಸಂಖ್ಯೆ: 03 ರಿಂದ 05ರವರೆಗೆ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15.01.2026ರ ಸಂಜೆ 4:30 ಗಂಟೆಯವರೆಗೆ. ಬಿಡ್ ತೆರೆಯುವ ದಿನಾಂಕ: 16.01.2026ರ ಸಂಜೆ 5.00 ಗಂಟೆಗೆ. ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಗುತ್ತಿಗೆದಾರರು / ಸರಬರಾಜುದಾರರು ಕೆ.ಪಿ.ಪಿ ಪೋರ್ಟಲ್‌ನ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಆರೋಗ್ಯ ಶಾಖೆಯಿಂದ ಮತ್ತು ಕಛೇರಿ ವೆಬ್‌ಸೈಟ್ https://www.jiganitown.mrc.gov.in/ಶಾಖೆಯಿಂದ ಮತ್ತು ಕಛೇರಿ ಪಡೆಯಬಹುದಾಗಿರುತ್ತದೆ.

ವಾಸಾಸಂಇ/ವಾಪ್ರ/ಜಿಎ/4531/2025–26

ಸಹಿ/–
ಮುಖ್ಯಾಧಿಕಾರಿಗಳು
ಪುರಸಭೆ, ಜಿಗಣಿ

ನಗರದಲ್ಲಿ ಇಂದು

'ನನ್ನವಳ ಕಾಗದ' ನಾಟಕ ಪ್ರದರ್ಶನ: ನಿರ್ದೇಶನ: ರತ್ನಮ್ಮ, ಆಯೋಜನೆ: ಸಿಂಧೂ ಬೈರವಿ ತಂಡ ಟ್ರಸ್ಟ್, ಸ್ಥಳ: ನಗರ ಕೇಂದ್ರ ಗ್ರಂಥಾಲಯ, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 10

'ಜಿಯೋ ವಿಷನ್ 2025' ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಗೋಪಾಲಕೃಷ್ಣ ಪಾತ್ರ, ಬಿ.ಎಸ್. ದಯಾಸಾಗರ್, ರಾಜೇಶ್ ಎನ್.ಎಲ್., ಉಪಸ್ಥಿತಿ: ಎಸ್.ಎಂ. ಜಯಕರ್, ಶಾಂತಲಾ ಕೆ.ಟಿ., ಅಶೋಕ್ ಹಂಜಗಿ, ಆಯೋಜನೆ ಹಾಗೂ ಸ್ಥಳ: ಭೂಗೋಳ ವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ, ಬೆಳಿಗ್ಗೆ 10.30

ಶಿವಾನಂದ ತಗಡೂರು ಅವರಿಗೆ 'ನಾಗರಿಕ ಸನ್ಮಾನ' ಮತ್ತು 'ಲೋಹಿಯಾ ಪ್ರಶಸ್ತಿ' ಪ್ರದಾನ: ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅಭಿನಂದನಾ ನುಡಿ: ರವಿ ಹೆಗಡೆ, ಅತಿಥಿಗಳು: ಎಚ್.ಎನ್. ಆರತಿ, ಎಂ.ಆರ್. ವೆಂಕಟೇಶ್, ಉಪಸ್ಥಿತಿ: ಎಸ್. ರಾಮಲಿಂಗೇಶ್ವರ (ಸಿಸಿರಾ), ಆಯೋಜನೆ: ಬೆಂಗಳೂರು ನಾಗರಿಕರ ವೇದಿಕೆ, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣ, ಶೇಷಾದ್ರಿಪುರಂ, ಬೆಳಿಗ್ಗೆ 11.10

ಪಿ.ವಿ. ನಾರಾಯಣ ದತ್ತಿ ಕಾರ್ಯಕ್ರಮ: 'ಕನ್ನಡ ಪಂಚತಂತ್ರ', 'ಎದೆಯಾಳ–ಖಲೀಲ್ ಗಿಬ್ರಾನ್ ಬರಹಗಳು', 'ಜಯರಾಶಿ ಭಟ್ಟನ ತತ್ತ್ವೋಪಪ್ಲವಸಿಂಹ', 'ರಾಜಕುಮಾರರ ಸಾಹಸಗಳು' ಪುಸ್ತಕ ಬಿಡುಗಡೆ: ಹಂಪ ನಾಗರಾಜಯ್ಯ, ಅತಿಥಿ: ಜಿ. ರಾಮಕೃಷ್ಣ, ಪುಸ್ತಕದ ಬಗ್ಗೆ: ಆರ್. ಲಕ್ಷ್ಮೀನಾರಾಯಣ, ಎಂ.ಎಸ್. ರಘುನಾಥ್, ಉಪಸ್ಥಿತಿ: ಉಲ್ಲಾಸ್ ಎನ್. ಪ್ರಧಾನ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ. ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್.ಕಾಲೊನಿ, ಸಂಜೆ 4



ಪಿ.ವಿ. ನಾರಾಯಣ

ಸೇವಾ ಸಂಕಲ್ಪ: ಧಾರ್ಮಿಕ–ಸಾಮಾಜಿಕ–ಸಾಂಸ್ಕೃತಿಕ ವಾರ್ಷಿಕ ಸಡಗರ, ಪೂಜಾವಿಧಿ ಕಂಕಣಧಾರಣೆ ಹಾಗೂ ಶುಭಾಶೀರ್ವಾದ, ಆಯೋಜನೆ: ಅಭಯ ಸೇವಾ ಫೌಂಡೇಷನ್, ಸ್ಥಳ: ಶ್ರೀರಾಮ ಮಂದಿರ ಆಟದ ಮೈದಾನ, ರಾಜಾಜಿನಗರ, ಸಂಜೆ 5

ಅನನ್ಯ–ಯುವಸಂಭ್ರಮ: ಗಾಯನ: ಧನ್ಯದಿನೇಶ್ ರುದ್ರಪಟ್ಟಣಂ, ಪಿಟೀಲು: ಎಸ್. ಜನಾರ್ದನ್, ಮೃದಂಗ: ಸುನಿಲ್ ಸುಬ್ರಮಣ್ಯ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಅನನ್ಯ ಸಭಾಂಗಣ, ಮಲ್ಲೇಶ್ವರ, ಸಂಜೆ 5

ಗುರುವಂದನೆ: ಶ್ರೀನಿವಾಸನ್ ಮತ್ತು ಸಂಗಡಿಗರಿಂದ ಭಕ್ತಿ ಸಂಗೀತ, 'ಅಮೃತ ಸಾರ' ಪುಸ್ತಕ ಬಿಡುಗಡೆ: ಕೆ. ಗೋಪಾಲಯ್ಯ, ರಾಘವೇಂದ್ರ ಶೆಟ್ಟಿ, ಆಯೋಜನೆ ,ಸ್ಥಳ:ಧರ್ಮಶಾಸ್ತ್ರ ಅಯ್ಯಪ್ಪ ಸ್ವಾಮಿ ದೇವಸ್ಥಾನ, ಮಹಾಲಕ್ಷ್ಮಿಪುರ, ಸಂಜೆ 5.45

'ಕಾವ್ಯಾನಂದ' ಪುರಸ್ಕಾರ ಪ್ರದಾನ: ಎಲ್. ಎನ್. ಮುಕುಂದರಾಜ್, ಕಾವ್ಯಾನಂದ ಪುರಸ್ಕೃತರು: ರಾಜೇಂದ್ರ ಚೆನ್ನಿ, ಆಯೋಜನೆ: ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 6



ರಾಜೇಂದ್ರ ಚೆನ್ನಿ

ಮಾರ್ಗಶೀರ್ಷೋತ್ಸವ-2025: ನಾಮಸಂಕೀರ್ತನೆ: ಜೊನ್ನಲಗಡ್ಡ ಶ್ರೀರಾಮ್ ಭಾಗವತರ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30ರಿಂದ

'ಹಲವು ಏಣಿಗಳು, ಹಲವು ಭವಿಷ್ಯಗಳು: ಬದಲಾಗುತ್ತಿರುವ ಜಗತ್ತಿನಲ್ಲಿ ಅವಕಾಶಗಳ ಪುನರ್ವಿಮರ್ಶೆ' ವಿಷಯದ ಬಗ್ಗೆ ಉಪನ್ಯಾಸ: ಅನಿರುದ್ಧ ಕೃಷ್ಣ, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30

ಭರತನಾಟ್ಯ ಪ್ರದರ್ಶನ: ದಿಯಾ ಉದಯ್, ಆಯೋಜನೆ ,ಸ್ಥಳ: ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಸಂಜೆ 6.30

'ಲೈಟ್ಸ್ ಆಫ್!' ನಾಟಕ ಪ್ರದರ್ಶನ: ನಿರ್ದೇಶನ: ಸುರೇಶ್ ಆನಗಳ್ಳಿ, ಆಯೋಜನೆ: ಅನೇಕ ತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ನಿರಾಶ್ರಿತ ಮಾನಸಿಕ ಅಸ್ವಸ್ಥರಿಗೆ ಆರೈಕೆ

ಬೆಂಗಳೂರು: 'ನಿರಾಶ್ರಿತ ಮಾನಸಿಕ ಅಸ್ವಸ್ಥರಿಗೆ ಸಮಗ್ರ ಆರೈಕೆ ಸೇವೆಗಳನ್ನು ಒದಗಿಸುವ ದೃಷ್ಟಿಯಲ್ಲಿ ಚರ್ಚಾ ಸಭೆ ಹಮ್ಮಿಕೊಳ್ಳಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ನೇತೃತ್ವ ವಹಿಸಲಿದ್ದಾರೆ' ಎಂದು ಆಲದಮರ ಫೌಂಡೇಷನ್ ಉಪ ನಿರ್ದೇಶಕ ಫರಾಖ್ ಸೈಯದ್ ಮುಹಮ್ಮದ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಡಿ.20ರಂದು ಬೆಳಿಗ್ಗೆ 10ಕ್ಕೆ ಆರೋಗ್ಯಸೌಧದಲ್ಲಿ ಚರ್ಚಾ ಸಭೆ ನಡೆಯಲಿದೆ. ಇದು ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದ ಕಾರ್ಯಕ್ರಮ' ಎಂದು ಮಾಹಿತಿ ನೀಡಿದರು.

ಸಹಾಯಕ ನಿರ್ದೇಶಕಿ ಡಾ. ಮೃನಾಲಿನಿ, 'ಮಾನಸಿಕ ಚಿಕಿತ್ಸೆಗೆ ಕುಟುಂಬ ಮತ್ತು ಸ್ನೇಹಿತರ ಸಹಕಾರ ದೊರಕದ ನಿರಾಶ್ರಿತರನ್ನು ಗುಣಪಡಿಸಿ, ಪುನರ್ವಸತಿ ಕಲ್ಪಿಸುವುದು ನಮ್ಮ ಗುರಿ' ಎಂದು ಹೇಳಿದರು.

ವಿಶಿಷ್ಟ ಜಲ ಯೋಗ ಪ್ರದರ್ಶನ ಇಂದು

ಬೆಂಗಳೂರು: 'ಲಖನೌದ ಯೋಗ ತಜ್ಞೆ ರೋಮಾ ಹೆಮಾನ್ವಿ ಅವರು ಡಿ.19ರಂದು ಜಯನಗರದ ಲಾ ಮಾರ್ವೆಲ್ಲಾ ಹೋಟೆಲ್‌ನಲ್ಲಿ ವಿಶಿಷ್ಟ ಜಲ ಯೋಗ ಪ್ರದರ್ಶನ ನೀಡಲಿದ್ದಾರೆ' ಎಂದು ಬ್ರಿಲಾರ್ಟೆ ಸಂಸ್ಥೆ ಮುಖ್ಯ ಕಾರ್ಯನಿರ್ವಾಹಕಿ ಭಾವಿಕಾ ವಾಧ್ವಾನಿ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, '58ರ ಹರೆಯದ ರೋಮಾ ಹೆಮಾನ್ವಿ ಅವರು ಕೇವಲ 5 ನಿಮಿಷಗಳಲ್ಲಿ 32 ಆಸನಗಳನ್ನು ಪ್ರದರ್ಶಿಸಲಿದ್ದಾರೆ. ಈಗಾಗಲೇ ನಗರದಲ್ಲಿ ಈ ಪ್ರದರ್ಶನ ನೀಡಿದ್ದಾರೆ' ಎಂದು ಮಾಹಿತಿ ನೀಡಿದರು.

ಡಿ.25ಕ್ಕೆ ನ್ಯೂರೊ ಜಸ್ಟೀಸ್ ಕೃತಿ ಲೋಕಾರ್ಪಣೆ

ಬೆಂಗಳೂರು: 'ಅಪಘಾತಕ್ಕೀಡಾದವರು ಸರ್ಕಾರದ ಸೌಲಭ್ಯ ಮತ್ತು ವಿಮಾ ಸೌಲಭ್ಯದಿಂದ ವಂಚಿತರಾಗದಂತೆ ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳ ಮಾಹಿತಿಗಾಗಿ ತಯಾರಿಸಿದ 'ನ್ಯೂರೊ ಜಸ್ಟೀಸ್' ಶೀರ್ಷಿಕೆ ಅಡಿ ನಾಲ್ಕು ಆವೃತ್ತಿಗಳ ಸಂಶೋಧನಾ ಕೃತಿಗಳು ಡಿ. 25ಕ್ಕೆ ಜನಾರ್ಪಣೆಗೊಳ್ಳಲಿವೆ.

ಕೃತಿ ರಚಿಸಿರುವ ಶರಣ್ ಶ್ರೀನಿವಾಸನ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಮೋಟಾರು ವಾಹನ ಅಪಘಾತದಿಂದ ಆರೋಗ್ಯ ದೌರ್ಬಲ್ಯಕ್ಕೆ ಒಳಗಾದವರಿಗೆ ಕಾನೂನು ಮತ್ತು ವೈದ್ಯಾಧಿಕಾರಿಗಳು ಅರಿವು ಮೂಡಿಸುವುದು ಅಗತ್ಯ. ಮೊದಲು ಈ ಅಧಿಕಾರಿಗಳಿಗೆ ಜಾಗೃತಿ ಇರಬೇಕು' ಎಂದು ತಿಳಿಸಿದರು.

ಭಾರತ ಸರ್ಕಾರ
ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ–ಪೇಸ್), ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ–6, 7, 8, ಸೆಕ್ಟರ್–5, ಐಎಂಟಿ ಮಾನೇಸರ್, ಗುರಗಾಂವ್, ಹರಿಯಾಣ–122050. Email: roc.cpace@mca.gov.in

ಫಾರಂ ನಂ. ಎಸ್‌ಟಿಕೆ–6

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಸಬ್ ಸೆಕ್ಷನ್ (2) ಮತ್ತು ಸಬ್ ಸೆಕ್ಷನ್ (4) ಮತ್ತು ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆದುಹಾಕುವ) ನಿಯಮಗಳು, 2016ರ ನಿಯಮ 7ರ ಪ್ರಕಾರ]

ಪಬ್ಲಿಕ್ ನೋಟಿಸ್ ನಂ. ಆರ್‌ಒಸಿ/ಸಿ–ಪೇಸ್/ಎಸ್‌ಟಿಕೆ–2/248(2)/2025–26/1551 ದಿ:12.12.2025

ಉಲ್ಲೇಖ:

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248 ಅಡಿಯಲ್ಲಿ, ಕರ್ನಾಟಕ ರಾಜ್ಯದಲ್ಲಿರುವ ಕೆಳಕಂಡ (65) ಕಂಪನಿಗಳ ಹೆಸರುಗಳನ್ನು ಅಳಿಸಿ ಹಾಕುವ ಅಥವಾ ತೆಗೆದು ಹಾಕುವ ವಿಷಯದಲ್ಲಿ

ಕ್ರ. ಸಂ.	ವರ್ಕ್ ಐಟಂ	ಸಿಐಎನ್	ಕಂಪನಿ ಹೆಸರು
1	AB9150855	U62099KA2024PTC186744	ಟೆಕ್ನೋಸ್ಥಳ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
2	AB9175598	U62099KA2023OPC179376	ಪಾರ್ಕ್‌ವೇ ಸಾಫ್ಟ್‌ವೇರ್ ಸೊಲ್ಯೂಷನ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
3	AB9064187	U85300KA2022PTC169348	ಜೆಂಡ್ಯೂರ್ ಹೆಲ್ತ್ ಪ್ರೈವೇಟ್ ಲಿಮಿಟೆಡ್
4	AB9385280	U72900KA2022PTC165130	ಕ್ಲೋರ್ಯುಮೋರ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
5	AB9064411	U63990KA2025OPC201009	ಕೋರ್‌ರೂಟ್ಸ್ ಟೆಕ್ನಾಲಜೀಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
6	AB9567619	U37100KA2022PTC166947	ಸಂಸ್ಕಾರ ಇ–ವೇಸ್ಟ್ ಸೈಕ್ಲರ್ಸ್ ಪ್ರೈವೇಟ್ ಲಿಮಿಟೆಡ್
7	AB9674383	U28259KA2025PTC198404	ಇಂಡೆವೊಫ್ಯಾಬ್ ಪ್ರಾಡಕ್ಟ್ ಗ್ಲೋಬಲ್ ಪ್ರೈವೇಟ್ ಲಿಮಿಟೆಡ್
8	AB9165626	U74994KA2018FTC112814	ಸಿವಿಐ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್
9	AB9033325	U74999KA2019PTC123691	ಕುಶಲ್ ಲಾಜಿಸ್ಟಿಕ್ಸ್ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್
10	AB9702415	U62099KA2024PTC189842	ಸ್ಲಿಚ್‌ಅಪ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
11	AB8909152	U62099KA2023PTC180417	ಬ್ಯಾಂಕ್‌ಫ್ಯಾಕ್ಟರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
12	AB9086046	U72900KA2022PTC163393	ಧನ್ವಂ ಫಿನ್‌ಟೆಕ್ ಪ್ರೈವೇಟ್ ಲಿಮಿಟೆಡ್
13	AB9085414	U85221KA2023PTC182273	ಬಿಟ್‌ಬೈಟ್ ಕಂಪ್ಯೂಟರ್ ಎಜುಕೇಶನ್ ಪ್ರೈವೇಟ್ ಲಿಮಿಟೆಡ್
14	AB9087242	U72900KA2019PTC127379	ಆಪ್ಲಿಲೈಟಿಕ್ಸ್ ಪ್ರೈವೇಟ್ ಲಿಮಿಟೆಡ್
15	AB9073562	U74999KA2020PTC132804	ರಾಯೀಸ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
16	AB9156450	U52609KA2019PTC128048	ಟರ್ಟಿ ಫ್ಯಾಷನ್ ಪ್ರೈವೇಟ್ ಲಿಮಿಟೆಡ್
17	AB9166659	U65192KA2008PTC045032	ಉನ್ನತಿ ಹೆಲ್ತ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
18	AB9145040	U20299KA2023PTC173755	ಇಹಸಾನ್ ಬಯೋ ಫ್ಯೂಯೆಲ್ಸ್ ಪ್ರೈವೇಟ್ ಲಿಮಿಟೆಡ್
19	AB9006546	U72900KA2021FTC143303	ವೈಲ್ಡ್ ಸ್ಪೀಡ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
20	AB9151356	U92490KA2022PTC165490	ಸಿನ್ಹಾ ಅಂಡ್ ಸಹಾಯ್ ಲೈಫ್‌ಸ್ಟೈಲ್ ಪ್ರೈವೇಟ್ ಲಿಮಿಟೆಡ್
21	AB9190323	U62013KA2023PTC173690	ಸ್ಯಾಂಡೆವಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
22	AB9279001	U62091KA2024PTC192525	ಮೈಂಡ್‌ಫ್ಲಟ್ಟರ್ ಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
23	AB9425469	U78100KA2024PTC194467	ಪ್ರೆಪ್ಪರ್ ಎಐ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್
24	AB9301165	U40300KA2015PTC078199	ಗ್ರೀನ್‌ಕೊ ಬಿಜಾಪುರ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್
25	AB9301071	U62091KA2023OPC179818	ಡೆಕ್ಸಮ್ ಸಾಫ್ಟ್‌ವೇರ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
26	AB9354648	U15100KA2021PTC151468	ಇಂಪೆಲ್ಲಾ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್
27	AB9365574	U24230KA2015PTC081212	ಪ್ರೊಫೌಂಡ್ ಫಾರ್ಮಾ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
28	AB9397231	U01409KA2022PTC159607	ಹೊಳಲೂರ್ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್
29	AB8980342	U72200KA2020PTC135732	ಸಾಫ್ಟಿನ್‌ವೇ ಡಿಜಿಟಲ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್
30	AB9370300	U33309KA2016PTC094238	ಫರ್ಸ್ಟ್‌ಪಾಯಿಂಟ್ ಮೆಡ್‌ಟೆಕ್ ಪ್ರೈವೇಟ್ ಲಿಮಿಟೆಡ್
31	AB9430660	U26104KA2024PTC189341	ಪಿಸಿಬಿಬಾಟ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
32	AB9445889	U85100KA2019PTC128323	ನ್ಯೂ ಹೋಪ್ ಸರ್ಜಿಕಲ್ ಸೆಂಟರ್ಸ್ ಪ್ರೈವೇಟ್ ಲಿಮಿಟೆಡ್
33	AB9495697	U62090KA2024PTC189522	ಪಿಚ್‌ರೈಟ್ ಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
34	AB9002179	U74140KA2019PTC128409	ವೈಲ್ಡ್ ಸ್ಪೀಡ್ಸ್ ಎಂಟರ್‌ಟೇನ್‌ಮೆಂಟ್ ಪ್ರೈವೇಟ್ ಲಿಮಿಟೆಡ್
35	AB9548925	U74900KA2016PTC087034	ಫೋಸ್ಟರ್‌ಚೈಲ್ಡ್ ಅಡ್ವರ್ಟೈಸಿಂಗ್ ಪ್ರೈವೇಟ್ ಲಿಮಿಟೆಡ್
36	AB9515818	U15549KA2022PTC159018	ಪ್ರಿಸೈಸ್ ಫುಡ್ ಸೈನ್ಸ್ ಪ್ರೈವೇಟ್ ಲಿಮಿಟೆಡ್
37	AB9579291	U55209KA2022PTC162267	ಸೀಡರ್ಬಿ ಸೀಫುಡ್ ರೆಸ್ಟೋರೆಂಟ್ ಪ್ರೈವೇಟ್ ಲಿಮಿಟೆಡ್
38	AB9580674	U47722KA2023PTC172815	ಅಲಾಂಶಿ ಕನ್ಸೂಮರ್ಸ್ ಪ್ರೈವೇಟ್ ಲಿಮಿಟೆಡ್
39	AB9082911	U31200KA2007PTC044028	ರೇಯ್ಸ್ ಕಂಟ್ರೋಲ್ ಸಿಸ್ಟಮ್ (ಬೆಂಗಳೂರು) ಪ್ರೈವೇಟ್ ಲಿಮಿಟೆಡ್
40	AB9564904	U51900KA2020PTC131713	ಕ್ವಿಕ್‌ಸೀ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್
41	AB9627454	U74999KA2022PTC156276	ಹಕ್ಸ್ ಡಿಸೈರ್ ಪ್ರೈವೇಟ್ ಲಿಮಿಟೆಡ್
42	AB8746304	U85110KA2001PLC029369	ಸೈಂಟಿಫಿಕ್ ಆ್ಯಂಟಿಏಜಿಂಗ್ ಅಂಡ್ ಹೆಲ್ತ್ ಕೇರ್ ಇಂಟರ್‌ನ್ಯಾಷನಲ್ ಲಿಮಿಟೆಡ್
43	AB8394253	U72200KA2015PTC082134	ಎಜೆಎಕ್ಸ್‌ಎಂ ಟೆಕ್ನಾಲಜೀಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
44	AB8504361	U74910KA2006PTC038549	ಎಲ್‌ಟಿಎಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
45	AB8525313	U72900KA2021OPC145929	ವಿದ್ಯುತ್ ತಂತ್ರಜ್ಞಾನ (ಒಪಿಸಿ) ಪ್ರೈವೇಟ್ ಲಿಮಿಟೆಡ್
46	AB8981530	U70100KA2015OPC078141	ಜೆಎಸ್‌ಎಸ್‌ಎನ್ ಪ್ರಾಪರ್ಟಿ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ (ಒಪಿಸಿ)
47	AB8537189	U45203KA2016PTC096275	ಸ್ಟೇಲರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
48	AB8999446	U72900KA2011PTC060562	ರೀಚಾರ್ಜ್ 91 ಪ್ರೈವೇಟ್ ಲಿಮಿಟೆಡ್
49	AB8581460	U74999KA2013PTC067751	ಡಬ್ಲ್ಯುಎಸ್‌ಒಎಲ್ ಫ್ಯಾಷನ್ ಅಂಡ್ ಇಮೇಜ್ ಮೇಕ್‌ಓವರ್ಸ್ ಪ್ರೈವೇಟ್ ಲಿಮಿಟೆಡ್
50	AB8928001	U72900KA2021PTC152361	ಆರ್ಟಿಂಟ್‌ಸ್ಮಾರ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
51	AB9175742	U15130KA2021PTC153970	ಮೊರಾಕಾಶ್ ಫುಡ್ಸ್ ಪ್ರೈವೇಟ್ ಲಿಮಿಟೆಡ್
52	AB8653343	U72900KA2017FTC104668	ಟ್ಯಾಕೊಟೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
53	AB8749090	U55901KA2024PTC183491	ಪೆಸಿರೀಸ್ ನೆಟ್‌ವರ್ಕ್ ಪ್ರೈವೇಟ್ ಲಿಮಿಟೆಡ್
54	AB8743802	U51100KA2017PTC104536	ಸಲ್ಯೂಟೊ ವೆಲ್ನೆಸ್ ಪ್ರೈವೇಟ್ ಲಿಮಿಟೆಡ್
55	AB8770037	U92419KA2018PTC114034	ಡೈನಾವಿಡಾ ಪ್ರೈವೇಟ್ ಲಿಮಿಟೆಡ್
56	AB8825875	U70200KA2024PTC191209	ಎಸ್‌ಎಸ್‌ಎಸ್‌ಆರ್‌ಎಂ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
57	AB8957915	U92490KA2016PTC095945	ಇನ್ಫಿಕ್ಸ್ ಪರ್ಫಾರ್ಮೆನ್ಸ್ ಲ್ಯಾಬ್ ಪ್ರೈವೇಟ್ ಲಿಮಿಟೆಡ್
58	AB8786340	U92490KA2022PTC162895	ಪೊಮೆಲೊ ಸ್ಟುಡಿಯೊ ಪ್ರೈವೇಟ್ ಲಿಮಿಟೆಡ್
59	AB8955017	U70109KA2020PTC135453	ನಾಗಾರ್ಜುನ ಇನ್ಫ್ರಾಕಾನ್ ಪ್ರೈವೇಟ್ ಲಿಮಿಟೆಡ್
60	AB8823317	U74900KA2014FTC076366	ಐಡಿಎಕ್ಸ್ (ಇಂಡಿಯಾ) ಡಿಸ್‌ಪ್ಲೇ ಪ್ರೈವೇಟ್ ಲಿಮಿಟೆಡ್
61	AB8802420	U62100KA2021PTC149503	ಸ್ಕೈಲಿಮೊ ಏವಿಯೇಶನ್ ಪ್ರೈವೇಟ್ ಲಿಮಿಟೆಡ್
62	AB8854628	U70102KA1984PTC005927	ಐ.ಎಲ್.ಐ ಪ್ರೈವೇಟ್ ಲಿಮಿಟೆಡ್
63	AB8925823	U74999KA2018PTC109613	ಬೆಟರ್‌ಗೋಲ್ಡ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
64	AB8884521	U85110KA1990PTC011228	ಪರಿಜ್ಞಾ ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್
65.	AB9103586	U14101KA2024PTC191560	ಗೋಕಲ್‌ದಾಸ್ ಡಿಫೆನ್ಸ್ ಅಪಾರೆಲ್ ಪ್ರೈವೇಟ್ ಲಿಮಿಟೆಡ್

(2) ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಇಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಂಪನಿಗಳು ತಮ್ಮ ಸ್ಥಾಪನೆ ಆದಾಗಿನಿಂದ ಒಂದು ವರ್ಷದೊಳಗೆ ವ್ಯವಹಾರವನ್ನು ಆರಂಭಿಸಲು ವಿಫಲವಾಗಿರುವ ಹಿನ್ನಲೆಯಲ್ಲಿ ಅಥವಾ ಸದರಿ ಕಂಪನಿಗಳು ಹಿಂದಿನ ತಕ್ಷಣದ ಎರಡು ಹಣಕಾಸು ವರ್ಷಗಳ ಅವಧಿಯಲ್ಲಿ ಯಾವುದೇ ವ್ಯಾಪಾರ ಅಥವಾ ಚಟುವಟಿಕೆ ಮಾಡದಿರುವ ಹಿನ್ನಲೆಯಲ್ಲಿ ಮತ್ತು ಅಂತಹ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 455ರ ಅಡಿಯಲ್ಲಿ ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆಯಲು ಯಾವುದೇ ಅರ್ಜಿ ಸಲ್ಲಿಸದೆ ಇರುವ ಹಿನ್ನಲೆಯಲ್ಲಿ ಅಥವಾ ಕಂಪನಿಗಳು ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆದುಕೊಂಡಿದ್ದು / ಮೆಮೊರಾಂಡಮ್‌ನ ಚಂದಾದಾರರು ಕಂಪನಿಯ ಸ್ಥಾಪನಾ ಸಮಯದಲ್ಲಿಯೇ ಪಾವತಿಸಲು ಒಪ್ಪಿಕೊಂಡಿದ್ದ ಚಂದಾದಾರಿಕೆಯನ್ನು ಪಾವತಿಸದೆ ಇರುವ ಹಿನ್ನಲೆಯಲ್ಲಿ ಮತ್ತು ಸ್ಥಾಪನೆಯಾದಾಗಿನಿಂದ ಯಾವುದೇ ವ್ಯವಹಾರ ಮಾಡುತ್ತಿಲ್ಲ ಅಥವಾ ಚಟುವಟಿಕೆ ನಡೆಸುತ್ತಿಲ್ಲ ಎಂಬುದನ್ನು ನೂರಾ ಎಂಬತ್ತು ದಿನಗಳೊಳಗೆ ಸೆಕ್ಷನ್ 10ಎ ಸಬ್ ಸೆಕ್ಷನ್ (1)ರ ಅಡಿಯಲ್ಲಿ ಡಿಕ್ಲರೇಶನ್ ಸಲ್ಲಿಕೆ ಮಾಡಿರದೆ ಇರುವುದು, ಸೆಕ್ಷನ್ 12ರ ಸಬ್ ಸೆಕ್ಷನ್ (9) ಅಡಿಯಲ್ಲಿ ಭೌತಿಕ ಪರಿಶೀಲನೆ ಕೈಗೊಂಡ ನಂತರ ಇದು ಬೆಳಕಿಗೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಬಹುತೇಕರು ತಮ್ಮ ಕಂಪನಿಗಳ ನೋಂದಣಿಯನ್ನು ಮುಂದುವರಿಸಲು ಇಚ್ಛಿಸದಿರುವ ಹಿನ್ನಲೆಯಲ್ಲಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248(2)ರ ಅಡಿಯಲ್ಲಿ, ತಮ್ಮ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಬೇಕು / ಅಳಿಸಿ ಹಾಕಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತವೆ.

(3) ಅಂತೆಯೇ, ಕಂಪನಿಗಳ ರಜಿಸ್ಟ್ರಾರ್ ಇವರು ಮೇಲ್ಕಂಡ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು / ಅಳಿಸಿ ಹಾಕಲು ಉದ್ದೇಶಿಸಿರುತ್ತಾರೆ.

(4) ಹೀಗೆ, ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಿಜಿಸ್ಟರ್‌ನಿಂದ ತೆಗೆದು ಹಾಕಲು/ಅಳಿಸಿ ಹಾಕಲು ಉದ್ದೇಶಿಸಲಾಗಿರುವ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಮೇಲೆ ತಿಳಿಸಲಾಗಿರುವ ಕಚೇರಿ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ಇರ್ಫಾನ್ ಟರ್ಕಿ
ಅಸಿಸ್ಟೆಂಟ್ ರಿಜಿಸ್ಟ್ರಾರ್
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್

CBC07123/11/0511/2526

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427
ಫ್ಯಾಕ್ಸ್: 08156–295427 ಇಮೇಲ್–eemidcbpura@gmail.com

ಮರು ಟೆಂಡರ್ ಅಧಿಸೂಚನೆ

ಸಂಖ್ಯೆ: ಕಾಸಬ/ತಾಂಶಾ/ತಾಂಸ/ ಮರು ಟೆಂಡರ್/2025–26 ದಿನಾಂಕ:17/12/2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 14/2025–26, ದಿನಾಂಕ: 14/11/2025ರಲ್ಲಿ ಆಹ್ವಾನಿಸಲಾಗಿದ್ದ 2ಎ ಕ್ಯಾಟಗೆರಿಗೆ ಮೀಸಲಿಟ್ಟ ಇಂಡೆಂಟ್ ಸಂಖ್ಯೆ : MI/2025-26/LI/WORK_INDENT8487 ಕಾಮಗಾರಿಯ ಟೆಂಡರ್‌ನಲ್ಲಿ 2 ಬಾರಿ ಯಾವುದೇ ಗುತ್ತಿಗೆದಾರರು ಭಾಗವಹಿಸದೇ ಇರುವುದರಿಂದ ಸದರಿ ಕಾಮಗಾರಿಯ ಟೆಂಡರ್‌ನ್ನು ಕ್ಯಾಟಗೆರಿ 2ಎ ರ ಬದಲಾಗಿ ಓಪನ್ ಟೆಂಡರ್‌ಆಗಿ ಆಹ್ವಾನಿಸಲಾಗಿರುತ್ತದೆ. ಮತ್ತು 17/2025–26, ದಿನಾಂಕ: 19/11/2025ರಲ್ಲಿ ಆಹ್ವಾನಿಸಲಾಗಿದ್ದ ಇಂಡೆಂಟ್ ಸಂಖ್ಯೆ: MI/2025-26/LI/WORK_INDENT8675 ಮತ್ತು MI/2025-26/LI/WORK_INDENT8686 ಟೆಂಡರ್‌ಗಳಲ್ಲಿ ಯಾವುದೇ ಗುತ್ತಿಗೆದಾರರು ಭಾಗವಹಿಸದೇ ಇರುವುದರಿಂದ ಮರು ಟೆಂಡರ್ ಕೆರೆಯಲಾಗಿರುತ್ತದೆ ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 26/12/2025 ಸಂಜೆ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 29/11/2025 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ). ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
30/1, 1ನೇ ಮತ್ತು 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ರಸ್ತೆ, ವಸಂತ ನಗರ, ಬೆಂಗಳೂರು– 560051

ಸಂಖ್ಯೆ: DGM-3/ಬೆಂ.ಘ.ನಿ.ನಿ/ಪಿಆರ್/719/2025–26 ದಿನಾಂಕ: 18.12.2025

ಆಸಕ್ತಿ ಅಭಿವ್ಯಕ್ತಿ ಆಹ್ವಾನಿಸಲು ಪ್ರಕಟಣೆ

ಕೇಂದ್ರ ಸರ್ಕಾರದ ವಸತಿ ಮತ್ತು ನಗರ ಸಚಿವಾಲಯ ವತಿಯಿಂದ ನಿರ್ವಹಿಸಲಾಗುತ್ತಿರುವ ಸ್ವಚ್ಛ ಭಾರತ ಅಭಿಯಾನ 2.0 ರಡಿಯಲ್ಲಿ ಸಮರ್ಪಕ ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಬರುವ 5 ನಗರ ಪಾಲಿಕೆಗಳಲ್ಲಿ 03 ವರ್ಷಗಳ ಅವಧಿಗೆ ಪೂರ್ಣ ಸಮಯದ ಪಾತ್ರದ ಅಡಿಯಲ್ಲಿ IEC ಚಟುವಟಿಕೆಗಳನ್ನು ಕೈಗೊಳ್ಳಲು Day-NULM ನಲ್ಲಿ ನೋಂದಾಯಿಸಿಕೊಂಡಿರುವ ಆಸಕ್ತ SHG ಸದಸ್ಯರು ತಮ್ಮ ಆಸಕ್ತಿಯ ಅಭಿವ್ಯಕ್ತಿಯನ್ನು https://www.bbmp.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ ದಿನಾಂಕ: 29.12.2025 ರ ಸಂಜೆ 5:00 ಗಂಟೆಯ ಒಳಗಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ ಕಛೇರಿ ವಿಳಾಸ: # 30/1, 3rd Floor, BBMP Building, Thimmaiah Road, Millers Tank Bund Area, VasanthNagar, Bengaluru- 560051 ಇಲ್ಲಿಗೆ ಸಲ್ಲಿಸಲು ಅವಧಿಯನ್ನು ವಿಸ್ತರಿಸಿದೆ. Terms of Reference (TOR), Template for submission of TOR, Endorsement Form, ಮತ್ತಿತರೆ ವಿವರಗಳನ್ನು https://www.bbmp.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಆಸಕ್ತ SHG ಸದಸ್ಯರು (1) ಗುರುತಿನ ಪುರಾವೆ, (2) ವಿಳಾಸದ ಪುರಾವೆ, (3) ಅರ್ಹತಾ ಪಟ್ಟಿಯಲ್ಲಿ ನೊಂದಾಯಿಸಿಕೊಂಡಿರುವುದಕ್ಕೆ ದಾಖಲೆಗಳು, (4) ಶೈಕ್ಷಣಿಕ ಅರ್ಹತೆ & (5) Day-NULM ಹಿಂಬರಹ / ದೃಢೀಕರಣ ಪತ್ರದ ನಮೂನೆಯನ್ನು ಸಹ ಲಗತ್ತಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳನ್ನು ಅವರ ಕೌಶಲ್ಯವನ್ನು ನಿರ್ಣಯಿಸಲು ವಿಷಯದ ಬಗ್ಗೆ ತಿಳುವಳಿಕೆಗಾಗಿ ಸಂದರ್ಶನಕ್ಕೆ ಕರೆಯಲಾಗುವುದು.

ಕ್ರ.ಸಂ.	ವಿವರ	ಅರ್ಜಿ ಸಲ್ಲಿಸಲು ಅರ್ಹತೆ
1	ಸಮುದಾಯ ಸಂಚಾಲಕರು (COMMUNITY MOBILIZER)	(1) ಎಸ್.ಎಸ್.ಎಲ್.ಸಿ. / 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಕಡ್ಡಾಯವಾಗಿ ಕನ್ನಡ ಭಾಷಾ ಜ್ಞಾನದ ಜೊತೆಗೆ ಕೆಲಸ ನಿರ್ವಹಿಸುವವರಿಗೆ ಆದ್ಯತೆ. (2) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ Day-NULM ಶಾಖೆಯಲ್ಲಿ ನೊಂದಾಯಿತ ಸ್ವ–ಸಹಾಯ ಗುಂಪಿನ ಸದಸ್ಯರಾಗಿರಬೇಕು (SHG) (3) ಅರ್ಜಿದಾರರು MS Office ಮತ್ತು MS Excel ಕಂಪ್ಯೂಟರ್ ಸಾಕ್ಷರತೆಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಹೊಂದಿರಬೇಕು. (4) ಐ.ಇ.ಸಿ. ಕ್ಷೇತ್ರದಲ್ಲಿ ಅನುಭವವಿರುವ ಅರ್ಜಿದಾರರಿಗೆ ಅಥವಾ ಕರ್ನಾಟಕದಲ್ಲಿನ ನಗರ ಸ್ಥಳೀಯ ಸಂಸ್ಥೆಗಳು ಅಥವಾ ಗ್ರಾಮ ಪಂಚಾಯತ್‌ಗಳೊಂದಿಗೆ ಸಂವಹನ ಕಾರ್ಯಗಳಲ್ಲಿ ತೊಡಗಿಸಿಕೊಂಡ ಅನುಭವ ಇರುವವರಿಗೆ ಆದ್ಯತೆ ನೀಡಲಾಗುವುದು. (5) ಸಂಬಂಧಿಸಿದ ವಾರ್ಡ್ ವ್ಯಾಪ್ತಿಯಲ್ಲಿ ವಾಸವಿರುವ ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್

DIPR/CP/4538/Zen/2025-26

ರಸೆಲ್ ಮಾರುಕಟ್ಟೆ ಪುನರ್ ಅಭಿವೃದ್ಧಿ

ಹಲಸೂರು ಕೆರೆ: ಜಲಮಾರ್ಗ ಅಭಿವೃದ್ಧಿಗೆ ಯೋಜನೆ– ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

ಶಿವಾಜಿನಗರದ ರಸೆಲ್ ಮಾರ್ಕೆಟ್

ಬೆಂಗಳೂರು: ಶಿವಾಜಿನಗರದ ರಸೆಲ್ ಮಾರುಕಟ್ಟೆಯ ಮರು ಅಭಿವೃದ್ಧಿಗೆ ಕೂಡಲೇ ಟೆಂಡರ್ ಆಹ್ವಾನಿಸುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಸೆಲ್ ಮಾರುಕಟ್ಟೆಯ ಮರು ಅಭಿವೃದ್ಧಿಗೆ ಸಂಬಂಧಿಸಿದ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧವಿದೆ. ಅದನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಬೇಕು. ರಸೆಲ್ ಮಾರುಕಟ್ಟೆ ಒಂದು ಪಾರಂಪರಿಕ ಕಟ್ಟಡವಾಗಿದ್ದು, ಅದಕ್ಕೆ ಆಧುನಿಕ ಸ್ಪರ್ಶ ನೀಡುವ ಮೂಲಕ ಜನಸ್ನೇಹಿ ಮಾರುಕಟ್ಟೆಯಾಗಿ ರೂಪಿಸಬೇಕು. ಈ ಸಂಬಂಧ ಮಾರುಕಟ್ಟೆಯಲ್ಲಿರುವ ವ್ಯಾಪಾರಿಗಳಿಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಬೇರೆಡೆ ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಿ, ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಮಾರುಕಟ್ಟೆ ಅಭಿವೃದ್ಧಿ ಸಂದರ್ಭದಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆ ಕಲ್ಪಿಸಿ, ಪಾರ್ಕಿಂಗ್ ಪ್ರದೇಶಗಳಲ್ಲಿ ನೀರು ನಿಲ್ಲದಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಮಾರುಕಟ್ಟೆ ಸ್ವಚ್ಛವಾಗಿರುವಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ತ್ಯಾಜ್ಯ ವಿಂಗಡಣೆ ಹಾಗೂ ಕಾಂಪೋಸ್ಟಿಂಗ್ ವ್ಯವಸ್ಥೆ ಮಾಡಿಸಲು ಸೂಚಿಸಿದರು.

ಜಲಮಾರ್ಗ: ಹಲಸೂರು ಕೆರೆಗೆ 3 ಒಳಹರಿವುಗಳಿದ್ದು, ಅವುಗಳನ್ನು ಪರಿಶೀಲಿಸಿ ಕೆ-100 ಮಾದರಿಯಲ್ಲಿ ನಾಗರಿಕ ಜಲಮಾರ್ಗ ನಿರ್ಮಾಣಕ್ಕೆ ಯೋಜನೆ ರೂಪಿಸಬೇಕು. ಜೊತೆಗೆ ಹಲಸೂರು ಕೆರೆಯ ಅಭಿವೃದ್ಧಿ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಿ ಎಂದು ಮಹೇಶ್ವರ್ ರಾವ್ ನಿರ್ದೇಶನ ನೀಡಿದರು.

ಹಲಸೂರು ಕೆರೆಯ ಬಳಿಯ ರಕ್ಷಣಾ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆದು ವಾಯುವಿಹಾರ ಮಾರ್ಗ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಾಸಕ ರಿಜ್ವಾನ್ ಹರ್ಷದ್ ಮಾತನಾಡಿ, 'ಶಿವಾಜಿನಗರ ವ್ಯಾಪ್ತಿಯಲ್ಲಿರುವ ರಸೆಲ್ ಮಾರುಕಟ್ಟೆ ಅತ್ಯಂತ ಪುರಾತನ ಕಟ್ಟಡವಾಗಿದ್ದು, ಅದಕ್ಕೆ ಯಾವುದೇ ರೀತಿಯ ಧಕ್ಕೆ ಉಂಟಾಗದಂತೆ ಮರು ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುತ್ತಿದೆ' ಎಂದರು.

ಪ್ರಮುಖ ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕ

ಬೆಂಗಳೂರು ಕೇಂದ್ರ ನಗರ ಪಾಲಿಕೆಗಳ ಪ್ರಮುಖ ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕ ವಿಧಿಸಲು ಟೆಂಡರ್ ಆಹ್ವಾನಿಸಲಾಗಿದೆ.

ಕಮರ್ಷಿಯಲ್ ಸ್ಟ್ರೀಟ್‌ನಿಂದ ಒಪಿಎಚ್ ರಸ್ತೆ, ಮೈನ್ ಗಾರ್ಡ್ ರಸ್ತೆಯಿಂದ ಸಫೀನಾ ಪ್ಲಾಜಾ– ಡಿಸ್ಪೆನ್ಸರಿ ರಸ್ತೆ ಮತ್ತು ಡಿಕನ್‌ಸನ್ ರಸ್ತೆ.

ಡಿಸ್ಪೆನ್ಸರಿ ರಸ್ತೆಯಿಂದ ಕಾಮರಾಜ ರಸ್ತೆ, ಇಬ್ರಾಹಿಂ ಸಾಹಿಬ್ ಸ್ಟ್ರೀಟ್. ಮಿಲ್ಲರ್ ರಸ್ತೆ ಜಂಕ್ಷನ್, ಪ್ಲಾನಿಟೋರಿಯಂ ರಸ್ತೆ, ಸೇಂಟ್ ಜಾನ್ಸ್ ಚರ್ಚ್ ರಸ್ತೆ, ಸೇಂಟ್ ಜಾನ್ಸ್ ರಸ್ತೆ.

ದತ್ತಾತ್ರೇಯ ವಾರ್ಡ್‌ನಲ್ಲಿ 2ನೇ ಟೆಂಪಲ್ ರಸ್ತೆ, ಸಂಪಿಗೆ ರಸ್ತೆ, ರೈಲ್ವೆ ಪ್ಯಾರಲಲ್ ರಸ್ತೆ, ಬಿವಿಕೆ ಅಯ್ಯಂಗಾರ್ ರಸ್ತೆ.

ಮಾವಳ್ಳಿ ಟ್ಯಾಂಕ್ ಬಂಡ್ ರಸ್ತೆ, ಡಿವಿಜಿ ರಸ್ತೆ, ಶಂಕರಮಠ ರಸ್ತೆ, ಪಿಎಂಕೆ ರಸ್ತೆ.

ವಾಣಿವಿಲಾಸ್ ರಸ್ತೆ, ವಾಸವಿ ದೇವಸ್ಥಾನ ರಸ್ತೆ, ಕನಕಪುರ ರಸ್ತೆ, ಡಯಾಗನಲ್ ರಸ್ತೆ, ಪಟಾಲಮ್ಮ ರಸ್ತೆ, ಟಿ. ಮರಿಯಪ್ಪ ರಸ್ತೆ.

ಕಾರುಗಳಿಗೆ ಪ್ರತಿ ಗಂಟೆಗೆ ₹30, ದ್ವಿಚಕ್ರ ವಾಹನಗಳಿಗೆ ಪ್ರತಿ ಗಂಟೆಗೆ ₹15, ನಿತ್ಯದ ಪಾಸ್‌ಗೆ ಕ್ರಮವಾಗಿ ₹150 ಮತ್ತು ₹75 ನಿಗದಿಪಡಿಸಲಾಗಿದೆ.

ಇಂದಿನಿಂದ ಭಾರತೀಯ ವಾಣಿಜ್ಯ ಸಮ್ಮೇಳನ

ಬೆಂಗಳೂರು: ಭಾರತೀಯ ವಾಣಿಜ್ಯ ಸಂಘಟನೆಯು ನಗರದ ಗಾರ್ಡನ್‌ಸಿಟಿ ವಿಶ್ವವಿದ್ಯಾಲಯದಲ್ಲಿ ಡಿ.19ರಿಂದ ಮೂರು ದಿನ 76ನೇ ಭಾರತೀಯ ವಾಣಿಜ್ಯ ಸಮ್ಮೇಳನವನ್ನು ಆಯೋಜಿಸಿದೆ.

'ದೇಶದ ವಿವಿಧ ಭಾಗಗಳಿಂದ 2500ಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ. ವಾಣಿಜ್ಯ ಮತ್ತು ಸಂಬಂಧಿತ ಕ್ಷೇತ್ರಗಳ ವಿಭಿನ್ನ ವಿಷಯಗಳ 1500ಕ್ಕೂ ಹೆಚ್ಚಿನ ಸಂಶೋಧನಾ ಲೇಖನಗಳನ್ನು ಮಂಡಿಸಲಾಗುತ್ತದೆ. ಅತ್ಯುತ್ತಮ ಲೇಖನಗಳಿಗೆ ನಗದು ಬಹುಮಾನ ನೀಡಲಾಗುತ್ತದೆ' ಎಂದು ಸಂಘಟನೆಯ ಉಪಾಧ್ಯಕ್ಷ ಎಂ.ಜಯಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸಮ್ಮೇಳನದಲ್ಲಿ ಅತ್ಯುತ್ತಮ ವ್ಯವಹಾರ ಶೈಕ್ಷಣಿಕ ವರ್ಷದ ಪ್ರಶಸ್ತಿ, ಮನುಬಾಯಿ ಎಂ.ಶಹಾ ಸ್ಮಾರಕ ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣಾ ಶ್ರೇಷ್ಠತಾ ಪ್ರಶಸ್ತಿ, ಮನುಬಾಯಿ ಶಹಾ ಸ್ಮಾರಕ ಸಂಶೋಧನಾ ಪ್ರಶಸ್ತಿ, ಸೌರಭ ಶಿವಾರೆ ಸ್ಮಾರಕ ಯುವ ಸಂಶೋಧಕ ಪ್ರಶಸ್ತಿ, ಎ.ಡಿ.ಶಿಂಧೆ ಸಂಶೋಧನಾ ಫೆಲೋಶಿಪ್ ಪ್ರಶಸ್ತಿ, ಸಮೀವುದ್ದೀನ್ ಸ್ಮಾರಕ ಐಸಿಎ ಸಂಶೋಧನಾ ವಿದ್ವಾಂಸ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ' ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಭಾರತೀಯ ವಾಣಿಜ್ಯ ಸಂಘಟನೆಯ ಮಾಜಿ ಅಧ್ಯಕ್ಷ ರಾಮಚಂದ್ರೇಗೌಡ, ಪ್ರೊ. ಕೆ.ಎಸ್.ಠಾಕೂರ್, ಪ್ರೊ.ಎ.ಕೆ. ಸಿಂಗ್, ಡಾ.ಕುಲದೀಪ್ ಶರ್ಮ, ಡಾ.ಟಿ.ಅಶ್ವತ್ಥನಾರಾಯಣ ಹಾಜರಿದ್ದರು

ಇಂದಿರಾನಗರದಲ್ಲಿ 'ಭೂಮಿಕಾ ಕ್ಲಬ್' ನಾಳೆ

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಮಹಿಳೆಯರಿಗಾಗಿ ಸ್ಥಾಪಿಸಿರುವ 'ಭೂಮಿಕಾ ಕ್ಲಬ್' ವೇದಿಕೆಯು ಇದೇ ಶನಿವಾರ (ಡಿ.20) ಮಧ್ಯಾಹ್ನ 4ಕ್ಕೆ ಇಂದಿರಾನಗರದಲ್ಲಿರುವ ಇಂದಿರಾನಗರ ಕ್ಲಬ್‌ನಲ್ಲಿ 33ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

'ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್' ಮತ್ತು ಮಣಿಪಾಲ್ ಆಸ್ಪತ್ರೆಯ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಅಡುಗೆ ತಯಾರಿ, ಸಂಗೀತ ಕಾರ್ಯಕ್ರಮ ಸೇರಿ ಹಲವು ವಿಶಿಷ್ಟತೆಯನ್ನು ಈ ಕಾರ್ಯಕ್ರಮ ಒಳಗೊಂಡಿರಲಿದೆ. 2022ರಲ್ಲಿ ಪ್ರಾರಂಭವಾದ ಈ ವೇದಿಕೆಯು, ಈವರೆಗೆ ಬೆಂಗಳೂರಿನಲ್ಲಿ 14 ಕಾರ್ಯಕ್ರಮಗಳನ್ನು ನಡೆಸಿದೆ. ರಾಜ್ಯದಾದ್ಯಂತ ಜನಪ್ರಿಯವಾದ ಈ ಕಾರ್ಯಕ್ರಮವನ್ನು ಈಗ ಮತ್ತೆ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.

Freedom Healthy Cooking Oils Presents ಭೂಮಿಕಾ ಕ್ಲಬ್ Powered by manipalhospitals LIFE'S ON

ಆರೋಗ್ಯ ಮತ್ತು ಕ್ಷೇಮದ ಬಗ್ಗೆ ಮಣಿಪಾಲ್ ಆಸ್ಪತ್ರೆಯ ವೈದ್ಯಕೀಯ ತಜ್ಞರಾದ ಡಾ. ಪೂನಂ ಪಾಟೀಲ ಅವರು ಉಪನ್ಯಾಸ ನೀಡಲಿದ್ದಾರೆ. ಪದ್ಮಿನಿ ಪ್ರಿಯ ನೃತ್ಯ ಕಲಾ ಅಕಾಡೆಮಿಯ ಉಷಾ ಬಸಪ್ಪ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ. ಅನಘಾ ಎಂ. ಅವರಿಂದ ವಿಶೇಷ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

ವರ್ಷಿಣಿ ಅವರಿಂದ ಹಾಸ್ಯ ಭಾಷಣ (ಸ್ಟ್ಯಾಂಡ್ ಅಪ್ ಕಾಮಿಡಿ), ಚಂದನಾ ಲಕ್ಷ್ಮಿಕಾಂತ್ ಅವರಿಂದ ಜುಂಬಾ ಚಟುವಟಿಕೆ ಹಾಗೂ ಅಡುಗೆ ತಯಾರಿ ಸ್ಪರ್ಧೆಯನ್ನೂ ಆಯೋಜಿಸಲಾಗಿದೆ.

ಹೊಸ ವಿಷಯಗಳನ್ನು ಕಲಿಯಲು, ಸಮಾನ ಮನಸ್ಕರೊಂದಿಗೆ ಬೆರೆಯಲು, ಸೃಜನಶೀಲತೆ ಪ್ರದರ್ಶಿಸಲು, ಆರೋಗ್ಯ ಮತ್ತು ಕ್ಷೇಮ ಜಗತ್ತಿನ ಬಗ್ಗೆ ಮಾಹಿತಿ ಪಡೆಯಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ. ಪ್ರೇಕ್ಷಕರಿಗೆ ವಿವಿಧ ಸ್ಪರ್ಧೆ ಇರಲಿದ್ದು, ಭಾಗವಹಿಸಿದ ಎಲ್ಲರಿಗೂ ಉಡುಗೊರೆಗಳು ಇರಲಿವೆ. ಒಬ್ಬ ಅದೃಷ್ಟ ಪ್ರೇಕ್ಷಕರಿಗೆ ₹ 15 ಸಾವಿರ ಮೌಲ್ಯದ ವಾಟರ್ ಪ್ಯೂರಿಫೈಯರ್ ಗೆಲ್ಲುವ ಅವಕಾಶ ಇರಲಿದೆ.

ಅದೃಷ್ಟ ಪ್ರೇಕ್ಷಕರೊಬ್ಬರಿಗೆ 'ಪ್ರಜಾವಾಣಿ ಸಿನಿ ಸಮ್ಮಾನ' ಸಮಾರಂಭದ ಎರಡು ವಿವಿಐಪಿ ಪಾಸ್‌ಗಳನ್ನು ಗೆಲ್ಲುವ ಅವಕಾಶವಿರುತ್ತದೆ. 10 ಅದೃಷ್ಟ ಪ್ರೇಕ್ಷಕರಿಗೆ ಮಲ್ಟಿಪ್ಲೆಕ್ಸ್‌ನಲ್ಲಿ ಚಲನಚಿತ್ರ ವೀಕ್ಷಣೆಗೆ ತಲಾ ಎರಡು ಟಿಕೆಟ್‌ಗಳನ್ನು ಗೆಲ್ಲುವ ಅವಕಾಶ ಇರಲಿದೆ. ಪ್ರವೇಶ ಉಚಿತ ಇರಲಿದ್ದು, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕು.

ವಿವರಕ್ಕೆ ಸಂಪರ್ಕ ಸಂಖ್ಯೆ: 9035036186

ಪಾಲಿಕೆ: ಮತದಾರರ ಪಟ್ಟಿ ತಯಾರಿಸುವ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸುವ ವೇಳಾಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗ ಒಂದೂವರೆ ತಿಂಗಳು ವಿಸ್ತರಿಸಿದೆ.

ರಾಜ್ಯ ಚುನಾವಣಾ ಆಯೋಗ 2025ರ ಅಕ್ಟೋಬರ್ 27ರಂದು ಪ್ರಕಟಿಸಿದ್ದ ವೇಳಾಪಟ್ಟಿ ಪ್ರಕಾರ, 2026ರ ಜನವರಿ 29ರಂದು ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿ ಪ್ರಕಟವಾಗಬೇಕಿತ್ತು. ಇದರ ಪ್ರಕ್ರಿಯೆಗಳ ನಡೆಯುತ್ತಿದ ಸಂದರ್ಭದಲ್ಲೇ, ವೇಳಾಪಟ್ಟಿಯನ್ನು ಪರಿಷ್ಕರಿಸಿರುವ ಆಯೋಗ, 2026ರ ಮಾರ್ಚ್ 16ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ಹೇಳಿದೆ.

369 ವಾರ್ಡ್‌ಗಳ ಮತದಾರರ ಪಟ್ಟಿ ಹಿಂದಿನ ವೇಳಾಪಟ್ಟಿಯಂತೆಯೇ ಅಂತಿಮವಾಗಿದ್ದರೆ, ಫೆಬ್ರುವರಿ ಅಥವಾ ಮಾರ್ಚ್‌ನಲ್ಲಿ ಐದು ನಗರ ಪಾಲಿಕೆಗಳಿಗೆ ಚುನಾವಣೆ ನಡೆಯುತ್ತಿತ್ತು. ವೇಳಾಪಟ್ಟಿ ಒಂದೂವರೆ ತಿಂಗಳು ವಿಸ್ತರಣೆಯಾಗಿರುವುದರಿಂದ, ಏಪ್ರಿಲ್ ಅಂತ್ಯ ಅಥವಾ ಮೇ ಮೊದಲ ವಾರದಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಯಾವುದಾದರೂ ಪ್ರಮುಖ ಪರೀಕ್ಷೆಗಳು ಈ ಸಂದರ್ಭದಲ್ಲಿದ್ದರೆ ಚುನಾವಣೆ ಮತ್ತೆ ಮುಂದೆ ಹೋಗುವ ಸಾಧ್ಯತೆ ಇದೆ.

ವಾರ್ಡ್‌ಗಳ ಮತದಾರರ ಅಂತಮ ಪಟ್ಟಿ ಸಿದ್ಧಗೊಂಡು, ವಾರ್ಡ್‌ವಾರು ಮೀಸಲಾತಿಯೂ ಅಂತಿಮಗೊಳಿಸಿ ಸರ್ಕಾರ ನೀಡಿದರೆ, ಒಂದು ವಾರದ ನಂತರ ಚುನಾವಣೆಯ ಅಧಿಸೂಚನೆಯನ್ನು ಹೊರಡಿಸಲಾಗುತ್ತದೆ. ಅದಾದ 45 ದಿನಗಳಲ್ಲಿ ಚುನಾವಣೆ ಪ್ರಕ್ರಿಯೆ ಮುಗಿಯಲಿವೆ ಎಂದು ಚುನಾವಣೆ ಆಯೋಗದ ಅಧಿಕಾರಿಗಳು ಮಾಹಿತಿ ನೀಡಿದರು.

ವಾರ್ಡ್ ಹೆಸರು ಬದಲು

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವಾರ್ಡ್ 19ರ ಹೆಸರನ್ನು ಬಿಟಿಎಂ ಲೇಔಟ್‌ನಿಂದ ತಾವರೆಕೆರೆ ಎಂದು ಬದಲಾಯಿಸಿ ನಗರಾಭಿವೃದ್ಧಿ ಇಲಾಖೆ ಡಿ.18ರಂದು ಅಧಿಸೂಚನೆ ಹೊರಡಿಸಿದೆ.

ಐದು ನಗರ ಪಾಲಿಕೆಗಳಲ್ಲಿ 369 ವಾರ್ಡ್‌ಗಳನ್ನು ಅಂತಿಮಗೊಳಿಸಿ ನವೆಂಬರ್ 19ರಂದು ನಗರಾಭಿವೃದ್ಧಿ ಇಲಾಖೆ ಅಂತಿಮ ಅಧಿಸೂಚನೆ ಹೊರಡಿಸಿತ್ತು. 20 ವಾರ್ಡ್‌ಗಳ ಗಡಿ ಮತ್ತು ಹೆಸರು ಬದಲಾಯಿಸಿ ಡಿ.3ರಂದು ಅಧಿಸೂಚಿಸಿತ್ತು.

ಮಗು ಸಾವು, ಮೂವರಿಗೆ ಗಾಯ

ಕಟ್ಟಡದ 4ನೇ ಮಹಡಿಯಿಂದ ಶೆಡ್ ಮೇಲೆ ಸಿಮೆಂಟ್ ಇಟ್ಟಿಗೆ ಬಿದ್ದು ದುರ್ಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯ ಚಿನ್ನಪ್ಪನಹಳ್ಳಿಯಲ್ಲಿ ನಿರ್ಮಾಣ ಹಂತದ ಕಟ್ಟಡದ 4ನೇ ಮಹಡಿಯಿಂದ ಸಿಮೆಂಟ್ ಇಟ್ಟಿಗೆಗಳು ಬಿದ್ದು ನಾಲ್ಕು ವರ್ಷದ ಮಗು ಮೃತಪಟ್ಟಿದೆ. ಘಟನೆಯಲ್ಲಿ ಮೂವರು ಗಾಯಗೊಂಡಿದ್ದಾರೆ.

ಶ್ರೀಶೈಲ್ ಎಂಬುವವರ ಪುತ್ರಿ ಮನುಶ್ರೀ ಅಲಿಯಾಸ್ ಪಾರು ಮೃತ ಮಗು.

ಗಾಯಗೊಂಡಿರುವ ಶ್ರೀಯಾನ್ (6), ಶೇಖರ್(5) ಹಾಗೂ ಮಮತಾ (30) ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ನಿರ್ಮಾಣ ಹಂತದ ಕಟ್ಟಡದ ಪಕ್ಕದಲ್ಲಿ ಸಿಮೆಂಟ್ ಶೀಟ್‌ನ ಶೆಡ್‌ನಲ್ಲಿ ವಿಜಯಪುರ ಜಿಲ್ಲೆ ಸಿಂಧಗಿಯ ಕುಟುಂಬವು ವಾಸವಿತ್ತು.

ನಿರ್ಮಾಣ ಹಂತದ ಕಟ್ಟಡವು ಶ್ರೀನಿವಾಸುಲು ಅವರಿಗೆ ಸೇರಿದೆ. 4ನೇ ಮಹಡಿ ಮೇಲಿಂದ ಸುಮಾರು 10ರಿಂದ 12 ಸಿಮೆಂಟ್ ಇಟ್ಟಿಗೆಗಳು ಕೆಳಕ್ಕೆ ಬಿದ್ದಿವೆ. ಇಟ್ಟಿಗೆ ಬಿದ್ದ ರಭಸಕ್ಕೆ ಶೆಡ್‌ನಲ್ಲಿದ್ದ ಮಗು ಮೃತಪಟ್ಟು, ಮೂವರು ಗಾಯಗೊಂಡಿದ್ದಾರೆ. ಶೆಡ್‌ನ ಶೀಟ್ ಸಂಪೂರ್ಣ ಧ್ವಂಸವಾಗಿದೆ.

'ಮಾಲೀಕರು ಯಾವುದೇ ಮುನ್ನೆಚ್ಚರಿಕಾ ಕ್ರಮ ತೆಗೆದುಕೊಳ್ಳದೆ ನಿರ್ಲಕ್ಷ್ಯ ವಹಿಸಿದ್ದೇ ಘಟನೆಗೆ ಕಾರಣ ಎಂಬುದು ಕಂಡುಬಂದಿದೆ. ಕಟ್ಟಡದ ಮಾಲೀಕರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಶೆಡ್ ಮೇಲೆ ಬಿದ್ದಿದ್ದ ಸಿಮೆಂಟ್ ಇಟ್ಟಿಗೆಗಳು

ಮಣ್ಣು ಕುಸಿದು ಕಾರ್ಮಿಕ ದುರ್ಮರಣ

ವರ್ತೂರು ಠಾಣೆ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಅಪಾರ್ಟ್‌ಮೆಂಟ್ ಕಾಮಗಾರಿ ವೇಳೆ ಮಣ್ಣು ಕುಸಿದು ಕಾರ್ಮಿಕರೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತಮಿಳುನಾಡಿನ ಧರ್ಮಪುರಿ ಮೂಲದ ಚಿದಂಬರಂ(45) ಮೃತ ಕಾರ್ಮಿಕ. ದೊಮ್ಮಸಂದ್ರ ಸಮೀಪ ಘಟನೆ ನಡೆದಿದೆ.

ನಿರ್ಮಾಣ ಹಂತದ ಕಟ್ಟಡದ ಗುತ್ತಿಗೆದಾರ ಹಾಗೂ ಮಾಲೀಕನ ವಿರುದ್ಧ ನಿರ್ಲಕ್ಷ್ಯ ಆರೋಪದಡಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

ತಮಿಳುನಾಡಿನ ಚಿದಂಬರಂ ಕೆಲ ವರ್ಷಗಳಿಂದ ದೊಮ್ಮಸಂದ್ರದಲ್ಲಿ ವಾಸವಾಗಿದ್ದು, ನಿರ್ಮಾಣ ಹಂತದ ಕಟ್ಟಡ ಕಾಮಗಾರಿ ಕೆಲಸ ಮಾಡಿಕೊಂಡಿದ್ದಾರೆ. ಕೆಲ ದಿನಗಳಿಂದ ದೊಮ್ಮಸಂದ್ರದ ವರ್ತೂರು ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್‌ವೊಂದರ ಒಳಚರಂಡಿ ಕಾಮಗಾರಿಗಾಗಿ ಮಣ್ಣು ತೆಗೆಯುವ ಕೆಲಸ ಮಾಡುತ್ತಿದ್ದರು. ಮಂಗಳವಾರ ರಾತ್ರಿಯೂ ಕೆಲಸ ಮಾಡುವಾಗ ಏಕಾಏಕಿ ಮಣ್ಣು ಕುಸಿದು ಚಿದಂಬರಂ ಮೇಲೆ ಬಿದ್ದಿದೆ. ಮಣ್ಣಿನಡಿ ಸಿಲುಕಿ ಸ್ಥಳದಲ್ಲೇ ಚಿದಂಬರಂ ಸ್ಥಳದಲ್ಲೇ ಉಸಿರುಗಟ್ಟಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು. ವರ್ತೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಂತಿದ್ದ ಲಾರಿಗೆ ದ್ವಿಚಕ್ರ ವಾಹನ ಡಿಕ್ಕಿ ವಿದ್ಯಾರ್ಥಿ ಸಾವು

ಯಲಹಂಕ: ರಾಜಾನುಕುಂಟೆ ಪೊಲೀಸ್ ಠಾಣೆ ವ್ಯಾಪ್ತಿಯ ಹೊನ್ನೇನಹಳ್ಳಿ ಗೇಟ್ ಬಳಿ ಬುಧವಾರ, ನಿಂತಿದ್ದ ಲಾರಿಗೆ ದ್ವಿಚಕ್ರ ವಾಹನವೊಂದು ಡಿಕ್ಕಿ ಹೊಡೆದು ವಿದ್ಯಾರ್ಥಿಯೊಬ್ಬ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಮತ್ತೊಬ್ಬ ವಿದ್ಯಾರ್ಥಿ ಗಾಯಗೊಂಡಿದ್ದಾನೆ.

ದಿಬ್ಬೂರು ಸಮೀಪದ ಪ್ರೆಸಿಡೆನ್ಸಿ ಕಾಲೇಜಿನ ಬಿಬಿಎ ಮೊದಲನೇ ವರ್ಷದ ವಿದ್ಯಾರ್ಥಿ ತಿರುಪತಿಯ ಆನಂದ ಸೂರ್ಯ(19) ಮೃತಪಟ್ಟವರು. ಬಿ.ಟೆಕ್ ವಿದ್ಯಾರ್ಥಿ ಪುನೀತ್(19) ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಇವರಿಬ್ಬರೂ ಕಾಲೇಜಿನ ಹಾಸ್ಟೆಲ್‌ನಲ್ಲಿ ನೆಲಸಿದ್ದರು. ರಾತ್ರಿ 12.30ರ ಹೊತ್ತಿನಲ್ಲಿ ದ್ವಿಚಕ್ರವಾಹನದಲ್ಲಿ ತೆರಳುತ್ತಿದ್ದಾಗ ಹೊನ್ನೇನಹಳ್ಳಿ ಗೇಟ್ ಸಮೀಪದಲ್ಲಿ ನಿಂತಿದ್ದ ಲಾರಿಗೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದ್ವಿಚಕ್ರ ವಾಹನ ಸವಾರ ಸಾವು

		3	ಮುನಿನರಸಪ್ಪ ದೊಡ್ಡ ಯುಆರ್ಎಫ್ ಚಿಕ್ಕೋನು ಪಾಮರಸ ಬಿನ್ ಪಾಮರಸ		––	––		ತರಿ
		4	ನಂಜಪ್ಪ ಡಿ ಬಿನ್ ದಿ. ದೊಡ್ಡಪ್ಪಯ್ಯ			0–0–0.25		ತರಿ
		5	ಎಸ್ ರೂಪಾ ಜನಾರ್ದನ್ ತಂದೆ ಎಸ್ ಆರ್ ಜನಾರ್ದನ್			0–0–0.25		ತರಿ
		6	ಎಸ್ ರೂಪಾ ಜನಾರ್ದನ್ ತಂದೆ ಎಸ್ ಆರ್ ಜನಾರ್ದನ್		––	––		ಖುಷ್ಕಿ ಮತ್ತು ತರಿ
		7	ಭಾಗ್ಯಮ್ಮ ತಂದೆ ಕೃಷ್ಣಪ್ಪ ಎಂ ಚಿಕ್ಕಮುನಿರಾಮಯ್ಯ		––	––		ತರಿ
		8	ಎಸ್ ರೂಪಾ ಜನಾರ್ದನ್ ತಂದೆ ಎಸ್ ಆರ್ ಜನಾರ್ದನ್		––	––		ಖುಷ್ಕಿ
			ಒಟ್ಟು	**2–17–1.28**		**0–0–1.0**	**2–17–0.28**	

ಶೆಡ್ಯೂಲ್

ಕರ್ನಾಟಕ ರಾಜ್ಯದ ರಾಜನಕುಂಟೆ – ಬೆಟ್ಟಹಲಸೂರು ಹೊಸ ಬಿಜಿ ಲೇನ್ ಮತ್ತು ಸರ್ವಿಸ್ ರಸ್ತೆ ನಡುವೆ ಉದ್ದೇಶಿತ ಹೊಸ ಲೇನ್ ಗೆ ಬದಲಾಗಿ ಉದ್ದೇಶಿತ ವಿಶೇಷ ರೈಲ್ವೆ ಯೋಜನೆ ರಚನೆಗಾಗಿ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ಜಿಲ್ಲೆ: ಬೆಂಗಳೂರು ನಗರ — ಹೋಬಳಿ: ಯಲಹಂಕ–1
ತಾಲ್ಲೂಕು: ಯಲಹಂಕ — ಸ್ವಾಧೀನಪಡಿಸಿದ ವ್ಯಾಪ್ತಿ: 00A-24G-3.2AN
ಗ್ರಾಮ: ನಾಗದಾಸನಹಳ್ಳಿ

ಕ್ರ. ಸಂ.	ಸರ್ವೆ ಸಂ	ಹಿಸ್ಸಾ ಸಂ.	ಭೂ ಮಾಲೀಕರ ಹೆಸರು	ಎ–ಗುಂ–ಆ ನಲ್ಲಿ ಅಗತ್ಯವಿರುವ ವ್ಯಾಪ್ತಿ				ಭೂಮಿಯ ವಿಧ
				ಒಟ್ಟು	ಎ ಖರಾಬ್	ಬಿ ಖರಾಬ್	ಉಳಿಕೆ	
1	39		ಕೆರೆ (ಕೆರೆ ಅಂಗಳ)	0–24–3.2	––	0–24–3.2	0–0–0	ಸರ್ಕಾರಿ
			ಒಟ್ಟು	**0–24–3.2**		**0–24–3.2**	**0–0–0**	

ಶೆಡ್ಯೂಲ್

ಕರ್ನಾಟಕ ರಾಜ್ಯದ ರಾಜನಕುಂಟೆ – ಬೆಟ್ಟಹಲಸೂರು ಹೊಸ ಬಿಜಿ ಲೇನ್ ಮತ್ತು ಸರ್ವಿಸ್ ರಸ್ತೆ ನಡುವೆ ಉದ್ದೇಶಿತ ಹೊಸ ಲೇನ್ ಗೆ ಬದಲಾಗಿ ಉದ್ದೇಶಿತ ವಿಶೇಷ ರೈಲ್ವೆ ಯೋಜನೆ ರಚನೆಗಾಗಿ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ಜಿಲ್ಲೆ: ಬೆಂಗಳೂರು ನಗರ — ಹೋಬಳಿ: ಯಲಹಂಕ–1
ತಾಲ್ಲೂಕು: ಯಲಹಂಕ — ಸ್ವಾಧೀನಪಡಿಸಿದ ವ್ಯಾಪ್ತಿ: 12A-19G-6.69AN
ಗ್ರಾಮ: ತಿಮ್ಮಸಂದ್ರ

ಕ್ರ. ಸಂ.	ಸರ್ವೆ ಸಂ	ಹಿಸ್ಸಾ ಸಂ.	ಭೂ ಮಾಲೀಕರ ಹೆಸರು	ಎ–ಗುಂ–ಆ ನಲ್ಲಿ ಅಗತ್ಯವಿರುವ ವ್ಯಾಪ್ತಿ				ಭೂಮಿಯ ವಿಧ
				ಒಟ್ಟು	ಎ ಖರಾಬ್	ಬಿ ಖರಾಬ್	ಉಳಿಕೆ	
1	27		ಕೆರೆ (ಸರ್ಕಾರಿ ಕೆರೆ)	0–24–14	––	0–24–14	0–0–0	ಸರ್ಕಾರಿ
2	26	1	ಇಂದಿರಾ ತಂದೆ ಎನ್.ಸಿ.ಪಾತಾಳಯ್ಯ	0–32–2.56			0–32–2.56	ತರಿ
		2	ಎವಿಎನ್ಎಂ ವೆಂಚರ್ಸ್ ಅನ್ನು ಅದರ ಅಧಿಕೃತ ಸಹಿದಾರರಾದ ಶ್ರೀ ಅರುಣ್ ಮಾಧವ್ ಮರುಪುರು ಬಿನ್ ಮರುಪುರುದಾಮೋದರ್ ರೆಡ್ಡಿ ಅವರು ಇಲ್ಲಿ ಪ್ರತಿನಿಧಿಸುತ್ತಾರೆ					ತರಿ
		3	ಎವಿಎನ್ಎಂ ವೆಂಚರ್ಸ್ ಅನ್ನು ಅದರ ಅಧಿಕೃತ ಸಹಿದಾರರಾದ ಶ್ರೀ ಅರುಣ್ ಮಾಧವ್ ಮರುಪುರು ಬಿನ್ ಮರುಪುರುದಾಮೋದರ್ ರೆಡ್ಡಿ ಅವರು ಇಲ್ಲಿ ಪ್ರತಿನಿಧಿಸುತ್ತಾರೆ					ತರಿ
		4	ಟಿ.ಸಿ.ವಿಜಯಣ್ಣ ಬಿನ್ ದಿ. ಎಚ್. ಚಿಕ್ಕನಾಗಪ್ಪ					ತರಿ
		5	ಎವಿಎನ್ಎಂ ವೆಂಚರ್ಸ್ ಅನ್ನು ಅದರ ಅಧಿಕೃತ ಸಹಿದಾರರಾದ ಶ್ರೀ ಅರುಣ್ ಮಾಧವ್ ಮರುಪುರು ಬಿನ್ ಮರುಪುರುದಾಮೋದರ್ ರೆಡ್ಡಿ ಅವರು ಇಲ್ಲಿ ಪ್ರತಿನಿಧಿಸುತ್ತಾರೆ					ತರಿ
		6	ಎವಿಎನ್ಎಂ ವೆಂಚರ್ಸ್ ಅನ್ನು ಅದರ ಅಧಿಕೃತ ಸಹಿದಾರರಾದ ಶ್ರೀ ಅರುಣ್ ಮಾಧವ್ ಮರುಪುರು ಬಿನ್ ಮರುಪುರುದಾಮೋದರ್ ರೆಡ್ಡಿ ಅವರು ಇಲ್ಲಿ ಪ್ರತಿನಿಧಿಸುತ್ತಾರೆ					ಖುಷ್ಕಿ
		7	ಎವಿಎನ್ಎಂ ವೆಂಚರ್ಸ್ ಅನ್ನು ಅದರ ಅಧಿಕೃತ ಸಹಿದಾರರಾದ ಶ್ರೀ ಅರುಣ್ ಮಾಧವ್ ಮರುಪುರು ಬಿನ್ ಮರುಪುರುದಾಮೋದರ್ ರೆಡ್ಡಿ ಅವರು ಇಲ್ಲಿ ಪ್ರತಿನಿಧಿಸುತ್ತಾರೆ					ತರಿ
		8	ಲಕ್ಷ್ಮಿ ಭಾಯಿ C/o ಕೃಷ್ಣಜಿರಾವ್ ಕೆ. ಆಶಾಭಾಯ್ ಬಿನ್ ಎಮ್ ಕೃಷ್ಣಾಜಿರಾವ್ (ಜಂಟಿ ಮೇಲಿನಂತೆ) ಕೆ . ಅಶ್ವಿನಿಭಾಯ್ ಬಿನ್. ಕೃಷ್ಣಾಜಿರಾವ್ (ಜಂಟಿ ಮೇಲಿನಂತೆ) ಕೆ. ರಮ್ಯಾ ಬಿನ್ ದಿ. ಕೃಷ್ಣಜಿ ರಾವ್ (ಜಂಟಿ ಮೇಲಿನಂತೆ) ಕೆ. ಚೈತ್ರಾ ಬಿನ್ ದಿ. ಎಮ್ ಕೃಷ್ಣಜಿ ರಾವ್ (ಜಂಟಿ ಮೇಲಿನಂತೆ) ಕೆ. ಪ್ರಿಯಾಂಕಾ ಬಿನ್ ದಿ. ಎಂ. ಕೃಷ್ಣಜಿ ರಾವ್ (ಜಂಟಿ ಮೇಲಿನಂತೆ)					ತರಿ
		9	ಎವಿಎನ್ಎಂ ವೆಂಚರ್ಸ್ ಅನ್ನು ಅದರ ಅಧಿಕೃತ ಸಹಿದಾರರಾದ ಶ್ರೀ ಅರುಣ್ ಮಾಧವ್ ಮರುಪುರು ಬಿನ್ ಮರುಪುರುದಾಮೋದರ್ ರೆಡ್ಡಿ ಅವರು ಇಲ್ಲಿ ಪ್ರತಿನಿಧಿಸುತ್ತಾರೆ					ತರಿ
		10	ಎವಿಎನ್ಎಂ ವೆಂಚರ್ಸ್ ಅನ್ನು ಅದರ ಅಧಿಕೃತ ಸಹಿದಾರರಾದ ಶ್ರೀ ಅರುಣ್ ಮಾಧವ್ ಮರುಪುರು ಬಿನ್ ಮರುಪುರುದಾಮೋದರ್ ರೆಡ್ಡಿ ಅವರು ಇಲ್ಲಿ ಪ್ರತಿನಿಧಿಸುತ್ತಾರೆ					ತರಿ
		11	ಎವಿಎನ್ಎಂ ವೆಂಚರ್ಸ್ ಅನ್ನು ಅದರ ಅಧಿಕೃತ ಸಹಿದಾರರಾದ ಶ್ರೀ ಅರುಣ್ ಮಾಧವ್ ಮರುಪುರು ಬಿನ್ ಮರುಪುರುದಾಮೋದರ್ ರೆಡ್ಡಿ ಅವರು ಇಲ್ಲಿ ಪ್ರತಿನಿಧಿಸುತ್ತಾರೆ					ತರಿ
		13	ಎವಿಎನ್ಎಂ ವೆಂಚರ್ಸ್ ಅನ್ನು ಅದರ ಅಧಿಕೃತ ಸಹಿದಾರರಾದ ಶ್ರೀ ಅರುಣ್ ಮಾಧವ್ ಮರುಪುರು ಬಿನ್ ಮರುಪುರುದಾಮೋದರ್ ರೆಡ್ಡಿ ಅವರು ಇಲ್ಲಿ ಪ್ರತಿನಿಧಿಸುತ್ತಾರೆ					ಖುಷಿ
		12	ಟಿ.ಸಿ.ಶಾಂತಮೂರ್ತಿ ಬಿನ್ ದಿ. ಟಿ.ಎಚ್.ಚಿಕ್ಕನಾಗಪ್ಪ					ತರಿ
		14	ಎವಿಎನ್ಎಂ ವೆಂಚರ್ಸ್ ಅನ್ನು ಅದರ ಅಧಿಕೃತ ಸಹಿದಾರರಾದ ಶ್ರೀ ಅರುಣ್ ಮಾಧವ್ ಮರುಪುರು ಬಿನ್ ಮರುಪುರುದಾಮೋದರ್ ರೆಡ್ಡಿ ಅವರು ಇಲ್ಲಿ ಪ್ರತಿನಿಧಿಸುತ್ತಾರೆ					ತರಿ
		15	ಟಿ.ಸಿ.ಶಾಂತಮೂರ್ತಿ ಬಿನ್ ದಿ. ಟಿ.ಎಚ್.ಚಿಕ್ಕನಾಗಪ್ಪ					ತರಿ
3	25	1	ಎ.ಅಶ್ವತ್ಥನಾರಾಯಣ ಬಿನ್ ದಿ. ಅಂಜನಪ್ಪ	0–23–5.12			0–23–5.12	ತರಿ
		2	ಟಿ.ಸಿ.ಶಾಂತಮೂರ್ತಿ ಬಿನ್ ದಿ. ಟಿ.ಎಚ್.ಚಿಕ್ಕನಾಗಪ್ಪ					ತರಿ
		3	ಮುನಿಯಮ್ಮ ಕೇ. ಆಫ್ ದಿ. ಆರ್.ಮುನಿಯಪ್ಪ			0–01–00		ತರಿ
4	24	1	ರಾಯಪ್ಪ ಬಿನ್ ದಿ. ಸುಬ್ಬೋಜಿರಾವ್ ಗಂಗೋಜಿರಾವ್ ಬಿನ್ ದಿ. ಸುಬ್ಬೋಜಿರಾವ್ (ಮೇಲಿನ ಜಂಟಿ)					ಭಾಗಾಯ್ತು
		2	ಮುನಿಯಮ್ಮ ಕೇ. ಆಫ್ ದಿ. ಆರ್.ಮುನಿಯಪ್ಪ		0–0–01			ಖುಷ್ಕಿ
		3	ಎವಿಎನ್ಎಂ ವೆಂಚರ್ಸ್ ಅನ್ನು ಅದರ ಅಧಿಕೃತ ಸಹಿದಾರರಾದ ಶ್ರೀ ಅರುಣ್ ಮಾಧವ್ ಮರುಪುರು ಬಿನ್ ಮರುಪುರುದಾಮೋದರ್ ರೆಡ್ಡಿ ಅವರು ಇಲ್ಲಿ ಪ್ರತಿನಿಧಿಸುತ್ತಾರೆ		0–0–01	0–01–00		ಭಾಗಾಯ್ತು & ಖುಷ್ಕಿ
		4	ರಾಯಪ್ಪ ಬಿನ್ ದಿ. ಸುಬ್ಬೋಜಿರಾವ್ ಗಂಗೋಜಿರಾವ್ ಬಿನ್ ದಿ. ಸುಬ್ಬೋಜಿರಾವ್ (ಜಂಟಿ)					ಭಾಗಾಯ್ತು & ಖುಷ್ಕಿ
5	23	1	ಟಿ.ಪಿ.ಪ್ರವೀಣ್ ಗೌಡ ಬಿನ್ ಪ್ರಕಾಶ್	0–32–8.9	0–01–00		0–31–8.9	ಭಾಗಾಯ್ತು
		2	ಮುನಿಕೆಂಪಯ್ಯ ಎ. ಅಶ್ವತ್ಥನಾರಾಯಣ ಬಿನ್ ದಿ. ಅಂಜನಪ್ಪ		0–01–00			ಭಾಗಾಯ್ತು & ಖುಷ್ಕಿ
		3	ಟಿ.ಸಿ.ಮಂಜುನಾಥ ಬಿನ್ ದಿ. ಚಿಕ್ಕಮುನಿಯಪ್ಪ					ಭಾಗಾಯ್ತು
		4	ಟಿ.ಸಿ.ಮಂಜುನಾಥ ಬಿನ್ ದಿ. ಚಿಕ್ಕಮುನಿಯಪ್ಪ					ಭಾಗಾಯ್ತು
		5	ಟಿ.ಸಿ.ನಾಗರಾಜು ಬಿನ್ ದಿ. ಚಿಕ್ಕಮುನಿಯಪ್ಪ					ಭಾಗಾಯ್ತು & ಖುಷ್ಕಿ
		6	ಟಿ.ಡಿ.ಗೌಡಪ್ಪ ಬಿನ್ ದೊಡ್ಡಮುನಿಯಪ್ಪ					ಭಾಗಾಯ್ತು & ಖುಷ್ಕಿ
6	34		ಎನ್.ಸಿ.ರಾಮಯ್ಯ ಬಿನ್ ಚಿಕ್ಕಕೆಂಪಣ್ಣ	0–16–8.32		0–01–00	0–15–8.32	ತರಿ
7	37	1	ಟಿ.ಸಿ.ವಿಜಯಣ್ಣ ಬಿನ್ ದಿ. ಹೆಚ್ ಚಿಕ್ಕನಾಗಪ್ಪ ಟಿ ಸಿ.ವಿಜಯಣ್ಣ ಬಿನ್ ದಿ. ಟಿ.ಎಚ್.ಚಿಕ್ಕನಾಗಪ್ಪ	1–22–3.84	01–00–00	0–0–0.75	0–22–3.09	ಭಾಗಾಯ್ತು
		2	ಅನಿಲ್ ಕುಮಾರ್, ಟಿ.ಕೆ. ಬಿನ್ ದಿ. ಕೆಂಪಣ್ಣ			0–0–0.75		ಖುಷ್ಕಿ &ತರಿ
		3	ಎ.ನಾಗರಾಜ ಬಿನ್ ಅಂಜನಪ್ಪ ಟಿ.ಎನ್ ಪ್ರಕಾಶ್ ಬಿನ್ ಎ.ನಾಗರಾಜ್ (ಜಂಟಿ)		0–0–01	0–04–00		ಭಾಗಾಯ್ತು & ಖುಷ್ಕಿ
		4	ಕೋಮಲಮ್ಮ ತಂದೆ ರಾಜಣ್ಣ			0–0–1.25		ಭಾಗಾಯ್ತು
		5	ಎ.ನಾಗರಾಜ. ಬಿನ್ ಅಂಜನಪ್ಪ					ಖುಷ್ಕಿ
		6	ಯಶೋಧ C/o. ಮಂಜುನಾಥ ಪ್ರಕಾಶ್ ಬಿನ್ ನಾಗರಾಜಯ್ಯ (ಜಂಟಿ)					ಖುಷ್ಕಿ
		7	ಪುಷ್ಪಾ ಟಿ.ಎಸ್ ತಂದೆ ಎಚ್. ಎ.ಮುನಿರಾಜಪ್ಪ					ಖುಷ್ಕಿ
		8	ಸುಗುಣಾ ತಂದೆ ಶ್ರೀನಿವಾಸ್					ಖುಷ್ಕಿ
		9	ರತ್ನಮ್ಮ ಕೇ. ಆಫ್ ಪಾತಾಳಪ್ಪ					ಖುಷ್ಕಿ
		10	ನಾಗರಾಜಯ್ಯ ಬಿನ್ ಆಂಜಿನಪ್ಪಪ್ರಕಾಶ್ ಬಿನ್ ನಾಗರಾಜಯ್ಯ (ಜಂಟಿ ಮೇಲೆ)			0–0–1.25		ಭಾಗಾಯ್ತು
8	38	1	ಹನುಮಂತಪ್ಪ ಎಸ್.ಆರ್. ವಿಶ್ವನಾಥ ಬಿನ್ ಕೆ.ವಿ.ರಾಮಯ್ಯ ವಿಜಯಲಕ್ಷ್ಮಿ ಬಿನ್ ನಾರಾಯಣಸ್ವಾಮಿ ಮತ್ತು ತರಿ	0–23–4.48	0–03–00		0–20–.4.48	ಖುಷ್ಕಿ
		2	ಈರಣ್ಣ C/O ಬೈರಪ್ಪ. ನಾಗರಾಜು ಬಿನ್ ಅಂಜನಪ್ಪ					ಭಾಗಾಯ್ತು & ಖುಷ್ಕಿ
10	19		ಸರ್ಕಾರಿ (ಸರ್ಕಾರಿ) ರಾಧಮ್ಮ ತಂದೆ ಶ್ಯಾಮಣ್ಣ ಸಾಕಮ್ಮ ತಂದೆ ಕ್ಯಾತಪ್ಪ	0–36–2.56		0–36–2.56	0–0–0	ಖುಷ್ಕಿ
			ರಾಧಮ್ಮ ತಂದೆ ಶ್ಯಾಮಣ್ಣ ಶೆಟ್ಟಪ್ಪ ಬಿನ್ ಪಾಪಯ್ಯ ಆಂಜನಪ್ಪ ಬಿನ್ ಪಾಪಯ್ಯ					
9	46	1	ಆರ್.ಅಪ್ಪಾಜಿ ಬಿನ್ ದಿ. ರುಬ್ಬಣ್ಣ ಅಕ್ಕಮ್ಮ ತಂದೆ ಆರ್.ವೀರಣ್ಣ (ಜಂಟಿ)	1–35–00		0–01–00	1–34–00	ಖುಷ್ಕಿ
		2	ಈರಣ್ಣ @VEERANNA ಬಿನ್ ಪಾತಾಳಪ್ಪ					ಖುಷ್ಕಿ
		3	ಟಿ.ಸಿ.ಶಾಂತಮೂರ್ತಿ ಬಿನ್ ದಿ. ಟಿ.ಎಚ್.ಚಿಕ್ಕನಾಗಪ್ಪ					ಖುಷ್ಕಿ
		4	ರಾಜಮ್ಮ ಬಿನ್ ಲೇಟ್ ಶಿವಣ್ಣ					ಭಾಗಾಯ್ತು & ಖುಷ್ಕಿ
		5	ಪಿ.ಮುನಿಕೆಂಪಯ್ಯ ಬಿನ್ ಪಾಪಯ್ಯ					ಖುಷ್ಕಿ
		6	ಆಂಜನಮ್ಮ ಕೇ. ಆಫ್ ದಿ. ಕೆ ಕೃಷ್ಣಪ್ಪ ಕೆ .ಕೆಂಪಣ್ಣ ಬಿನ್ ದಿ. ಕೃಷ್ಣಪ್ಪ (ಜಂಟಿ) ಮಂಜುನಾಥ. ಟಿ.ಕೆ.ಬಿನ್ ದಿ. ಕೆ.ಕೃಷ್ಣಪ್ಪ (ಜಂಟಿ) ಸುಬ್ಬೇಗೌಡ. ಕೆ.ಬಿನ್ ದಿ. ಕೆ.ಕೃಷ್ಣಪ್ಪ (ಜಂಟಿ)					ಖುಷ್ಕಿ
		7	ಆಂಜನಮ್ಮ ಕೇ. ಆಫ್ ದಿ. ಕೆ ಕೃಷ್ಣಪ್ಪ ಕೆ.ಕೆಂಪಣ್ಣ ಬಿನ್ ದಿ. ಕೃಷ್ಣಪ್ಪ (ಜಂಟಿ) ಮಂಜುನಾಥ. ಟಿ.ಕೆ.ಬಿನ್ ದಿ. ಕೆ.ಕೃಷ್ಣಪ್ಪ (ಜಂಟಿ) ಸುಬ್ಬೇಗೌಡ. ಕೆ.ಬಿನ್ ದಿ. ಕೆ.ಕೃಷ್ಣಪ್ಪ (ಜಂಟಿ)					ಖುಷ್ಕಿ
		8	ಪಾಪಯ್ಯ ಬಿನ್ ನಂಜಪ್ಪ ಕೆ ಕೃಷ್ಣಪ್ಪ ಬಿನ್ ಕೆಂಪಯ್ಯ ಶೆಟ್ಟಪ್ಪ ರಾಮಯ್ಯ ಅಂಜನಪ್ಪ ಬಿನ್ ಪಾಪಯ್ಯ					ಖುಷ್ಕಿ
		10	ಎಚ್.ಆರ್.ಸುರೇಶ್ ಬಿನ್ ದಿ. ಎಚ್.ಕೆ.ರಾಮಯ್ಯ					ಖುಷ್ಕಿ
		9	ಎಸ್.ದೇವೇಂದ್ರ ಬಿನ್ ದಿ. ಎಸ್.ವೆಂಕಟಯ್ಯ					ಖುಷ್ಕಿ
		11	ಸುಧಾನ್ಯಾ ಬಿನ್ ದಿ. ಅಪ್ಪಣ್ಣ ಗೌಡ ನಂಜಪ್ಪ ಬಿನ್ ದಿ. ಮುನಿತಾಯಪ್ಪ					ಖುಷ್ಕಿ
		12	ಬಿ.ನಾಗರಾಜು					ಖುಷ್ಕಿ
		13	ಬಾಳೆಪ್ಪ ಬಿನ್ ಸಂತೆಪ್ಪ					ಖುಷ್ಕಿ

ಕ್ರ. ಸಂ.	ಸರ್ವೆ ಸಂ	ಹಿಸ್ಸಾ ಸಂ.	ಭೂ ಮಾಲೀಕರ ಹೆಸರು	ಎ–ಗುಂ–ಆ ನಲ್ಲಿ ಅಗತ್ಯವಿರುವ ವ್ಯಾಪ್ತಿ				ಭೂಮಿಯ ವಿಧ
				ಒಟ್ಟು	ಎ ಖರಾಬ್	ಬಿ ಖರಾಬ್	ಉಳಿಕೆ	
		14	ನಾಗರಾಜು ಟಿ.ಸಿ. ಬಿನ್ ದಿ. ಚಿಕ್ಕಮುನಿಯಪ್ಪ					ಖುಷ್ಕಿ
10	19		ಸರ್ಕಾರಿ (ಸರ್ಕಾರಿ) ರಾಧಮ್ಮ ತಂದೆ ಶ್ಯಾಮಣ್ಣ ಸಾಕಮ್ಮ ತಂದೆ ಕ್ಯಾತಪ್ಪ ರಾಧಮ್ಮ ತಂದೆ ಶ್ಯಾಮಣ್ಣ ಶೆಟ್ಟಪ್ಪ ಬಿನ್ ಪಾಪಯ್ಯ ಆಂಜನಪ್ಪ ತಂದೆ ಪಾಪಯ್ಯ	2–39–10.24		2–39–10.24	0–0–0	ಖುಷ್ಕಿ ಮತ್ತು ಸರ್ಕಾರಿ
11	16	2A	ಟಿ.ಸಿ.ನಾಗೇಶ್ ಬಿನ್ ಪಾತಾಳಪ್ಪ	0–26–5.76	0–02–00		0–24–5.76	ಭಾಗಾಯ್ತು
		2B	ನಾಗಮಣಿ. ಟಿ.ಸಿ. ಬಿನ್ ಚನ್ನಪ್ಪ					ಖುಷ್ಕಿ
		1	ಜಯರಾಮು ಬಿನ್ ಅಂಜಿನಪ್ಪ					ಖುಷ್ಕಿ
		3	ಆನಂದ ಟಿ.ಪಿ.ಬಿನ್ ಪಾತಾಳಪ್ಪ					ಖುಷ್ಕಿ
		4	ಟಿ.ಪಿ.ಸುರೇಶ್ ಬಿನ್ ಪಾತಾಳಪ್ಪ					ಭಾಗಾಯ್ತು
		5	ಟಿ.ಪಿ.ಸುಗುಣ ತಂದೆ ಸದಾಶಿವ. ಟಿ.ಕೆ.					ಭಾಗಾಯ್ತು
	14	1	ಮುನಿಕೆಂಪಣ್ಣ ತಂದೆ ಆಂಜಿನಪ್ಪ ಟಿ.ಹೆಚ್ ಪಿಲ್ಲಪ್ಪ ತಂದೆ ದಿ. ಹನುಮಯ್ಯ ಪಾರ್ವತಮ್ಮ ಕೇ. ಆಫ್ ದಿ ಸೊನ್ನಯ್ಯ	0–27–4.48	0–01–00		0–26–4.48	ಭಾಗಾಯ್ತು ಮತ್ತು ಖುಷ್ಕಿ
		2	ಟಿ.ಎಚ್.ಪಿಳ್ಳಪ್ಪ ಬಿನ್ ದಿ. ಹನುಮಯ್ಯ ಪಾರ್ವತಮ್ಮ ತಂದೆ ದಿ. ಸೊಣ್ಣಪ್ಪ					ಖುಷ್ಕಿ
		3	ಸುರೇಶ್ ಬಿನ್ ಮುನಿಕೆಂಪಣ್ಣ ಉರ್ಫ್ ಮುನಿಕೆಂಪಯ್ಯಕುಮಾರಿ ಅಬಿಲಾಷಾ ಅಪ್ರಾಪ್ತ ವಯಸ್ಕರ ತಂದೆ – ಟಿ.ಎಂ. ಮಹೇಶ್ ಬಿನ್ ಮುನಿಕೆಂಪಣ್ಣ ಉರ್ಫ್ ಮುನಿಕೆಂಪಯ್ಯ (ಜಂಟಿ), ಆಂಜಿನಪ್ಪ ಬಿನ್ ಮುನಿಕೆಂಪಣ್ಣ ಉರ್ಫ್ ಮುನಿಕೆಂಪಯ್ಯ (ಜಂಟಿ)					ಖುಷ್ಕಿ
			ಒಟ್ಟು	**12–19–6.69**	**1–8–03**	**4–28–14.80**	**6–29–10.71**	

ಶೆಡ್ಯೂಲ್

ಕರ್ನಾಟಕ ರಾಜ್ಯದ ರಾಜನಕುಂಟೆ – ಬೆಟ್ಟಹಲಸೂರು ಹೊಸ ಬಿಜಿ ಲೇನ್ ಮತ್ತು ಸರ್ವಿಸ್ ರಸ್ತೆ ನಡುವೆ ಉದ್ದೇಶಿತ ಹೊಸ ಲೇನ್ ಗೆ ಬದಲಾಗಿ ಉದ್ದೇಶಿತ ವಿಶೇಷ ರೈಲ್ವೆ ಯೋಜನೆ ರಚನೆಗಾಗಿ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ಜಿಲ್ಲೆ: ಬೆಂಗಳೂರು ನಗರ — ಹೋಬಳಿ: ಜಾಲ–2
ತಾಲ್ಲೂಕು: ಯಲಹಂಕ — ಸ್ವಾಧೀನಪಡಿಸಿದ ವ್ಯಾಪ್ತಿ: 17A-9G-15.30AN
ಗ್ರಾಮ: ಬೆಟ್ಟಹಲಸೂರು

ಕ್ರ. ಸಂ.	ಸರ್ವೆ ಸಂ	ಹಿಸ್ಸಾ ಸಂ.	ಭೂ ಮಾಲೀಕರ ಹೆಸರು	ಎ–ಗುಂ–ಆ ನಲ್ಲಿ ಅಗತ್ಯವಿರುವ ವ್ಯಾಪ್ತಿ				ಭೂಮಿಯ ವಿಧ
				ಒಟ್ಟು	ಎ ಖರಾಬ್	ಬಿ ಖರಾಬ್	ಉಳಿಕೆ	
1	246	1	ಸಿ.ಮಂಜುನಾಥ್ ರಾಜು ಬಿನ್ ದಿ. ಗಂಗಾಧರ ರಾಜು	0–10–14.72			0–10–14.72	ಖುಷ್ಕಿ
		2	ರಾಮಕೃಷ್ಣಪ್ಪ					ಖುಷ್ಕಿ
2	341	1	ಎಸ್.ಪಿ.ಎ. ಹೋಲ್ಡರ್ ಶ್ರೀಮತಿ ಪರವಾಗಿ ಜಿತೇಂದ್ರ ವೀರ್ವಾನಿ ಬಿನ್ ದಿ. ಮೋಹನ್ ದಾಸ್ ವೀರ್ವಾನಿ. ಸಿ.ಬಿ.ದೇವಯ್ಯ	0–36–10.24		0–01–0	0–35–10.24	ಖುಷ್ಕಿ
		2	ಸಿ.ಕೃಷ್ಣ ಕುಮಾರ್ ಬಿನ್ ಮುಖುಂದರಾಜನ್					ಖುಷ್ಕಿ
		3	ಸಿ.ಕೃಷ್ಣ ಕುಮಾರ್ ಬಿನ್ ಮುಖುಂದರಾಜನ್					ಖುಷ್ಕಿ
		4	ಎಸ್.ಪಿ.ಎ. ಹೋಲ್ಡರ್ ಶ್ರೀಮತಿ ಪರವಾಗಿ ಜಿತೇಂದ್ರ ವೀರ್ವಾನಿ ಬಿನ್ ದಿ. ಮೋಹನ್ ದಾಸ್ ವೀರ್ವಾನಿ. ಸಿ.ಬಿ.ದೇವಯ್ಯ					ಖುಷ್ಕಿ
3	255	1	ಎಸ್.ಪಿ.ಎ. ಹೋಲ್ಡರ್ ಶೈನಾ ಗಣಪತಿ ತಂದೆ ಸಿ.ಬಿ.ದೇವಯ್ಯ ಪರವಾಗಿ ಜಿತೇಂದ್ರ ವೀರ್ವಾನಿ	1–16–1.92			1–16–1.92	ಖುಷ್ಕಿ
		2	ವಿ.ಎಸ್ ಅರವಿಂದನ್ ಬಿನ್ ವಿ.ಆರ್. ಸಿಂಗಾರಾಚಾರಿ			0–02–00		ಖುಷ್ಕಿ
		3	ಎಸ್.ಪಿ.ಎ. ಹೋಲ್ಡರ್ ಶೈನಾ ಗಣಪತಿ ತಂದೆ ಸಿ.ಬಿ.ದೇವಯ್ಯ ಪರವಾಗಿ ಜಿತೇಂದ್ರ ವೀರ್ವಾನಿ					ಖುಷ್ಕಿ
		4	ಎಸ್.ಪಿ.ಎ. ಹೋಲ್ಡರ್ ಶೈನಾ ಗಣಪತಿ ತಂದೆ ಸಿ.ಬಿ.ದೇವಯ್ಯ ಪರವಾಗಿ ಜಿತೇಂದ್ರ ವೀರ್ವಾನಿ			0–05–00		ಖುಷ್ಕಿ
		5	ಎಸ್.ಪಿ.ಎ. ಹೋಲ್ಡರ್ ಶೈನಾ ಗಣಪತಿ ತಂದೆ ಸಿ.ಬಿ.ದೇವಯ್ಯ ಪರವಾಗಿ ಜಿತೇಂದ್ರ ವೀರ್ವಾನಿ					ಖುಷ್ಕಿ
		6	ಎಸ್.ಪಿ.ಎ. ಹೋಲ್ಡರ್ ಶೈನಾ ಗಣಪತಿ ತಂದೆ ಸಿ.ಬಿ.ದೇವಯ್ಯ ಪರವಾಗಿ ಜಿತೇಂದ್ರ ವೀರ್ವಾನಿ					ಖುಷ್ಕಿ
4	340	1	ಆರಾಧನಾ ಜುಂಜನಾವಾಲಾ ತಂದೆ ಸುದೀಪ್ ಜುಂಜನಾವಾಲಾ	1–4–14.72		0–09–00	00–35–14.72	ಖುಷ್ಕಿ
		2	ಅಭಿಷೇಕ್ ಪೊದ್ದಾರ್ ಬಿನ್ ವಿಮಲ್ ಕುಮಾರ್ ಪೊದ್ದಾರ್					ಖುಷ್ಕಿ
5	350	1	ಚಿದಾನಂದ ಬಿನ್ ದಿ. ಎಂ ಎನ್ ಮುನಿಶ್ಯಾಮಪ್ಪ	0–31–14.8		0–09–00	0–22–14.8	ಖುಷ್ಕಿ
		2	ಪ್ರೇಮಾ ಕೃಷ್ಣ ತಂದೆ ಶ್ರೀ. ಎಸ್.ಕೃಷ್ಣ			0–13–00		ಖುಷ್ಕಿ
6	351	2	ವಿಜಯಾ ತಂದೆ ಮುನಿರಾಜು	0–8–1.92		0–8–1.92	0–0–0	ಖುಷ್ಕಿ
		1	ಬಿ.ಎಂ. ರಾಜಣ್ಣ ಬಿನ್ ಬಿ.ಪಿ ಮರಿಗಂಗಪ್ಪ ಕೆ.ರಮೇಶ್ ಬಿನ್ ಖ್ಯಾತಪ			0–02–00		ಖುಷ್ಕಿ
		3	ಎನ್.ಸುಬ್ರಮಣಿ ಬಿನ್ ಪೂಜಾರಿ ನಾರಾಯಣಪ್ಪ					ಖುಷ್ಕಿ
		4	ಮಂಜುಳಾ ತಂದೆ ಬಿ.ಎಸ್.ಸುರೇಶ್					ಖುಷ್ಕಿ
		5	ಎಸ್.ಶ್ರೀನಿವಾಸ್ ಬಿನ್ ದಿ. ನಂಜುಂಡಯ್ಯ					ಖುಷ್ಕಿ
		6	ಎನ್.ಮಂಜುನಾಥ್ ಬಿನ್ ನಂಜುಂಡಪ್ಪ					ಖುಷ್ಕಿ
		7	ಆರ್.ಟಿ.ಜನಾರ್ದನ ಬಿನ್ ತಮ್ಮಣ್ಣ			0–0–0.50		ಖುಷ್ಕಿ
		8	ಎ.ರಾಮಚಂದ್ರ ಬಿನ್ ಪಿ.ಅರುಣಾಚಲಂ			0–0–0.50		ಖುಷ್ಕಿ
		9	ಎಂ.ಕೃಷ್ಣ ಬಿನ್ ಎಂ.ಪಿ.ವೆಂಕಟರಮಣಪ್ಪ			0–0–02		ಖುಷ್ಕಿ
		11	ಎಸ್.ಗೋಪಾಲ್ ಬಿನ್ ಎಸ್.ರೆಡ್ಡಪ್ಪ					ಖುಷ್ಕಿ
		12	ಟಿ.ಕೆ.ರುಕ್ಮಿಣಿ ತಂದೆ ಎಲ್.ಲವಕುಮಾರ್					ಖುಷ್ಕಿ
7	269	1	ಎಚ್.ಆರ್.ಚಂದ್ರಶೇಖರ್ ಬಿನ್ ದಿ. ಎಚ್.ಕೆ.ರಾಮಯ್ಯ	0–20–5.76			0–20–5.76	ಖುಷ್ಕಿ
		2	ಎಚ್.ಆರ್.ಚಂದ್ರಶೇಖರ್ ಬಿನ್ ದಿ. ಎಚ್.ಕೆ.ರಾಮಯ್ಯ					ಖುಷ್ಕಿ
		3	ಎಚ್.ಆರ್.ಚಂದ್ರಶೇಖರ್ ಬಿನ್ ದಿ. ಎಚ್.ಕೆ.ರಾಮಯ್ಯ					ಖುಷ್ಕಿ
		4	ಎಚ್.ಆರ್.ಚಂದ್ರಶೇಖರ್ ಬಿನ್ ದಿ. ಎಚ್.ಕೆ.ರಾಮಯ್ಯ					ಖುಷ್ಕಿ
		5	ರಾಮಣ್ಣ ಬಿನ್ ದಿ. ಕೆಂಪಯ್ಯ					ಖುಷ್ಕಿ
		6	ರಾಮಣ್ಣ ಬಿನ್ ದಿ. ಕೆಂಪಯ್ಯ					ಖುಷ್ಕಿ
		7	ರಾಮಣ್ಣ ಬಿನ್ ದಿ. ಕೆಂಪಯ್ಯ					ಖುಷ್ಕಿ
8	268		ಸರ್ಕಾರಿ ತೋಪು (ಸರ್ಕಾರಿ ಗುಂಡು ತೋಪು)	0–12–7.04		0–12–7.04	0–0–0	ಖುಷ್ಕಿ
9	26	1	ಎನ್.ಮುನಿಕೃಷ್ಣಪ್ಪ ಬಿನ್ ನಾರಾಯಣಪ್ಪ ಮುನಿವೆಂಕಟಪ್ಪ ಬಿನ್ ನಾರಾಯಣಪ್ಪ (ಜಂಟಿ)	0–13–1.92		00–0–0.50	0–13–1.42	ಖುಷ್ಕಿ
		2	ಬಿ.ಎಸ್.ಮೋಹನ್ ಕುಮಾರ್ ಬಿನ್ ದಿ. ಬಿ.ಎಂ.ಸಿದ್ದರಾಜು ಬಿ.ಎಮ್.ಶ್ರೀನಿವಾಸಮೂರ್ತಿ ಬಿನ್ ಮುನಿಯಪ್ಪ (ಜಂಟಿ) ಬಿ.ಎಂ. ಗೋವಿಂದರಾಜು ಬಿನ್ ಮುನಿಯಪ್ಪ (ಜಂಟಿ)		0–0–0.50			ಖುಷ್ಕಿ
10	23	1	ಜಯಪ್ರಕಾಶ್ ನಾರಾಯಣ್ ಬಿ.ಎನ್. ಬಿನ್ ದಿ. ಬಿ.ಆರ್.ನಾರಾಯಣ ಸ್ವಾಮಿ	0–24–5.7			0–24–5.7	ಭಾಗಾಯ್ತು
		2	ಬಿ.ಎನ್.ನಾಗೇಶ್ ಬಿನ್ ಲೇಟ್ ಬಿ.ಎನ್. ಮಂಗಳಗೌರಮ್ಮ ವಸಂತ ಕುಮಾರಿ ಬಿನ್ ಲೇಟ್ ಬಿ.ಎನ್.ಮಂಗಳಗೌರಮ್ಮ					ಭಾಗಾಯ್ತು
		3	ಬಿ.ಎನ್.ಜಿರಿಗೆ ತೋಂಟದಾರ್ಯ ಬಿನ್ ದಿ. ಸಿ.ನಾಗರಾಜು					ಭಾಗಾಯ್ತು & ಖುಷ್ಕಿ
		4	ಬಿ.ಎನ್.ಜಿರಿಗೆ ತೋಂಟದಾರ್ಯ ಬಿನ್ ದಿ. ಸಿ.ನಾಗರಾಜು			0–03–00		ಖುಷ್ಕಿ
		5	ಬಿ.ಎಸ್.ಶಿವಪ್ರಸಾದ್ ಬಿನ್ ದಿ. ಬಿ.ಸಿ.ಸಿದ್ದಪ್ಪ. ಪುಷ್ಪಾವತಿ ತಂದೆ ದಿ. ಶಿವಪ್ರಕಾಶ್ (ಜಂಟಿ ಮೇಲಿನಂತೆ) ಬಿ.ಎಸ್.ಭೋಜರಾಜ್ ಬಿನ್ ದಿ. ಬಿ.ಸಿ.ಸಿದ್ದಪ್ಪ (ಜಂಟಿ ಮೇಲಿನಂತೆ)		0–01–00			ಭಾಗಾಯ್ತು
		6	ಬಿ.ಎನ್.ಜಯಪ್ರಕಾಶ್ ನಾರಾಯಣ್ ಬಿನ್ ಬಿ.ಆರ್.ನಾರಾಯಣಸ್ವಾಮಿ					ಭಾಗಾಯ್ತು
		7	ಬಿ.ವಿ.ಚಂದ್ರಕಾಂತ್ ಬಿನ್ ಬಿ.ಆರ್.ವೀರಪ್ಪ					ಖುಷ್ಕಿ
11	21	1	ಬಿ.ಕೆ.ಮಂಜನಾಥಗೌಡ ಬಿನ್ ದಿ. ಬಿ.ಎಂ.ಕೃಷ್ಣಪ್ಪಗೌಡ	0–35–8.96			0–35–8.96	ಖುಷ್ಕಿ
		2	ಬಿ.ಎನ್.ರಾಮಚಂದ್ರಗೌಡ ಲಲಿತಮ್ಮ ತಂದೆ ಬಿ.ಎನ್.ರಾಮಚಂದ್ರಗೌಡ (ಜಂಟಿ ಮೇಲಿನಂತೆ)					ಖುಷ್ಕಿ
		3	ಬಿ.ಡಿ.ಸುರೇಶ್					ಖುಷ್ಕಿ
		4	ಮುನಿಯಕ್ಕಯಮ್ಮ ಉರ್ಫ್ ರವಿಕಲಾ					ಖುಷ್ಕಿ
		5	ಬಿ.ಕೆ.ಮಂಜನಾಥಗೌಡ ಬಿನ್ ದಿ. ಬಿ.ಎಂ.ಕೃಷ್ಣಪ್ಪಗೌಡ					ಖುಷ್ಕಿ
		6	ಬಿ.ಕೆ.ಮಂಜನಾಥಗೌಡ ಬಿನ್ ದಿ. ಬಿ.ಎಂ.ಕೃಷ್ಣಪ್ಪಗೌಡ					ಖುಷ್ಕಿ
		7	ಜಯಮ್ಮ ತಂದೆ ದಿ. ಬಿ.ಎಂ. ಕೃಷ್ಣಪ್ಪ ಗೌಡ					ಖುಷ್ಕಿ
12	8	1	ಚನ್ನಕೇಶವ ಬಿ.ಕೆ.ಬಿನ್ ದಿ. ಕೃಷ್ಣಪ್ಪಚಂದ್ರ ಬಿ.ಕೆ.ಬಿನ್ ದಿ. ಕೃಷ್ಣಪ್ಪ (ಜಂಟಿ ಮೇಲಿನಂತೆ) ಮಂಜುನಾಥ್ ಬಿ.ಕೆ.ಬಿನ್ ದಿ. ಕೃಷ್ಣಪ್ಪ (ಜಂಟಿ ಮೇಲಿನಂತೆ)	0–24–5.7			0–24–5.7	ಖುಷ್ಕಿ
		3	ಅರುಣಾ ತಂದೆ ಬಿ.ಎನ್.ಮಂಜುನಾಥ					ಖುಷ್ಕಿ
		2	ಬಿ.ಕೆ.ಚನ್ನಕೇಶವ ಬಿನ್ ದಿ. ಬಿ.ಎಸ್.ಕೃಷ್ಣಪ್ಪ. ಕೆ.ಚಂದ್ರ ಬಿನ್ ದಿ. ಬಿ.ಎಸ್.ಕೃಷ್ಣಪ್ಪ (ಜಂಟಿ ಮೇಲಿನಂತೆ)					ಖುಷ್ಕಿ
		4	ವಿಜಯಕುಮಾರ್					ಖುಷ್ಕಿ
		5	ವಸಂತಲಕ್ಷ್ಮಿ ತಂದೆ ರಾಮಾಂಜಿನಿ. ಬಿ.ಎನ್					ಖುಷ್ಕಿ

Contd...2

ರಸ್ತೆಗೆ ಮಣ್ಣು: ಸಂಚಾರಕ್ಕೆ ಸಂಚಕಾರ

ರಾಮೋಹಳ್ಳಿ ರೈಲ್ವೆ ಕೆಳ ಸೇತುವೆ ಕಾಮಗಾರಿ: ಒಂದು ವರ್ಷ ವಾಹನ ಸಂಚಾರ ನಿರ್ಬಂಧ

• ಕೆ.ಎಸ್.ಸುನಿಲ್

ಬೆಂಗಳೂರು: ಮೈಸೂರು ರಸ್ತೆಯ ರಾಮೋಹಳ್ಳಿ ರೈಲ್ವೆ ಕೆಳಸೇತುವೆ ಕಾಮಗಾರಿಗಾಗಿ ರಸ್ತೆ ಬಂದ್ ಮಾಡಿರುವುದರಿಂದ ಸಾರ್ವಜನಿಕರು ಅತ್ತಿತ್ತ ಸಂಚರಿಸಲು ಸಂಕಷ್ಟ ಪಡುವಂತಾಗಿದೆ. ಈ ನಡುವೆ ಭೀಮನಕುಪ್ಪೆ ಮುಖ್ಯರಸ್ತೆಯ ಮಧ್ಯೆ ಗ್ರಾಮಸ್ಥರು ಮಣ್ಣು ಸುರಿದಿರುವುದರಿಂದ ವಾಹನ ಸವಾರರಿಗೆ ತೊಂದರೆ ಉಂಟಾಗಿದೆ.

2026ರ ನವೆಂಬರ್ ಅಂತ್ಯಕ್ಕೆ ಕೆಳ ಸೇತುವೆ ಕಾಮಗಾರಿ ಮುಕ್ತಾಯಗೊಳ್ಳಲಿದೆ ಎಂದು ರೈಲ್ವೆ ಇಲಾಖೆ ಅಧಿಕಾರಿಗಳು ಅಂದಾಜಿಸಿದ್ದಾರೆ. ರಸ್ತೆ ಬಂದ್ ಆಗಿರುವುದರಿಂದ ಮೈಸೂರು ರಸ್ತೆಯಿಂದ ಬರುವ ವಾಹನಗಳು ಚಲ್ಲಘಟ್ಟ ಮೂಲಕ ಭೀಮನಕುಪ್ಪೆ ಮಾರ್ಗವಾಗಿ ವಿನಾಯಕನಗರ, ರಾಮೋಹಳ್ಳಿ, ಕೇತೋಹಳ್ಳಿ, ದೊಡ್ಡಆಲದ ಮರ, ಚುಂಚನಕುಪ್ಪೆ, ಚಂದ್ರಪ್ಪ ಸರ್ಕಲ್ ತಲುಪಲು 7–8 ಕಿಲೋ ಮೀಟರ್ ಸುತ್ತು ಹಾಕುವಂತಾಗಿದೆ.

ಅಲ್ಲದೇ ಕುಂಬಳಗೋಡು ಕೈಗಾರಿಕಾ ಪ್ರದೇಶ, ಚಿಕ್ಕಲೂರಿಗೆ ತೆರಳಲು ತೊಂದರೆ ಆಗುತ್ತಿದೆ. ಗೇರು ಪಾಳ್ಯಕ್ಕೆ ಸರಿಯಾದ ಬಸ್ ವ್ಯವಸ್ಥೆ ಇಲ್ಲದೆ ವಿದ್ಯಾರ್ಥಿಗಳು, ಸಾರ್ವಜನಿಕರು ಪರದಾಡುತ್ತಿದ್ದಾರೆ. ಈ ಮಾರ್ಗದಲ್ಲಿ ಸರಿಯಾದ ರಸ್ತೆಯಿಲ್ಲದ ಕಾರಣ ಮಣ್ಣು ಹಾಕಿ, ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.

ಇದರ ನಡುವೆ ಭಾರಿ ವಾಹನಗಳು ಸಂಚರಿಸದಂತೆ ಭೀಮನಕುಪ್ಪೆ ನಿವಾಸಿಗಳು ಮುಖ್ಯ ರಸ್ತೆಯ ಮಧ್ಯೆಯೇ ಮಣ್ಣು ಸುರಿದಿದ್ದಾರೆ. ಪೊಲೀಸರು ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅರ್ಧ ಭಾಗ ಮಣ್ಣು ತೆರವು ಮಾಡಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಇದರಿಂದ ವಾಹನ ಸಂಚಾರ ನಿಧಾನವಾಗಿ ಸಾಗುತ್ತಿದ್ದು, ನಿಗದಿತ ಸಮಯಕ್ಕೆ ಸ್ಥಳ ತಲುಪುವುದು ದುಸ್ತರವಾಗಿದೆ.

ಮೂರ್ನಾಲ್ಕು ದಿನಗಳ ಹಿಂದೆ ಗ್ರಾಮದೊಳಗೆ ಭಾರಿ ವಾಹನಗಳು ಸಂಚರಿಸಿದ ಪರಿಣಾಮ ಒಳಚರಂಡಿ ಪೈಪ್‌ಗಳು, ನೀರಿನ ಪೈಪ್‌ಗಳು ಹಾನಿಯಾಗಿದ್ದು, ರಸ್ತೆಗಳು ಗುಂಡಿ ಬಿದ್ದವು. ಆಗ ವಾಹನಗಳು ಊರಿಗೂ ಪ್ರವೇಶಿಸದಂತೆ ಭೀಮನಕುಪ್ಪೆ ನಿವಾಸಿಗಳು ಪ್ರವೇಶ ದ್ವಾರದಲ್ಲೇ ಮಣ್ಣು ಸುರಿದಿದ್ದಾರೆ. ಗ್ರಾಮದೊಳಗೆ ದ್ವಿಚಕ್ರ ವಾಹನಗಳು ತೆರಳಲು ಮಾತ್ರ ಕಿರಿದಾದ ದಾರಿ ಮಾಡಿಕೊಂಡಿದ್ದಾರೆ.

ರಾಮೋಹಳ್ಳಿ ರೈಲ್ವೆ ಕೆಳಸೇತುವೆ ಮೂಲಕ ಕುಂಬಳಗೋಡು ಕೈಗಾರಿಕಾ ಪ್ರದೇಶಕ್ಕೆ ಅಂದಾಜು ಒಂದು ಕಿಲೋ ಮೀಟರ್ ದೂರ. ರಾಮೋಹಳ್ಳಿ ರೈಲ್ವೆ ಗೇಟ್ ರಸ್ತೆ ಬಂದ್ ಆಗಿರುವ ಕಾರಣ ಸುತ್ತು ಹಾಕಿಕೊಂಡು ಹೋಗುವಂತಾಗಿದೆ. ವಿಪರೀತ ದಟ್ಟಣೆಯಿಂದ ವಾಹನ ಸವಾರರು ಪರದಾಡುತ್ತಿದ್ದು, ಸಮಸ್ಯೆ ತೀವ್ರಗೊಂಡಿದೆ.

ಐದಾರು ಕಿಲೋ ಮೀಟರ್ ಸುತ್ತು ಹಾಕಿಕೊಂಡು ಹೋಗಬೇಕಾಗಿರುವುದರಿಂದ ಉದ್ಯೋಗಿಗಳು ನಿಗದಿತ ಸಮಯಕ್ಕೆ ಕಚೇರಿ ತಲುಪಲು ಹಾಗೂ ವಿದ್ಯಾರ್ಥಿಗಳು ಶಾಲಾ–ಕಾಲೇಜಿಗೆ ತೆರಳಲು ಕಷ್ಟವಾಗಿದೆ. ನಿತ್ಯ ಸಾವಿರಾರು ಬಸ್, ಕಾರು, ದ್ವಿಚಕ್ರ ವಾಹನಗಳು ಸಂಚರಿಸುತ್ತವೆ. ದಟ್ಟಣೆ ಜೊತೆಗೆ ದೂಳು ವಾಹನ ಸವಾರರನ್ನು ಹೈರಾಣಾಗಿಸುತ್ತಿದೆ. ದಟ್ಟಣೆ ನಿವಾರಿಸಲು ಸಂಚಾರ ಪೊಲೀಸರು ಹರಸಹಾಸ ಪಡುತ್ತಿದ್ದಾರೆ.

‘ಮಣ್ಣಿನ ರಸ್ತೆ ನಿರ್ಮಿಸುತ್ತಿರುವುದರಿಂದ ರಸ್ತೆ ತುಂಬಾ ದೂಳು ಆವರಿಸಿದೆ. ವಾಹನದ ಚಕ್ರಗಳು ಮಣ್ಣಿನಲ್ಲಿ ಹೂತು ಹೋಗುತ್ತಿದ್ದು, ಸಂಚಾರಕ್ಕೂ ಅಡ್ಡಿಯಾಗುತ್ತಿದೆ. ಜೆಸಿಬಿ ಯಂತ್ರದ ಸಹಾಯದಿಂದ ಮಣ್ಣಿನಲ್ಲಿ ಸಿಲುಕಿಕೊಂಡಿದ್ದ ವಾಹನಗಳನ್ನು ಮೇಲಕ್ಕೆ ಎತ್ತಲಾಗುತ್ತಿದೆ. ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳಿಂದಾಗಿ ಸಂಚಾರ ನರಕವಾಗಿ ಪರಿವರ್ತನೆಗೊಂಡಿದೆ. ಯಾವುದೇ ಸಿದ್ಧತೆ ಇಲ್ಲದೆ ರೈಲ್ವೆ ಇಲಾಖೆ ಕೆಳಸೇತುವೆ ಕಾಮಗಾರಿ ಕೈಗೊಂಡಿದೆ. ವಾಹನ ಸಂಚಾರಕ್ಕೆ ಪರ್ಯಾಯ ರಸ್ತೆಯ ವ್ಯವಸ್ಥೆ ಮಾಡಿರಲಿಲ್ಲ’ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

‘ಸಂಪರ್ಕ ಕಲ್ಪಿಸುವ ರಸ್ತೆಗಳು ಗುಂಡಿಗಳಿಂದ ಕೂಡಿದ್ದು, ನಿವಾಸಿಗಳು, ವಾಹನ ಸವಾರರಿಗೆ ದೂಳಿನ ಮಜ್ಜನವಾಗುತ್ತಿದೆ. ಇದರಿಂದ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ. ಗುಂಡಿ ಬಿದ್ದ ರಸ್ತೆಗಳಲ್ಲಿ ಸಂಚರಿಸಲು ತೆರಿಗೆ ಪಾವತಿಸಬೇಕೇ’ ಎಂದು ಪ್ರಶ್ನಿಸಿದರು.

‘ಮಣ್ಣು ತೆರವಿಗೆ ಯತ್ನ’

‘ಗ್ರಾಮಕ್ಕೆ ವಾಹನಗಳು ಬಾರದಂತೆ ಗ್ರಾಮಸ್ಥರು ಮಣ್ಣು ಸುರಿದಿರುವ ಬಗ್ಗೆ ಮಾಹಿತಿ ಇದೆ. ಆದರೆ, ಗ್ರಾಮದೊಳಗೆ ವಾಹನಗಳು ಸಂಚರಿಸಿದ ಪರಿಣಾಮ ಮನೆ, ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ. ಇದರಿಂದಾಗಿ ಜನರಿಗೂ ತೊಂದರೆ ಆಗಿದೆ. ಹಾಗಾಗಿ ಗ್ರಾಮಸ್ಥರಿಗೆ ಮನವರಿಕೆ ಮಾಡಿಕೊಟ್ಟು, ಮಣ್ಣು ತೆರವು ಮಾಡಲಾಗುವುದು’ ಎಂದು ಪೊಲೀಸರು ತಿಳಿಸಿದರು.

ರಾಮೋಹಳ್ಳಿ ರೈಲ್ವೆ ಕೆಳ ಸೇತುವೆ ಕಾಮಗಾರಿಗಾಗಿ ರಸ್ತೆ ಬಂದ್ ಮಾಡಿರುವ ಕುರಿತು ಸೂಚನಾ ಫಲಕ ಅಳವಡಿಸಿರುವ ಇಲಾಖೆ

ಮಣ್ಣಿನ ರಸ್ತೆಯಲ್ಲಿ ಜಲ್ಲಿ ಸಾಗಿಸುತ್ತಿದ್ದ ಲಾರಿ ಸಿಲುಕಿಕೊಂಡಿದ್ದು, ಜೆಸಿಬಿ ಯಂತ್ರದ ಸಹಾಯದಿಂದ ಮೇಲಕ್ಕೆತ್ತಲಾಯಿತು

‘ಸಾವಿರಾರು ಕಾರ್ಮಿಕರಿಗೆ ತೊಂದರೆ’

ಕಮಲೇಶ್ ಮೆಹ್ತಾ

‘ರೈಲ್ವೆ ಇಲಾಖೆ ಕೆಳ ಸೇತುವೆ ಕಾಮಗಾರಿ ಕೈಗೊಂಡಿರುವುದರಿಂದ ಕುಂಬಳಗೋಡು ಕೈಗಾರಿಕಾ ಪ್ರದೇಶಕ್ಕೆ ಕಾರ್ಮಿಕರು ಬರಲು ತೊಂದರೆ ಆಗುತ್ತಿದೆ. ಈ ಭಾಗದಲ್ಲಿ ಐನೂರಕ್ಕೂ ಹೆಚ್ಚು ಕೈಗಾರಿಕೆಗಳಿವೆ. ಸಾವಿರಾರು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಐದಾರು ಕಿಲೋ ಮೀಟರ್ ಸುತ್ತು ಹಾಕಿಕೊಂಡು ಬರಬೇಕು. ಸರಿಯಾದ ಸಮಯಕ್ಕೆ ಬಸ್ ಸಿಗುವುದಿಲ್ಲ’ ಎಂದು ಕುಂಬಳಗೋಡು ಇಂಡಸ್ಟ್ರೀಸ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಕಮಲೇಶ್ ಮೆಹ್ತಾ ಅಲವತ್ತುಕೊಂಡರು.

‘ನಿಯಮದ ಪ್ರಕಾರ 60 ಅಡಿ ಅಗಲ ರಸ್ತೆ ನಿರ್ಮಿಸಬೇಕು. ಆದರೆ, ಕೆಳಸೇತುವೆ ರಸ್ತೆಯು 32 ಅಡಿ ಅಗಲವಿದೆ. ಭಾರಿ ಗಾತ್ರದ ವಾಹನಗಳು ಸಂಚರಿಸುವುದರಿಂದ ಇತರೆ ವಾಹನಗಳಿಗೆ ತೊಂದರೆ ಆಗುತ್ತದೆ. ಈ ಬಗ್ಗೆ ಪೊಲೀಸ್, ಲೋಕೋಪಯೋಗಿ, ಕೆಐಎಡಿಬಿ, ರೈಲ್ವೆ ಇಲಾಖೆ, ಕುಂಬಳಗೋಡು ಗ್ರಾಮ ಪಂಚಾಯಿತಿಗೂ ಮನವಿ ಮಾಡಲಾಗಿದೆ’ ಎಂದು ತಿಳಿಸಿದರು.

ಭೀಮನಕುಪ್ಪೆ ಗ್ರಾಮದೊಳಗೆ ವಾಹನಗಳು ಬಾರದಂತೆ ಗ್ರಾಮಸ್ಥರು ಮಣ್ಣು ಸುರಿದಿರುವ ದೃಶ್ಯ –ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್

ವಿದ್ಯುತ್ ಕಂಬ, ಮನೆಗೆ ಹಾನಿ

ಮಹೇಶ್

‘ಭಾರಿ ಗಾತ್ರದ ವಾಹನ ಸೇರಿ ಸಾವಿರಾರು ವಾಹನಗಳು ಭೀಮನಕುಪ್ಪೆ ಗ್ರಾಮದೊಳಗೆ ಸಂಚರಿಸಿದ ಪರಿಣಾಮ ನೀರಿನ ಪೈಪ್‌ಗಳು ಒಡೆದು ಕುಡಿಯುವ ನೀರಿಗೆ ತೊಂದರೆ ಆಗಿದೆ. ಜತೆಗೆ ರಸ್ತೆ ಗುಂಡಿಗಳು ನಿರ್ಮಾಣವಾಗುತ್ತಿವೆ. ಕುಡಿಯುವ ನೀರಿಗೆ ಒಳಚರಂಡಿ ನೀರು ಮಿಶ್ರಣವಾಗಿ ಕುಡಿಯಲು ಆಗದ ಪರಿಸ್ಥಿತಿ ಇದೆ. ಇದರಿಂದ ಭೀಮನ ಕುಪ್ಪೆ ಗ್ರಾಮದ ಜನರು ಬೇಸತ್ತು, ವಾಹನಗಳು ಬಾರದಂತೆ ಮಣ್ಣು ಸುರಿದಿದ್ದಾರೆ’ ಎಂದು ರಾಮೋಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಜಿ.ಮಹೇಶ್ ತಿಳಿಸಿದರು.

‘ಭಾರಿ ಗಾತ್ರದ ವಾಹನಗಳು ತಿರುವು ಪಡೆಯುವ ವೇಳೆ ಮನೆಗಳಿಗೆ ಡಿಕ್ಕಿ ಹೊಡೆದು ಹಾನಿ ಉಂಟು ಮಾಡುತ್ತಿವೆ. ಮಾರ್ಗದ ಸೂಚನಾ ಫಲಕ ಅಳವಡಿಸದ ಕಾರಣ ಗ್ರಾಮದೊಳಗೆ ವಾಹನಗಳು ಬರುತ್ತಿದ್ದು ವಿದ್ಯುತ್ ಕಂಬ, ಮನೆಯ ಕಾಂಪೌಂಡ್‌ಗಳಿಗೆ ಹಾನಿಯಾಗುತ್ತಿದೆ. ಮಕ್ಕಳು, ವೃದ್ಧರು ಹಾಗೂ ಮಹಿಳೆಯರು ಮನೆಯ ಹೊರಗೆ ಬಾರದ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ದೂರಿದರು.

ಭೀಮನಕುಪ್ಪೆ–ರಾಮೋಹಳ್ಳಿ ಮಾರ್ಗದಲ್ಲಿ ಮಣ್ಣು ಹಾಕಿ ನಿರ್ಮಿಸುತ್ತಿರುವ ರಸ್ತೆಯಲ್ಲಿ ವಾಹನ ದಟ್ಟಣೆ

ಎರಡನೇ ವಿಮಾನ ನಿಲ್ದಾಣಕ್ಕೆ ಬಿಐಎಎಲ್ ಒಪ್ಪಿಗೆ ಅಗತ್ಯ: ಕೇಂದ್ರ

ಪ್ರಜಾವಾಣಿ ವಾರ್ತೆ

ಮುರಳೀಧರ ಮೊಹೋಲ್

ನವದೆಹಲಿ: ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣವನ್ನು ವಾಣಿಜ್ಯ ಕಾರ್ಯಾಚರಣೆಗೆ ಮತ್ತೆ ತೆರೆಯುವ ಬಗ್ಗೆ ರಾಜ್ಯ ಸರ್ಕಾರದಿಂದ ಯಾವುದೇ ಪ್ರಸ್ತಾವ ಬಂದಿಲ್ಲ ಎಂದು ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ಮುರಳೀಧರ ಮೊಹೋಲ್ ಸ್ಪಷ್ಟಪಡಿಸಿದ್ದಾರೆ.

ಲೋಕಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ಪ್ರಶ್ನೆಗೆ ಉತ್ತರ ನೀಡಿರುವ ಅವರು, ‘ಬೆಂಗಳೂರಿನಲ್ಲಿ ಎರಡನೇ ವಿಮಾನ ನಿಲ್ದಾಣದ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರದ ಕೋರಿಕೆಯ ಮೇರೆಗೆ, ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಮೂರು ಸ್ಥಳಗಳ ಪೂರ್ವ-ಕಾರ್ಯಸಾಧ್ಯತಾ ಅಧ್ಯಯನಗಳನ್ನು ನಡೆಸಿದೆ. ಈ ಅಧ್ಯಯನ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಲಾಗಿದೆ. ಆ ಬಳಿಕ ಯಾವುದೇ ಪ್ರಸ್ತಾವ ಬಂದಿಲ್ಲ’ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಬಿಐಎಎಲ್) 2008ರಲ್ಲಿ ಒಂದು ಒಪ್ಪಂದ ಮಾಡಿಕೊಂಡಿದ್ದವು. ಈ ಒಪ್ಪಂದದ ಪ್ರಕಾರ, ಬೆಂಗಳೂರು ವಿಮಾನ ನಿಲ್ದಾಣಕ್ಕೆ 25 ವರ್ಷ ಆಗುವ ತನಕ 150 ಕಿ.ಮೀ. ವ್ಯಾಪ್ತಿಯಲ್ಲಿ (ಮೈಸೂರು ಹಾಗೂ ಹಾಸನ ಹೊರತುಪಡಿಸಿ) ಬೇರೆ ವಿಮಾನ ನಿಲ್ದಾಣ ಅಭಿವೃದ್ಧಿಪಡಿಸುವಂತಿಲ್ಲ. ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ವಾಣಿಜ್ಯ ಕಾರ್ಯಾಚರಣೆ ನಡೆಸುವಂತೆಯೂ ಇಲ್ಲ. ಕಾರ್ಯಾಚರಣೆ ನಡೆಸಲು ಮುಂದಾದಲ್ಲಿ ಅದಕ್ಕೆ ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರದ ಒಪ್ಪಿಗೆ ಪಡೆಯಬೇಕು ಎಂದು ಅವರು ಮಾಹಿತಿ ನೀಡಿದ್ದಾರೆ.

‘ಮಹಾಭಾರತ ನಮ್ಮ ಕಾನೂನುಗಳ ಪ್ರತಿಬಿಂಬ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾಭಾರತದಲ್ಲಿ ನಡೆದಿರುವ ಪ್ರತಿಯೊಂದು ಘಟನೆಗಳು, ಸನ್ನಿವೇಶಗಳು ಹಾಗೂ ಅಪರಾಧಗಳು ನಮ್ಮ ಇಂದಿನ ಸಿವಿಲ್ ಮತ್ತು ಕ್ರಿಮಿನಲ್ ಕಾನೂನುಗಳ ಪ್ರತಿಬಿಂಬ’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೆ. ರಾಜೇಶ್ ರೈ ಬಣ್ಣಿಸಿದರು.

ಕರ್ನಾಟಕ ಹೈಕೋರ್ಟ್‌ನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಬೆಂಗಳೂರಿನ ‘ವಕೀಲರ ಕಲಾ ನಾಟಕ ಮಂಡಳಿ’ ವತಿಯಿಂದ ವಕೀಲರೇ ಅಭಿನಯಿಸಿ ಪ್ರಸ್ತುತಪಡಿಸಿದ, ‘ಭಗವದ್ಗೀತೆ’ ಅರ್ಥಾತ್ ‘ಧರ್ಮರಾಜ್ಯ ಸ್ಥಾಪನೆ’ ನಾಟಕದ ಶುಭಾರಂಭಕ್ಕೆ ಗುರುವಾರ ಸಂಜೆ ಚಾಲನೆ ನೀಡಿ ಅವರು ಮಾತನಾಡಿದರು.

ಸ್ವತಃ ಯಕ್ಷಗಾನ ಕಲಾವಿದರೂ ಆದ ರಾಜೇಶ್ ರೈ ಅವರು ಮಹಾಭಾರತದ ಪ್ರಸಂಗಗಳು ಹೇಗೆ ಇಂದಿನ ನಾಗರಿಕ ಸಮಾಜದ ಕಾಯ್ದೆಗಳಿಗೆ ಅನುಗುಣವಾಗಿವೆ ಎಂಬುದನ್ನು ವಿವರಿಸಿ, ‘ನಾಟಕ ಅಭಿನಯಿಸುತ್ತಿರುವ ಕಲಾವಿದರೆಲ್ಲರೂ ವಕೀಲರೇ ಆಗಿದ್ದಾರೆ. ಪ್ರಾಯಶಃ ನಿಜಜೀವನದಲ್ಲಿ ನಾಟಕದ ಮರ್ಮಗಳನ್ನು ಚೆನ್ನಾಗಿ ಕಲಿತವರು ವಕೀಲ ವೃತ್ತಿಯಲ್ಲೂ ನಿಪುಣರಾಗಬಲ್ಲರು’ ಎಂದರು.

ನಾಟಕ ಪ್ರದರ್ಶನ ಉದ್ಘಾಟಿಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ಹಿರಿಯ ನ್ಯಾಯಮೂರ್ತಿ ಅನು ಶಿವರಾಮನ್, ನಿವೃತ್ತಿ ಹೊಂದುತ್ತಿರುವ ನ್ಯಾಯಮೂರ್ತಿ ಕೆ.ಎಸ್. ಮುದಗಲ್, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಮಾತನಾಡಿ ಶುಭ ಹಾರೈಸಿದರು. ನ್ಯಾಯಮೂರ್ತಿ ವಿ.ಶ್ರೀಶಾನಂದ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಹಿರಿ–ಕಿರಿಯ ವಕೀಲರು, ಸಿಬ್ಬಂದಿ ನಾಟಕ ವೀಕ್ಷಿಸಿದರು.

‘ಭಗವದ್ಗೀತೆ’ ಅರ್ಥಾತ್ ‘ಧರ್ಮರಾಜ್ಯ ಸ್ಥಾಪನೆ’ ನಾಟಕ ಪ್ರದರ್ಶನ ಉದ್ಘಾಟಿಸಿ ನ್ಯಾಯಮೂರ್ತಿ ಕೆ.ರಾಜೇಶ್ ರೈ ಮಾತನಾಡಿದರು. ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಹಿರಿಯ ನ್ಯಾಯಮೂರ್ತಿ ಅನು ಶಿವರಾಮನ್, ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ನ್ಯಾಯಮೂರ್ತಿ ಕೆ.ಎಸ್.ಮುದಗಲ್, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಉಪಸ್ಥಿತರಿದ್ದರು

ಘಟಕ ಕಾಲೇಜುಗಳಾಗಿ ಪರಿವರ್ತನೆ ಬೇಡ: ದಲಿತ ಪದವೀಧರರ ಸಂಘ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಸರ್ಕಾರಿ ಆರ್‌ಸಿ ಕಾಲೇಜು ಹಾಗೂ ಕಲಾ ಕಾಲೇಜು ಅನ್ನು ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಪರಿವರ್ತನೆ ಮಾಡುವ ಪ್ರಸ್ತಾವನೆ ಕೈ ಬಿಡಿ’ ಎಂದು ಕರ್ನಾಟಕ ರಾಜ್ಯ ದಲಿತ ಪದವೀಧರರ ಸಂಘ ಆಗ್ರಹಿಸಿದೆ.

‘ಸಂಪೂರ್ಣ ಸರ್ಕಾರಿ ಕಾಲೇಜು ಗಳಾಗಿರುವ ಇಲ್ಲಿ 10 ಸಾವಿರದಷ್ಟು ವಿದ್ಯಾರ್ಥಿಗಳು ಪದವಿ, ಸ್ನಾತಕೋತ್ತರ ಪದವಿ ಪಡೆಯುತ್ತಿದ್ದಾರೆ. ಅದರಲ್ಲೂ ಗ್ರಾಮೀಣ ಪ್ರದೇಶದ ಬಡವರು, ಕೂಲಿ ಕಾರ್ಮಿಕರ ಮಕ್ಕಳು ಶಿಕ್ಷಣ ಪಡೆಯಲು ಈ ಕಾಲೇಜುಗಳು ಆಸರೆಯಾಗಿವೆ. ಹಿಂದುಳಿದ, ಪರಿಶಿಷ್ಟ ಜಾತಿ, ಪಂಗಡ ಹಾಗೂ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳೇ ಅಧಿಕವಾಗಿದ್ದು, ಪರಿವರ್ತನೆಯಿಂದ ಶುಲ್ಕ ಹೊರೆಯಾಗಲಿದೆ’ ಎಂದು ಸಂಘದ ಅಧ್ಯಕ್ಷ ವಿ.ಲೋಕೇಶ್ ತಿಳಿಸಿದ್ದಾರೆ.

‘ಈ ಹಿಂದೆಯೇ ಪರಿವರ್ತನೆ ವಿರೋಧಿಸಿ ಹೋರಾಟ ನಡೆಸಿದಾಗ ಮೂವರು ಸದಸ್ಯರ ಸಮಿತಿ ರಚಿಸಲಾಗಿತ್ತು. ಸಮಿತಿಯು ವರದಿ ನೀಡಿ ಸಾಧಕ ಬಾಧಕಗಳ ಬಗ್ಗೆ ತಿಳಿಸಿದೆ. ಈಗ ಕೆಲವು ಅಧ್ಯಾಪಕರು ವಿಶ್ವವಿದ್ಯಾಲಯದ ಘಟಕ ಕಾಲೇಜು ಆದರೆ ಎರಡು ವರ್ಷ ಹೆಚ್ಚುವರಿ ಸೇವೆ ಸಿಗಲಿದೆ ಎನ್ನುವ ಕಾರಣದಿಂದ ಇದಕ್ಕೆ ಒತ್ತಡ ಹೇರುತ್ತಿದ್ದಾರೆ. ಈಗಾಗಲೇ ವಿಶ್ವವಿದ್ಯಾಲಯದ ಕುಲಸಚಿವರು ಇದೇ ವಿಚಾರವಾಗಿ ವಿವರಣೆ ಕೇಳಿದ್ದಾರೆ. ಈ ಪ್ರಸ್ತಾವ ಕೈ ಬಿಡದೇ ಇದ್ದರೆ ಹೋರಾಟ ನಡೆಸಬೇಕಾಗುತ್ತದೆ’ ಎಂದು ಎಚ್ಚರಿಸಿದ್ದಾರೆ.

ಗೃಹಲಕ್ಷ್ಮಿ: ಲೆಕ್ಕ ಪರಿಶೋಧನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಟಿ.ಎ.ಶರವಣ

ಬೆಂಗಳೂರು: ‘ಗೃಹಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳಿಗೆ ಪ್ರತಿ ತಿಂಗಳು ನಿಯಮಿತವಾಗಿ ಹಣ ಪಾವತಿಯಾಗದ ಕಾರಣ, ಯೋಜನೆ ಪ್ರಾರಂಭದಿಂದ ಈವರೆಗೆ ಬಳಕೆಯಾದ ಅನುದಾನಕ್ಕೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನೆ ನಡೆಸಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಅಕೌಂಟೆಂಟ್ ಜನರಲ್ ಅವರಿಗೆ ಪತ್ರ ಬರೆದಿದ್ದಾರೆ. ‘ರಾಜ್ಯದಲ್ಲಿ ಜಾರಿಯಲ್ಲಿರುವ ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ಕುಟುಂಬದ ಯಜಮಾನಿಗೆ ಮಾಸಿಕ ₹2 ಸಾವಿರ ನೀಡಲಾಗುತ್ತಿದೆ. ಈ ಯೋಜನೆಗೆ ಸರ್ಕಾರದ ಬೊಕ್ಕಸದಿಂದ ಮಾಸಿಕ ಸುಮಾರು 2,600 ಕೋಟಿ ವೆಚ್ಚವಾಗುತ್ತಿದೆ. ಆದರೆ, ಫಲಾನುಭವಿಗಳ ಬ್ಯಾಂಕ್ ಖಾತೆಗೆ ನಿಯಮಿತವಾಗಿ ಹಣ ಜಮೆ ಮಾಡುತ್ತಿಲ್ಲ. ಈ ಬಗ್ಗೆ ಸದನದಲ್ಲಿ ವಿರೋಧ ಪಕ್ಷಗಳಿಗೆ ಉತ್ತರಿಸುವಾಗ, ಪ್ರತಿ ತಿಂಗಳು ಹಣ ಪಾವತಿಸಿರುವುದಾಗಿ ಸುಮಾರು ₹5 ಸಾವಿರ ಕೋಟಿಯ ತಪ್ಪು ಲೆಕ್ಕವನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಲಕ್ಷ್ಮಿ ಹೆಬ್ಬಾಳಕರ ತೋರಿಸಿದ್ದಾರೆ. ಆದ್ದರಿಂದ ಲೆಕ್ಕ ಪರಿಶೋಧನೆ ನಡೆಸಬೇಕು’ ಎಂದು ಒತ್ತಾಯಿಸಿದ್ದಾರೆ.

ಕ್ರ. ಸಂ.	ಸರ್ವೆ ಸಂ	ಹಿಸ್ಸಾ ಸಂ.	ಭೂ ಮಾಲೀಕರ ಹೆಸರು	ಎ–ಗುಂ–ಆ ನಲ್ಲಿ ಅಗತ್ಯವಿರುವ ವ್ಯಾಪ್ತಿ				ಭೂಮಿಯ ವಿಧ
				ಒಟ್ಟು	ಎ ಖರಾಬ್	ಬಿ ಖರಾಬ್	ಉಳಿಕೆ	
13	7		ಉಮಾದೇವಿ ತಂದೆ ದಿ. ಈಶ್ವರಪ್ಪ. ಬಿ.ಇ ಯತೀಶ್ ಬಿನ್ ದಿ. ಈಶ್ವರಪ್ಪ (ಜಂಟಿ) ಬಿ.ಇ.ಮನೋಹರ್ ಬಿನ್ ದಿ. ಈಶ್ವರಪ್ಪ (ಜಂಟಿ)	0–3–8.32			0–3–8.32	ಖುಷ್ಕಿ
14	6		ಉಮಾದೇವಿ ತಂದೆ ದಿ. ಈಶ್ವರಪ್ಪ. ಬಿ.ಇ ಯತೀಶ್ ಬಿನ್ ದಿ. ಈಶ್ವರಪ್ಪ (ಜಂಟಿ) ಬಿ.ಇ.ಮನೋಹರ್ ಬಿನ್ ದಿ. ಈಶ್ವರಪ್ಪ (ಜಂಟಿ)	0–15–5.12			0–15–5.12	ಖುಷ್ಕಿ
15	5	1	ಮುತ್ಯಾಲಮ್ಮ ಬಿನ್ ಹನುಮಯ್ಯ	0–32–10.88			0–32–10.88	ಖುಷ್ಕಿ
		2	ಸಂಪಂಗಿ ರಾಮಯ್ಯ ಬಿನ್ ವೆಂಕಟ ರಮಣಪ್ಪ ಚಿನ್ನಯ್ಯ ಬಿನ್ ವೆಂಕಟಶಾಮಪ್ಪ ಎಸ್.ಕೆ.ಸುಕನ್ಯಾ ತಂದೆ ಎಂ. ಪಿ. ಮಲ್ಲೇಶ್ ಬಿ.ಎಂ.ಶ್ರೀನಿವಾಸ್ ಬಿನ್ ಮುನಿಶ್ಯಾಮಪ್ಪ ರಾಮಪ್ಪ ಬಿನ್ ಚಿಕ್ಕರಾಮಣ್ಣ					ಖುಷ್ಕಿ
		10	ಬಿ.ಎಚ್. ನಾಗರಾಜು ಬಿನ್ ದಿ. ಪಿಳ್ಳಕಮ್ಮ					ಖುಷ್ಕಿ
		11	ಮುತ್ಯಾಲಮ್ಮ ಬಿನ್ ಹನುಮಯ್ಯ					ಖುಷ್ಕಿ
		12	ಮಾರಮ್ಮ ತಂದೆ ಹನುಮಯ್ಯ					ಖುಷ್ಕಿ
		13	ಎನ್.ಕಲ್ಪನಾ ತಂದೆ ಬಿ.ಎಸ್.ನಾರಾಯಣ ಗೌಡ					ಖುಷ್ಕಿ
		14	ವಿಜಯಕುಮಾರ್ ಬಿನ್ ದಿ. ಮುನಿಯಪ್ಪ					ಖುಷ್ಕಿ
		15	ನಾರಾಯಣ ಸ್ವಾಮಿ ಬಿನ್ ದಿ. ಮುನಿಯಪ್ಪ					ಖುಷ್ಕಿ
		16	ಮಂಜುನಾಥ ಬಿನ್ ದಿ. ಮುನಿಯಪ್ಪ					ಖುಷ್ಕಿ
		3	ಬಿ.ಎಚ್. ನಾಗರಾಜು ಬಿನ್ ದಿ. ಪಿಳ್ಳಕಮ್ಮ					ಖುಷ್ಕಿ
		4	ಮಾರಮ್ಮ ತಂದೆ ಹನುಮಯ್ಯ					ಖುಷ್ಕಿ
		5	ವಿಜಯಕುಮಾರ್ ಬಿನ್ ದಿ. ಮುನಿಯಪ್ಪ					ಖುಷ್ಕಿ
		6	ನಾರಾಯಣ ಸ್ವಾಮಿ ಬಿನ್ ದಿ. ಮುನಿಯಪ್ಪ					ಖುಷ್ಕಿ
		7	ಮಂಜುನಾಥ ಬಿನ್ ದಿ. ಮುನಿಯಪ್ಪ					ಖುಷ್ಕಿ
		8	ಮುತ್ಯಾಲಮ್ಮ ಬಿನ್ ಹನುಮಯ್ಯ					ಖುಷ್ಕಿ
		9	ಬಿ.ಎಚ್. ನಾಗರಾಜು ಬಿನ್ ದಿ. ಪಿಳ್ಳಕಮ್ಮ					ಖುಷ್ಕಿ
16	325		ವೆಂಕಟರಮಣಪ್ಪ ಬಿನ್ ದಿ. ದೊಡ್ಡಚನ್ನರಾಯಪ್ಪ	0–31–00			0–31–00	ಖುಷ್ಕಿ
17	317		ವೆಂಕಟರಮಣಪ್ಪ ಬಿನ್ ದಿ. ದೊಡ್ಡಚನ್ನರಾಯಪ್ಪ	0–24–11.52	0–15–0		0–9–11.52	ಖುಷ್ಕಿ
18	316	1	ವಿ.ಪಿ.ಅಮರನಾಥರೆಡ್ಡಿ	1–12–10.24		0–0–0.25	1–12–9.99	ಖುಷ್ಕಿ
		2	ಎನ್.ನಂಜಪ್ಪ			0–0–0.25		ಖುಷ್ಕಿ
		3	ಎಸ್.ಶ್ರೀನಿವಾಸ್			0–0–0.50		ಖುಷ್ಕಿ
19	315	2	ಕೆ.ರೇವತಿಲಕ್ಷ್ಮಿ ತಂದೆ ಕುಮಾರ್	0–16–10.24		0–09–00	00–07–10.24	ಖುಷ್ಕಿ
		1	ಗ್ಲೋಬಲ್ ಟೆಕ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಸತೀಶ್ ಪಿ.ಚಂದ್ರ ಮತ್ತು ಅವರ ಎಸ್ ಪಿಎ ಹೋಲ್ಡರ್ ಟಿ. ಸತೀಶ್ ರಾವ್ ಪ್ರತಿನಿಧಿ			0–04–00		ಖುಷ್ಕಿ
		4	ಗ್ಲೋಬಲ್ ಟೆಕ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಸತೀಶ್ ಪಿ.ಚಂದ್ರ ಮತ್ತು ಅವರ ಎಸ್ ಪಿಎ ಹೋಲ್ಡರ್ ಟಿ.ಸತೀಶ್ ರಾವ್ ಪ್ರತಿನಿಧಿ					ಖುಷ್ಕಿ
		3	ಗ್ಲೋಬಲ್ ಟೆಕ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಸತೀಶ್ ಪಿ.ಚಂದ್ರ ಮತ್ತು ಅವರ ಎಸ್ ಪಿಎ ಹೋಲ್ಡರ್ ಟಿ.ಸತೀಶ್ ರಾವ್ ಪ್ರತಿನಿಧಿ					ಖುಷ್ಕಿ
		5	ಎನ್.ನಂಜಪ್ಪ ಬಿನ್ ದಿ. ನಾರಾಯಣಪ್ಪ					ಖುಷ್ಕಿ
		6	ಎಸ್.ಶ್ರೀನಿವಾಸ್ ಬಿನ್ ಪಿ.ಸಿ.ಶೇಖರ್					ಖುಷ್ಕಿ
		7	ವಿ.ಪಿ.ಅಮರನಾಥ ರೆಡ್ಡಿ ಬಿನ್ ರಂಗಾ ರೆಡ್ಡಿ					ಖುಷ್ಕಿ
20	320		ಸರ್ಕಾರಿ ಕಂಚಕಾರರ ಸ್ಮಶಾನ (ಶವಾಗಾರ)	0–12–8.32		0–12–8.32	0–0–0	ಖುಷ್ಕಿ
21	324		ಮನಿಷಾಕುಮಾರಿ ಪರವಾಗಿ ಅಭಿಷೇಕ್ ಪ್ರಿಯದರ್ಶಿ ಅಭಿಷೇಕ್ ಪ್ರಿಯದರ್ಶಿ ತಂದೆ ನರೇಶ್ ಶರ್ಮಾ (ಜಂಟಿ ಮೇಲಿನಂತೆ)	0–9–0.64			0–9–0.64	ಖುಷ್ಕಿ
22	323	2	ಶ್ರೀ.ಬಸವಣ್ಣ ದೇವರು (ಗಾಡ್)	0–20–8.32			0–20–8.32	ಖುಷ್ಕಿ
		3	ಬಿ.ಸಿ.ಮೋಹನ್ ಬಿನ್ ಬಿ.ಆರ್.ಚನ್ನಬಸಪ್ಪ					ಖುಷ್ಕಿ
		1	ಎಂ.ಅಲ್ತಾಫ್ ಪಾಷಾ ಬಿನ್ ಅಬ್ದುಲ್ ಮಜೀದ್					ಖುಷ್ಕಿ
		4	ಶ್ರೀಮತಿ. ಮಮತಾ ತಂದೆ ರಮೇಶ್ ಡಿ.ಸಿ.					ಖುಷ್ಕಿ
		5	ನೀಲಮ್ಮ ಕೇ ಆಫ್ ದಿ ಗಂಗಣ್ಣ					ಖುಷ್ಕಿ
		6	ಮಮತಾ ಬಿ.ಆರ್.ತಂದೆ ದಿ. ಎಸ್.ಪ್ರಕಾಶ್					
		7	ಶ್ರೀಮತಿ ಬಿ.ಕೆ.ಭಾಗ್ಯಮ್ಮ ತಂದೆ ಬಿ.ಮುನಿರಾಜು					
		8	ರತ್ನಮ್ಮ ವೈ.ಸಿ./ಒ ಕೆ.ಬಿ.ರಾಮಕೃಷ್ಣ ರೆಡ್ಡಿ					
23	322		ನಾಗರತ್ನಮ್ಮ ತಂದೆ ಲೇಟ್ ಸಿದ್ದಲಿಂಗಪ್ಪ	0–12–11.52			0–12–11.52	ಖುಷ್ಕಿ
24	24	2	ಶೇಖ್ ಸೈಬಾನಾ ಬಿನ್ ಲಾಟ್ ಮಜಿನ್ ಮೆಹಬೂಬ್ ಬಾಷಾ ಬಿನ್ ಲೇಟ್ ಮಾಜಿನ್ (ಜಂಟಿ ಮೇಲಿನಂತೆ)	0–30–13.44			0–30–13.44	ಖುಷ್ಕಿ
		1	ಮಹಬೂಬ್ ಬಾಷಾ ಬಿನ್ ಮಜಿನ್ ಅಲಿಯಾಸ್‌ಶೇಖ್ ಮೊರ್ಖಾಮ್					
48	25		ಬಿ.ಎಸ್.ಮೋಹನ್ ಕುಮಾರ್ ಬಿನ್ ದಿ. ಬಿ.ಎಂ.ಸಿದ್ದರಾಜು ಬಿ. ಎಂ.ಶ್ರೀನಿವಾಸಮೂರ್ತಿ ಬಿನ್ ಮುನಿಯಪ್ಪ (ಜಂಟಿ) ಬಿ.ಎಂ.ಗೋವಿಂದರಾಜು ಬಿನ್ ಮುನಿಯಪ್ಪ (ಜಂಟಿ) ಬಿ.ಎಸ್.ಮೋಹನ್ ಕುಮಾರ್ ಬಿನ್ ದಿ. ಬಿ.ಎಂ.ಸಿದ್ದರಾಜು ಬಿ.ಎಂ.ಶ್ರೀನಿವಾಸ ಮೂರ್ತಿ ಬಿನ್ ದಿ. ಮುನಿಯಪ್ಪ (ಜಂಟಿ ಮೇಲಿನಂತೆ) ಬಿ.ಎಂ.ಗೋವಿಂದ ರಾಜು ಬಿನ್ ದಿ. ಮುನಿಯಪ್ಪ (ಜಂಟಿ ಮೇಲಿನಂತೆ) ಎನ್.ಮುನಿಕೃಷ್ಣಪ್ಪ ಬಿನ್ ದಿ. ನಾರಾಯಣಪ್ಪ (ಜಂಟಿ ಮೇಲಿನಂತೆ)	0–4–8.96			0–4–8.96	ಖುಷ್ಕಿ
25	31	1/A	ಮಹೇಶ್ ಬಾಬು ಎಲ್ ಬಿನ್ ಎನ್.ಲಕ್ಷ್ಮಯ್ಯ	0–32–0.64			0–32–0.64	ಖುಷ್ಕಿ
		2	ಹೆಚ್.ವಿ.ಸುಶೀಲಮ್ಮ ತಂದೆ ಲೇಟ್ ಎನ್.ಶಿವಣ್ಣ					ಖುಷ್ಕಿ
		3	ಬಿ.ರಾವ್ ಪೆಮಾ ಕುಮಾರಿ ತಂದೆ ದಿ. ಬಸವರಾಜು					ಖುಷ್ಕಿ
		1B	ಮಹೇಶ್ ಬಾಬು ಎಲ್ ಬಿನ್ ಎನ್.ಲಕ್ಷ್ಮಯ್ಯ					ಖುಷ್ಕಿ
		4	ಅಜಯ್ ಬಿ.ಎಂ.ಬಿನ್ ಲೇಟ್ ಬಿ.ಎಂ.ಮಂಜುನಾಥ್					ಖುಷ್ಕಿ
		5	ಆನಂದ್. ಎನ್ ಬಿನ್ ನಂಜಮರಿಯಪ್ಪ					ಖುಷ್ಕಿ
		6	ಎಚ್.ಮಾಳಮ್ಮ ತಂದೆ ದಿ. ಬಿ ಎಂ ಅಶ್ವತಪ್ಪ ಅಕ್ಷಯಗೌಡ ಬಿನ್ ದಿ. ಬಿ.ಎಂ.ಅಶ್ವತ್ಥಪ್ಪ (ಜಂಟಿ ಮೇಲಿನಂತೆ)					ಖುಷ್ಕಿ
		7	ಸುನೀಲ್ ಕುಮಾರ್ ಬಿನ್ ದಿ. ಬಿ.ಎಂ.ರಾಜಣ್ಣ					ಖುಷ್ಕಿ
		8	ಬಿ.ಎ.ಶ್ರೀನಿವಾಸ್ ಬಿನ್ ದಿ. ಬಿ.ಎಂ.ಅಣ್ಣಯ್ಯಪ್ಪ					ಖುಷ್ಕಿ
		9	ಬಿ.ಎ.ರಮೇಶ್ ಬಿನ್ ದಿ. ಬಿ.ಎಂ.ಅಣ್ಣಯ್ಯಪ್ಪ					ಖುಷ್ಕಿ
		10	ಲತಾ ಬಿ.ಎಸ್.ತಂದೆ ದಿ. ಬಿ.ಎ.ಚಂದ್ರಶೇಖರ್					ಖುಷ್ಕಿ
		11	ಮಹೇಶ್ ಬಾಬು ಎಲ್ ಬಿನ್ ಎನ್.ಲಕ್ಷ್ಮಯ್ಯ					ಖುಷ್ಕಿ
		12	ಅಶ್ವತ್ಥಮ್ಮ, ದಿ. ಬಿ.ಎಂ.ರಾಜಣ್ಣ					ಖುಷ್ಕಿ
26	34	1	ಶ್ರೀ ಮಹೇಶ್ ಬಾಬು ಎಲ್ ಬಿನ್ ಶ್ರೀ ಎನ್.ಲಕ್ಷ್ಮಯ್ಯ	0–20–3.84			0–20–3.84	ಖುಷ್ಕಿ
		2	ಮಹೇಶ್ ಬಾಬು.ಎಲ್ ಬಿನ್ ಎನ್.ಲಕ್ಷ್ಮಯ್ಯ		0–02–00			ಖುಷ್ಕಿ
27	58	1	ಶ್ರೀ ಶ್ರೀನಿವಾಸ್ ತಿಲಕ್ ಅವರ ಪತ್ನಿ ಉಮಾವತಿ ಕೆ.ತಂದೆ ಶ್ರೀ ಎನ್.ಕೆಂಪಣ್ಣ	0–6–12.16			0–6–12.16	ಖುಷ್ಕಿ
		2	ಮರಕ್ಕ ತಂದೆ ಚನ್ನಯ್ಯ					ಖುಷ್ಕಿ
28	59	2	ಮುನಿಕೃಷ್ಣಪ್ಪ ಬಿನ್ ದಿ. ನಾರಾಯಣಪ್ಪ	0–7–10.24			0–7–10.24	ಖುಷ್ಕಿ
		3	ಎ. ರವಿ ಬಿನ್ ದಿ. ಅಂಜನಪ್ಪ					ಖುಷ್ಕಿ
		1B	ಶ್ರೀ ಶ್ರೀನಿವಾಸ್ ತಿಲಕ್ ಅವರ ಪತ್ನಿ ಉಮಾವತಿ ಕೆ.ತಂದೆ ಶ್ರೀ ಎನ್.ಕೆಂಪಣ್ಣ					ಖುಷ್ಕಿ
		4A	ಮೆಸರ್ಸ್ ಶ್ರೀ ಪ್ರೊಮೋಟರ್ಸ್ ಮತ್ತು ಡೆವಲಪರ್ಸ್ ಅನ್ನು ಅದರ ಪಾಲುದಾರ ಮಹೇಶ್ ಬಾಬು.ಎಲ್ ಪ್ರತಿನಿಧಿಸುತ್ತಾರೆ.					ಖುಷ್ಕಿ
		4C	ಮೆಸರ್ಸ್ ಶ್ರೀ ಪ್ರೊಮೋಟರ್ಸ್ ಮತ್ತು ಡೆವಲಪರ್ಸ್ ಅನ್ನು ಅದರ ಪಾಲುದಾರ ಮಹೇಶ್ ಬಾಬು. ಎಲ್ ಪ್ರತಿನಿಧಿಸುತ್ತಾರೆ.		0–0–0.50			ಖುಷ್ಕಿ
		6	ಮೆಸರ್ಸ್ ಶ್ರೀ ಪ್ರೊಮೋಟರ್ಸ್ ಮತ್ತು ಡೆವಲಪರ್ಸ್ ಅನ್ನು ಅದರ ಪಾಲುದಾರ ಮಹೇಶ್ ಬಾಬು. ಎಲ್ ಪ್ರತಿನಿಧಿಸುತ್ತಾರೆ.		0–0–0.50			ಖುಷ್ಕಿ
		5	ಮೆಸರ್ಸ್ ಶ್ರೀ ಪ್ರೊಮೋಟರ್ಸ್ ಮತ್ತು ಡೆವಲಪರ್ಸ್ ಅನ್ನು ಅದರ ಪಾಲುದಾರ ಮಹೇಶ್ ಬಾಬು. ಎಲ್ ಪ್ರತಿನಿಧಿಸುತ್ತಾರೆ.					ಖುಷ್ಕಿ
		1A	ಮೆಸರ್ಸ್ ಶ್ರೀ ಪ್ರೊಮೋಟರ್ಸ್ ಮತ್ತು ಡೆವಲಪರ್ಸ್ ಅನ್ನು ಅದರ ಪಾಲುದಾರ ಮಹೇಶ್ ಬಾಬು. ಎಲ್ ಪ್ರತಿನಿಧಿಸುತ್ತಾರೆ.					ಖುಷ್ಕಿ
		4B	ಮೆಸರ್ಸ್ ಶ್ರೀ ಪ್ರೊಮೋಟರ್ಸ್ ಮತ್ತು ಡೆವಲಪರ್ಸ್ ಅನ್ನು ಅದರ ಪಾಲುದಾರ ಮಹೇಶ್ ಬಾಬು. ಎಲ್ ಪ್ರತಿನಿಧಿಸುತ್ತಾರೆ.					ಖುಷ್ಕಿ
29	60	1	ಬಿ.ಎನ್.ಶಿವಕುಮಾರ್ ಬಿನ್ ದಿ. ಸೋಮೇಶಯ್ಯ	0–12–13.42			0–12–13.42	ಖುಷ್ಕಿ
		2	ಮಹೇಶ್ ಬಾಬು.ಎಲ್ ಬಿನ್ ಎನ್.ಲಕ್ಷ್ಮಯ್ಯ					ಖುಷ್ಕಿ
30	61		ಬಿ.ಎನ್.ಶಿವಕುಮಾರ್ ಬಿನ್ ದಿ. ಸೋಮೇಶಯ್ಯ	0–16–5.76		0–02–0	0–14–5.76	ಖುಷ್ಕಿ
31	62		ಸಿ.ರಾಜಣ್ಣ ಬಿನ್ ಟಿ.ಚನ್ನಪ್ಪ. ಸಿ.ಶಿವರಾಜ್ ಬಿನ್ ಲೇಟ್ ಚಿಕ್ಕಣ್ಣ (ಜಂಟಿ ಮೇಲಿನಂತೆ)	0–8–8.32			0–8–8.32	ಖುಷ್ಕಿ
			ಒಟ್ಟು	**17–9–15.30**	**0–18–1.50**	**2–9–5.78**	**15–11–13.27**	

ಯಾವುದೇ ಮುದ್ರಣ ದೋಷಗಳಿದ್ದಲ್ಲಿ, ಕಚೇರಿಯಲ್ಲಿ ಸಂಗ್ರಹಿಸಲಾದ ಮೂಲ ದಾಖಲೆಯೇ ಅಂತಿಮವಾಗಿರುತ್ತದೆ.

ನಂ. ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2025–26/ಲ್ಯಾಂಡ್ ಎಸ್‌ಆರ್‌ಪಿ/1727

ಸಹಿ/–
ಪರದೀಪ್ ಪುರಿ
ಮುಖ್ಯ ಎಂಜಿನಿಯರ್ / ನಿರ್ಮಾಣ – III
ಬೆಂಗಳೂರು ಕಂಟೋನ್ಮೆಂಟ್

PUB/744/AAMO/PRB/SWR/2025-26

ಒಳಮೀಸಲು ರಕ್ಷಣೆ ಮಸೂದೆಗೆ ಒಪ್ಪಿಗೆ

ಅಲೆಮಾರಿಗಳಿಗೆ ಶೇ 1ರಷ್ಟು ಮೀಸಲಾತಿ ನೀಡಲು ಸದಸ್ಯರ ಆಗ್ರಹ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಮೂರು ಪ್ರವರ್ಗಗಳಾಗಿ ವರ್ಗೀಕರಿಸಿ ಒಳ ಮೀಸಲಾತಿ ನೀಡುವ ಸರ್ಕಾರದ ಆದೇಶಕ್ಕೆ ಕಾನೂನು ಬಲ ನೀಡಲು ರೂಪಿಸಿದ ಮಸೂದೆಗೆ ವಿಧಾನಸಭೆ ಗುರುವಾರ ಅಂಗೀಕಾರ ನೀಡಿತು.

'ಕರ್ನಾಟಕ ಅನುಸೂಚಿತ ಜಾತಿಗಳ (ಉಪ-ವರ್ಗೀಕರಣ) ಮಸೂದೆ–2025'ಯನ್ನು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರು ಪರ್ಯಾಲೋಚನೆಗಾಗಿ ಮಂಡಿಸಿದರು.

ಚರ್ಚೆ ವೇಳೆ ಮಾತನಾಡಿದ ಬಹುತೇಕ ಸದಸ್ಯರು, ಪರಿಶಿಷ್ಟ ಜಾತಿಗಳಿಗೆ ನಿಗದಿಪಡಿಸಿರುವ ಒಟ್ಟು ಮೀಸಲಾತಿಯನ್ನು ಶೇ 17ರಿಂದ ಶೇ 18ಕ್ಕೆ ಹೆಚ್ಚಿಸಿ, ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇ 1ರಷ್ಟು ಒಳ ಮೀಸಲಾತಿ ನೀಡುವಂತೆ ಆಗ್ರಹಿಸಿದರು.

ಎಚ್.ಸಿ. ಮಹದೇವಪ್ಪ ಮಾತನಾಡಿ, 'ಚುನಾವಣಾ ಪ್ರಣಾಳಿಕೆಯಲ್ಲಿ ಒಳಮೀಸಲಾತಿ ಜಾರಿಗೊಳಿಸುವುದಾಗಿ ಘೋಷಿಸಲಾಗಿತ್ತು. ಅದರಂತೆ, ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಒಳಮೀಸಲಾತಿ ನೀಡುವ ಸಂಬಂಧ 2024ರ ಆ. 1ರಂದು ಸಚಿವ ಸಂಪುಟ ಸಭೆಯಲ್ಲಿ ತಾತ್ವಿಕ ಒಪ್ಪಿಗೆ ನೀಡಲಾಯಿತು. ಒಳಮೀಸಲಾತಿಗೆ ಪರಿಶಿಷ್ಟ ಜಾತಿಗಳ ಸಮೀಕ್ಷೆ ನಡೆಸಲು ನ್ಯಾ. ನಾಗಮೋಹನ್ ದಾಸ್ ನೇತೃತ್ವದಲ್ಲಿ ಆಯೋಗ ರಚಿಸಲಾಯಿತು. ಆಯೋಗವು ಐದು ಪ್ರವರ್ಗಗಳ ನಡುವೆ ಮೀಸಲಾತಿ ಹಂಚಿಕೆ ಮಾಡಿ ವರದಿ ನೀಡಿತ್ತು' ಎಂದರು.

> ಈ ಮಸೂದೆ ಪರಿಪೂರ್ಣವಲ್ಲ, ಕೆಲವು ನ್ಯೂನತೆಗಳಿವೆ. ಅಲೆಮಾರಿಗಳಿಗೆ ನ್ಯಾಯ ಸಿಕ್ಕಿಲ್ಲ. ಈ ವರ್ಗವನ್ನು ಕಡೆಗಣಿಸಲಾಗಿದೆ
> **ಸುರೇಶ್‌ಬಾಬು,** ಜೆಡಿಎಸ್

'ವರದಿ ಆಧರಿಸಿ 101 ಉಪಜಾತಿಗಳನ್ನು ಮೂರು ಪ್ರವರ್ಗಗಳನ್ನಾಗಿ ವಿಂಗಡಿಸಿ 'ಪ್ರವರ್ಗ ಎ'ನಲ್ಲಿ 16 ಜಾತಿಗಳನ್ನು ಸೇರಿಸಿ ಶೇ 6, 'ಪ್ರವರ್ಗ ಬಿ'ನಲ್ಲಿ 19 ಜಾತಿಗಳನ್ನು ಸೇರಿಸಿ ಶೇ 6 ಹಾಗೂ 'ಪ್ರವರ್ಗ ಸಿ'ನಲ್ಲಿ 63 ಜಾತಿಗಳನ್ನು ಸೇರಿಸಿ ಶೇ 5 ಮೀಸಲಾತಿ ಹಂಚಿಕೆ ಮಾಡಲಾಗಿದೆ. ಈ ಮಸೂದೆಯಿಂದ ಯಾರಿಗಾದರೂ ಅನ್ಯಾಯವಾಗಿದ್ದರೆ, ಆ ಬಗ್ಗೆ ಮನವಿ ಸಲ್ಲಿಸಿದರೆ ಸರಿಪಡಿಸುವ ಕೆಲಸ ಮಾಡುತ್ತೇವೆ' ಎಂದರು.

ಬಿಜೆಪಿಯ ದುರ್ಯೋಧನ ಐಹೊಳೆ, ಬಸವರಾಜ ಮತ್ತಿಮಡು, ಕೃಷ್ಣಾ ನಾಯ್ಕದ್, ಜೆಡಿಎಸ್‌ನ ಎಚ್. ಡಿ. ರೇವಣ್ಣ, ಶಾರದಾ ಪೂರ್ಯಾನಾಯ್ಕ್, ಕಾಂಗ್ರೆಸ್‌ನ ಬಸವರಾಜ ರಾಯರಡ್ಡಿ, ಕೆ.ಎಂ. ಶಿವಲಿಂಗೇಗೌಡ ಸೇರಿದಂತೆ ಎಲ್ಲರೂ, ಒಟ್ಟು ಮೀಸಲಾತಿ ಪ್ರಮಾಣವನ್ನು ಶೇ 18ಕ್ಕೆ ಹೆಚ್ಚಿಸಿ ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇ 1ರಷ್ಟು ಮೀಸಲಾತಿ ನೀಡಬೇಕೆಂದು ಒತ್ತಾಯಿಸಿದರು.

ಮಸೂದೆಯ ಮೇಲೆ ಚರ್ಚೆ ನಡೆಸಲು ಇನ್ನಷ್ಟು ಶಾಸಕರು ಕಾಯುತ್ತಿದ್ದರು ಮತ್ತು ಮೀಸಲಾತಿ ಹೆಚ್ಚಳದ ಕುರಿತು ಸಚಿವರ ಉತ್ತರದ ನಿರೀಕ್ಷೆಯಲ್ಲಿದ್ದರು. ಅಷ್ಟರೊಳಗೆ ಸಭಾಧ್ಯಕ್ಷ ಯು.ಟಿ. ಖಾದರ್, ಮಸೂದೆಯ ಪರ್ಯಾಲೋಚನೆಗಾಗಿ ರೂಲಿಂಗ್ ನೀಡಿದರು. ಅದರಿಂದ ಆಕ್ರೋಶಗೊಂಡ ಜೆಡಿಎಸ್‌ನ ಶಾರದಾ ಪೂರ್ಯಾನಾಯ್ಕ್, ನೇಮಿರಾಜ್ ನಾಯಕ್ ಸೇರಿ ಹಲವರು ಸಭಾಧ್ಯಕ್ಷರ ಪೀಠದ ಮುಂಭಾಗಕ್ಕೆ ಬಂದು ಪ್ರತಿಭಟಿಸಿದರು. ಕಾಂಗ್ರೆಸ್‌ನ ಕೆ.ಆರ್. ಕೃಷ್ಣಮೂರ್ತಿ ಮಸೂದೆಯನ್ನು ಧ್ವನಿಮತಕ್ಕೆ ಹಾಕಿದಾಗ, 'ನನ್ನ ಒಪ್ಪಿಗೆ ಇಲ್ಲ' ಎಂದು ಕೂಗಿದರು.

ಮೀಸಲಾತಿ ಪ್ರಮಾಣ ಶೇ 75 ಆಗಬೇಕು

ಮೀಸಲಾತಿ ಪ್ರಮಾಣವನ್ನು ಶೇ 75ರಷ್ಟು ಮಾಡಬೇಕು ಎಂಬುದು ನನ್ನ ವೈಯಕ್ತಿಕ ನಿಲುವು. ಬೊಮ್ಮಾಯಿ ಸರ್ಕಾರ ಪರಿಶಿಷ್ಟ ಜಾತಿಗೆ ಶೇ 17ರಷ್ಟು ಮತ್ತು ಶೇ 7ರಷ್ಟು ಮೀಸಲಾತಿ ನಿಗದಿ ಮಾಡಿದ್ದನ್ನು ನಾನು ಎಂದೂ ವಿರೋಧ ಮಾಡಿರಲಿಲ್ಲ. ನಾನು ವಿರೋಧ ಮಾಡಿದ್ದೇನೆ ಎಂದು ಅರವಿಂದ ಬೆಲ್ಲದ ಹೇಳಿದ್ದಾರೆ. ಅದಕ್ಕೆ ದಾಖಲೆ ಇದ್ದರೆ ಕೊಡಲಿ. ಒಳಮೀಸಲಾತಿ ಕುರಿತು ನಾನೂ ಹೋರಾಟ ಮಾಡಿದ್ದೇನೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಲೆಮಾರಿಗಳಿಗೆ ಅನ್ಯಾಯ

ಈ ಮಸೂದೆಯಲ್ಲಿ ನೇಮಕಾತಿಯಲ್ಲಿ ಮೀಸಲಾತಿ ವಿಚಾರ ಇದೆ. ಆದರೆ ಬಡ್ತಿಯಲ್ಲಿ ಮೀಸಲಾತಿ ವಿಚಾರವನ್ನು ಪ್ರಸ್ತಾಪಿಸಿಲ್ಲ. ಆ ಬಗ್ಗೆ ಒಂದು ಸಾಲು ಕೂಡ ಇಲ್ಲ. ಎಸ್‌ಸಿಪಿ ಟಿಎಸ್‌ಪಿಯಲ್ಲೂ ಒಳಮೀಸಲಾತಿ ನೀಡಬೇಕು. ಇಲ್ಲವಾದಲ್ಲಿ, ಬಲಾಢ್ಯರೇ ಅದರ ಪ್ರಯೋಜನ ಪಡೆದುಕೊಳ್ಳುತ್ತಾರೆ. ಅಲೆಮಾರಿ ಸಮುದಾಯಕ್ಕೆ ಶೇ 1 ಮೀಸಲಾತಿ ನೀಡುವ ಪ್ರಸ್ತಾಪವಿಲ್ಲ. ಅವರನ್ನು ಕಡೆಗಿಸಲಾಗಿದೆ. ಬಸವರಾಜ ಬೊಮ್ಮಾಯಿ ಸರ್ಕಾರ ಈ ವರ್ಗಕ್ಕೆ ಶೇ 1 ಮೀಸಲಾತಿ ನೀಡಿತ್ತು. 2013 ರಿಂದ 2018 ರ ಅವಧಿಯಲ್ಲಿ ಸಿದ್ದರಾಮಯ್ಯ ಸರ್ಕಾರ ಒಳಮೀಸಲಾತಿ ಬಗ್ಗೆ ಮೌನವಾಗಿತ್ತು. ಬೊಮ್ಮಾಯಿ ನೇತೃತ್ವದ ಸರ್ಕಾರ ಉತ್ತರ ರೀತಿಯಲ್ಲಿ ಮೀಸಲಾತಿ ಹಂಚಿಕೆ ಮಾಡಿತ್ತು. ಅದರ ಆಧಾರದಲ್ಲಿ ಈಗಿನ ಸರ್ಕಾರ ತನ್ನ ಪ್ರಯತ್ನ ಮುಂದುವರಿಸಿದೆ

ಅರವಿಂದ ಬೆಲ್ಲದ, ಉಪನಾಯಕ, ವಿರೋಧ ಪಕ್ಷ

'ಕಾಂಗ್ರೆಸ್ ಹಟಾವೋ ಅಭಿಯಾನ'

ಅಲೆಮಾರಿಗಳನ್ನು 'ಪ್ರವರ್ಗ ಸಿ'ಯಲ್ಲಿ ಸೇರಿಸಿರುವುದು ಅನ್ಯಾಯ. ಈ ಹಿಂದೆ ಬಿಜೆಪಿ ಸರ್ಕಾರ ನಾಲ್ಕು ಪ್ರವರ್ಗ ರಚಿಸಿ ಶೇ 6, ಶೇ 5.5, ಶೇ 4.5 ಮತ್ತು ಅಲೆಮಾರಿಗಳಿಗೆ ಶೇ 1 ಒಳ ಮೀಸಲು ನಿಗದಿಪಡಿಸಿತ್ತು. ನಾಗಮೋಹನ್ ದಾಸ್ ವರದಿಯಲ್ಲೂ ಅದೇ ಅಂಶಗಳಿದ್ದವು. ಆದರೆ, ಈಗ 'ಪ್ರವರ್ಗ ಸಿ'ಯಲ್ಲಿ ಬಂಜಾರ, ಕೊರಚ, ಕೊರಮ, ಬೋವಿ ಸಮುದಾಯಗಳ ಜೊತೆಗೆ ಅಲೆಮಾರಿ, ಅರೆ ಅಲೆಮಾರಿ ಜಾತಿಗಳನ್ನೂ ಸೇರಿಸಲಾಗಿದೆ. ಅಲೆಮಾರಿಗಳಿಗೆ ಹೆಚ್ಚುವರಿಯಾಗಿ ಶೇ 1 ಮೀಸಲಾತಿ ನೀಡಬೇಕು. ಇಲ್ಲದಿದ್ದರೆ ಮುಂದಿನ ಚುನಾವಣೆ ವೇಳೆಗೆ 'ಕಾಂಗ್ರೆಸ್ ಹಟಾವೊ-ತಾಂಡಾ ಬಚಾವೊ' ಅಭಿಯಾನ ಆರಂಭವಾಗಲಿದೆ.

ಚಂದ್ರು ಲಮಾಣಿ, ಬಿಜೆಪಿ

ವಿಧಾನಸಭೆ

ಬಿಪಿಎಲ್ ಕಾರ್ಡ್: ಆದಾಯ ಮಿತಿ ಪರಿಷ್ಕರಣೆ

ಬಿಪಿಎಲ್ ಕಾರ್ಡ್‌ದಾರರ ಆದಾಯ ಮಿತಿ ಪರಿಷ್ಕರಣೆಗೆ ಚಿಂತನೆ ನಡೆಸಲಾಗಿದೆ. ಕೇಂದ್ರ ಸರ್ಕಾರ ಬಿಪಿಎಲ್ ಕಾರ್ಡ್‌ದಾರರ ಆದಾಯ ಮಿತಿಯನ್ನು ₹1.20 ಲಕ್ಷಕ್ಕೆ ಮಿತಿಗೊಳಿಸಿದೆ. ಆದರೆ ಕೂಲಿ ಕೆಲಸಗಾರರಿಗೆ ಪ್ರತಿ ದಿನ ₹500 ಕೂಲಿ ದೊರೆಯುತ್ತದೆ. ಇದರ ಆಧಾರದಲ್ಲಿ ಕೂಲಿ ಮಾಡುವವರ ಆದಾಯವೂ ವರ್ಷಕ್ಕೆ ₹1.80 ಲಕ್ಷಕ್ಕೂ ಅಧಿಕವಾಗಿದೆ. ಈ ಕಾರಣಕ್ಕೆ ಆದಾಯ ಮಿತಿ ಪರಿಷ್ಕರಿಸಲಾಗುವುದು.

ಕೆ.ಎಚ್.ಮುನಿಯಪ್ಪ, ಆಹಾರ ಸಚಿವ

ಪ್ರಶ್ನೆ: ರಾಜೇಶ್ ನಾಯಕ್, ಬಿಜೆಪಿ ಮತ್ತು ಬಾಲಕೃಷ್ಣ ಸಿ.ಎನ್, ಜೆಡಿಎಸ್

11 ಸ್ಥಳೀಯ ಸಂಸ್ಥೆಗಳ ವಿರುದ್ಧ ಕ್ರಿಮಿನಲ್ ಪ್ರಕರಣ

ಕಾವೇರಿ, ಕಬಿನಿ, ಅರ್ಕಾವತಿ, ತುಂಗಭದ್ರಾ, ಭದ್ರಾ ಸೇರಿ ವಿವಿಧ ನದಿಗಳಿಗೆ ಸಂಸ್ಕರಿಸದ ಗೃಹ ತ್ಯಾಜ್ಯ ನೀರು ಹರಿಯುತ್ತಿದ್ದು, ನದಿ ದಂಡೆಯ 11 ನಗರ ಮತ್ತು ಪುರಸಭೆಗಳ ವಿರುದ್ಧ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಇವು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿವೆ. 12 ನದಿಗಳ ಪಾತ್ರದಲ್ಲಿ 30 ಸ್ಥಳೀಯ ಸಂಸ್ಥೆಗಳಿದ್ದು, ಇಲ್ಲಿ 814 ಎಂಎಲ್‌ಡಿ ಗೃಹ ತ್ಯಾಜ್ಯ ನೀರು ಉತ್ಪತ್ತಿ ಆಗುತ್ತಿದೆ. 614 ಎಂಎಲ್‌ಡಿ ಸಂಸ್ಕರಣೆಗೆ ಮಾತ್ರ ಶುದ್ಧೀಕರಣ ಘಟಕ ಇದೆ. 203 ಎಂಎಲ್‌ಡಿ ಜಲ ಶುದ್ಧೀಕರಣಕ್ಕೆ ಘಟಕಗಳಿಲ್ಲ. ಆದ್ದರಿಂದ ನಿಯಮಿತವಾಗಿ ಜಲ ತಪಾಸಣೆ ಮಾಡಲಾಗುತ್ತಿದೆ. ಜಲ ಶುದ್ಧೀಕರಣಕ್ಕೆ ಕ್ರಮ ವಹಿಸಲು ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿದೆ

ಈಶ್ವರ ಖಂಡ್ರೆ, ಅರಣ್ಯ ಸಚಿವ

ಪ್ರಶ್ನೆ: ದರ್ಶನ್ ಪುಟ್ಟಣ್ಣಯ್ಯ

ಹಾಳಾದ ರಸ್ತೆಗಳನ್ನು ಕಂಪನಿಗಳೇ ನಿರ್ಮಿಸಬೇಕು

ಪವನ ವಿದ್ಯುತ್ ಕಂಪನಿಗಳು ವಿಂಡ್ ಟರ್ಬೈನ್ ಅಳವಡಿಸಲು ದೊಡ್ಡ ಗಾತ್ರದ ವಾಹನಗಳನ್ನು ಬಳಸಿದ ವೇಳೆ ಗ್ರಾಮೀಣ ರಸ್ತೆಗಳು ಹಾಳಾದರೆ, ಸಂಬಂಧಪಟ್ಟ ಕಂಪನಿಗಳೇ ಹಾಳಾದ ರಸ್ತೆಗಳನ್ನು ನಿರ್ಮಿಸಿಕೊಡುವಂತೆ ಇಲಾಖೆ ನಿರ್ದೇಶನ ನೀಡಿದೆ. ರಾಜ್ಯದಲ್ಲಿ ಈಗ 7,300 ಮೆಗಾವಾಟ್ ಪವನ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಸೌರ ಮತ್ತು ಪವನ ಸೇರಿ ಹೈಬ್ರೀಡ್ ವಿದ್ಯುತ್ ಉತ್ಪಾದನೆಗೆ ಸರ್ಕಾರ ಆದ್ಯತೆ ನೀಡಿದೆ

ಕೆ.ಜೆ.ಜಾರ್ಜ್, ಇಂಧನ ಸಚಿವ

ಪ್ರಶ್ನೆ: ದೊಡ್ಡನಗೌಡ ಎಚ್. ಪಾಟೀಲ, ಬಿಜೆಪಿ

ವಿಧಾನ ಪರಿಷತ್

ಪ್ರಶ್ನೋತ್ತರ

ಅಪರಾಧದಲ್ಲಿ ಭಾಗಿ: 88 ಪೊಲೀಸರ ವಿರುದ್ಧ ಪ್ರಕರಣ

ಎರಡೂವರೆ ವರ್ಷದ ಅವಧಿಯಲ್ಲಿ, ಅಪರಾಧಗಳಲ್ಲಿ ಭಾಗಿಯಾದ 88 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇವರಲ್ಲಿ ಎಲ್ಲರನ್ನೂ ಅಮಾನತು ಮಾಡಲಾಗಿದೆ. ತಪ್ಪು ಎಸಗಿದ್ದವರಿಗೆ ಶಿಕ್ಷೆಯಾಗಲಿದೆ. ರಾಜ್ಯದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂದು ಘೋಷಣೆ ಕೂಗಿದ 12 ಮಂದಿಯ ವಿರುದ್ಧ ಪ್ರಕರಣ ದಾಖಲಾಗಿದೆ. ಜೈಲಿನಲ್ಲಿ ಕೈದಿ, ವಿಚಾರಣಾಧೀನ ಕೈದಿಗಳು ಪಾರ್ಟಿ ನಡೆಸಿದ, ಮೊಬೈಲ್ ಬಳಸಿದ, ಮದ್ಯ ಕುಡಿದ ವಿಡಿಯೊಗಳು ಹಿಂದಿನ ಸರ್ಕಾರದ ಅವಧಿಯಲ್ಲಿ ಚಿತ್ರೀಕರಿಸಿದ್ದಂಥವು. ಇದೆಲ್ಲವನ್ನೂ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಕೆಲವು ಅಧಿಕಾರಿಗಳನ್ನು ಬದಲಿಸಿದ್ದೇವೆ. ಕಾರಾಗೃಹದ ಮೊಬೈಲ್ ನೆಟ್‌ವರ್ಕ್ ಜಾಮರ್‌ಗಳನ್ನು ಮೇಲ್ದರ್ಜೆಗೆ ಏರಿಸಲು ಪರಿಶೀಲನೆ ನಡೆಸಲಾಗುತ್ತಿದೆ.

ಜಿ.ಪರಮೇಶ್ವರ, ಗೃಹ ಸಚಿವ. ಪ್ರಶ್ನೆ: ಟಿ.ಎ.ಶರವಣ, ಜೆಡಿಎಸ್. ಸಿ.ಟಿ. ರವಿ, ಕಿಶೋರ್ ಕುಮಾರ್ ಪುತ್ತೂರು, ಬಿಜೆಪಿ.

'ಬಿಎಂಐಸಿ: ಮೂಲ ಯೋಜನೆ ಬದಲಾವಣೆ ಇಲ್ಲ'

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಮೂಲ ಯೋಜನೆಯನ್ನು ಬದಲಾವಣೆ ಮಾಡಬಾರದು ಎಂದು ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠವು ಆದೇಶಿಸಿದೆ. ಹೀಗಾಗಿ ಅದರಲ್ಲಿ ಯಾವುದೇ ಬದಲಾವಣೆ ಮಾಡಲು ಸಾಧ್ಯವಿಲ್ಲ. ಆದರೆ ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ರೈತರು ಮನೆಗಳನ್ನು ಕಟ್ಟಲು, ಭೂಪರಿವರ್ತನೆ ಮಾಡಿಕೊಳ್ಳಲು ಜಿಲ್ಲಾಧಿಕಾರಿ ಕಚೇರಿ ಮೂಲಕ ಆನ್‌ಲೈನ್‌ನಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ಯೋಜನಾ ಪ್ರಾಧಿಕಾರವು ವಿಲೇವಾರಿ ಮಾಡಲಿದೆ.

ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ.

ಪ್ರಶ್ನೆ: ಮಧು ಜಿ. ಮಾದೇಗೌಡ, ಕಾಂಗ್ರೆಸ್

'ಗೆಜೆಟೆಡ್ ಪ್ರೊಬೆಷನರ್ಸ್ ನೇಮಕಾತಿ: ಶೀಘ್ರ ಫಲಿತಾಂಶ'

2023-24ನೇ ಸಾಲಿನ 384 ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಲೋಕಸೇವಾ ಆಯೋಗವು 2025ರ ಮೇ 3ರಿಂದ 5ರ ನಡುವೆ ಮುಖ್ಯ ಪರೀಕ್ಷೆ ನಡೆಸಿದೆ. ಈಗ ಮುಖ್ಯ ಪರೀಕ್ಷೆಯ, ಪರೀಕ್ಷೋತ್ತರ ಪ್ರಕ್ರಿಯೆಗಳು ಈಗ ನಡೆಯುತ್ತಿದ್ದು, 20 ದಿನಗಳಲ್ಲಿ ಮುಗಿಯಲಿದೆ. ಮುಖ್ಯ ಪರೀಕ್ಷೆಯ ಫಲಿತಾಂಶವನ್ನು ಅನಂತರದಲ್ಲಿ ಪ್ರಕಟಿಸಲಾಗುತ್ತದೆ.

ಎನ್.ಎಸ್.ಬೋಸರಾಜು, ಸಣ್ಣ ನೀರಾವರಿ ಸಚಿವ.

ಪ್ರಶ್ನೆ: ಹಣಮಂತ ನಿರಾಣಿ, ಬಿಜೆಪಿ

'ಖಾಸಗಿ ಆಸ್ಪತ್ರೆ: 6 ತಿಂಗಳ ನೋಂದಣಿ ಪ್ರಮಾಣಪತ್ರ'

ಸುವರ್ಣ ವಿಧಾನಸೌಧ (ಬೆಳಗಾವಿ): ಖಾಸಗಿ ವೈದ್ಯಕೀಯ ಸಂಸ್ಥೆಗಳ ವ್ಯಾಪ್ತಿಯ ಒಳಗೆ 'ಮಾನಸಿಕ ಆರೋಗ್ಯ ಸಂಸ್ಥೆ'ಯನ್ನೂ ಸೇರಿಸಲು ಹಾಗೂ ವೈದ್ಯಕೀಯ ಸಂಸ್ಥೆಗಳಿಗೆ ಆರು ತಿಂಗಳಿಗೆ ತಾತ್ಕಾಲಿಕ ನೋಂದಣಿ ಪ್ರಮಾಣಪತ್ರ ನೀಡಲು ಅವಕಾಶ ಕಲ್ಪಿಸುವ 'ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಮಸೂದೆ– 2025'ಕ್ಕೆ ವಿಧಾನಸಭೆ ಅಂಗೀಕಾರ ನೀಡಿತು.

ಮಸೂದೆ ಮಂಡಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ನೋಂದಣಿ ಮತ್ತು ಕುಂದುಕೊರತೆ ಪ್ರಾಧಿಕಾರಕ್ಕೆ ಐಎಂಎದ ಒಬ್ಬ ಮತ್ತು ನೋಂದಾಯಿತ ಖಾಸಗಿ ವೈದ್ಯಕೀಯ ಅಥವಾ ಆಯುಷ್ ವೈದ್ಯಕೀಯ ವೃತ್ತಿ ನಿರತರ ಸಂಘದ ಪ್ರತಿನಿಧಿಯೊಬ್ಬರನ್ನು ಸದಸ್ಯನಾಗಿ ನಾಮನಿರ್ದೇಶನ ಮಾಡಲು ಈ ಮಸೂದೆ ಅವಕಾಶ ಮಾಡಿಕೊಡಲಿದೆ' ಎಂದರು.

ಏಳು ನಿರ್ಣಯಗಳಿಗೆ ವಿಧಾನಸಭೆ ಅಂಗೀಕಾರ

'ಶೇ 56 ಮೀಸಲು: 9ನೇ ಪರಿಚ್ಛೇದಕ್ಕೆ ಸೇರಿಸಿ'

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ರಾಜ್ಯದಲ್ಲಿ ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಒಟ್ಟು ಮೀಸಲಾತಿಯನ್ನು ಶೇ 56ಕ್ಕೆ ಹೆಚ್ಚಿಸುವ ಉದ್ದೇಶದಿಂದ ರೂಪಿಸಿರುವ ಕಾಯ್ದೆ ಮತ್ತು ಆದೇಶಗಳನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಬೇಕು' ಸೇರಿದಂತೆ ಒಟ್ಟು ಏಳು ನಿರ್ಣಯಗಳಿಗೆ ವಿಧಾನಸಭೆಯು ಗುರುವಾರ ಅಂಗೀಕಾರ ನೀಡಿತು.

ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿದೆ ಎಂದು ಆರೋಪಿಸಿ ತೆಗೆದುಕೊಂಡ ಈ ನಿರ್ಣಯಗಳಿಗೆ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಎಲ್ಲದಕ್ಕೂ ಕೇಂದ್ರ ಸರ್ಕಾರದ ಕಡೆಗೆ ಬೊಟ್ಟು ಮಾಡುವ ನಿಮಗೆ (ರಾಜ್ಯ ಸರ್ಕಾರ) ಒಂದೇ ಒಂದು ಇಲಾಖೆಯನ್ನು ಇಲ್ಲಿನ ಸುವರ್ಣಸೌಧಕ್ಕೆ ಸ್ಥಳಾಂತರಿಸಲು ಸಾಧ್ಯವಾಗಿಲ್ಲ. ನೀವು ಮೊದಲು ಮಾಡಿ ತೋರಿಸಿ' ಎಂದು ಸವಾಲು ಹಾಕಿದರು.

'ಇಷ್ಟೊಂದು ನಿರ್ಣಯಗಳನ್ನು ಒಂದೇ ಬಾರಿಗೆ ತೆಗೆದುಕೊಳ್ಳುತ್ತೀರಲ್ಲ. ಇದೇನು ಈ ಸರ್ಕಾರದ ಕೊನೆ ಅಧಿವೇಶನವೇ' ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಕೆಣಕಿದರು.

'ಕಲ್ಯಾಣ'ಕ್ಕೆ ಕೇಂದ್ರ ₹5 ಸಾವಿರ ಕೋಟಿ ಕೊಡಲಿ

ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಯನ್ನು ರಾಷ್ಟ್ರೀಯ ಅಭಿವೃದ್ಧಿಯಾಗಿ ಪರಿಗಣಿಸಿ, ಮಹಾರಾಷ್ಟ್ರದ ವಿದರ್ಭ ಮಾದರಿಯಲ್ಲಿ ಕೇಂದ್ರ ಸರ್ಕಾರ ತಕ್ಷಣ ₹ 5 ಸಾವಿರ ಕೋಟಿಯ 'ವಿಶೇಷ ಕೇಂದ್ರ ನೆರವು' ಯೋಜನೆಯನ್ನು ರೂಪಿಸಿ ಬಿಡುಗಡೆ ಮಾಡಬೇಕು ಎಂಬ ನಿರ್ಣಯಕ್ಕೆ ಅಂಗೀಕಾರ ಪಡೆಯಲಾಯಿತು.

ಕೃಷ್ಣಾ ಮೇಲ್ದಂಡೆ ಯೋಜನೆ– 3 ಅನ್ನು ತಕ್ಷಣ ರಾಷ್ಟ್ರೀಯ ಯೋಜನೆಯಾಗಿ ಘೋಷಿಸಬೇಕು. ಜೊತೆಗೆ, ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ–2ರ (ಬ್ರಿಜೇಶ್ ಕುಮಾರ್ ಆಯೋಗ) ಐತೀರ್ಪು ಅನ್ನು ಕೇಂದ್ರ ಸರ್ಕಾರದ ಗೆಜೆಟ್‌ನಲ್ಲಿ ಅಧಿಸೂಚಿಸಿ ಅನುಷ್ಠಾನಗೊಳಿಸಬೇಕು ಎಂಬ ನಿರ್ಣಯ ಕೈಗೊಳ್ಳಲಾಯಿತು.

ಇತರ ನಿರ್ಣಯಗಳು

- ರಾಯಚೂರು ಜಿಲ್ಲೆಯಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಲು ತಕ್ಷಣವೇ ಅಂತಿಮ ಅನುಮೋದನೆ ನೀಡಬೇಕು
- ಬೆಂಗಳೂರಿನಲ್ಲಿರುವ 73 ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಗಳನ್ನು ಗುರುತಿಸಿ ಅವುಗಳಲ್ಲಿ ಕನಿಷ್ಠ 25 ಪ್ರಮುಖ ಸಂಸ್ಥೆಗಳನ್ನು ಉತ್ತರ ಕರ್ನಾಟಕ ಭಾಗಕ್ಕೆ ವರ್ಗಾಯಿಸಬೇಕು
- ಕರ್ನಾಟಕದ ನಿಜವಾದ ಎಥೆನಾಲ್ ಸಾಮರ್ಥ್ಯಕ್ಕೆ ಅನುಗುಣವಾಗಿ ಕೋಟಾ ಹಂಚಿಕೆ ಪ್ರಮಾಣವನ್ನು ತಕ್ಷಣ ಹೆಚ್ಚಿಸುವ ಮೂಲಕ ಪ್ರಾದೇಶಿಕ ತಾರತಮ್ಯವನ್ನು ನಿವಾರಿಸಬೇಕು.
- ಮಹದಾಯಿ ಯೋಜನೆಗೆ ಅನುಷ್ಠಾನಕ್ಕೆ ಅಗತ್ಯವಾದ ಎಲ್ಲ ಮಂಜೂರಾತಿಗಳನ್ನು ತಕ್ಷಣ ನೀಡಬೇಕು

ಮಾತುಕತೆ

ಪ್ರಜಾವಾಣಿ ಚಿತ್ರ: ರಂಜು ಪಿ

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ವಿಧಾನಪರಿಷತ್ ಕಲಾಪದಲ್ಲಿ ಗುರುವಾರ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಮತ್ತು ಸಚಿವ ಮಧುಬಂಗಾರಪ್ಪ ಮಾತುಕತೆಯಲ್ಲಿ ತೊಡಗಿದ್ದರು. ಸಚಿವರಾದ ಶಿವರಾಜ ತಂಗಡಗಿ ಮತ್ತು ರಾಮಲಿಂಗಾರೆಡ್ಡಿ ಉಪಸ್ಥಿತರಿದ್ದರು

ಸರ್ಕಾರಿ ಶಾಲೆ: ಸ್ವಯಂ ಪ್ರೇರಿತರಾಗಿ ಬಂದ್ ಇಲ್ಲ– ಮಧು ಬಂಗಾರಪ್ಪ

'ಒಬ್ಬ ವಿದ್ಯಾರ್ಥಿ ಇದ್ದರೂ ಶಾಲೆ ಮುಚ್ಚಲ್ಲ'

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ಸರ್ಕಾರಿ ಶಾಲೆಗಳನ್ನು ಸ್ವಯಂಪ್ರೇರಿತವಾಗಿ ಮುಚ್ಚುವುದಿಲ್ಲ. ಅಲ್ಲದೇ, ಗಡಿಭಾಗದಲ್ಲಿರುವ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿ ಇದ್ದರೂ ಸಕಲ ವ್ಯವಸ್ಥೆಗಳನ್ನು ಕಲ್ಪಿಸಿ ಶಾಲೆಗಳನ್ನು ನಡೆಸುತ್ತೇವೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ವಿಧಾನಸಭೆಯಲ್ಲಿ ಗುರುವಾರ ಬಿಜೆಪಿಯ ಹರೀಶ್ ಪೂಂಜ, ಶರಣು ಸಲಗರ, ಜೆಡಿಎಸ್‌ನ ಕೆ.ಎಚ್. ಪುಟ್ಟಸ್ವಾಮಿ ಗೌಡ ಅವರ ಪ್ರತ್ಯೇಕ ಪ್ರಶ್ನೆಗಳಿಗೆ ಸಚಿರು ಉತ್ತರಿಸಿದರು.

ಗಡಿ ಭಾಗದಲ್ಲಿ ಯಾವುದೇ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಶಿಕ್ಷಕರು ಇಲ್ಲದಿದ್ದರೆ ಶಿಕ್ಷಕರನ್ನು ನೇಮಿಸಲಾಗುವುದು ಮತ್ತು ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆ ಮಾಡಲಾಗುವುದು. ಮರಾಠಿ ಮಾಧ್ಯಮ ಶಾಲೆಗಳನ್ನು ಕನ್ನಡ ಮಾಧ್ಯಮ ಶಾಲೆಗಳಾಗಿ ಪರಿವರ್ತಿಸಲು ಹಿಂದೇಟು ಹಾಕುವುದಿಲ್ಲ. ಶಿಕ್ಷಕರು ಕನ್ನಡ ಮಾಧ್ಯಮದಲ್ಲಿ ಕಡ್ಡಾಯವಾಗಿ ಪಾಠ ಮಾಡಲು ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ 41,088 ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು, 1,78,935 ಹುದ್ದೆಗಳು ಮಂಜೂರಾಗಿವೆ. ಇವುಗಳಲ್ಲಿ 1,33,345 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 45,590 ಹುದ್ದೆಗಳು ಖಾಲಿ ಇವೆ. ಅದೇ ರೀತಿ 5,024 ಸರ್ಕಾರಿ ಪ್ರೌಢಶಾಲೆಗಳಿಗೆ ಮಂಜೂರಾಗಿದ್ದ 44,144 ಹುದ್ದೆಗಳ ಪೈಕಿ 32,590 ಭರ್ತಿಯಾಗಿದೆ. 12,134 ಹುದ್ದೆಗಳು ಖಾಲಿ ಇವೆ. ಪ್ರಾಥಮಿಕ ಶಾಲೆಗಳಿಗೆ 40 ಸಾವಿರ ಹಾಗೂ ಪ್ರೌಢಶಾಲೆಗಳಿಗೆ 11 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಅಲ್ಲದೇ, ಪ್ರಥಮ ದರ್ಜೆ ಸಹಾಯಕ, ದ್ವಿತೀಯ ದರ್ಜೆ ಸಹಾಯಕ, ಗ್ರೂಪ್ ಡಿ ಸೇರಿ ಒಟ್ಟು 10,629 ಹುದ್ದೆಗಳು ಮಂಜೂರಾಗಿದ್ದು, 3,721 ಹುದ್ದೆಗಳು ಖಾಲಿ ಇವೆ. ವರ್ಗಾವಣೆ, ಬಡ್ತಿ, ನೇರ ನೇಮಕಾತಿ ಹಾಗೂ ಅನುಕಂಪ ಆಧಾರಿತ ನೇಮಕಗಳ ಮೂಲಕ ಇವುಗಳನ್ನು ಸರಿದೂಗಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಹರೀಶ್ ಪೂಂಜ, ಶಾಲಾ ಮಕ್ಕಳಿಗೆ ಕೋಳಿ ಮೊಟ್ಟೆ ಖರೀದಿಸಲು ಸರ್ಕಾರ ಪ್ರತಿ ಮೊಟ್ಟೆಗೆ ₹5 ನೀಡುತ್ತಿದೆ. ಆದರೆ, ಮಾರುಕಟ್ಟೆ ದರ ₹ 6.50 ಇದೆ. ಪ್ರತಿ ಮೊಟ್ಟೆಗೆ ₹1.50 ಹಾಗೂ ಬಾಳೆ ಹಣ್ಣಿಗೆ ಶಿಕ್ಷಕರೇ ಹಣ ಪಾವತಿಸುವ ಸ್ಥಿತಿ ಇದೆ ಎಂದು ಗಮನಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ಮಧು ಬಂಗಾರಪ್ಪ, ಈ ಸಮಸ್ಯೆ ಬಗೆಹರಿಸಲು ಮುಂದಿನ ಶೈಕ್ಷಣಿಕ ವರ್ಷದ ವೇಳೆಗೆ ಪ್ರಯತ್ನಿಸಲಾಗುವುದು ಎಂದೂ ಭರವಸೆ ನೀಡಿದರು.

'ದೈಹಿಕ ಶಿಕ್ಷಣ ಶಿಕ್ಷಕರ ನೇಮಕಕ್ಕೆ ಕ್ರಮ'

ಸರ್ಕಾರಿ ಶಾಲೆಗಳಿಗೆ ಮುಂದಿನ ಶೈಕ್ಷಣಿಕ ವರ್ಷದ ವೇಳೆಗೆ 20 ಸಾವಿರಕ್ಕೂ ಹೆಚ್ಚು ಕಾಯಂ ಶಿಕ್ಷಕರನ್ನು ನೇಮಕ ಮಾಡಲಾಗುವುದು. ಅದೇ ಅಧಿಸೂಚನೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ನೇಮಕಕ್ಕೂ ಆದ್ಯತೆ ನೀಡಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಶೂನ್ಯ ವೇಳೆಯಲ್ಲಿ ಬಿಜೆಪಿಯ ಶಶೀಲ್ ನಮೋಶಿ ಅವರ ಪ್ರಸ್ತಾವಕ್ಕೆ ಉತ್ತರ ನೀಡಿದ ಅವರು, 'ಈಗಾಗಲೇ ಕಲ್ಯಾಣ ಕರ್ನಾಟಕಕ್ಕೆ ಸುಮಾರು 5,000 ಶಿಕ್ಷಕರ ನೇಮಕಕ್ಕೆ ಕ್ರಮ ಕೈಗೊಳ್ಳಲಾಗಿದೆ. ಒಳಮೀಸಲಾತಿ ಜಾರಿಗಾಗಿ ಪ್ರಕ್ರಿಯೆ ವಿಳಂಬವಾಗಿತ್ತು. ಕಲ್ಯಾಣ ಕರ್ನಾಕದ ನೇಮಕಾತಿಯಲ್ಲೂ ದೈಹಿಕ ಶಿಕ್ಷಣ ಶಿಕ್ಷಕರ ನೇಮಕಕ್ಕೆ ಆದ್ಯತೆ ನೀಡಲಾಗುವುದು' ಎಂದರು.

'ಎರಡು ದಶಕಗಳಿಂದ ಶಾಲೆಗಳಿಗೆ ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಕ ಮಾಡದ ಕಾರಣ ಮಕ್ಕಳ ಕ್ರೀಡಾ ಚಟುವಟಿಕೆಗಳಿಗೆ, ದೈಹಿಕ ಶಿಕ್ಷಣ ಪಾಠಗಳ ಬೋಧನೆಗೆ ಅಡ್ಡಿಯಾಗಿದೆ. ಪದವಿ ಪಡೆದವರು ಕೆಲಸವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ. ಶಿಕ್ಷಕರ ನೇಮಕಾತಿ ವೇಳೆ ಅಗತ್ಯವಿರುವ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕು' ಎಂದು ನಮೋಶಿ ಒತ್ತಾಯಿಸಿದರು.

ಆದಿವಾಸಿ ಅಧ್ಯಯನ ಕೇಂದ್ರ: ಅನುದಾನಕ್ಕೆ ಒತ್ತಾಯ

ಸುವರ್ಣ ವಿಧಾನಸೌಧ (ಬೆಳಗಾವಿ): 'ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ'ಯ ಒಂದು ಘಟಕವಾಗಿ ಆರಂಭಿಸಿರುವ 'ಮೂಲ ಆದಿವಾಸಿ ಅಧ್ಯಯನ ಕೇಂದ್ರ'ಕ್ಕೆ ಅಗತ್ಯ ಅನುದಾನವನ್ನು ಒದಗಿಸಬೇಕು ಎಂದು ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯ ಎಸ್.ರವಿ ಒತ್ತಾಯಿಸಿದರು.

ಈ ಸಂಬಂಧ ಅವರು ಕೇಳಿದ್ದ ಚುಕ್ಕೆ ಗುರುತಿನ ಪ್ರಶ್ನೆಗೆ ಮುಖ್ಯಮಂತ್ರಿ ಅವರ ಪರವಾಗಿ ಸಭಾನಾಯಕ ಎನ್.ಎಸ್.ಬೋಸರಾಜು ಅವರು ಉತ್ತರ ನೀಡಿದರು. 'ಈ ಘಟಕಕ್ಕೆ 2015ರಿಂದ ಈವರೆಗೆ ₹1.88 ಕೋಟಿ ವೆಚ್ಚ ಮಾಡಲಾಗಿದೆ' ಎಂದು ತಿಳಿಸಿದರು.

ರವಿ ಅವರು, 'ಆದಿವಾಸಿ ಸಮುದಾಯಗಳ ಜನರ ಆರೋಗ್ಯ, ಶಿಕ್ಷಣ, ಜೀವನೋಪಾಯಕ್ಕಾಗಿ ₹3 ಕೋಟಿ ಅನುದಾನ ಬಿಡುಗಡೆ ಮಾಡಿ' ಎಂದು ಪಟ್ಟು ಹಿಡಿದರು. ಬೋಸರಾಜು, 'ನಿಯಮಾನುಸಾರ ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು. ಆದರೆ ರವಿ ಅವರು ತಮ್ಮ ಪಟ್ಟು ಬಿಡಲಿಲ್ಲ. ಆಗ ಸಭಾಪತಿ ಬಸವರಾಜ ಹೊರಟ್ಟಿ, ಸಿ.ಎಂ ಜೊತೆ ಚರ್ಚಿಸಿ ಕ್ರಮ ತೆಗೆದುಕೊಳ್ಳಿ' ಎಂದರು

ಬಹಿಷ್ಕಾರಕ್ಕೆ ಜೈಲು: ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಯಾವುದೇ ವ್ಯಕ್ತಿ, ಕುಟುಂಬ, ಕುಟುಂಬದ ಸದಸ್ಯರನ್ನು ಸಾಮಾಜಿಕವಾಗಿ ಬಹಿಷ್ಕರಿಸಿದರೆ ₹1 ಲಕ್ಷದವರೆಗೆ ದಂಡ, ಮೂರು ವರ್ಷದವರೆಗೆ ಜೈಲು ಶಿಕ್ಷೆ ಅಥವಾ ಎರಡನ್ನೂ ವಿಧಿಸಲು ಹಾಗೂ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಲು ಅವಕಾಶವಿರುವ ಮಸೂದೆಗೆ ವಿಧಾನಸಭೆ ಗುರುವಾರ ಪಕ್ಷಾತೀತವಾಗಿ ಅನುಮೋದನೆ ನೀಡಿತು.

'ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ಮಸೂದೆಯನ್ನು ಮಂಡಿಸಿ ಮಾತನಾಡಿದ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, 'ಸ್ವಾತಂತ್ರ್ಯ ಬಂದು 75 ವರ್ಷವಾದರೂ ಸಾಮಾಜಿಕವಾಗಿ ಬಹಿಷ್ಕಾರ ಹಾಕುವುದು ನಡೆದಿದೆ. ಇದು ಮಾನವ ಹಕ್ಕುಗಳ, ನಾಗರಿಕ ಹಕ್ಕುಗಳು ಉಲ್ಲಂಘನೆ. ಇದನ್ನು ನಿಷೇಧಿಸುವ ಐತಿಹಾಸಿಕ ಮಸೂದೆಯನ್ನು ರೂಪಿಸಲಾಗಿದೆ' ಎಂದರು.

ವಿರೋಧ ಪಕ್ಷ ನಾಯಕ ಆರ್. ಅಶೋಕ, '21ನೇ ಶತಮಾನದಲ್ಲಿ ನಾವೆಲ್ಲರೂ ಒಂದೇ ಎಂದು ಭಾಷಣ ಮಾಡಿದರೂ ನಿರ್ಬಂಧ, ತಾರತಮ್ಯ ಮುಂದುವರಿಸಿದೆ. ಸವಿತಾ ಸಮುದಾಯದವರನ್ನು ವೃತ್ತಿ ಆಧಾರಿತವಾಗಿ ಟೀಕಿಸುವ ಪ್ರವೃತ್ತಿ ಮುಂದುವರಿದಿದೆ. ಹೋಟೆಲ್, ಕ್ಷೌರ ಸೇರಿದಂತೆ ಇತರೆ ಸೇವೆಗೆ ನಿರ್ಬಂಧಿಸುವುದು, ಬಹಿಷ್ಕಾರ ಹಾಕುವುದು. ಅಕ್ಷಮ್ಯ. ಮುಂದೆ ಕಾಯ್ದೆ ಜಾರಿಯಾದಾಗ ಹಳ್ಳಿಗಳಲ್ಲಿ ದೊಡ್ಡ ಫಲಕಗಳನ್ನು ಅಳವಡಿಸಿ ನಿಷೇಧ, ದಂಡ, ಶಿಕ್ಷೆ ಬಗ್ಗೆ ಅರಿವು ಮೂಡಿಸಬೇಕು' ಎಂದು ಸಲಹೆ ನೀಡಿದರು.

ಬಿಜೆಪಿಯ ಎಸ್.ಸುರೇಶ್ ಕುಮಾರ್, 'ಸಾಮಾಜಿಕ ಬಹಿಷ್ಕಾರ ನಿಷೇಧಿಸಿ ಕಾನೂನು ಜಾರಿಗೊಳಿಸುವ ಜೊತೆಗೆ ಜನರಲ್ಲಿನ ಮಾನಸಿಕತೆ ತೊಡೆದು ಹಾಕಬೇಕಿದೆ. ಕೆಲವು ವಿದ್ಯಾರ್ಥಿಗಳನ್ನಷ್ಟೇ ಪ್ರವಾಸಕ್ಕೆ ಕಳುಹಿಸುವುದು ಸೇರಿದಂತೆ ನಾನಾ ರೀತಿಯ ಅಸ್ಪೃಶ್ಯತೆ ರೀತಿಯ ಚಟುವಟಿಕೆ ಇತ್ತೀಚಿನ ವರ್ಷಗಳಲ್ಲಿ ಶಾಲೆಗಳಲ್ಲಿ ನಡೆಯುತ್ತಿದೆ. ಅದನ್ನೂ ನಿಯಂತ್ರಿಸಬೇಕು' ಎಂದು ಸಲಹೆ ನೀಡಿದರು.

ಬಿಜೆಪಿಯ ಆರಗ ಜ್ಞಾನೇಂದ್ರ, 'ಕೇವಲ ಪರಿಶಿಷ್ಟ ಜಾತಿ, ಪಂಗಡದವರು ಮಾತ್ರವಲ್ಲದೆ ಇತರೆ ಸಮುದಾಯದವರಿಗೂ ಬಹಿಷ್ಕಾರ ಹೇರುವುದು ನಡೆದಿದೆ' ಎಂದರು.

ಕಾಂಗ್ರೆಸ್‌ನ ಟಿ.ಬಿ. ಜಯಚಂದ್ರ, 'ಸಾಮಾಜಿಕ ಬಹಿಷ್ಕಾರಕ್ಕೆ ಸಂಬಂಧಿಸಿದಂತೆ ಪೊಲೀಸರು ಸ್ವಯಂಪ್ರೇರಿತರಾಗಿ ದೂರು ದಾಖಲಿಸಿಕೊಳ್ಳಲು ಅವಕಾಶ ಕಲ್ಪಿಸಿ ಮಸೂದೆಗೆ ತಿದ್ದುಪಡಿ ತರಬೇಕು' ಎಂದು ಸಲಹೆ ನೀಡಿದರು. ಆ ತಿದ್ದುಪಡಿ ಅಳವಡಿಸಿಕೊಳ್ಳುವುದಾಗಿ ಮಹದೇವಪ್ಪ ಭರವಸೆ ನೀಡಿದರು.

ಚರ್ಚೆಗೆ ಸಿದ್ಧ: ಸಚಿವ ಕೃಷ್ಣ ಬೈರೇಗೌಡ ಸವಾಲು

ಕೃಷ್ಣ ವಿರುದ್ಧ ಆರೋಪ: ಚರ್ಚೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಕೆರೆ ಮತ್ತು ಸ್ಮಶಾನದ ಭೂಮಿಯನ್ನು ಕಬಳಿಸಿರುವ ಆರೋಪವನ್ನು ಎದುರಿಸುತ್ತಿದ್ದು, ಈ ಕುರಿತು ಚರ್ಚೆಗೆ ಅವಕಾಶ ನೀಡಬೇಕು ಎಂದು ಬಿಜೆಪಿ ಸದಸ್ಯರು ವಿಧಾನಸಭೆಯಲ್ಲಿ ಆಗ್ರಹಿಸಿದರು.

ವಿರೋಧಪಕ್ಷದ ನಾಯಕ ಆರ್.ಅಶೋಕ ವಿಷಯ ಪ್ರಸ್ತಾಪಿಸಿ, 'ಕೆರೆ ಮತ್ತು ಸ್ಮಶಾನ ಭೂಮಿ ಕಬಳಿಸಿರುವುದಕ್ಕೆ ದಾಖಲೆಗಳು ಬಿಡುಗಡೆ ಆಗಿವೆ. ಆ ಕುರಿತು ಚರ್ಚೆ ನಡೆಯಬೇಕು. ಸಚಿವರು ತಮ್ಮ ಕುರಿತ ಆರೋಪಕ್ಕೆ ಸದನದ ಹೊರಗೆ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಸದನದ ಒಳಗೆ ಉತ್ತರ ನೀಡಬೇಕು' ಎಂದು ಒತ್ತಾಯಿಸಿದರು.

ಅಶೋಕ ಅವರನ್ನು ಸಮರ್ಥಿಸಿ ಮಾತನಾಡಿದ ವಿ. ಸುನಿಲ್‌ಕುಮಾರ್, 'ಆರೋಪ ಬಂದಾಗ ಸಚಿವರು ಸ್ವಯಂ ಪ್ರೇರಿತರಾಗಿ ಹೇಳಿಕೆ ನೀಡಬೇಕಿತ್ತು. ಆದರೆ, ಹೊರಗೆ ಉತ್ತರ ನೀಡುತ್ತಿರುವುದು ಸರಿಯಲ್ಲ. ಕಬಳಿಕೆ ಆಗಿರುವುದು ಸರ್ಕಾರಿ ಭೂಮಿ' ಎಂದು ಹೇಳಿದರು.



ಕೃಷ್ಣ ಬೈರೇಗೌಡ

ಇದಕ್ಕೆ ಪ್ರತಿಕ್ರಿಯೆ ನೀಡಿದ ಸಚಿವ ಕೃಷ್ಣ ಬೈರೇಗೌಡ, 'ಸದನದ ಸದಸ್ಯನಾಗಿ ನನ್ನ ಹಕ್ಕು ಬಿಟ್ಟುಕೊಡಲು ಸಿದ್ಧನಿದ್ದೇನೆ. ನನ್ನ ಬಗ್ಗೆ ಎತ್ತಿರುವ ವೈಯಕ್ತಿಕ ಆರೋಪಗಳ ಬಗ್ಗೆ ಚರ್ಚೆಗೆ ಸಿದ್ಧನಿದ್ದೇನೆ. ಅಧಿವೇಶನದ ಸಂದರ್ಭದಲ್ಲಿ ಸದನದ ಸದಸ್ಯರ ಬಗ್ಗೆ ಯಾವುದೇ ವೈಯಕ್ತಿಕ ವಿಚಾರ ಪ್ರಸ್ತಾಪ ಮಾಡಬೇಕಿದ್ದರೆ ಅದಕ್ಕೊಂದು ನಿಯಮಾವಳಿ ಇದೆ. ಕನಿಷ್ಠ ವಾರಕ್ಕೂ ಮುಂಚೆಯೇ ಸದಸ್ಯರಿಗೆ ನೋಟಿಸ್ ನೀಡಬೇಕು. ಆದರೆ, ಈ ವಿಚಾರದಲ್ಲಿ ದಿಢೀರನೆ ಆರೋಪ ಮಾಡಿ ಚರ್ಚೆಗೆ ಅವಕಾಶ ಕೇಳುತ್ತಿದ್ದಾರೆ. ನನ್ನ ಮೇಲಿನ ಆರೋಪದ ಬಗ್ಗೆ ಸದನದಲ್ಲಿ ಚರ್ಚಿಸಲು ಹಾಗೂ ಉತ್ತರ ನೀಡಲು ನನ್ನದೇನೂ ಅಭ್ಯಂತರ ಇಲ್ಲ. ಈ ವಿಚಾರ ಸಭಾಧ್ಯಕ್ಷರ ವಿವೇಚನೆಗೆ ಬಿಟ್ಟದ್ದು' ಎಂದು ಹೇಳಿದರು.

ಸಭಾಧ್ಯಕ್ಷ ಯು.ಟಿ. ಖಾದರ್, ಇನ್ನೂ ಸಾಕಷ್ಟು ಮಸೂದೆಗಳು ಮಂಡನೆಗೆ ಬಾಕಿ ಇದ್ದು, ತದನಂತರ ಈ ವಿಚಾರವನ್ನು ಚರ್ಚಿಸಲು ಅವಕಾಶ ನೀಡುವುದಾಗಿ ತಿಳಿಸಿದರು.

₹6,279 ಕೋಟಿ ಪೂರಕ ಅಂದಾಜಿಗೆ ಒಪ್ಪಿಗೆ

ಈ ಸಾಲಿನ ಮಾರ್ಚ್ ಅಂತ್ಯದವರೆಗಿನ ಎರಡನೇ ಕಂತಿನ ಬೇಡಿಕೆಗಳ ಮೇಲಿನ ₹6279.80 ಕೋಟಿಗಳ ಪೂರಕ ಅಂದಾಜು ಪಟ್ಟಿಗೆ ವಿಧಾನಸಭೆ ಅನುಮೋದನೆ ನೀಡಿತು.

ಮುಖ್ಯಮಂತ್ರಿಯವರ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಪೂರಕ ಅಂದಾಜು ಪಟ್ಟಿ ಮಂಡಿಸಿದರು.

'ಈ ವರ್ಷದ ಮುಂಗಾರು ಹಂಗಾಮಿನಲ್ಲಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾದ ರೈತರ ಬೆಳೆ ಹಾನಿಗೆ ಪರಿಹಾರ ಒದಗಿಸಲು ಕೇಂದ್ರ ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿ ಮಾರ್ಗಸೂಚಿಗಿಂತಲೂ ಹೆಚ್ಚುವರಿಯಾಗಿ ಪ್ರತಿ ಹೆಕ್ಟೇರ್‌ಗೆ ₹8,500 ಪರಿಹಾರ ನೀಡಿದ್ದೇವೆ. ಈ ಹೆಚ್ಚುವರಿ ವೆಚ್ಚ ಭರಿಸಲು ₹1,015 ಕೋಟಿಯನ್ನು ಪೂರಕ ಅಂದಾಜಿನಲ್ಲಿ ಅವಕಾಶ ಮಾಡಿಕೊಡಲಾಗಿದೆ' ಎಂದು ಅವರು ವಿವರಿಸಿದರು.

ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಇತ್ತೀಚೆಗೆ ಗುಡ್ಡ ಮತ್ತು ಮಣ್ಣು ಕುಸಿತ ಆಗುತ್ತಿದೆ. ಇದನ್ನು ತಡೆಗಟ್ಟಲು ರಾಜ್ಯ ವಿಪತ್ತು ಉಪಶಮನ ನಿಧಿಗಾಗಿ ₹372 ಕೋಟಿ ಒದಗಿಸಲಾಗುತ್ತಿದೆ. ಕಬ್ಬು ಬೆಳೆಗಾರರ ಹಿತ ಕಾಯಲು ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಪ್ರತಿ ಟನ್‌ಗೆ ₹50 ನೀಡುತ್ತಿದ್ದು, ಇದಕ್ಕಾಗಿ ₹300 ಕೋಟಿ ಒದಗಿಸಲಾಗಿದೆ ಎಂದರು.

ಪರಿಷತ್ತು: 7 ಮಸೂದೆಗಳಿಗೆ ಅನುಮೋದನೆ

ವಿಧಾನಸಭೆಯಿಂದ ಅಂಗೀಕೃತ ಮತ್ತು ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ ಏಳು ಮಸೂದೆಗಳನ್ನು ವಿಧಾನ ಪರಿಷತ್ತಿನಲ್ಲಿ ಗುರುವಾರ ಮಂಡಿಸಿ, ಅನುಮೋದನೆ ಪಡೆಯಲಾಗಿದೆ.

- **ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ) ಮಸೂದೆ–2025**
- **ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ಮಸೂದೆ–2025**
- **ಕರ್ನಾಟಕ ಧನವಿನಿಯೋಗ (ಸಂಖ್ಯೆ:04) ಮಸೂದೆ–2025**
- **ಬಾಂಬೆ ಸಾರ್ವಜನಿಕ ನ್ಯಾಸ (ಕರ್ನಾಟಕ ತಿದ್ದುಪಡಿ) ಮಸೂದೆ–2025**
- **ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ಮಸೂದೆ–2025**
- **ಔಷಧ ಮತ್ತು ಪ್ರಸಾಧನ ಸಾಮಗ್ರಿ (ಕರ್ನಾಟಕ ತಿದ್ದುಪಡಿ) ಮಸೂದೆ–2025**
- **ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ಮಸೂದೆ–2025**

ಕಾರುಗಳ ಮೇಲೆ ಸೆಸ್

ಗದ್ದಲ

ಬೈಕುಗಳು ಮತ್ತು ಕಾರುಗಳ ಮೇಲೆ ವಿಧಿಸಲಾಗುವ ರಸ್ತೆ ಸುರಕ್ಷತಾ ಸೆಸ್ ವಾಪಸ್ ಪಡೆಯುವ ಸಂಬಂಧ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮಂಡಿಸಿದ 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ಮಸೂದೆ–2025' ಮೇಲಿನ ಚರ್ಚೆಯ ವೇಳೆ ವಿಧಾನ ಪರಿಷತ್ತಿನಲ್ಲಿ ಗದ್ದಲ ಏರ್ಪಟ್ಟಿತು.

'ಸೆಸ್ ವಾಪಸ್ ಪಡೆಯುವುದು ಏಕೆ' ಎಂದು ಬಿಜೆಪಿಯ ಗೋವಿಂದರಾಜು ಪ್ರಶ್ನಿಸಿದರು. ಬಿಜೆಪಿಯ ಪಿ.ಎಚ್. ಪೂಜಾರ್, 'ಈ ಸರ್ಕಾರವು ಎಲ್ಲದರ ಮೇಲೂ ತೆರಿಗೆ ಹೆಚ್ಚಳ ಮಾಡುತ್ತಲೇ ಇದೆ. ಕಾರುಗಳ ಮೇಲೆ ಇದ್ದ ಭಾರಿ ಜಿಎಸ್‌ಟಿಯನ್ನು ಕೇಂದ್ರ ಸರ್ಕಾರ ಕಡಿಮೆ ಮಾಡಿದೆ. ಅದರ ಲಾಭವನ್ನು ರಾಜ್ಯ ಸರ್ಕಾರವು ಜನರಿಗೆ ವರ್ಗಾಯಿಸದೆ, ತಾನೇ ಕೊಳ್ಳೆಹೊಡೆಯಲು ಮುಂದಾಗುತ್ತಿದೆ' ಎಂದು ಆಕ್ಷೇಪ ವ್ಯಕ್ತಪಡಿಸಿದರು. ಜೆಡಿಎಸ್‌ನ ಟಿ.ಎ.ಶರವಣ, ಭೋಜೇಗೌಡ, ಬಿಜೆಪಿಯ ರವಿಕುಮಾರ್, ಭಾರತಿ ಶೆಟ್ಟಿ ದನಿಗೂಡಿಸಿದರು.

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, 'ಕಾರುಗಳ ವಿಪರೀತ ಜಿಎಸ್‌ಟಿ ಹೇರಿ, ಲೂಟಿ ಹೊಡೆದವರು ಕೇಂದ್ರ ಸರ್ಕಾರ' ಎಂದರು. ರಮೇಶ್ ಬಾಬು, 'ರಾಷ್ಟ್ರೀಯ ಹೆದ್ದಾರಿ, ಹೆದ್ದಾರಿ ಬಳಕೆದಾರರ ಶುಲ್ಕದ ಹೆಸರಿನಲ್ಲಿ ಹತ್ತಾರು ಸಾವಿರ ಕೋಟಿ ಲೂಟಿ ಹೊಡೆದವರು ನೀವು' ಎಂದರು. ಇದಕ್ಕೆ ಬಿಜೆಪಿ ಮತ್ತು ಜೆಡಿಎಸ್‌ನ ಎಲ್ಲ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ಗದ್ದಲ ಮುಂದುವರಿಸಿದ ಕಾರಣಕ್ಕೆ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಲಾಪವನ್ನು 10 ನಿಮಿಷ ಮುಂದೂಡಿದರು.

ಕಲಾಪ ಆರಂಭವಾದ ನಂತರ ಮಸೂದೆಗೆ ಅನುಮೋದನೆ ಪಡೆಯಲಾಯಿತು.

'ಸಾರಿಗೆ ನೌಕರರ ಸಮಸ್ಯೆಗೆ ಬಿಜೆಪಿ ಹೊಣೆ'

ಸುವರ್ಣ ವಿಧಾನಸೌಧ (ಬೆಳಗಾವಿ): ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರದ ನಿರ್ಧಾರದಿಂದಾಗಿ ಸಾರಿಗೆ ನಿಗಮಗಳ ನೌಕರರಿಗೆ ನೀಡಬೇಕಿದ್ದ 38 ತಿಂಗಳ ಹೆಚ್ಚುವರಿ ವೇತನ ಬಾಕಿ ಪಾವತಿಸಲು ಸಮಸ್ಯೆಯಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಶೂನ್ಯ ವೇಳೆಯಲ್ಲಿ ಬಿಜೆಪಿಯ ಸಿ.ಟಿ.ರವಿ ಅವರ ಪ್ರಸ್ತಾವಕ್ಕೆ ಉತ್ತರ ನೀಡಿದ ಅವರು, ಶ್ರೀನಿವಾಸಮೂರ್ತಿ ನೇತೃತ್ವದ ಸಮಿತಿಯ ಶಿಫಾರಸು ಆಧಾರದಲ್ಲಿ ಹಿಂದಿನ ಬಿಜೆಪಿ ಸರ್ಕಾರ 2023ರ ಮಾರ್ಚ್ 1ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಅಧಿಸೂಚನೆ ಹೊರಡಿಸಿತ್ತು. ಮೂಲವೇತನದ ಶೇ 15ರಷ್ಟು ಪರಿಷ್ಕರಣೆ ಮಾಡಲಾಗಿತ್ತು. ಆದರೆ, ಹೆಚ್ಚುವರಿ ವೇತನ ಬಾಕಿ ಪಾವತಿಸಿರಲಿಲ್ಲ. ಹಿಂದಿನ ವೇತನ ಬಾಕಿ ಕುರಿತು ಅಂದು ಸ್ಪಷ್ಟ ಆದೇಶ ಹೊರಡಿಸದ ಕಾರಣ ಇಂದಿಗೂ ಸಮಸ್ಯೆ ಬಗೆಹರಿದಿಲ್ಲ ಎಂದರು.

ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು ಅಂದು ಸ್ಪಷ್ಟ ನಿರ್ಧಾರ ತೆಗೆದುಕೊಂಡಿದ್ದರೆ ಸಮಸ್ಯೆ ಮುಂದುವರಿಯುತ್ತಿರಲಿಲ್ಲ. ಎಂದರು.

ಚಟಿಕೆ ಸುದ್ದಿ

ಏರ್ ಇಂಡಿಯಾ ಮುಂಜಾಗ್ರತಾ ಲ್ಯಾಂಡಿಂಗ್

ಕೊಚ್ಚಿ (ಪಿಟಿಐ): ವಿಮಾನದ ಚಕ್ರಕ್ಕೆ ಹಾನಿಯಾದ್ದರಿಂದ ಜಿದ್ದಾ–ಕೊಯಿಕ್ಕೋಡ್ ನಡುವಿನ ಏರ್ ಇಂಡಿಯಾ ವಿಮಾನವನ್ನು ಗುರುವಾರ ಬೆಳಿಗ್ಗೆ ಕೊಚ್ಚಿ ವಿಮಾನ ನಿಲ್ದಾಣದಲ್ಲಿ 'ಮುಂಜಾಗ್ರತಾ ಲ್ಯಾಂಡಿಂಗ್' ಮಾಡಲಾಯಿತು.

'ವಿಮಾನದಲ್ಲಿ 160 ಪ್ರಯಾಣಿಕರಿದ್ದರು. ಜಿದ್ದಾ ವಿಮಾನ ನಿಲ್ದಾಣದಿಂದ ಟೇಕಾಫ್ ಆಗುವಾಗ ವಿಮಾನದ ಚಕ್ರಕ್ಕೆ ವಸ್ತುವೊಂದು ಬಡಿದು ಹಾನಿಯಾಯಿತು. ವಿಮಾನವನ್ನು ಕೊಚ್ಚಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪೈಲಟ್ ಸುರಕ್ಷಿತವಾಗಿ ಇಳಿಸಿದರು. ಪ್ರಯಾಣಿಕರು ರಸ್ತೆ ಮಾರ್ಗದ ಮೂಲಕ ಕೊಯಿಕ್ಕೋಡ್‌ಗೆ ಪ್ರಯಾಣ ಮುಂದುವರಿಸಿದರು' ಎಂದು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಕ್ತಾರರು ತಿಳಿಸಿದ್ದಾರೆ.

ಇದು ತುರ್ತು ಭೂಸ್ಪರ್ಶ ಅಲ್ಲ, ಮುಂಜಾಗ್ರತಾ ಲ್ಯಾಂಡಿಂಗ್. ಕೊಯಿಕ್ಕೋಡ್‌ನಲ್ಲಿ ಟೇಬಲ್ ಟಾಪ್ ವಿಮಾನ ನಿಲ್ದಾಣ ಇರುವುದರಿಂದ, ಮುನ್ನೆಚ್ಚರಿಕೆ ಕ್ರಮವಾಗಿ, ಮಾರ್ಗ ಬದಲಿಸಿ ಕೊಚ್ಚಿ ವಿಮಾನ ನಿಲ್ದಾಣದಲ್ಲಿ ವಿಮಾನವನ್ನು ಇಳಿಸಲಾಯಿತು' ಎಂದು ವಕ್ತಾರರು ಸ್ಪಷ್ಟಪಡಿಸಿದ್ದಾರೆ.

ದೇಶ ತೊರೆಯಲು 15 ಬಾಂಗ್ಲಾದೇಶಿಯರಿಗೆ ಸೂಚನೆ

ಗುವಾಹಟಿ (ಪಿಟಿಐ): ವಿದೇಶಿಯರ ನ್ಯಾಯಮಂಡಳಿಯು 'ವಿದೇಶಿಯರು' ಎಂದು ಘೋಷಿಸಿರುವ 15 ಬಾಂಗ್ಲಾದೇಶಿಯರು ಶುಕ್ರವಾರದೊಳಗೆ ಭಾರತ ತೊರೆಯಬೇಕು ಎಂದು ಅಸ್ಸಾಂನ ನಾಗಾಂವ್ ಜಿಲ್ಲಾಡಳಿತ ಗುರುವಾರ ಸೂಚಿಸಿದೆ.

ಜಿಲ್ಲಾಧಿಕಾರಿ ದೇವಶಿಶ್ ಶರ್ಮಾ ಅವರು ಡಿ.17ರಂದು ಆದೇಶ ಹೊರಡಿಸಿದ್ದು, ಆದೇಶದ ಪ್ರತಿಗಳನ್ನು ಬಾಂಗ್ಲಾದೇಶಿಯರಿಗೆ ಗುರುವಾರ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'6 ಜನ ಮಹಿಳೆಯರು ಸೇರಿ 15 ಜನರು ಬಾಂಗ್ಲಾದೇಶದಿಂದ ಬಂದು, ಭಾರತದಲ್ಲಿ ಕಾನೂನುಬಾಹಿರವಾಗಿ ನೆಲಸಿದ್ದಾರೆ' ಎಂದು ನ್ಯಾಯಮಂಡಳಿ ತನ್ನ ಆದೇಶದಲ್ಲಿ ಹೇಳಿದೆ.

ಏಕತಾ ಪ್ರತಿಮೆಯ ಶಿಲ್ಪಿ ರಾಮ್ ಸುತಾರ್ ನಿಧನ



ನವದೆಹಲಿ (ಪಿಟಿಐ): ಗುಜರಾತಿನ ಕೆವಾಡಿಯಾದಲ್ಲಿ ನಿರ್ಮಿಸಲಾಗಿರುವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 182 ಮೀಟರ್ ಎತ್ತರದ 'ಏಕತಾ ಪ್ರತಿಮೆ'ಯ ಮುಖ್ಯಶಿಲ್ಪಿ ರಾಮ್ ಸುತಾರ್ ಅವರು ಬುಧವಾರ ರಾತ್ರಿ ನಿಧನರಾದರು.

ಅವರಿಗೆ 100 ವರ್ಷ ವಯಸ್ಸಾಗಿತ್ತು, ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು.

ಸಂಸತ್ತಿನ ಆವರಣದಲ್ಲಿ ಧ್ಯಾನಸ್ಥ ಭಂಗಿಯಲ್ಲಿ ಕುಳಿತಿರುವ ಮಹಾತ್ಮ ಗಾಂಧಿ ಪ್ರತಿಮೆಯು ಅವರ ಪ್ರಮುಖ ಶಿಲ್ಪಕಲಾಕೃತಿಗಳಲ್ಲಿ ಒಂದಾಗಿದೆ. ಅಲ್ಲದೆ ಬಿ.ಆರ್.ಅಂಬೇಡ್ಕರ್, ಛತ್ರಪತಿ ಶಿವಾಜಿ ಸೇರಿದಂತೆ ದೇಶ, ವಿದೇಶಗಳಲ್ಲಿ ಪ್ರತಿಷ್ಠಾಪಿಸಲಾಗಿರುವ ಹಲವು ನಾಯಕರ ಪ್ರತಿಮೆಗಳ ಶಿಲ್ಪಿಯೂ ಅವರಾಗಿದ್ದಾರೆ.

ಮಹಾರಾಷ್ಟ್ರದ ಧುಲೆ ಜಿಲ್ಲೆಯ ಗೊಂಡೂರ್ ಗ್ರಾಮದಲ್ಲಿ 1925ರ ಫೆಬ್ರುವರಿ 19ರಂದು ಜನಿಸಿದ ಸುತಾರ್ ಅವರು ಬಾಲ್ಯದಿಂದಲೂ ಶಿಲ್ಪಕಲೆಯತ್ತ ಆಕರ್ಷಿತರಾಗಿದ್ದರು.

ನಿವೃತ್ತಿ ಅಂಚಲ್ಲೇಕೆ ಇಷ್ಟೊಂದು ಆದೇಶ?

ಕೊನೆಯ ಓವರ್‌ಗಳಲ್ಲಿ ಸಿಕ್ಸರ್ ಸಿಡಿಸುತ್ತಿರುವ ನ್ಯಾಯಾಧೀಶರು; ಸುಪ್ರೀಂ

ನವದೆಹಲಿ (ಪಿಟಿಐ): ನ್ಯಾಯಾಧೀಶರು ನಿವೃತ್ತಿ ಅಂಚಿಗೆ ಬಂದಾಗ ಹೆಚ್ಚು ಹೆಚ್ಚು ಆದೇಶಗಳನ್ನು ಹೊರಡಿಸುವ ಪ್ರವೃತ್ತಿ ಬೆಳೆಯುತ್ತಿರುವುದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ.

'ಕೊನೆಯ ಓವರ್‌ಗಳಲ್ಲಿ ಬ್ಯಾಟ್ಸ್‌ಮನ್ ಸಿಕ್ಸರ್‌ಗಳನ್ನು ಸಿಡಿಸುವಂತೆ ಇದು ನಡೆಯುತ್ತಿದೆ' ಎಂದು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ನೇತೃತ್ವದ ಪೀಠ ಅಸಮಾಧಾನ ವ್ಯಕ್ತಪಡಿಸಿತು. ಪೀಠವು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ, ವಿಪುಲ್ ಎಂ. ಪಾಂಚೋಲಿ ಅವರನ್ನೂ ಒಳಗೊಂಡಿದೆ.

ಮಧ್ಯಪ್ರದೇಶದ ಜಿಲ್ಲಾ ಪ್ರಧಾನ ನ್ಯಾಯಾಧೀಶರೊಬ್ಬರು ತಮ್ಮ ನಿವೃತ್ತಿಗೂ ಮೊದಲು ಕೆಲ ಪ್ರಶ್ನಾರ್ಹ ಆದೇಶಗಳನ್ನು ಹೊರಡಿಸಿದ್ದರು. ಈ ಕಾರಣಕ್ಕಾಗಿ ಹೈಕೋರ್ಟ್‌ನ ಪೂರ್ಣ ಪೀಠವು ಅವರನ್ನು ನಿವೃತ್ತಿಗೂ 10 ದಿನ ಮುನ್ನ ಅಮಾನತುಗೊಳಿಸಿತ್ತು. ಅದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಸಿಜೆಐ ನೇತೃತ್ವದ ಪೀಠ ವಿಚಾರಣೆ ನಡೆಸಿತು.

ಮಧ್ಯಪ್ರದೇಶದ ಈ ನ್ಯಾಯಾಧೀಶರು ನವೆಂಬರ್ 30ರಂದು ನಿವೃತ್ತಿ ಆಗಬೇಕಿತ್ತು. ಆದರೆ ನ. 19ರಂದು ಅವರನ್ನು ಅಮಾನತುಗೊಳಿಸಲಾಗಿತ್ತು. 'ಅರ್ಜಿದಾರರು ನಿವೃತ್ತಿಗೂ ಮುನ್ನ ಸಿಕ್ಸರ್‌ಗಳನ್ನು ಹೊಡೆಯಲು ಪ್ರಾರಂಭಿಸಿದರು. ಇದು ದುರದೃಷ್ಟಕರ ಪ್ರವೃತ್ತಿ. ಇದನ್ನು ಹೆಚ್ಚಿಗೆ ವಿವರಿಸಲು ಬಯಸುವುದಿಲ್ಲ' ಎಂದು ಪೀಠ ಹೇಳಿತು.

ಅರ್ಜಿದಾರರ ಪರ ಹಾಜರಾದ ಹಿರಿಯ ವಕೀಲ ವಿಪಿನ್ ಸಂಘಿ, 'ಅರ್ಜಿದಾರರು, ವಾರ್ಷಿಕ ಗೋಪ್ಯ ವರದಿಗಳಲ್ಲಿ ದೋಷರಹಿತ ಸೇವಾ ದಾಖಲೆಗಳನ್ನು ಹೊಂದಿದ್ದಾರೆ. ನ್ಯಾಯಾಂಗ ಆದೇಶಗಳನ್ನು ಹೊರಡಿಸಿದ್ದಕ್ಕಾಗಿ ನ್ಯಾಯಾಂಗದ ಅಧಿಕಾರಿಗಳನ್ನು ಶಿಸ್ತುಕ್ರಮಕ್ಕೆ ಒಳಪಡಿಸಲು ಆಗುವುದಿಲ್ಲ' ಎಂದು ವಾದಿಸಿದರು. ಅಮಾನತಿನ ಕಾನೂನು ಬದ್ಧತೆಯನ್ನು ಪ್ರಶ್ನಿಸಿದರು.

ನ್ಯಾಯಾಧೀಶರು ಹೊರಡಿಸಿದ ಆದೇಶಗಳ ವಿರುದ್ಧ ಮೇಲ್ಮನವಿ ಸಲ್ಲಿಸಬಹುದು, ಈ ಆದೇಶಗಳನ್ನು ಉನ್ನತ ನ್ಯಾಯಾಲಯಗಳು ಸರಿಪಡಿಸಬಹುದು ಎಂದೂ ಅವರು ಹೇಳಿದರು.

ತಪ್ಪಾದ ಆದೇಶಗಳಿಗೆ ನ್ಯಾಯಾಂಗದ ಅಧಿಕಾರಿ ವಿರುದ್ಧ ಸಾಮಾನ್ಯವಾಗಿ ಶಿಸ್ತು ಕ್ರಮ ತೆಗೆದುಕೊಳ್ಳುವುದಿಲ್ಲ ಎಂಬುದನ್ನು ಪೀಠ ತಾತ್ವಿಕವಾಗಿ ಒಪ್ಪಿಕೊಂಡಿತು. 'ಇದಕ್ಕಾಗಿ ಅಮಾನತುಗೊಳಿಸುವುದಿಲ್ಲ, ಆದರೆ ಆದೇಶಗಳು ಸ್ಪಷ್ಟವಾಗಿ ಅಪ್ರಾಮಾಣಿಕವಾಗಿದ್ದರೆ ಏನು ಮಾಡುವುದು?' ಎಂದು ಸಿಜೆಐ ಪ್ರಶ್ನಿಸಿದರು. ನ್ಯಾಯಾಂಗದ ದೋಷ ಮತ್ತು ದುಷ್ಕೃತ್ಯದ ನಡುವೆ ವ್ಯತ್ಯಾಸವಿದೆಯಲ್ಲ ಎಂದು ಅವರು ಇದೇ ವೇಳೆ ತಿಳಿಸಿದರು. ಈ ಕುರಿತ ಅರ್ಜಿಯನ್ನು ಪುರಸ್ಕರಿಸಲು ನಿರಾಕರಿಸಿದ ಪೀಠವು, 'ಅಮಾನತು ಆದೇಶವನ್ನು ಹಿಂಪಡೆಯಲು ಕೋರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬಹುದು' ಎಂದು ಹೇಳಿತು. ಅದನ್ನು ನಾಲ್ಕು ವಾರಗಳಲ್ಲಿ ನಿರ್ಧರಿಸುವಂತೆ ಪೀಠವು ಹೈಕೋರ್ಟ್‌ಗೆ ನಿರ್ದೇಶಿಸಿತು.

ನಿವೃತ್ತ ನ್ಯಾಯಮೂರ್ತಿಗಳಿಗೂ ಅವಕಾಶ

ನವದೆಹಲಿ (ಪಿಟಿಐ): ಹಂಗಾಮಿ ನ್ಯಾಯಮೂರ್ತಿಗಳಾಗಿ ನೇಮಕವಾಗುವ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳು ಏಕಸದಸ್ಯ ಇಲ್ಲವೇ ವಿಭಾಗೀಯ ಪೀಠದ ನೇತೃತ್ವ ವಹಿಸಬಹುದು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

'ಸುಪ್ರೀಂ' ಹೇಳಿದ್ದು

- ನಿವೃತ್ತ ನ್ಯಾಯಮೂರ್ತಿಗಳು ಏಕಸದಸ್ಯ ಪೀಠದ ನೇತೃತ್ವವಹಿಸಿಕೊಳ್ಳಲು ಅವಕಾಶ ನೀಡಬೇಕು, ವಿಭಾಗೀಯ ಪೀಠವಿದ್ದಲ್ಲಿ, ಅದರ ನೇತೃತ್ವವನ್ನು ನಿವೃತ್ತ ನ್ಯಾಯಮೂರ್ತಿಗಳಿಗೇ ವಹಿಸಬೇಕು
- ಸಂದರ್ಭಕ್ಕೆ ಅನುಗುಣವಾಗಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳು ವಿಭಾಗೀಯ ಪೀಠ ರಚಿಸಬಹುದು.

ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳ ವಿಲೇವಾರಿ ಮಾಡುವುದಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಸುಪ್ರೀಂ ಕೋರ್ಟ್ ಈ ಆದೇಶ ಹೊರಡಿಸಿದೆ. ಈ ಸಂಬಂಧ, 2021ರಲ್ಲಿ ತಾನು ನೀಡಿದ್ದ ತೀರ್ಪಿನಲ್ಲಿ ಮಾರ್ಪಾಡು ಮಾಡಿದೆ.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳನ್ನು ಹಂಗಾಮಿ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡುವ ಸಂಬಂಧ ಸದ್ಯ ಜಾರಿಯಲ್ಲಿರುವ ನೀತಿಯಲ್ಲಿ ತಿದ್ದುಪಡಿ ತರಬಹುದು ಇಲ್ಲವೇ ಸುಧಾರಣೆ ತರಬಹುದು ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಎಂ.ಪಾಂಚೋಲಿ ಅವರು ಇದ್ದ ನ್ಯಾಯಪೀಠವು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ಇದಕ್ಕೆ ಪ್ರತಿಕ್ರಿಯಿಸಿದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ, 'ಈ ಕುರಿತು ಆಂತರಿಕ ಸಮಾಲೋಚನೆ ಮೂಲಕ ಕ್ರಮ ಕೈಗೊಳ್ಳಬಹುದು. ಈ ಸಂಬಂಧ ಯಾವುದೇ ಆದೇಶ ಹೊರಡಿಸುವ ಅಗತ್ಯ ಇಲ್ಲ' ಎಂದರು. ಹೈಕೋರ್ಟ್‌ಗೆ ಮಂಜೂರಾದ ಒಟ್ಟು ಹುದ್ದೆಗಳ ಶೇ10ಕ್ಕಿಂತ ಹೆಚ್ಚು ಇರದಂತೆ, ಹಂಗಾಮಿ ನ್ಯಾಯಮೂರ್ತಿಗಳನ್ನು ನೇಮಕ ಮಾಡಲು ಹೈಕೋರ್ಟ್‌ಗಳಿಗೆ ಅನುಮತಿ ನೀಡಿ ಸುಪ್ರೀಂ ಕೋರ್ಟ್ ಜ.30ರಂದು ಆದೇಶಿಸಿತ್ತು.

'ವಿಡಿಯೊ ತೋರಿಸುತ್ತೇವೆ, ಮಾನವೀಯತೆ ಆಮೇಲೆ ಕೇಳುತ್ತೇವೆ'

ನವದೆಹಲಿ (ಪಿಟಿಐ): 'ತನ್ನ ಕೆಲವು ನಿಯಮಗಳ ಮೂಲಕ ದೆಹಲಿ ಮಹಾನಗರ ಪಾಲಿಕೆ, ಬೀದಿ ನಾಯಿಗಳೊಂದಿಗೆ 'ಅಮಾನವೀಯ' ವರ್ತನೆ ತೋರುತ್ತಿದೆ' ಎಂದು ದೂರಿ ಸಲ್ಲಿಸಲಾಗಿದ್ದ ಅರ್ಜಿಗೆ ಪ್ರತಿಕ್ರಿಯಿಸಿದ ಸುಪ್ರೀಂ ಕೋರ್ಟ್, 'ನಾವು ಕೆಲವು ವಿಡಿಯೊಗಳನ್ನು ತೋರಿಸುತ್ತೇವೆ, ಆಮೇಲೆ ನಿಮ್ಮನ್ನೇ ಕೇಳುತ್ತೇವೆ. ಮಾನವೀಯತೆ ಎಂದರೆ ಏನು ಎಂಬುದಾಗಿ' ಎಂದಿತು. 'ಈ ಅರ್ಜಿಯ ವಿಚಾರಣೆಯನ್ನು ಮೂವರು ನ್ಯಾಯಮೂರ್ತಿಗಳ ಪೀಠವು ಗುರುವಾರ ನಡೆಸಬೇಕಿತ್ತು. ಆದರೆ, ಅದು ರದ್ದಾಯಿತು' ಎಂದು ಅರ್ಜಿದಾರರ ಪರ ವಕೀಲ ಕಪಿಲ್ ಸಿಬಲ್ ಅವರು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠಕ್ಕೆ ತಿಳಿಸಿದರು. 2026ರ ಜನವರಿ 7ರಂದು ವಿಚಾರಣೆ ನಡೆಸುವುದಾಗಿ ಪೀಠ ಹೇಳಿತು.

'ಸಮಸ್ಯೆ ಏನೆಂದರೆ, ಪೀಠವು ನೀಡಿದ್ದ ನಿರ್ದೇಶನಗಳಿಗೆ ಸಂಪೂರ್ಣ ವ್ಯತಿರಿಕ್ತವಾದ ನಿಯಮಗಳನ್ನು ಪಾಲಿಕೆ ರೂಪಿಸಿದೆ. ಶುಕ್ರವಾರವೇ ಈ ಅರ್ಜಿಯ ವಿಚಾರಣೆ ನಡೆಸಿ. ಯಾಕೆಂದರೆ, ಬೀದಿ ನಾಯಿಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ಪಾಲಿಕೆ ಇದೇ ತಿಂಗಳಿನಿಂದಲೇ ಕಾರ್ಯಗತ ಮಾಡಲಿದೆ. ಆದರೆ, ಬೀದಿ ನಾಯಿಗಳಿಗೆ ಆಶ್ರಯ ತಾಣಗಳೇ ಇಲ್ಲ' ಎಂದು ಸಿಬಲ್ ವಾದಿಸಿದರು.

'ಇರಲಿ, ಸಿಬಲ್ ಅವರೆ. ಅವರು ಅವರ ಕೆಲಸ ಮಾಡಲಿ' ಎಂದು ಪೀಠ ಹೇಳಿತು. 'ಬೀದಿ ನಾಯಿಗಳಿಗೆ ಆಶ್ರಯ ತಾಣಗಳಿಲ್ಲ. ಅವುಗಳ ಮೇಲೆ ಅಮಾನವೀಯ ವರ್ತನೆ ತೋರಲಾಗುತ್ತಿದೆ' ಎಂದು ಸಿಬಲ್ ಹೇಳಿದರು.

'ಸರಿ ಹಾಗಾದರೆ, ಮುಂದಿನ ವಿಚಾರಣೆಯ ವೇಳೆ ನಾವು ನಿಮಗೆ ವಿಡಿಯೊವನ್ನು ತೋರಿಸುತ್ತೇವೆ. ಆಮೇಲೆ ನಿಮ್ಮನ್ನೇ ಕೇಳುತ್ತೇವೆ ಮಾನವೀಯತೆ ಎಂದರೆ ಏನು ಎಂಬುದಾಗಿ' ಎಂದು ಪೀಠ ಪ್ರತಿಕ್ರಿಯಿಸಿತು. 'ಏನಾಗುತ್ತಿದೆ ಎಂಬುದರ ಬಗ್ಗೆ ನಾವೂ ವಿಡಿಯೊ ತೋರಿಸುತ್ತೇವೆ' ಎಂದು ಸಿಬಲ್ ಹೇಳಿದರು. ಮುಂದಿನ ವಿಚಾರಣೆಯನ್ನು ಜ.7ಕ್ಕೆ ಮುಂದೂಡಲಾಯಿತು.

ಪ್ರಜಾವಾಣಿ ಸಾಧಕಿಯರು
ನಾಮ ನಿರ್ದೇಶನಗಳಿಗೆ ಆಹ್ವಾನ

ಪ್ರಜಾವಾಣಿ ಸಾಧಕಿಯರು

'ಪ್ರಜಾವಾಣಿ ಸಾಧಕಿಯರು' ಪ್ರಶಸ್ತಿಗೆ ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿದೆ. ತಮ್ಮ ವೃತ್ತಿ ಅಥವಾ ಪ್ರವೃತ್ತಿ ಮೂಲಕ ಸುತ್ತಲಿನ ಜನರ ಬದುಕು ಪರಿವರ್ತನೆಗೊಳ್ಳಲು, ಇನ್ನಷ್ಟು ಉತ್ತಮಗೊಳ್ಳಲು ಕಾರಣರಾದ ಅಸಾಮಾನ್ಯ ಮಹಿಳೆಯರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ನೀವು ಅಂಥವರಲ್ಲಿ ಒಬ್ಬರಾಗಿದ್ದರೆ ಅಥವಾ ನಿಮ್ಮ ಪರಿಚಿತ ವಲಯದಲ್ಲಿ ಅಂತಹ ಅಪೂರ್ವ ಮಹಿಳೆಯರು ಇದ್ದರೆ ಅವರ ವಿವರಗಳನ್ನು ನಮಗೆ ಕಳುಹಿಸಿ ಕೊಡಿ.

ವಿವರ ನಮ್ಮ ಕೈಸೇರಬೇಕಾದ ಕೊನೆಯ ದಿನಾಂಕ
ಜನವರಿ 05, 2026

ಕಳುಹಿಸಬೇಕಾದ ವಿಳಾಸ
pv@prajavani.co.in

(ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕವೂ ನಾಮ ನಿರ್ದೇಶನಗಳನ್ನು ಕಳುಹಿಸಬಹುದು)

ಹಾಸಿಗೆ ಹಿಡಿದ ಮಗನ ದಯಾಮರಣ ಕೋರಿ ಸುಪ್ರೀಂಗೆ ತಂದೆ ಅರ್ಜಿ

ನವದೆಹಲಿ (ಪಿಟಿಐ): ಕಳೆದ 12 ವರ್ಷಗಳಿಂದ ಕೋಮಾದಲ್ಲಿರುವ ಹರೀಶ್ ರಾಣಾ ಎಂಬವರಿಗೆ ನೀಡಲಾಗುತ್ತಿರುವ ಚಿಕಿತ್ಸೆ ನಿಲ್ಲಿಸಿ, ದಯಾಮರಣಕ್ಕೆ ಅನುಮತಿ ನೀಡುವಂತೆ ಕೋರಿ ರೋಗಿಯ ತಂದೆ ಅಶೋಕ್ ರಾಣಾ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಪೋಷಕರನ್ನು ಭೇಟಿ ಮಾಡುವ ಇಂಗಿತ ವ್ಯಕ್ತಪಡಿಸಿದೆ.

2013ರಲ್ಲಿ ಕಟ್ಟಡದ ನಾಲ್ಕನೇ ಹಂತದಿಂದ ಕೆಳಗೆ ಹರೀಶ್ ಬಿದ್ದಿದ್ದರು. ತಲೆಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಅಲ್ಲಿಂದ ಇಲ್ಲಿಯವರೆಗೂ ಅವರು ಕೋಮಾ ಸ್ಥಿತಿಯಲ್ಲಿಯೇ ಇದ್ದಾರೆ. ಹರೀಶ್ ಅವರ ಆರೋಗ್ಯ ಸ್ಥಿತಿಯ ಕುರಿತು ಏಮ್ಸ್‌ನ ತಜ್ಞ ವೈದ್ಯರಿದ್ದ 'ವೈದ್ಯಕೀಯ ಮಂಡಳಿ' ನೀಡಿದ ಎರಡನೇ ಹಂತದ ವರದಿಯನ್ನು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲ ಮತ್ತು ಕೆ.ವಿ. ವಿಶ್ವನಾಥನ್ ಅವರ ಪೀಠವು ಅವಲೋಕಿಸಿತು.

'ವರದಿಯನ್ನು ನೋಡಿದರೆ, ತೀವ್ರ ದುಃಖವಾಗುತ್ತದೆ. ಹರೀಶ್ ಅವರ ಪೋಷಕರನ್ನು 2026ರ ಜನವರಿ 13ರಂದು ಭೇಟಿ ಮಾಡುತ್ತೇವೆ' ಎಂದು ಪೀಠ ಗುರುವಾರ ಹೇಳಿತು. ಹರೀಶ್ ಅವರ ಆರೋಗ್ಯ ಸ್ಥಿತಿಯು ಸುಧಾರಿಸುವ ಸಾಧ್ಯತೆ ತೀರಾ ಕಡಿಮೆ ಎಂದು ಮೊದಲ ಹಂತದ ವೈದ್ಯಕೀಯ ವರದಿ ಕೂಡ ಹೇಳಿತ್ತು.

ಕರೂರು ಕಾಲ್ತುಳಿತ ಪ್ರಕರಣದ ನಂತರ ಟಿವಿಕೆಯ ಮೊದಲ ಸಾರ್ವಜನಿಕ ಸಭೆ

ಡಿಎಂಕೆ ದುಷ್ಟಶಕ್ತಿ: ವಿಜಯ್ ವಾಗ್ದಾಳಿ

ಈರೋಡ್/ತಮಿಳುನಾಡು (ಪಿಟಿಐ): ಕರೂರಿನಲ್ಲಿ ಸೆಪ್ಟೆಂಬರ್ 27ರಂದು ಸಂಭವಿಸಿದ ಕಾಲ್ತುಳಿತ ಪ್ರಕರಣದ ನಂತರ, ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಮೊದಲ ಸಾರ್ವಜನಿಕ ಸಭೆ ಗುರುವಾರ ಇಲ್ಲಿ ನಡೆಯಿತು.

ಸಭೆಯಲ್ಲಿ ಮಾತನಾಡಿದ ಟಿವಿಕೆ ಪಕ್ಷದ ಮುಖ್ಯಸ್ಥ, ನಟ ವಿಜಯ್ ಡಿಎಂಕೆ ವಿರುದ್ಧ ವಾಗ್ದಾಳಿ ನಡೆಸಿದರು. 'ತಮಿಳುನಾಡಿನಲ್ಲಿ 2026ರಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯು ಒಳಿತು ಮತ್ತು ಕೆಡುಕಿನ ನಡುವಿನ ಹೋರಾಟ. ಡಿಎಂಕೆ ನಮ್ಮ ರಾಜಕೀಯ ಶತ್ರುವಾದರೆ, ಬಿಜೆಪಿ ನಮ್ಮ ಸೈದ್ಧಾಂತಿಕ ಶತ್ರು. ಡಿಎಂಕೆಯನ್ನು ಅಧಿಕಾರದ ಸಿಂಹಾಸನದಿಂದ ಕೆಳಗಿಳಿಸಿ' ಎಂದು ಅವರು ಜನರಲ್ಲಿ ಮನವಿ ಮಾಡಿದರು.

ಮಾಜಿ ಮುಖ್ಯಮಂತ್ರಿ, ದಿವಂಗತ ಎಂಜಿಆರ್ ಮತ್ತು ಜೆ. ಜಯಲಲಿತಾ ಅವರ ಹೇಳಿಕೆಯನ್ನು ಸ್ಮರಿಸಿದ ವಿಜಯ್, ಡಿಎಂಕೆಯನ್ನು 'ದುಷ್ಟ ಶಕ್ತಿ' ಎಂದು ಕರೆದರು. 'ಡಿಎಂಕೆ ದುಷ್ಟಶಕ್ತಿಯಾದರೆ, ಟಿವಿಕೆ ಶುದ್ಧಶಕ್ತಿಯಾಗಿದೆ' ಎಂದರು.

ಡಿಎಂಕೆ ಮತ್ತು ಸಮಸ್ಯೆಗಳು ಸ್ನೇಹಿತರಿದ್ದಂತೆ. ಅವು ಒಂದೊಕ್ಕೊಂದು ಪರಸ್ಪರ ಅಂಟಿಕೊಂಡಿವೆ. ರಾಜ್ಯದ ಅರಿಶಿನ ಬೆಳೆಗಾರರ ಹಿತವನ್ನು ಡಿಎಂಕೆ ಕಡೆಗಣಿಸಿದೆ ಎಂದು ದೂರಿದರು.

ಚುನಾವಣಾ ಸಭೆಗಳಲ್ಲಿ ಸಿನಿಮಾ ಡೈಲಾಗ್ ಹೇಳುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ವಿಜಯ್, 'ಸಿ.ಎಂ. ಸರ್ (ಮುಖ್ಯಮಂತ್ರಿ ಸ್ಟಾಲಿನ್) ನಿಮ್ಮ 'ವ್ಯಕ್ತಿತ್ವ'ದ ಬಗ್ಗೆ ಹೇಳಿ' ಎಂದು ಸವಾಲೆಸೆದರು. 'ಮೊದಲು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಬೇಕು. 2026ರ ಚುನಾವಣೆಯಲ್ಲಿ ಜನರು ಈ 'ವ್ಯಕ್ತಿತ್ವ'ದ ಭವಿಷ್ಯ ನಿರ್ಧರಿಸುತ್ತಾರೆ' ಎಂದರು. ತಮಿಳು ಸಿನೆಮಾದಲ್ಲಿ 'ವ್ಯಕ್ತಿತ್ವ' ಎಂಬ ಡೈಲಾಗ್ ಜನಪ್ರಿಯವಾಗಿದೆ.

ಸಭೆಯ ಬಳಿಕ ವಿಜಯ್, ಕಾಂಚೀಪುರಂನ ಆಯ್ದ ಕೆಲವು ವ್ಯಕ್ತಿಗಳೊಂದಿಗೆ ಸಂವಾದ ನಡೆಸಿದರು.

ತಮಿಳುನಾಡಿನ ಈರೋಡ್‌ನಲ್ಲಿ ಗುರುವಾರ ನಡೆದ, ನಟ ವಿಜಯ್ ಅವರ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸಾರ್ವಜನಿಕ ಸಭೆಯಲ್ಲಿ ಸೇರಿದ್ದ ಭಾರಿ ಜನಸ್ತೋಮ – ಪಿಟಿಐ ಚಿತ್ರ

ಯತ್ನಾಳಗೆ ಸಿ.ಎಂ ಸಂವಿಧಾನದ ಪಾಠ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಆರ್ಥಿಕವಾಗಿ ದುರ್ಬಲರಾದವರಿಗೆ ಕೇಂದ್ರ ಸರ್ಕಾರ ತಂದ ಮೀಸಲಾತಿಯ ಕುರಿತು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಪ್ರಸ್ತಾಪಿಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಯತ್ನಾಳ ಮಧ್ಯೆ ವಾಕ್ಸಮರಕ್ಕೆ ಕಾರಣವಾಯಿತು. ಆಗ ಸಂವಿಧಾನದ ಪ್ರತಿಯನ್ನು ತರಿಸಿದ ಸಿದ್ದರಾಮಯ್ಯ ಅವರು ಆ ರೀತಿಯ ಮೀಸಲಾತಿ ಕೊಡಲು ಸಂವಿಧಾನದಲ್ಲಿ ಅವಕಾಶವಿಲ್ಲ ಎಂದು ಪಾಠ ಮಾಡಿದರು.

'ಮೋದಿ ಸರ್ಕಾರ ಆರ್ಥಿಕವಾಗಿ ದುರ್ಬಲರಾದವರಿಗೆ (ಇಡಬ್ಲ್ಯುಎಸ್) ಮೀಸಲಾತಿ ನೀಡಿರುವ ಬಗ್ಗೆ ಸಿದ್ದರಾಮಯ್ಯ ಪೂರ್ವಗ್ರಹ ಹೊಂದಿದ್ದಾರೆ' ಎಂದು ಯತ್ನಾಳ ಹೇಳಿದರು. 'ನೀವು ಸಂವಿಧಾನದ ಸೆಕ್ಷನ್ 15 ಮತ್ತು 16 ಓದಿದ್ದೀರಾ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದೂ ಅಲ್ಲದೇ, 'ಸಂವಿಧಾನದ ಪ್ರತಿ ತಾರಮ್ಮ' ಎಂದು ವಿಧಾನಸಭಾ ಕಾರ್ಯದರ್ಶಿಗೆ ಸೂಚಿಸಿದರು.

ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರು ಸಂವಿಧಾನದ ಪ್ರತಿ ತಂದು ಕೊಟ್ಟರು. ಅದರ ಪುಟಗಳನ್ನು ತಿರುವಿ, ಕೆಲವು ಸಾಲುಗಳನ್ನು ಓದಿದರು. ಏನೋ ತಪ್ಪುತ್ತಿದೆ ಎಂದು ಭಾವಿಸಿ ಮತ್ತೆ ಪುಟಗಳನ್ನು ತಿರುವಿ, ಮತ್ತೊಂದು ಪ್ರತಿ ತರಿಸಿ ಕಲಂ ಅನ್ನು ಓದಿದರು.

ಮುಖ್ಯಮಂತ್ರಿ ತಡವರಿಸಿದ್ದನ್ನು ಕಂಡ ಯತ್ನಾಳ, ಸಂವಿಧಾನದಲ್ಲಿ ಅವಕಾಶ ಇಲ್ಲದೇ ಇದ್ದರೂ ಮುಸ್ಲಿಮರಿಗೆ ಹೇಗೆ ಮೀಸಲಾತಿ ನೀಡಿದ್ದೀರಿ' ಎಂದು ಪ್ರಶ್ನಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಸಂವಿಧಾನದ 15(4)ನೇ ವಿಧಿ ಪ್ರಕಾರ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮಾತ್ರ ಮೀಸಲಾತಿ ಕೊಡಬೇಕು ಎಂದು ಇದೆ. ಆದರೆ, ಮೋದಿ ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತಂದು, ಆರ್ಥಿಕವಾಗಿ ದುರ್ಬಲರಾದವರಿಗೆ ಮೀಸಲಾತಿ ನೀಡಿದೆ' ಎಂದರು.

ದೆಹಲಿ ಸ್ಫೋಟ 9ನೇ ಆರೋಪಿ ಬಂಧನ

ನವದೆಹಲಿ (ಪಿಟಿಐ): ದೆಹಲಿಯ ಕೆಂಪುಕೋಟೆ ಬಳಿ ನಡೆದ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಜಮ್ಮು–ಕಾಶ್ಮೀರದ ನಿವಾಸಿಯೊಬ್ಬರನ್ನು ಬಂಧಿಸಿದೆ. ಇದರೊಂದಿಗೆ ಪ್ರಕರಣದಲ್ಲಿ ಬಂಧನಕ್ಕೀಡಾದವರ ಸಂಖ್ಯೆ 9ಕ್ಕೆ ತಲುಪಿದೆ.

ಬಂಧಿತ ವ್ಯಕ್ತಿಯನ್ನು ಶ್ರೀನಗರದ ಶೋಪಿಯಾನ್ ನಿವಾಸಿ ಯಾಸಿರ್ ಅಹ್ಮದ್ ದಾರ್ ಎಂದು ಗುರುತಿಸಲಾಗಿದೆ. ಈತ ಆತ್ಮಾಹುತಿ ಬಾಂಬರ್ ಡಾ.ಉಮರ್ ನಬಿಯ ಆಪ್ತ ಸಹಚರ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ಕನ್ನಡದಲ್ಲೂ ಪರೀಕ್ಷೆ: ಸೋಮಣ್ಣ ಸೂಚನೆ

ತ್ರಿಭಾಷೆಗೆ ಅವಕಾಶ ನೀಡದ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಇಲಾಖೆಯ ಸಿಬ್ಬಂದಿಗಾಗಿ ನಡೆಯುವ ಬಡ್ತಿ ಪರೀಕ್ಷೆಗಳಲ್ಲಿ ಕನ್ನಡಕ್ಕೆ ಅವಕಾಶ ನೀಡದೆ ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಬೇಕು ಹಾಗೂ ಕನ್ನಡವನ್ನೂ ಸೇರಿಸಿ ಮರು ಅಧಿಸೂಚನೆ ಹೊರಡಿಸಬೇಕು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಸೂಚಿಸಿದ್ದಾರೆ.

ಸ್ಥಳೀಯ ಭಾಷೆಗೆ ಅವಕಾಶ ನೀಡಬೇಕು ಎಂಬ ನಿಯಮವನ್ನು ನೈರುತ್ಯ ರೈಲ್ವೆಯ ಮೈಸೂರು ಮತ್ತು ಹುಬ್ಬಳ್ಳಿ ವಿಭಾಗ ಪಾಲಿಸಿದ್ದರೂ, ಬೆಂಗಳೂರು ವಿಭಾಗವು ಕನ್ನಡಕ್ಕೆ ಅವಕಾಶ ನೀಡದೇ ಅಧಿಸೂಚನೆ ಹೊರಡಿಸಿತ್ತು. ಇದಕ್ಕೆ ವಿರೋಧ ವ್ಯಕ್ತವಾದ ಬೆನ್ನಲ್ಲೇ ಸೋಮಣ್ಣ ಅವರು ಈ ಸೂಚನೆ ನೀಡಿದ್ದಾರೆ.

ನೈರುತ್ಯ ರೈಲ್ವೆಯ ವಿವಿಧ ವಿಭಾಗಗಳಲ್ಲಿ ಸರಕು ಸಾಗಣೆ ರೈಲಿನ ವ್ಯವಸ್ಥಾಪಕ ಹುದ್ದೆಗೆ ಪರೀಕ್ಷೆಗಳು ನಡೆಯಲಿವೆ. ಬೆಂಗಳೂರು ವಿಭಾಗದಲ್ಲಿ 317 ಹುದ್ದೆಗಳಿಗೆ, ಹುಬ್ಬಳ್ಳಿ ವಿಭಾಗದಲ್ಲಿ 101 ಹಾಗೂ ಮೈಸೂರು ವಿಭಾಗದಲ್ಲಿ 56 ಹುದ್ದೆಗಳಿಗೆ ಆಯಾ ವಿಭಾಗೀಯ ಮಟ್ಟದಲ್ಲಿ ಅರ್ಜಿಯನ್ನು ಕರೆಯಲಾಗಿದೆ.

ಅರ್ಜಿ ಸಲ್ಲಿಕೆಯ ಅವಧಿ ಮುಗಿದ ಬಳಿಕ ಕಂಪ್ಯೂಟರ್ ಆಧಾರಿತ ಲಿಖಿತ ಪರೀಕ್ಷೆಗೆ ದಿನ ನಿಗದಿ ಮಾಡಲಾಗುತ್ತದೆ.

ಪರೀಕ್ಷೆ ಬರೆಯಲು ಇಂಗ್ಲಿಷ್ ಅಥವಾ ಹಿಂದಿ ಅಥವಾ ಕನ್ನಡ ಭಾಷೆಯನ್ನು ಆಯ್ಕೆ ಮಾಡಲು ಮೈಸೂರು ಮತ್ತು ಹುಬ್ಬಳ್ಳಿ ವಿಭಾಗಗಳು ಅವಕಾಶ ನೀಡಿವೆ. ಆದರೆ, ಬೆಂಗಳೂರು ವಿಭಾಗದ ಅಧಿಸೂಚನೆಯಲ್ಲಿ ಇಂಗ್ಲಿಷ್ ಇಲ್ಲವೇ ಹಿಂದಿಯಲ್ಲಿ ಮಾತ್ರ ಉತ್ತರಿಸಬೇಕು ಎಂದು ಸೂಚಿಸಲಾಗಿದೆ.

ಕಣ್ತಪ್ಪಿನಿಂದ ಎಡವಟ್ಟು

ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಗುರುವಾರ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ಅಧಿಕಾರಿಗಳನ್ನು ಕರೆಯಿಸಿಕೊಂಡು ವಿವರಣೆ ಕೇಳಿದ್ದಾರೆ. ಕಣ್ತಪ್ಪಿನಿಂದ ಈ ರೀತಿ ಆಗಿದೆ ಎಂದು ಅಧಿಕಾರಿಗಳು ಸಮಜಾಯಿಷಿ ನೀಡಿದ್ದಾರೆ. ಕೂಡಲೇ ಇದನ್ನು ಸರಿಪಡಿಸಬೇಕು. ಕನ್ನಡ ಭಾಷೆಯಲ್ಲೂ ಪರೀಕ್ಷೆ ಬರೆಯಲು ಅವಕಾಶ ನೀಡುವ ಮೂಲಕ ಮರು ಅಧಿಸೂಚನೆ ಹೊರಡಿಸಿ ಎಂದು ಸಚಿವರು ಸೂಚಿಸಿದ್ದಾರೆ.

ಮರು ಪರೀಕ್ಷೆ ನಡೆಸಲು ಒತ್ತಾಯ

ಹದಿನೈದು ದಿನಗಳ ಹಿಂದೆ ಬೆಂಗಳೂರು ವಿಭಾಗದಲ್ಲಿ ಸ್ಟೇಷನ್ ಮಾಸ್ಟರ್ ಹುದ್ದೆ ಭರ್ತಿಗೆ ನಡೆದಿದ್ದ ಪರೀಕ್ಷೆಯಲ್ಲಿಯೂ ಕನ್ನಡ ಭಾಷೆಗೆ ಅವಕಾಶ ನೀಡಿರಲಿಲ್ಲ. ಕನ್ನಡ ವಿರೋಧಿ ಅಧಿಕಾರಿಗಳು ಕನ್ನಡ ನೌಕರರನ್ನು ತುಳಿಯಲು, ಹಿಂದಿ ನೌಕರರಿಗೆ ಬಡ್ತಿ ನೀಡಲು ಕುತಂತ್ರ ಮಾಡುತ್ತಲೇ ಇರುತ್ತಾರೆ. ಹಾಗಾಗಿ ಈ ಪರೀಕ್ಷೆಯಲ್ಲಿ ಮಾತ್ರ ಕನ್ನಡಕ್ಕೆ ಅವಕಾಶ ನೀಡುವುದಲ್ಲ. ಮುಂದೆ ಎಲ್ಲ ಪರೀಕ್ಷೆಗಳಲ್ಲಿಯೂ ಅವಕಾಶ ಇರಬೇಕು. ಈಗಾಗಲೇ ನಡೆದಿರುವ ಸ್ಟೇಷನ್ ಮಾಸ್ಟರ್ ಹುದ್ದೆಯ ಪರೀಕ್ಷೆಯನ್ನು ರದ್ದು ಮಾಡಿ ಮರು ಪರೀಕ್ಷೆ ನಡೆಸಬೇಕು ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಕನ್ನಡದ ಸಿಬ್ಬಂದಿ ಒತ್ತಾಯಿಸಿದ್ದಾರೆ.

ಎಸ್‌ಐಆರ್: ನೋಟಿಸ್ ಜಾರಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಮುಂದಿನ ಹಂತಕ್ಕೆ ಕಾಲಿಟ್ಟಿದ್ದು, ಅಹವಾಲು ಆಲಿಕೆಗಾಗಿ ನೋಟಿಸ್ ನೀಡುವ ಕೆಲಸ ಗುರುವಾರ ಆರಂಭವಾಗಿದೆ.

ಮತದಾರರ ನೋಂದಣಿ ಅಧಿಕಾರಿಗಳು (ಇಆರ್‌ಒ) ಆರಂಭಿಕ ಹಂತದಲ್ಲಿ 32 ಲಕ್ಷ ಮತದಾರರಿಗೆ ನೋಟಿಸ್ ನೀಡಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕರಡು ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಈ 32 ಲಕ್ಷ ಮತದಾರರ ವಿವರಗಳನ್ನು 2002ರ ಎಸ್‌ಐಆರ್‌ನ ದತ್ತಾಂಶದೊಂದಿಗೆ ತಾಳೆ ಹಾಕಲು ಸಾಧ್ಯವಾಗಿಲ್ಲ. ಆದ್ದರಿಂದ ಅವರ ದಾಖಲೆಗಳನ್ನು ಆಯೋಗ ಪರಿಶೀಲಿಸಲಿದೆ.

'ಇಆರ್‌ಒಗಳು ಡಿಸೆಂಬರ್ 18ರ ಬೆಳಿಗ್ಗೆಯಿಂದ ನೋಟಿಸ್ ನೀಡುವ ಪ್ರಕ್ರಿಯೆ ಆರಂಭಿಸಿದ್ದಾರೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ನೋಟಿಸ್‌ನ ಎರಡು ಪ್ರತಿಗಳನ್ನು ನೀಡಲಾಗುತ್ತದೆ. ಒಂದು ಪ್ರತಿಯನ್ನು ಸಂಬಂಧಪಟ್ಟ ಮತದಾರರಿಗೆ ಹಸ್ತಾಂತರಿಸಲಾಗುತ್ತದೆ. ಇನ್ನೊಂದು ಪ್ರತಿಯನ್ನು ಮತಗಟ್ಟೆ ಅಧಿಕಾರಿಯು ಮತದಾರರ ಸಹಿಯನ್ನು ಪಡೆದು ತಮ್ಮ ಬಳಿಯೇ ಇಟ್ಟುಕೊಳ್ಳುವರು. ನೋಟಿಸ್ ಪಡೆದ ನಂತರ ಮತದಾರರಿಗೆ ಅಧಿಕಾರಿಗಳ ಮುಂದೆ ಹಾಜರಾಗಲು ಅಲ್ಪ ಸಮಯಾವಕಾಶ ನೀಡಲಾಗುವುದು' ಎಂದಿದ್ದಾರೆ. ಜಿಲ್ಲಾಧಿಕಾರಿ ಕಚೇರಿ, ಉಪ ವಿಭಾಗಾಧಿಕಾರಿ ಕಚೇರಿ ಸೇರಿದಂತೆ ಸರ್ಕಾರಿ ಕಚೇರಿಗಳಲ್ಲಿ ಅಹವಾಲು ಆಲಿಕೆ ನಡೆಸಲಾಗುವುದು ಎಂದು ಹೇಳಿದ್ದಾರೆ.

'ಚುನಾವಣಾ ಆಯೋಗವು ತಿಳಿಸಿರುವ 11 ದಾಖಲೆಗಳನ್ನು ಪರಿಶೀಲನೆಗಾಗಿ ಸಿದ್ಧವಾಗಿಡುವಂತೆ ಅಧಿಕಾರಿಗಳು ಮತದಾರರಿಗೆ ಸಲಹೆ ನೀಡಿದ್ದಾರೆ' ಎಂದು ತಿಳಿಸಿದ್ದಾರೆ.

ನಿತಿನ್ ನಬೀನ್ ರಾಜೀನಾಮೆ

ಪಟ್ನಾ (ಪಿಟಿಐ): ಬಿಜೆಪಿ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡಿರುವ ನಿತಿನ್ ನಬೀನ್ ಅವರು ಬಿಹಾರದಲ್ಲಿ ನಿತೀಶ್ ಕುಮಾರ್ ನೇತೃತ್ವದ ಸಂಪುಟದಲ್ಲಿನ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ರಸ್ತೆ ನಿರ್ಮಾಣ, ನಗರಾಭಿವೃದ್ಧಿ ಮತ್ತು ವಸತಿ ಖಾತೆಗಳನ್ನು ಹೊಂದಿದ್ದ ನಬೀನ್ ಅವರನ್ನು ಡಿಸೆಂಬರ್ 14ರಂದು ಪಕ್ಷದ ಉನ್ನತ ಹುದ್ದೆಗೆ ನೇಮಿಸಲಾಗಿತ್ತು. ಅವರು ಡಿಸೆಂಬರ್ 16ರಿಂದ ಜಾರಿಗೆ ಬರುವಂತೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಸಂಪುಟ ಸಚಿವಾಲಯದ ಪ್ರಕಟಣೆ ತಿಳಿಸಿದೆ. ನಗರಾಭಿವೃದ್ಧಿ ಮತ್ತು ವಸತಿ ಖಾತೆಯನ್ನು ಉಪ ಮುಖ್ಯಮಂತ್ರಿ ವಿಜಯ್ ಕುಮಾರ್ ಸಿನ್ಹಾ ಅವರಿಗೆ, ರಸ್ತೆ ನಿರ್ಮಾಣ ಇಲಾಖೆಯ ಹೊಣೆಯನ್ನು ದಿಲೀಪ್ ಜೈಸ್ವಾಲ್ ಅವರಿಗೆ ವಹಿಸಲಾಗಿದೆ.

ಕಾಂಗ್ರೆಸ್ ತತ್ವ, ಸಿದ್ಧಾಂತ ಬಿತ್ತಲು ದೇಶದಲ್ಲೇ ಮೊದಲ ತರಬೇತಿ ಕೇಂದ್ರ ಘಟಪ್ರಭಾದಲ್ಲಿ

'ಸಂಘ'ದ ವಿರುದ್ಧ ಕಾಂಗ್ರೆಸ್‌ನ 'ಸಂಗಂ'

• ಚಂದ್ರಹಾಸ ಹಿರೇಮಳಲಿ

ಸುವರ್ಣ ವಿಧಾನಸೌಧ (ಬೆಳಗಾವಿ): ಹಿಂದುತ್ವವಾದದ ಮೂಲಕ ಪಕ್ಷ ಸಂಘಟನೆ ಬಲಗೊಳಿಸಿಕೊಳ್ಳುತ್ತಾ ಸಾಗಿರುವ ಸಂಘ ಪರಿವಾರ ಮತ್ತು ಬಿಜೆಪಿಗೆ ಪರ್ಯಾಯವಾಗಿ ಸಂವಿಧಾನದ ಆಶಯಗಳ ಪ್ರತಿಪಾದನೆಗೆ ಯುವಕರನ್ನು ಸಜ್ಜುಗೊಳಿಸಲು ಮುಂದಾಗಿರುವ ಕಾಂಗ್ರೆಸ್, ಬೆಳಗಾವಿ ಜಿಲ್ಲೆಯ ಘಟಪ್ರಭಾದಲ್ಲಿ ದೇಶದ ಮೊದಲ ತರಬೇತಿ ಕೇಂದ್ರವನ್ನು ಆರಂಭಿಸಲು ಮುಂದಾಗಿದೆ.

ಡಾ.ನಾ.ಸು.ಹರ್ಡೀಕರ್ ರಾಷ್ಟ್ರೀಯ ಸೇವಾದಳ ತರಬೇತಿ ಅಕಾಡೆಮಿ ಮತ್ತು ಶಿಕ್ಷಣ ಸಂಸ್ಥೆ ಹೆಸರಿನಲ್ಲಿ ತರಬೇತಿ ಕೇಂದ್ರ ಆರಂಭಿಸಲಾಗುತ್ತಿದ್ದು, ₹2 ಕೋಟಿ ವೆಚ್ಚದಲ್ಲಿ ತರಬೇತಿ ಸಭಾಂಗಣ ನಿರ್ಮಾಣ ಮಾಡಲಾಗಿದೆ. ಮೊದಲ ಹಂತದಲ್ಲಿ 'ಕಾಂಗ್ರೆಸ್ ಸೇವಾ' ತರಬೇತಿ, ರಾಷ್ಟ್ರಪ್ರೇಮ ಮೂಡಿಸಲು 'ಜೈಜಗತ್' ತರಬೇತಿ, ಎಲ್ಲರೂ ಒಂದಾಗಿ ಬಾಳುವ ಸಹಬಾಳ್ವೆ ಕಲಿಸಲು 'ಸಂಗಂ' (ಸಂಗಮ) ತರಬೇತಿ ನೀಡಲು ತಯಾರಿ ನಡೆಸಲಾಗಿದೆ. ಒಮ್ಮೆಗೆ 500ಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಲು ಸ್ಥಳಾವಕಾಶ ಕಲ್ಪಿಸಲಾಗಿದೆ. ಯುವಕ–ಯುವತಿಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆಯೂ ಇರಲಿದೆ. ತರಬೇತಿಯ ಅವಧಿಯಲ್ಲಿ ಉಚಿತ ಊಟ–ಉಪಾಹಾರವನ್ನೂ ನೀಡಲು ಕಾಂಗ್ರೆಸ್ ಮುಂದಾಗಿದೆ.

ಸಂವಿಧಾನದ ಆಶಯಗಳಾದ ಸಮಾನತೆ, ಜಾತ್ಯತೀತತೆ, ಸಮಾಜವಾದ, ಸರ್ವಧರ್ಮ ಸಮನ್ವಯ, ಸ್ವಾತಂತ್ರ್ಯ, ಭ್ರಾತೃತ್ವ, ಮಹಾತ್ಮ ಗಾಂಧೀಜಿ ಹಾಗೂ ಕಾಂಗ್ರೆಸ್ ಪಕ್ಷದ ಆಶಯ, ತತ್ವ, ಬದುಕು ಸೇರಿದಂತೆ ರಾಷ್ಟ್ರೀಯ ಮೌಲ್ಯಗಳನ್ನು ಬಿತ್ತುವ ಕೆಲಸವನ್ನು ತರಬೇತಿಯ ಅವಧಿಯಲ್ಲಿ ಮಾಡಲಾಗುತ್ತದೆ. ರಾಜ್ಯದ ವಿವಿಧ ಜಿಲ್ಲೆಯ ಜನರು ಹಾಗೂ ಹೊರ ರಾಜ್ಯದವರಿಗೂ ತರಬೇತಿ ನೀಡುವ ಉದ್ದೇಶವನ್ನು ಕೇಂದ್ರ ಹೊಂದಿದೆ.

'ಧರ್ಮ, ಹಿಂದುತ್ವದ ತಳಹದಿಯ ಮೇಲೆ ಯುವಜನರಲ್ಲಿ ಕೋಮುವಾದ ಬಿತ್ತುತ್ತಿರುವ, ಪೊಳ್ಳು ರಾಷ್ಟ್ರೀಯತೆ ಹೆಸರಲ್ಲಿ ಮತ್ತೊಂದು ಧರ್ಮ, ಜಾತಿ, ಸಮುದಾಯಗಳ ವಿರುದ್ಧ ವಿಷಬೀಜ ಬಿತ್ತುತ್ತಿರುವ, ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ವಿದ್ಯಾರ್ಥಿ ಸಮೂಹವನ್ನು ದಾರಿ ತಪ್ಪಿಸುವ ಆರ್‌ಎಸ್‌ಎಸ್, ಬಿಜೆಪಿಯ ತತ್ವ, ಸಿದ್ಧಾಂತಗಳಿಗೆ ಪರ್ಯಾಯವಾಗಿ ಭವಿಷ್ಯದ ಯುವಕರನ್ನು ಸಜ್ಜುಗೊಳಿಸುವ ತುರ್ತು ಅನಿವಾರ್ಯ ಇದೆ. ಆರ್‌ಎಸ್‌ಎಸ್ ಹಳ್ಳಿಹಳ್ಳಿಗಳಲ್ಲೂ ಕಬಂಧಬಾಹು ಚಾಚುತ್ತಿದೆ. ಇಂತಹ ಸಮಯದಲ್ಲಿ ಸಂಘಪರಿವಾರದ ಆಶಯಗಳಿಗೆ ವಿರುದ್ಧವಾಗಿ ಯುವ ಜನರಲ್ಲಿ ಜಾತ್ಯತೀತ ಮನೋಭಾವವನ್ನು ಬಿತ್ತಲು ತರಬೇತಿ ಕೇಂದ್ರ ಆರಂಭಿಸುತ್ತಿದ್ದೇವೆ' ಎನ್ನುತ್ತಾರೆ ತರಬೇತಿ ಅಕಾಡೆಮಿ ಮತ್ತು ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರೂ ಆಗಿರುವ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್.

ದೇಶದ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ಹೋರಾಟ ನಡೆಸಿದೆ. ಪಕ್ಷದ ಹಲವು ನಾಯಕರು ಹುತಾತ್ಮರಾಗಿದ್ದಾರೆ. ಸ್ವತಂತ್ರ ಭಾರತದ ಬಡತನ ನಿವಾರಣೆ, ಅಭಿವೃದ್ಧಿಗೆ ಪಕ್ಷ ಸಾಕಷ್ಟು ಕೊಡುಗೆ ನೀಡಿದೆ. ಎಂತಹ ಸಮಯದಲ್ಲೂ ಸಂವಿಧಾನದ ಆಶಯಗಳನ್ನು ಬಿಟ್ಟುಕೊಟ್ಟಿಲ್ಲ. ಆದರೆ, ಪ್ರಸ್ತುತ ಸನ್ನಿವೇಶದಲ್ಲಿ ಸೌಹಾರ್ದ ಮಾಯವಾಗುತ್ತಿದೆ. ಯುವಕರ ಮನಸ್ಸನ್ನು ಪರಿವರ್ತಿಸುವ ಅಗತ್ಯವಿದೆ ಎಂದು ಅವರು ಹೇಳಿದರು.

ಹರ್ಡೀಕರ್ ಕರ್ಮಭೂಮಿಯಲ್ಲೇ ಕೇಂದ್ರ

ಸ್ವಾತಂತ್ರ್ಯ ಹೋರಾಟಗಾರ ಡಾ.ನಾರಾಯಣ ಸುಬ್ಬರಾವ್ ಹರ್ಡೀಕರ್ ಅವರು ಭಾರತ ಸೇವಾ ದಳ ಸ್ಥಾಪಿಸಿದ್ದರು. ಕಾಂಗ್ರೆಸ್ ಪಕ್ಷಕ್ಕೆ ಹೊಸ ಸದಸ್ಯರ ಸೇರ್ಪಡೆ ಮಾಡುವಲ್ಲಿ ಈ ಘಟಕ ಮಹತ್ವದ ಪಾತ್ರ ವಹಿಸಿತ್ತು. ಸೇವಾದಳವು ಕಾಂಗ್ರೆಸ್‌ನ ಕೇಂದ್ರ ಸ್ವಯಂಸೇವಕ ಸಂಸ್ಥೆಯಾಗಿ, ಸ್ವಯಂಸೇವಕರಿಗೆ ದೈಹಿಕ ತರಬೇತಿ ನೀಡುತ್ತಾ ಕೋಮು ಸೌಹಾರ್ದವನ್ನು ಉತ್ತೇಜಿಸುತ್ತಿತ್ತು.

ಘಟಪ್ರಭಾದಲ್ಲಿ ಗಾಂಧಿ ಟೋಪಿ ಮಾದರಿಯಲ್ಲಿ ನಿರ್ಮಾಣ ಆಗಿರುವ ತರಬೇತಿ ಕೇಂದ್ರ

ಸಂಸ್ಥೆಯ ಸಂಸ್ಥಾಪಕರಾದ ಹರ್ಡೀಕರ್ ಅವರು ಘಟಪ್ರಭಾದಲ್ಲಿ ಕರ್ನಾಟಕ ಆರೋಗ್ಯ ಸಂಸ್ಥೆ ಸ್ಥಾಪಿಸಿ, ಅಲ್ಲೇ ನೆಲೆನಿಂತು ಜನರ ಸೇವೆ ಮಾಡಿದರು. ಅವರ ನಿಧನದ ನಂತರ ಕರ್ನಾಟಕ ಆರೋಗ್ಯ ಸಂಸ್ಥೆ ಆವರಣದಲ್ಲೇ ಸಮಾಧಿ ಮಾಡಲಾಗಿದೆ. ಹಾಗಾಗಿ, ಜಾತ್ಯತೀತ ಮೌಲ್ಯಗಳನ್ನು ಬಿತ್ತುವ ತರಬೇತಿ ಸಂಸ್ಥೆಯನ್ನು ಅದೇ ಆವರಣದ ಪ್ರತ್ಯೇಕ ಜಾಗದಲ್ಲಿ ಆರಂಭಿಸಲಾಗಿದೆ ಎನ್ನುತ್ತಾರೆ ಹರಿಪ್ರಸಾದ್.



ಹರಿಪ್ರಸಾದ್

ವರ್ಷಕ್ಕೆ 12 ತರಬೇತಿ ಶಿಬಿರ

ನೂತನ ತರಬೇತಿ ಕೇಂದ್ರದ ನಿರ್ಮಾಣಕ್ಕೆ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ತಮ್ಮ ಶಾಸಕರ ನಿಧಿಯಲ್ಲಿ ₹1 ಕೋಟಿಗೂ ಅಧಿಕ ಅನುದಾನ ವಿನಿಯೋಗಿಸಿದ್ದಾರೆ. ಕಾಂಗ್ರೆಸ್‌ನ ಹಲವು ಸದಸ್ಯರು ಅನುದಾನ ನೀಡಿದ್ದಾರೆ. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಮಾನವ ಬಂಧುತ್ವ ವೇದಿಕೆ ಸಾಥ್ ನೀಡುತ್ತಿದೆ. ಸುಸಜ್ಜಿತ ಸಭಾಂಗಣ, ವಸತಿ ಗೃಹಗಳು ಸೇರಿ ಹಲವು ವಿಭಾಗಗಳನ್ನು ತರಬೇತಿ ಕೇಂದ್ರದ ಸಮುಚ್ಚಯ ಒಳಗೊಂಡಿದೆ. ಪ್ರತಿ ವರ್ಷ ಕನಿಷ್ಠ 12 ತರಬೇತಿ ಶಿಬಿರಗಳನ್ನು ಆಯೋಜಿಸಲು ಸಂಘಟಕರು ನಿರ್ಧರಿಸಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–67/2997/2025–26 ದಿನಾಂಕ: 18.12.2025

ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಕೆಪಿಡಬ್ಲ್ಯುಡಿ ದರ್ಜೆ–1 (ಸಿವಿಲ್) ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲ್ಲೂಕಿನಲ್ಲಿ ಜ್ಞಾನ, ಯೋಗಕ್ಷೇಮ ಮತ್ತು ಇನೋವೇಷನ್ ಸಿಟಿ (KWIN ಸಿಟಿ)ಯ ಸ್ಥಾಪನೆ ಮಾಡುವ ಕಾಮಗಾರಿ. (ಹಂತ–1).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21.01.2026 ಸಂಜೆ 4.00 ಗಂಟೆಯವರೆಗೆ

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು, ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/4532/Zen/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ

ಸುಭಾಷಿತ

ಮನಸ್ಸೇ ಎಲ್ಲಕ್ಕೂ ಮೂಲ; ಅದನ್ನು ಸರಿಪಡಿಸದ ಹೊರತು ಇನ್ನಾವುದೂ ಸರಿಯಾಗಲಾರದು.

–ಡಿ.ವಿ. ಗುಂಡಪ್ಪ

ಸಂಪಾದಕೀಯ

ಬಾಲನ್ಯಾಯ ವ್ಯವಸ್ಥೆಯ ವೈಫಲ್ಯ ಮಕ್ಕಳ ಭವಿಷ್ಯಕ್ಕೆ ಅಡ್ಡಿಯಾಗದಿರಲಿ

ದೇಶದಲ್ಲಿನ ಬಾಲನ್ಯಾಯ ವ್ಯವಸ್ಥೆಯು ಅವ್ಯವಸ್ಥೆಯ ಗೂಡಾಗಿದೆ ಎಂಬುದನ್ನು ಈಚೆಗೆ ಬಿಡುಗಡೆ ಆಗಿರುವ 'ಇಂಡಿಯಾ ಜಸ್ಟೀಸ್ ರಿಪೋರ್ಟ್' ಹೆಸರಿನ ವರದಿಯು ಹೇಳಿದೆ. ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಮಕ್ಕಳು ವ್ಯವಸ್ಥೆಯಲ್ಲಿನ ಲೋಪಗಳಿಂದಾಗಿ ಸಂತ್ರಸ್ತರಾಗಿದ್ದಾರೆ. ಅವರನ್ನು ಸರಿಯಾಗಿ ನಡೆಸಿಕೊಳ್ಳಲಾಗುತ್ತಿಲ್ಲ, ಅವರ ಬಗ್ಗೆ ಉಪೇಕ್ಷೆ ವಹಿಸಲಾಗಿದೆ. 352 ಬಾಲನ್ಯಾಯ ಮಂಡಳಿಗಳಲ್ಲಿನ (ಜೆಜೆಬಿ) ಕಲಾಪಗಳು ವಿಳಂಬವಾಗುತ್ತಿವೆ. ಒಡಿಶಾದಲ್ಲಿನ ಜೆಜೆಬಿಯಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಪ್ರಮಾಣ ಶೇ 83ರಷ್ಟಿದೆ, ಕರ್ನಾಟಕದಲ್ಲಿ ಇದು ಶೇ 35ರಷ್ಟಿದೆ. ಬಹುತೇಕ ಜಿಲ್ಲೆಗಳಲ್ಲಿ ಈ ಮಂಡಳಿ ಇದೆಯಾದರೂ, ಅವುಗಳ ಪೈಕಿ ಶೇ 25ರಷ್ಟು ಕಡೆಗಳಲ್ಲಿ ಪೂರ್ಣಪೀಠವು ಕಾರ್ಯನಿರ್ವಹಿಸುತ್ತಿಲ್ಲ. ಪೂರ್ಣಪೀಠದಲ್ಲಿ ಒಬ್ಬರು ಮ್ಯಾಜಿಸ್ಟ್ರೇಟರು ಹಾಗೂ ಇಬ್ಬರು ಸಾಮಾಜಿಕ ಕಾರ್ಯಕರ್ತರು ಇರಬೇಕು. ಮೂರನೆಯ ಒಂದರಷ್ಟು ಮಂಡಳಿಗಳಲ್ಲಿ ಕಾನೂನು ಸೇವೆ ಒದಗಿಸುವ ಘಟಕ ಇಲ್ಲ. ಅಂಥದ್ದೊಂದು ಘಟಕ ಇರಬೇಕು ಎಂಬ ಮಾತು ಕಾನೂನಿನಲ್ಲಿದೆ. ಪ್ರತಿ ಜೆಜೆಬಿಯಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಸರಾಸರಿ ಸಂಖ್ಯೆ 151. ಹನ್ನೊಂದು ಮಂಡಳಿಗಳು ಮಾತ್ರ ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ – 2015'ರಲ್ಲಿ ಹೇಳಿರುವ ಏಳು ಕನಿಷ್ಠ ಮಾನದಂಡಗಳಿಗೆ ಅನುಗುಣವಾಗಿವೆ.

ಬಾಲನ್ಯಾಯ ಕಾಯ್ದೆಯು ಯಾವ ಬಗೆಯಲ್ಲಿ ಕೆಲಸ ಮಾಡಿದೆ ಎಂಬುದನ್ನು ಅರಿಯುವ ಉದ್ದೇಶದಿಂದ ಸಮೀಕ್ಷೆ ನಡೆಸಿ ವರದಿ ಸಿದ್ಧಪಡಿಸಲಾಗಿದೆ. ವರದಿಯಲ್ಲಿನ ಅಂಶಗಳು ಗಂಭೀರ ಸ್ವರೂಪದ ಕಳವಳಗಳನ್ನು ಮೂಡಿಸಿವೆ. ದೇಶದಾದ್ಯಂತ ಒಟ್ಟು 50 ಸಾವಿರಕ್ಕೂ ಹೆಚ್ಚು ಮಕ್ಕಳು ಮಂಡಳಿಗಳಿಂದ ನ್ಯಾಯ ಸಿಗುವುದಕ್ಕಾಗಿ ಕಾಯುತ್ತಿದ್ದಾರೆ. 28 ರಾಜ್ಯಗಳಲ್ಲಿ ನಡೆಸಿದ ಸಮೀಕ್ಷೆಯ ಮೂಲಕ ಸಂಗ್ರಹಿಸಿದ ಅಂಕಿ–ಅಂಶಗಳನ್ನು ಆಧರಿಸಿ ವರದಿಯನ್ನು ಸಿದ್ಧಪಡಿಸಲಾಗಿದೆ. ವರದಿಯಲ್ಲಿನ ವಿವರಗಳು ಪೂರ್ಣವೇನೂ ಅಲ್ಲ; ದೇಶದಲ್ಲಿ ಬಾಲನ್ಯಾಯ ಕಾಯ್ದೆಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ಕೇಂದ್ರೀಕೃತವಾದ ದತ್ತಾಂಶ ನಿರ್ವಹಣಾ ವ್ಯವಸ್ಥೆ ಇಲ್ಲ. ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳು ಬಾಲನ್ಯಾಯ ಕಾಯ್ದೆಯ ಅಡಿಯಲ್ಲಿ ವಿಚಾರಣೆ ಎದುರಿಸುವ ಸಂದರ್ಭದಲ್ಲಿ ಅಥವಾ ಅವರು ತಪ್ಪು ಮಾಡಿರುವುದು ಸಾಬೀತಾದ ನಂತರದಲ್ಲಿ ಅವರನ್ನು ಮಕ್ಕಳ ಪರಿವೀಕ್ಷಣಾ ಗೃಹಕ್ಕೆ ಕಳುಹಿಸಲಾಗುತ್ತದೆ. ಇಂತಹ ಕೇಂದ್ರಗಳ ಪಾಲನೆಯು ಚೆನ್ನಾಗಿ ಆಗುತ್ತಿಲ್ಲ, ಇಂತಹ ಇನ್ನಷ್ಟು ಕೇಂದ್ರಗಳ ಅಗತ್ಯವೂ ಇದೆ. ಇವುಗಳಿಗೆ ಅಗತ್ಯ ಸಂಖ್ಯೆಯಲ್ಲಿ ವೈದ್ಯಕೀಯ ಸಿಬ್ಬಂದಿಯ ನೇಮಕ ಆಗಿಲ್ಲ. ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಮಕ್ಕಳಿಗೆ ನ್ಯಾಯ ಕೊಡಿಸುವ, ತಪ್ಪು ಮಾಡಿದ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಹಾಗೂ ಅವರಿಗೆ ಸಂಬಂಧಿಸಿದ ಪ್ರಕರಣಗಳನ್ನು ನಿಭಾಯಿಸುವ ಇಡೀ ವ್ಯವಸ್ಥೆಯು ಇನ್ನಷ್ಟು ಸೌಲಭ್ಯಗಳಿಗೆ ಕಾಯುತ್ತಿದೆ.

ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳು ವ್ಯವಸ್ಥೆಯಲ್ಲಿನ ಲೋಪಗಳಿಂದ ತೊಂದರೆಗೆ ಸಿಲುಕಿದ್ದಾರೆ. ಬಾಲನ್ಯಾಯ ವ್ಯವಸ್ಥೆಯ ವೈಫಲ್ಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು.

ದೇಶವು ತನ್ನ ಮಕ್ಕಳನ್ನು ಹೇಗೆ ನಡೆಸಿಕೊಳ್ಳುತ್ತಿದೆ ಎಂಬುದನ್ನು ಗಮನಿಸಿ ಅಲ್ಲಿನ ಕಾನೂನು ವ್ಯವಸ್ಥೆ ಮತ್ತು ಸಂಸ್ಕೃತಿಯನ್ನು ತೀರ್ಮಾನಿಸಬಹುದು ಎಂಬ ಮಾತೊಂದು ಇದೆ. ಕಾನೂನು ಸಂಘರ್ಷಕ್ಕೆ ಗುರಿಯಾದ ಮಕ್ಕಳ ವಿಚಾರದಲ್ಲಿ ಪ್ರಭುತ್ವವು ಇನ್ನಷ್ಟು ಹೆಚ್ಚು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಿದೆ. ಪರಿವೀಕ್ಷಣಾ ಕೇಂದ್ರಗಳಲ್ಲಿ ಇರುವ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿದೆ, ಅವರಿಗೆ ನ್ಯಾಯವು ಸಕಾಲದಲ್ಲಿ ಸಿಗುತ್ತಿದೆ ಎಂಬುದನ್ನು ಸರ್ಕಾರ ಖಾತರಿಪಡಿಸಬೇಕು. ಮಕ್ಕಳಿಗೆ ನ್ಯಾಯದಾನ ವಿಳಂಬವಾದರೆ, ಅವರನ್ನು ಪರಿವೀಕ್ಷಣಾ ಕೇಂದ್ರಗಳಲ್ಲಿ ಸರಿಯಾಗಿ ನೋಡಿಕೊಳ್ಳದೆ ಇದ್ದರೆ, ಅದರಿಂದ ಊಹೆಗೂ ನಿಲುಕದಂತಹ ಕೆಟ್ಟ ಪರಿಣಾಮಗಳು ಉಂಟಾಗಬಹುದು. ಕಾನೂನು ಪಾಲನಾ ವ್ಯವಸ್ಥೆಯು ಮಕ್ಕಳನ್ನು ನೋಡಿಕೊಳ್ಳಬೇಕಿರುವ ವಿಧಾನವೇ ಬೇರೆ, ಆ ವ್ಯವಸ್ಥೆಯು ಮಕ್ಕಳು ಸಮಾಜದ ಜೊತೆ ಪುನಃ ಬೆರೆಯುವಂತೆ ಆಗಲು ನೆರವಾಗಬೇಕು ಎಂಬ ಕಾರಣದಿಂದಾಗಿ ಅವರಿಗಾಗಿ ಪ್ರತ್ಯೇಕ ಕಾನೂನು ರಚಿಸಲಾಯಿತು. ಆದರೆ ಈ ಉದ್ದೇಶ ಸಾಧನೆಯಲ್ಲಿ ಬಾಲನ್ಯಾಯ ವ್ಯವಸ್ಥೆಯು ಸೋಲುತ್ತಿರುವುದನ್ನು ವರದಿಯು ಹೇಳುತ್ತಿದೆ. ವರದಿಯಲ್ಲಿನ ಅಂಶಗಳು, ಸಮಸ್ಯೆಗಳು ಉಂಟು ಮಾಡಿರುವ ಸಾಮಾಜಿಕ ಪರಿಣಾಮಗಳನ್ನು ಅರ್ಥ ಮಾಡಿಕೊಂಡು ಪರಿಣಾಮಕಾರಿಯಾಗಿ ಸ್ಪಂದಿಸಬೇಕು ಎಂಬುದನ್ನು ಸೂಚಿಸುತ್ತಿವೆ.

ಜಾಲತಾಣ

ಕನ್ನಡಿಗರು ಬೇಡವೆ?

ಇಂಡಿಯಾ ಒಕ್ಕೂಟದ ಪ್ರಧಾನಮಂತ್ರಿ ನರೇಂದ್ರ ಮೋದಿಯವರೇ, ನಿಮಗೆ ಕನ್ನಡಿಗರ ತೆರಿಗೆ ದುಡ್ಡು ಬೇಕು, ಕನ್ನಡದಲ್ಲಿ ರೈಲ್ವೆ ಪರೀಕ್ಷೆ ನಡೆಸಲು ಆಗುವುದಿಲ್ಲವೆ? ಕನ್ನಡಿಗರು ಇಂಡಿಯಾ ಒಕ್ಕೂಟಕ್ಕೆ ಬೇಡವೆ?

ಅರುಣ್ ಜಾವಗಲ್, ಕನ್ನಡ ಕಾರ್ಯಕರ್ತ, 'ಎಕ್ಸ್'ನಿಂದ

ಕಿಡಿನುಡಿ

'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ– 2025' ಕರಾಳ ಮಸೂದೆಯಾಗಿದೆ. ತುರ್ತು ಪರಿಸ್ಥಿತಿ ಹೇರಿ ಇಡೀ ದೇಶವನ್ನೇ ಕಾರಾಗೃಹಗಳನ್ನಾಗಿ ಮಾಡಿ ದೇಶದ ಜನತೆಯ ಧ್ವನಿ ಕಸಿದುಕೊಂಡ ಪಕ್ಷದಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ?

ಎಸ್. ಸುರೇಶ್‌ಕುಮಾರ್, ಶಾಸಕ

25 ವರ್ಷಗಳ ಹಿಂದೆ

ಮಂಗಳವಾರ, 19-12-2000

• ಅಂಚೆ ಮುಷ್ಕರ ಪೂರ್ಣ ಅಂತ್ಯ

ನವದೆಹಲಿ, ಡಿ. 18 (ಪಿಟಿಐ): ಅಂಚೆ ನೌಕರರ ಪ್ರಮುಖ ಸಂಘಟನೆಯು ಇಂದು ಮುಷ್ಕರ ಹಿಂತೆಗೆದುಕೊಳ್ಳಲು ನಿರ್ಧರಿಸಿದ್ದರಿಂದ ಹದಿಮೂರು ದಿನಗಳ ಸಂಪು ಪೂರ್ಣವಾಗಿ ಅಂತ್ಯಗೊಂಡಂತಾಯಿತು.

ಈಗಾಗಲೇ, ಎರಡು ಒಕ್ಕೂಟಗಳು ಭಾನುವಾರ ರಾತ್ರಿ ಮುಷ್ಕರವನ್ನು ಅಂತ್ಯಗೊಳಿಸಿದ್ದವು. ಅಂಚೆ ನೌಕರರಲ್ಲಿ ಶೇ 70ರಷ್ಟು ಬೆಂಬಲ ಹೊಂದಿರುವ ಅಂಚೆ ನೌಕರರ ರಾಷ್ಟ್ರೀಯ ಒಕ್ಕೂಟ (ಎನ್‌ಎಫ್‌ಪಿಇ), ಕೇಂದ್ರ ಸಂಪರ್ಕ ಖಾತೆ ಸಚಿವ ರಾಂ ವಿಲಾಸ್ ಪಾಸ್ವಾನ್ ಅವರ ಜತೆ ನಿನ್ನೆ ರಾತ್ರಿ ಉಳಿದೆರಡು ಸಂಘಟನೆಗಳು ಮಾಡಿಕೊಂಡಿದ್ದ ಒಪ್ಪಂದದ ಬಗೆಗೆ ಅತೃಪ್ತಿ ವ್ಯಕ್ತಪಡಿಸಿತ್ತು. ಆದರೆ, ಸಂಜೆ ತನ್ನ ನಿರ್ಧಾರ ಬದಲಾಯಿಸಿ ನಾಳೆಯಿಂದ ಕೆಲಸಕ್ಕೆ ಹಾಜರಾಗಲು ಇಂದು ಸಂಜೆ ನಿರ್ಧರಿಸಿತು.

• ಚನ್ನಪಟ್ಟಣದಲ್ಲಿ ಪ್ರತಿಭಟನೆ

ಚನ್ನಪಟ್ಟಣ, ಡಿ. 18– ಒಕ್ಕಲಿಗರ ಹಿತರಕ್ಷಣಾ ಸಮಿತಿ ಕಾರ್ಯಕರ್ತರು ಚನ್ನಪಟ್ಟಣದಲ್ಲಿಂದು ನಡೆಸಿದ ಪ್ರತಿಭಟನೆ ವೇಳೆಯಲ್ಲಿ ಕಲ್ಲುತೂರಾಟ ನಡೆದಾಗ ಪೊಲೀಸರು ಲಾಠಿ ಪ್ರಹಾರ ನಡೆಸಿ ಅಶ್ರುವಾಯು ಪ್ರಯೋಗಿಸಿದರು. ಕಲ್ಲು ತೂರಾಟದಲ್ಲಿ ಹತ್ತಕ್ಕೂ ಹೆಚ್ಚು ಪೊಲೀಸರಿಗೆ ಗಾಯಗಳಾಗಿವೆ. ಅಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ ಬಿಗುವಿನಿಂದ ಕೂಡಿದೆ.

ಪ್ರತಿಭಟನೆ ಪರಿಣಾಮ ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಬೆಳಿಗ್ಗೆ ಹತ್ತು ಗಂಟೆಯಿಂದ ಮಧ್ಯಾಹ್ನ ಮೂರು ಗಂಟೆವರೆಗೆ ವಾಹನ ಸಂಚಾರ ತೀವ್ರ ಅಸ್ತವ್ಯಸ್ತವಾಗಿತ್ತು. ಪ್ರತಿಭಟನೆಯ ಹಿನ್ನೆಲೆ, ರಾಮನಗರದಲ್ಲಿ ಕನಕಪುರ ಮಾರ್ಗವಾಗಿ ಹಾಗೂ ಮದ್ದೂರಿನಲ್ಲಿ ಮಳವಳ್ಳಿ ಮಾರ್ಗದ ಮೂಲಕ ಪೊಲೀಸರು ಸಂಚಾರ ಮಾರ್ಗವನ್ನು ಬದಲಿಸಿದರು.

75 ವರ್ಷಗಳ ಹಿಂದೆ

ಮಂಗಳವಾರ, 19-12-1950

• ಚುನಾವಣಾ ಸಂಬಂಧ ಮಸೂದೆ ಅಂಬೇಡ್ಕರರಿಂದ ಮಂಡನೆ

ನವದೆಹಲಿ, ಡಿ. 18– ಚುನಾವಣೆಗಳ ಕಾರ್ಯ ನಿರ್ವಾಹ ಮತ್ತು ತತ್ಸಂಬಂಧ ಕಲಾಪಗಳನ್ನು ನಿರ್ದೇಶಿಸುವ ಮಸೂದೆಯನ್ನು ನ್ಯಾಯಾಂಗ ಸಚಿವ ಡಾ. ಬಿ.ಆರ್. ಅಂಬೇಡ್ಕರ್ ಇಂದು ಪಾರ್ಲಿಮೆಂಟ್‌ನಲ್ಲಿ ಮಂಡಿಸಿದರು.

163 ಪ್ರಕರಣಗಳಿರುವ ಇದಕ್ಕೆ, 'ಜನತಾ ಪ್ರಾತಿನಿಧ್ಯ (ಸಂಖ್ಯೆ 2) ಮಸೂದೆ–1950' ಎಂದು ಹೆಸರು.

ಪಾರ್ಲಿಮೆಂಟ್ ಮತ್ತು ಸಂಸ್ಥಾನದ ಶಾಸನಸಭೆಗಳ ಸದಸ್ಯತ್ವದ, ಅರ್ಹತೆ, ಅನರ್ಹತೆ, ಚುನಾವಣೆಗಳ ನಿರ್ವಾಹ, ಚುನಾವಣೆಗೆ ಸಂಬಂಧಿಸಿದ ಕೃತ್ರಿಮ ಹಾಗೂ ಅಕ್ರಮ ನಡವಳಿಕೆ ಇತ್ಯಾದಿ ಅಪರಾಧಗಳು, ಚುನಾವಣೆ ತಕರಾರು ವಿಚಾರಿಸುವ ಪಂಚಾಯಿತಿಗಳು– ಈ ಪ್ರಶ್ನೆಗಳನ್ನು ಈ ಮಸೂದೆ ಬಿಡಿಸಿದೆ.

ಝೆನ್ ಜೀ ಕೋಟ್ಯಧಿಪತಿಗಳು!

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಕ್ರಿಕೆಟ್ ಮೂಲಕ ಬದುಕು ಕಟ್ಟಿಕೊಳ್ಳುವ ಬಡ ಹಾಗೂ ಮಧ್ಯಮ ವರ್ಗದ ತರುಣರಿಗೆ 'ಐಪಿಎಲ್' ಲಾಟರಿಯಂತೆ ಕಾಣಿಸುತ್ತದೆ. ಒಮ್ಮೆಗೇ ಕೋಟ್ಯಂತರ ರೂಪಾಯಿ ದೊರಕಿಸಿಕೊಡುವ ಅಂಗಳವಾಗಿದೆ. ಆದರೆ, ಹಣವಷ್ಟೇ ಆಟಗಾರನಿಗೆ ಸಾಕೆ? ದೇಶದ ಕ್ರಿಕೆಟ್ ಪರಂಪರೆಯ ಭಾಗವಾಗುವುದು ಬೇಡವೆ?

ಕ್ರಿಕೆಟ್ ಅಂಗಳಕ್ಕಿಳಿಯುವ ಬಹುತೇಕ ಆಟಗಾರರಿಗೆ 'ಟೆಸ್ಟ್ ಕ್ಯಾಪ್' ಎಂಬುದು ಕನಸಿನ ಕಿರೀಟವಿದ್ದಂತೆ. ಅದರಲ್ಲೂ ಆಸ್ಟ್ರೇಲಿಯಾ, ಇಂಗ್ಲೆಂಡ್, ಭಾರತ, ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಪ್ರತಿನಿಧಿಸಿ, ಈ 'ಉಣ್ಣೆಯ ಟೋಪಿ' ಧರಿಸುವುದು ಜೀವಮಾನದ ಸಾಧನೆಯೇ ಹೌದು. ಕ್ರಿಕೆಟ್ ಆಟವನ್ನು ಆರಾಧಿಸುವ ಭಾರತದಲ್ಲಿ ಇದುವರೆಗೆ ಟೆಸ್ಟ್ ಕ್ಯಾಪ್ ಧರಿಸಲು ಸಾಧ್ಯವಾಗಿರುವುದು 318 ಜನರಿಗೆ ಮಾತ್ರ!

1932ರಲ್ಲಿ ಮೊದಲ ಟೆಸ್ಟ್ ಆಡಿದ ಕರ್ನಲ್ ಸಿ.ಕೆ. ನಾಯ್ಡು ನಾಯಕತ್ವದ ಭಾರತ ತಂಡದ ಅಮರಸಿಂಗ್ ಅವರಿಂದ ಶುರುವಾಗಿ, ಇತ್ತೀಚೆಗೆ ಇಂಗ್ಲೆಂಡ್‌ನಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ಪದಾರ್ಪಣೆ ಮಾಡಿದ ಅನ್ಷುಲ್ ಕಂಬೋಜ್ ಅವರವರೆಗೂ ಈ ಪಟ್ಟಿ ಬೆಳೆಯುತ್ತದೆ. ಟೆಸ್ಟ್ ಕ್ಯಾಪ್ ಧರಿಸುವ ಕಠಿಣ ಹಾದಿಯನ್ನೂ ಈ ಯಾದಿ ಪ್ರತಿಬಿಂಬಿಸುತ್ತದೆ. ದೊಡ್ಡ ಕ್ರಿಕೆಟಿಗರಾಗುವ ಕನಸು ಕಾಣುತ್ತ ಮೈದಾನಕ್ಕೆ ಬರುವ ಎಷ್ಟು ಜನರಿಗೆ ಈ ಅವಕಾಶ ಸಿಗಲು ಸಾಧ್ಯ?

19 ವರ್ಷಗಳ ಹಿಂದೆ ಭಾರತದಲ್ಲಿ ಜನ್ಮತಳೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಿಂದಾಗಿ ಈಗ ಕ್ಯಾಪ್ ಧರಿಸದ ತಲೆಗಳಿಗೂ ಕೋಟಿ ಕೋಟಿ ಬೆಲೆ ಬಂದಿದೆ. ಈಚೆಗೆ ನಡೆದ 2026ರ ಐಪಿಎಲ್ ಟೂರ್ನಿಯ ಬಿಡ್ ಪ್ರಕ್ರಿಯೆಯ ಪಟ್ಟಿಯನ್ನೇ ತೆಗೆದು ನೋಡಿ; 33 ಅನ್‌ಕ್ಯಾಪ್ಡ್ (ರಾಷ್ಟ್ರೀಯ ತಂಡವನ್ನು ಇನ್ನೂ ಪ್ರತಿನಿಧಿಸದ) ಆಟಗಾರರು ದೊಡ್ಡ ಮೊತ್ತ ಪಡೆದು ಬೇರೆ ಬೇರೆ ತಂಡಗಳಲ್ಲಿ ಸ್ಥಾನ ಗಿಟ್ಟಿಸಿದ್ದಾರೆ. ಇದರಲ್ಲಿ 'ಝೆನ್ ಜೀ' ಪ್ರತಿಭೆಗಳದ್ದೇ (1997ರ ನಂತರದಲ್ಲಿ 2012ಕ್ಕೆ ಮೊದಲು ಜನಿಸಿದವರು) ಮೇಲುಗೈ. ಕಾಶ್ಮೀರದಿಂದ ಕೇರಳದವರೆಗಿನ ಪ್ರತಿಭೆಗಳು ಇದರಲ್ಲಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಮತ್ತು ಮಧ್ಯಮವರ್ಗದ ಮಕ್ಕಳು ಕೋಟ್ಯಧಿಪತಿಗಳಾಗಿ ರೂಪುಗೊಳ್ಳುತ್ತಿದ್ದಾರೆ.

ಈ ಬಾರಿ ತಲಾ ₹14.20 ಕೋಟಿ ಗಳಿಸಿ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಸೇರ್ಪಡೆಯಾದ ಉತ್ತರಪ್ರದೇಶದ ಪ್ರಶಾಂತ್ ವೀರ್ ಮತ್ತು ರಾಜಸ್ಥಾನದ ಕಾರ್ತಿಕ್ ಶರ್ಮಾ ಅವರೇ ಇದಕ್ಕೆ ಉತ್ತಮ ನಿದರ್ಶನ.

ಅಮೇಥಿಯ 20 ವರ್ಷದ ಹುಡುಗ ಪ್ರಶಾಂತ್ ವೀರ್ ಅವರ ತಂದೆ ಶಿಕ್ಷಕರು. ಅವರಿಗೆ ಸಿಗುತ್ತಿದ್ದದ್ದು ತಿಂಗಳಿಗೆ ₹12 ಸಾವಿರ ಸಂಬಳವಷ್ಟೇ. ಪ್ರಶಾಂತ್ ಅವರ ಅಜ್ಜನ ಪಿಂಚಣಿ ಹಣ ಮತ್ತು ಅಪ್ಪನ ಅಲ್ಪ ಆದಾಯದಲ್ಲಿ ಐವರು ಸದಸ್ಯರ ಸಂಸಾರ ನಡೆಯಬೇಕು. ಪ್ರಶಾಂತ್ ಕ್ರಿಕೆಟ್ ಆಸಕ್ತಿಯನ್ನು ಗಮನಿಸಿದ ಅಜ್ಜ ತಮ್ಮ ಪಿಂಚಣಿಯಲ್ಲಿಯೇ ಒಂದಿಷ್ಟು ಸಹಾಯ ಮಾಡುತ್ತಿದ್ದರು. ಆದರೆ, ಅಜ್ಜ ತೀರಿಹೋದಾಗ ಪ್ರಶಾಂತ್ ಆಟ ಅಂತ್ಯವಾಗುವ ಆತಂಕ ಎದುರಾಯಿತು. ಉತ್ತರಪ್ರದೇಶದಲ್ಲಿರುವ ಕ್ರಿಕೆಟ್ ತರಬೇತಿ ಹಾಸ್ಟೆಲ್ ಸೇರಲು ಎರಡೂವರೆ ಸಾವಿರ ರೂಪಾಯಿಯೂ 14 ವರ್ಷದ ಪ್ರಶಾಂತ್ ಬಳಿ ಇರಲಿಲ್ಲ. ಆಗ ಪಾನ್ ಬೀಡಾ ಅಂಗಡಿ ನಡೆಸುತ್ತಿದ್ದ ಗೆಳೆಯನೊಬ್ಬ ಪ್ರಶಾಂತ್ ಕೈಹಿಡಿದ. ತನ್ನ ಪರಿಚಯದ ಕೋಚ್ ಬಳಿ ಸೇರಿಸಿದ.

ಪ್ರಶಾಂತ್ ಎಡಗೈ ಆಲ್‌ರೌಂಡರ್ ಆಗಿ ರೂಪುಗೊಂಡರು. ರವೀಂದ್ರ ಜಡೇಜ ಅವರ ಆಟದ ಪಡಿಯಚ್ಚಿನಂತೆ ಬೆಳೆದ ಪ್ರಶಾಂತ್, ಈಚೆಗೆ ನಡೆದ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿಯ ಏಳು ಪಂದ್ಯಗಳಲ್ಲಿ 169 ರನ್ ಗಳಿಸಿದರು. 6 ವಿಕೆಟ್‌ಗಳನ್ನೂ ಪಡೆದರು. ಯುಪಿ ಟಿ20 ಪ್ರೀಮಿಯರ್ ಲೀಗ್‌ನಲ್ಲಿ ನೋಯ್ಡಾ ಸೂಪರ್ ಕಿಂಗ್ಸ್ ತಂಡದಲ್ಲಿ ಆಡಿ 320 ರನ್ ಕಲೆಹಾಕಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್ ತಂಡದಿಂದ ರವೀಂದ್ರ ಜಡೇಜ ಅವರನ್ನು ಈಚೆಗೆ ಬಿಡುಗಡೆ ಮಾಡಲಾಗಿತ್ತು. ಅವರ ಸ್ಥಾನ ತುಂಬಬಲ್ಲ ಲಕ್ಷಣಗಳನ್ನು ಪ್ರಶಾಂತ್ ಅವರಲ್ಲಿ ಕಂಡಿರುವ ಚೆನ್ನೈ ದುಬಾರಿ ಬೆಲೆ ತೆತ್ತು ಖರೀದಿಸಿತು. ಪ್ರತಿವರ್ಷವೂ ಅನುಭವಿ ಆಟಗಾರರನ್ನು ಖರೀದಿಸಿ 'ಡ್ಯಾಡೀಸ್ ಆರ್ಮಿ' ಎಂದು ಕರೆಸಿಕೊಳ್ಳುತ್ತಿದ್ದ ಚೆನ್ನೈ ತಂಡ ಈ ಸಲ ಚಿಗುರುಮೀಸೆ ಹುಡುಗರಿಗೆ ಆದ್ಯತೆ ನೀಡಿದೆ.

ರಾಜಸ್ಥಾನದ ಭರತಪುರದ ಹುಡುಗ ಕಾರ್ತಿಕ್ ಶರ್ಮಾ ವಿಕೆಟ್‌ಕೀಪರ್–ಬ್ಯಾಟರ್. ಅವರನ್ನು ಕ್ರಿಕೆಟ್ ಆಟಗಾರನನ್ನಾಗಿ ಬೆಳೆಸಲು ತಂದೆ ಮನೋಜ್ ಶರ್ಮಾ ಮತ್ತು ತಾಯಿ ರಾಧಾ ಪಟ್ಟ ಕಷ್ಟಗಳು ಒಂದೆರಡಲ್ಲ. ಪಿತ್ರಾರ್ಜಿತ ಸಣ್ಣ ನಿವೇಶನ, ಮನೆಯಲ್ಲಿದ್ದ ಒಡವೆಗಳನ್ನೆಲ್ಲ ಮಾರಿ ಕಾರ್ತಿಕ್‌ಗೆ ತರಬೇತಿ ಕೊಡಿಸಿದರು. ಟೂರ್ನಿಗಳಿಗೆ ಕರೆದುಕೊಂಡು ಹೋಗಲೂ ಸಾಲ ಮಾಡುತ್ತಿದ್ದರು. ದಾರಿ ಬದಿಯ ಶೆಲ್ಟರ್‌ನಲ್ಲಿ ಮಲಗಿ, ಉಪವಾಸವಿದ್ದು ಕಳೆದ ರಾತ್ರಿಗಳೂ ಹಲವು. ಈ ಕಷ್ಟಗಳ ನಡುವೆಯೂ ಅಪಾರ ಶ್ರದ್ಧೆಯಿಂದ ಕ್ರಿಕೆಟ್ ಕಲಿತ ಕಾರ್ತಿಕ್, 19ನೇ ವಯಸ್ಸಿಗೇ ರಣಜಿ ತಂಡದಲ್ಲಿ ಸ್ಥಾನ ಪಡೆದಿದ್ದು ದೊಡ್ಡ ಸಾಧನೆಯೇ ಸರಿ. ಇದೀಗ ದಿಗ್ಗಜ ಮಹೇಂದ್ರಸಿಂಗ್ ಧೋನಿಯೊಂದಿಗೆ ಚೆನ್ನೈ ತಂಡದಲ್ಲಿ ಆಡುವ ಸುಯೋಗ ಲಭಿಸಿದೆ. ಅಂದಹಾಗೆ, ಪ್ರಶಾಂತ್ ಮತ್ತು ಕಾರ್ತಿಕ್ ಅವರಿಗೆ ಐಪಿಎಲ್ ಬಿಡ್‌ನಲ್ಲಿ ₹30 ಲಕ್ಷ ಮೂಲಬೆಲೆ ನಿಗದಿಯಾಗಿತ್ತು. ಪ್ರಮುಖ ತಂಡಗಳ ನಡುವೆ ಬಿಡ್ ಪೈಪೋಟಿ ಏರ್ಪಟ್ಟು ದೊಡ್ಡ ಬೆಲೆ ಲಭಿಸಿದೆ.

'ಹಾಲಿ ಚಾಂಪಿಯನ್' ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವೂ ಈ ಬಾರಿ ಇಂತಹದೊಂದು ಮಹತ್ವದ ಹೆಜ್ಜೆ ಇಟ್ಟಿತು. 24 ವರ್ಷದ ಎಡಗೈ ಮಧ್ಯಮವೇಗಿ ಮಂಗೇಶ್ ಯಾದವ್ ಅವರನ್ನು ₹5.2 ಕೋಟಿಗೆ ಸೆಳೆದುಕೊಂಡಿತು. ಯಾರ್ಕರ್ ಎಸೆತಗಳನ್ನು ಹಾಕುವಲ್ಲಿ ಮಂಗೇಶ್ ಚಾಣಾಕ್ಷರಾಗಿದ್ದಾರೆ. ಮಧ್ಯಪ್ರದೇಶ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಅವರು ಒಟ್ಟು 21 ಓವರ್ ಬೌಲಿಂಗ್ ಮಾಡಿ 14 ವಿಕೆಟ್ ಗಳಿಸಿದ್ದರು. ಆರ್‌ಸಿಬಿ ತನ್ನ ಬೌಲಿಂಗ್ ವಿಭಾಗವನ್ನು ಬಲಿಷ್ಠ ಮಾಡುವ ಇರಾದೆಯೊಂದಿಗೆ ದೊಡ್ಡ ಮೊತ್ತ ಕೊಟ್ಟು ಖರೀದಿಸಿದೆ. ಆದರೆ, ಆರ್‌ಸಿಬಿ ಈ ಬಾರಿಯೂ ಕರ್ನಾಟಕದ ಪ್ರತಿಭೆಗಳತ್ತ ಒಲವು ತೋರಿಲ್ಲವೆಂಬುದೂ ದಿಟ.

ಕಳೆದ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮಿಂಚಿದ್ದ ಕುಡ್ಲದ ಹುಡುಗ ಯಶ್ ರಾಜ್ ಪೂಂಜಾ ಐಪಿಎಲ್‌ನಲ್ಲಿ ಆಡಲಿದ್ದಾರೆ. ಲೆಗ್‌ಸ್ಪಿನ್– ಆಲ್‌ರೌಂಡರ್ ಆಗಿರುವ ಪೂಂಜಾ ಅವರನ್ನು ರಾಜಸ್ಥಾನ ರಾಯಲ್ಸ್ ಮೂಲಬೆಲೆಗೆ ಸೆಳೆದುಕೊಂಡಿದೆ. ಹೋದ ವರ್ಷ 14 ವರ್ಷದ ವೈಭವ್ ಸೂರ್ಯವಂಶಿಯನ್ನು ಸೇರಿಸಿಕೊಂಡು ಸುದ್ದಿ ಮಾಡಿದ್ದ ರಾಜಸ್ಥಾನ, ಈ ಬಾರಿ 19ರ ಹರೆಯದ ಯಶ್‌ರಾಜ್‌ಗೆ ಮಣೆ ಹಾಕಿದೆ. ಬಾಲ್ಯದಲ್ಲಿ ವೇಗದ ಬೌಲರ್ ಆಗಲು ಪ್ರಯತ್ನಿಸಿದ್ದ ಯಶ್ ರಾಜ್ ಶೈಲಿ ಅಷ್ಟೇನೂ ಸರಿಯಿರಲಿಲ್ಲ. ಆದ್ದರಿಂದ ಸ್ಪಿನ್ನರ್ ಆಗಿ ಪರಿವರ್ತನೆಗೊಂಡರು. ಕಳೆದ ಸಲ ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಫೈನಲ್ ತಲುಪಿದ್ದ ಹುಬ್ಬಳ್ಳಿ ಟೈಗರ್ಸ್ ತಂಡದಲ್ಲಿ ಆಡಿದ್ದ ಯಶ್, 23 ವಿಕೆಟ್ ಕಬಳಿಸಿದ್ದರು. ಕೋಚ್ ಯರೇಗೌಡ, ಆರ್. ವಿನಯಕುಮಾರ್ ಮತ್ತು ಮನ್ಸೂರ್ ಅಲಿ ಖಾನ್ ಅವರ ಶೋಧ ಈ ಪ್ರತಿಭೆ.

ಡೆಲ್ಲಿ ಕ್ಯಾಪಿಟಲ್ಸ್ ತಂಡದಿಂದ ₹8.2 ಕೋಟಿ ಗಳಿಸಿ ಸೇರ್ಪಡೆಯಾದ ಕಾಶ್ಮೀರದ ಅಕೀಬ್ ನಬಿ ಧಾರ್ ಅವರದ್ದು ಇನ್ನೊಂದು ಬಗೆಯ ಕತೆ. ತಂದೆ ಗುಲಾಂ ನಬಿ ಶಾಲಾ ಶಿಕ್ಷಕರು. ಭಯೋತ್ಪಾದನೆ ಮತ್ತಿತರ ಕಾನೂನುಬಾಹಿರ ಚಟುವಟಿಕೆಗಳಿಂದ ಮಕ್ಕಳನ್ನು ರಕ್ಷಿಸಿಕೊಂಡು ಬೆಳಸುವುದು ಪಾಲಕರಿಗೆ ದೊಡ್ಡ ಸವಾಲು. ಮಗ ಕ್ರಿಕೆಟಿಗನಾಗಿ ಉತ್ತಮ ಹೆಸರು ಮಾಡಲಿ ಎಂಬ ಆಸೆ ತಂದೆಯದ್ದಾಗಿತ್ತು. ಅದಕ್ಕೆ ತಕ್ಕಂತೆ ಬಲಗೈ ವೇಗದ ಬೌಲರ್ ಆಗಿ ಹೆಸರು ಮಾಡಿದ ಅಕೀಬ್, 29ನೇ ವಯಸ್ಸಿನಲ್ಲಿ ಐಪಿಎಲ್ ಆಡಲು ಸಿದ್ಧರಾಗಿದ್ದಾರೆ. ಇದುವರೆಗೆ ಅವರಿಗೆ ಭಾರತ ತಂಡದಲ್ಲಿ ಆಡುವ ಅವಕಾಶ ಲಭಿಸಿಲ್ಲ. ಆ ನಿರಾಸೆ ಮಾಯವಾಗಲು ಐಪಿಎಲ್ ಆಯ್ಕೆ ಕಾರಣವಾಗಿದೆ.

ಈ ಬಾರಿಯ ಐಪಿಎಲ್ ಬಿಡ್‌ನಲ್ಲಿ ಕೋಟ್ಯಧಿಪತಿಗಳಾಗಿ ಹೊರಹೊಮ್ಮಿರುವ ಮುಕುಲ್ ಚೌಧರಿ, ಅಕ್ಷತ್ ರಘುವಂಶಿ, ನಮನ್ ತಿವಾರಿ, ಸಲೀಲ್ ಅರೋರಾ, ತೇಜಸ್ವಿ ಸಿಂಗ್ ಅವರೂ ತಮ್ಮ ಪ್ರತಿಭೆಯನ್ನು ಜಗತ್ತಿಗೆ ತೋರುವ ಉತ್ಸಾಹದಲ್ಲಿದ್ದಾರೆ. ಆ ಮೂಲಕ ರಾಷ್ಟ್ರೀಯ ತಂಡಕ್ಕೂ ಲಗ್ಗೆ ಹಾಕುವ ಹುಮ್ಮಸ್ಸಿನಲ್ಲಿದ್ದಾರೆ. ಈ ಹಿಂದೆ ಹೈದರಾಬಾದಿನ ರಿಕ್ಷಾ ಚಾಲಕನ ಮಗ ಮೊಹಮ್ಮದ್ ಸಿರಾಜ್ ಅವರು ಐಪಿಎಲ್‌ಗೆ ₹2.4 ಕೋಟಿ ಪಡೆದು ಆಯ್ಕೆಯಾದರು. ನಂತರ ಅವರು ಭಾರತ ಟೆಸ್ಟ್ ಕ್ರಿಕೆಟ್ ತಂಡದ ಪ್ರಮುಖ ಬೌಲರ್ ಆಗಿ ರೂಪುಗೊಂಡಿದ್ದಾರೆ. ಎಲ್ಲ ಮಾದರಿಗಳಲ್ಲಿಯೂ ಛಾಪು ಮೂಡಿಸಿದ್ದಾರೆ. ಯುವ ಆಟಗಾರರಿಗೆ ಅವರು ಮಾದರಿ.

ಎಳೆಯ ವಯಸ್ಸಿನ ಹುಡುಗರು ಕೋಟ್ಯಂತರ ಹಣ ಪಡೆಯುತ್ತಿರುವುದು ಒಂದು ರೀತಿಯಲ್ಲಿ ಸಂತಸ ಮೂಡಿಸಿದರೂ, ಇನ್ನೊಂದು ರೀತಿಯಲ್ಲಿ ಆತಂಕವನ್ನೂ ಮೂಡಿಸುತ್ತದೆ. ಪರಿಪಕ್ವತೆ ಮತ್ತು ಅನುಭವವಿಲ್ಲದ ವಯಸ್ಸಿನಲ್ಲಿ ಇಷ್ಟೊಂದು ಹಣ ಅವರ ದಾರಿ ತಪ್ಪಿಸಬಹುದೆಂಬ ಆತಂಕ ಕಾಡುವುದು ಸಹಜ. ಆದರೆ, ತಾವು ಕ್ರಿಕೆಟ್ ಆಟವನ್ನು ಆಯ್ಕೆ ಮಾಡಿಕೊಂಡಾಗ ಹಣಗಳಿಕೆಯ ಜೊತೆಗೆ ವಿಶ್ವದರ್ಜೆಯ ಆಟಗಾರನಾಗುವ ಕನಸು ಕಂಡಿದ್ದನ್ನು ಮರೆಯಬಾರದು. ಏಕೆಂದರೆ; ಅಂತಹ ಹಲವು ವಿಶ್ವದರ್ಜೆಯ ದಿಗ್ಗಜರಿಂದಾಗಿಯೇ ಇವತ್ತು ದೇಶದ ಕ್ರಿಕೆಟ್ ಶ್ರೀಮಂತವಾಗಿದೆ. ಆ ಪರಂಪರೆಯನ್ನು ಮುಂದುವರಿಸುವ ಹೊಣೆಯು ತಮ್ಮ ಮೇಲಿದೆ ಎಂಬುದನ್ನು ಅರಿತು 'ಅನ್‌ಕ್ಯಾಪ್ಡ್'ನಿಂದ 'ಕ್ಯಾಪ್ಡ್' ಆಟಗಾರರಾಗುವತ್ತ ಚಿತ್ತ ಹರಿಸಬೇಕಲ್ಲವೇ?

ವಾಚಕರ ವಾಣಿ

ಕೈದಿಗಳಿಗೆ ರಾಜಾತಿಥ್ಯ: ಪೊಲೀಸ್ ವೈಫಲ್ಯ

ಸಮಾಜದಲ್ಲಿ ತಪ್ಪು ಎಸಗಿದವರಿಗೆ ಶಿಕ್ಷೆವಿಧಿಸಿ ಕಾರಾಗೃಹಕ್ಕೆ ಕಳುಹಿಸಲಾಗುತ್ತದೆ. ಆದರೆ, ಕಾರಾಗೃಹಗಳಲ್ಲಿ ಅಪರಾಧಿಗಳಿಗೆ ರಾಜಾತಿಥ್ಯ ಲಭಿಸುತ್ತಿರುವುದು ವಿಪರ್ಯಾಸ. ಜೈಲಿನಲ್ಲಿರುವ ಉಗ್ರರ ಕೈಯಲ್ಲಿ ಮೊಬೈಲ್, ರೌಡಿಗಳ ಹುಟ್ಟುಹಬ್ಬ ಆಚರಣೆಯ ಸುದ್ದಿ ಓದಿದಾಗ ಸರ್ಕಾರವು ಕಾರಾಗೃಹಗಳ ನಿರ್ವಹಣೆಯಲ್ಲಿ ಎಡವಿರುವುದು ಸ್ಪಷ್ಟ. ಕೈದಿಗಳ ಜೊತೆಗೆ ಪೊಲೀಸರು ಕೈಜೋಡಿಸಿದ್ದಾರೆಯೇ ಎಂಬ ಅನುಮಾನ ಕಾಡದಿರದು. ಮತ್ತೊಂದೆಡೆ, ಅಪರಾಧ ಜಗತ್ತಿನೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಹಲವು ಪೊಲೀಸರು ಅಮಾನತುಗೊಂಡಿದ್ದಾರೆ. ಕೆಳಹಂತದ ಸಿಬ್ಬಂದಿಯ ಮೇಲೆ ನಿಗಾವಹಿಸುವುದರಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ನಿರ್ಲಕ್ಷ್ಯವಹಿಸಿರುವುದಕ್ಕೆ ಈ ಪ್ರಕರಣಗಳು ನಿದರ್ಶನವಾಗಿವೆ

ಗಗನ್ ಗುಂಡ್ಲಪಲ್ಲಿ, ಬಾಗೇಪಲ್ಲಿ

ಪುಕ್ಕಟೆ ಸಂಭಾವನೆ: ಬೊಕ್ಕಸ ಬರಿದು

'ಬೌದ್ಧ ಬಿಕ್ಕುಗಳಿಗೂ ಸಂಭಾವನೆ' ಸುದ್ದಿ ಓದಿ ಅಚ್ಚರಿಯಾಯಿತು. ಸಂವಿಧಾನದ ಪ್ರಕಾರ ಸರ್ಕಾರಗಳು, ಯಾವುದೇ ಮತ–ಧರ್ಮದ ಜೊತೆ ಗುರುತಿಸಿಕೊಳ್ಳ ಕೂಡದು. ಆದರೆ, ದೇವಾಲಯದ ಪೂಜಾರಿಗಳಿಗೆ, ಮಸೀದಿಯ ಇಮಾಮರಿಗೆ ಸರ್ಕಾರಗಳು ಸಂಭಾವನೆ ನೀಡುತ್ತಿರುವುದು ಸೋಜಿಗ. ಇದು ಸಾರ್ವಜನಿಕರು ಬೆವರು ಸುರಿಸಿ ಗಳಿಸಿ ಪಾವತಿಸುವ ತೆರಿಗೆ ಹಣವಲ್ಲವೆ? ಇದಕ್ಕೆ ಬದಲಾಗಿ ಮಕ್ಕಳಿಗೆ ಶಿಕ್ಷಣ, ರೈತರ ಬೆಳೆಗೆ ಸೂಕ್ತ ಬೆಲೆ, ಹೆಣ್ಣುಮಕ್ಕಳಿಗೆ ಶೌಚಾಲಯ ನಿರ್ಮಿಸಿದರೆ ಇಡೀ ಸಮಾಜ ಲಾಭ ಪಡೆಯುತ್ತದೆ. ಪಿತ್ರಾರ್ಜಿತವಾದ ಕಸುಬುಗಳಿಗೆ ಸರ್ಕಾರಿ ಬೊಕ್ಕಸ ಬಳಕೆ ಅಸಮಂಜಸ.

ಬಿ.ಆರ್. ಅಣ್ಣಾಸಾಗರ, ಸೇಡಂ

ನಿರುದ್ಯೋಗ: ಯುವಸಂಪತ್ತು ನಾಶ

ಪದವಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಐಎಎಸ್, ಐಪಿಎಸ್‌ನಂತಹ ಹುದ್ದೆಗೇರುವ ಹಂಬಲ ಇರುತ್ತದೆ. ಕೆಎಎಸ್ ಪರೀಕ್ಷೆ ಬರೆಯುವ ಆಸೆಯೂ ಇರುತ್ತದೆ. ಇದಕ್ಕಾಗಿ ಸ್ಪರ್ಧಾಲೋಕಕ್ಕೆ ಕಾಲಿಟ್ಟು ಪರೀಕ್ಷೆಗೆ ಕಠಿಣ ತಯಾರಿ ನಡೆಸುತ್ತಾರೆ. ಹುಟ್ಟಿದ ಊರು ಬಿಟ್ಟು, ಮಹಾನಗರ ಪ್ರದೇಶಗಳಲ್ಲಿರುವ ಕೋಚಿಂಗ್ ಕೇಂದ್ರಗಳಿಗೆ ಸೇರುತ್ತಾರೆ. ಲಕ್ಷಾಂತರ ರೂಪಾಯಿ ವ್ಯಯಿಸುತ್ತಾರೆ. ಆದರೆ, ಸರ್ಕಾರ ಕಾಲಕಾಲಕ್ಕೆ ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸುತ್ತಿಲ್ಲ. ಸರಿಯಾದ ರೀತಿಯಲ್ಲಿ ಪರೀಕ್ಷೆ ನಡೆಸದೆ ಹಗರಣಗಳ ನೆಪವೊಡ್ಡಿ ವಿದ್ಯಾರ್ಥಿಗಳ ಜೀವನದೊಂದಿಗೆ ಚೆಲ್ಲಾಟವಾಡುತ್ತಿದೆ. ಕೆಲಸ ಸಿಗದ ವಿದ್ಯಾರ್ಥಿಗಳು ಮರಳಿ ಊರಿಗೆ ಹೋಗಲಾರದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇದು ಸರ್ಕಾರ ಹಾಗೂ ಭ್ರಷ್ಟ ಅಧಿಕಾರಿಗಳ ಅಸಡ್ಡೆಗೆ ಹಿಡಿದ ಕನ್ನಡಿ. ಸರ್ಕಾರ ಈಗಲಾದರೂ ಎಚ್ಚೆತ್ತುಕೊಳ್ಳದಿದ್ದರೆ ಯುವಸಂಪತ್ತು ತನ್ನಿಂದ ತಾನೇ ನಾಶವಾಗುತ್ತದೆ.

ಕೃತಿಕಾ ಎಸ್.ವೈ., ಬೆಂಗಳೂರು

ಚುನಾವಣೆ ವಿಳಂಬ: ಜನತಂತ್ರದ ಕಗ್ಗೊಲೆ

ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿ ಮೂಲಕ ಅಧಿಕಾರ ವಿಕೇಂದ್ರೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಸಂವಿಧಾನದ 243(ಇ) ವಿಧಿಯ ಪ್ರಕಾರ, ಸ್ಥಳೀಯ ಸಂಸ್ಥೆಗಳಿಗೆ ಸಕಾಲಕ್ಕೆ ಚುನಾವಣೆ ನಡೆಸುವುದು ರಾಜ್ಯಗಳ ಜವಾಬ್ದಾರಿ. ಆದರೆ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಅಧಿಕಾರಾವಧಿ ಪೂರ್ಣಗೊಂಡು ನಾಲ್ಕೂವರೆ ವರ್ಷ ಕಳೆದರೂ ಚುನಾವಣೆ ನಡೆಸದಿರುವುದು ದುರದೃಷ್ಟಕರ. ಚುನಾವಣೆ ನಡೆಸಲು ಕೇಂದ್ರ ಮತ್ತು ರಾಜ್ಯ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷ್ಯ ವಹಿಸಿವೆ. ಸ್ಥಳೀಯ ಸರ್ಕಾರಗಳ ಅಧಿಕಾರವನ್ನು ಮೊಟಕುಗೊಳಿಸುವ ಹುನ್ನಾರ ಇದರ ಹಿಂದಿದೆ ಎನಿಸುತ್ತದೆ. ಇದು ಪ್ರಜಾಪ್ರಭುತ್ವದ ಕಗ್ಗೊಲೆ.

ಮಹೇಶ ಕೇವಂಟಗಿ ಕುಮಸಿ, ಕಲಬುರಗಿ

'ಬಯಲಾಟ' ನೆಲ ಸಂಸ್ಕೃತಿಯ ಪ್ರತೀಕ

ಸೊರಬ ತಾಲ್ಲೂಕಿನಲ್ಲಿ 'ಬಯಲಾಟ' ಉಳಿಸಲು ನಡೆಯುತ್ತಿರುವ ಪ್ರಯತ್ನಗಳಿಗೆ ಸಮಕಾಲೀನ ಸಂದರ್ಭದಲ್ಲಿ ವಿಶೇಷ ಮಹತ್ವವಿದೆ. ಡಿಜೆ ಸಂಗೀತದ ಅಬ್ಬರ ಮತ್ತು ಮೊಬೈಲ್ ಗೀಳಿನ ನಡುವೆ ನೆಲದ ಜೀವಂತಿಕೆಯಾದ ಬಯಲಾಟ ನೇಪಥ್ಯಕ್ಕೆ ಸರಿಯುತ್ತಿರುವುದು ಕನ್ನಡಿಗರೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ವಿಚಾರ. ಕೇವಲ ಮನರಂಜನೆಯ ಸಾಧನವಾಗಿ ನೋಡದೆ, ನೈತಿಕ ಮೌಲ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸುವ ರಂಗಭೂಮಿಯ ಮೂಲ ಪ್ರಕಾರವನ್ನು ರಕ್ಷಿಸುವುದು ನಮ್ಮೆಲ್ಲರ ಹೊಣೆ. ಸರ್ಕಾರವು ಇಂತಹ ಕಲಾಪ್ರಕಾರಗಳಿಗೆ ಅನುದಾನ ಒದಗಿಸಬೇಕು. ಶಾಲೆ–ಕಾಲೇಜುಗಳಲ್ಲಿ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಬೇಕಿದೆ.

ನಿರಂಜನ್ ಎಚ್.ಬಿ., ಸಾಗರ

ಮನರಂಜನಾ ತಂಡಗಳಿಗೆ ಕಡಿವಾಣ ಹಾಕಿ

ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿ ಮ್ಯೂಸಿಕ್ ಮೈಲಾರಿ ಎಂಬಾತನ ಬಂಧನವಾಗಿದೆ. ಉತ್ತರ ಕರ್ನಾಟಕದ ಬಹುತೇಕ ಕಡೆಗಳಲ್ಲಿ ಮದುವೆ, ನಿಶ್ಚಿತಾರ್ಥ, ನಾಮಕರಣ ಸೇರಿದಂತೆ ಶುಭ ಕಾರ್ಯಕ್ರಮಗಳಲ್ಲಿ ಹಾಡು–ನೃತ್ಯಗಾರರ ತಂಡಗಳನ್ನು ಕರೆಸುವುದು ವಾಡಿಕೆ. ಈ ಬೇಡಿಕೆ ಪೂರೈಸಲು ಗಲ್ಲಿಗಲ್ಲಿಗಳಲ್ಲಿ ಹಾಡುಗಾರರ ತಂಡಗಳು ಹುಟ್ಟಿಕೊಂಡಿವೆ. ವಿಚಿತ್ರ ಎಂದರೆ ಇವರ್‍ಯಾರು ಸಂಗೀತ, ನೃತ್ಯ ಕಲಿತವರಲ್ಲ! ಜಾನಪದದ ಹೆಸರಿನಲ್ಲಿ ಚಲನಚಿತ್ರ ಗೀತೆಗಳ ಕರೋಕೆಯಲ್ಲಿ (ಟ್ರ್ಯಾಕ್) ತಮ್ಮದೇ ರಚನೆಯ ದ್ವಂದ್ವಾರ್ಥ– ಅಶ್ಲೀಲ ಸಾಹಿತ್ಯ ರಚಿಸಿ ಹಾಡುತ್ತಾರೆ. ಈ ಹಾಡುಗಳ ನೃತ್ಯಕ್ಕೆ ಹೆಣ್ಣುಮಕ್ಕಳನ್ನು ಬಳಸಿಕೊಳ್ಳುತ್ತಾರೆ. ಕಾರ್ಯಕ್ರಮಕ್ಕಾಗಿ ತಂಡ ಕಟ್ಟಿಕೊಂಡು ಊರೂರು ಸುತ್ತುವ ಈ ಹಾಡುಗಾರರ ತಂಡದಲ್ಲಿರುವ ಹೆಣ್ಣುಮಕ್ಕಳ ರಕ್ಷಣೆಯ ಹೊಣೆಗಾರಿಕೆ ಯಾರದು?

ಸಮೀರ ಹಾದಿಮನಿ, ಆಲಮೇಲ

ಚುರುಮುರಿ

ಜಿ ರಾಮ್ ಜೀ..!

• ಬಿ.ಎನ್. ಮಲ್ಲೇಶ್

'ಅಲ್ಲ, ನರೇಗಾ ಯೋಜನೆ ಹೆಸರಲ್ಲಿದ್ದ ಮಹಾತ್ಮ ಗಾಂಧಿ ಹೆಸರು ತೆಗೆದು ಹಾಕೋದು ತಪ್ಪಲ್ವಾ?' ಹರಟೆಕಟ್ಟೆಯಲ್ಲಿ ದುಬ್ಬೀರ ಆಕ್ಷೇಪಿಸಿದ.

'ಅದೂ... ಗಾಂಧಿ ಹೆಸರು ತೆಗೆದು ರಾಮನ ಹೆಸರು ಹಾಕ್ತಾರಂತೆ. ಹೆಂಗೂ ಗಾಂಧಿಗೆ ರಾಮ ಅಂದ್ರೆ ಬಾಳ ಭಕ್ತಿಯಲ್ವಾ? ಸಾಯೋವಾಗ 'ಹೇ ರಾಮ್' ಅನ್ಲಿಲ್ವಾ?' ಚಾದಂಗಡಿ ಮಂಜಮ್ಮ ಸಮರ್ಥಿಸಿಕೊಂಡಳು.

'ನಿನ್ತಲಿ, ಗಾಂಧಿ ರಾಮನೇ ಬೇರೆ, ನಿಮ್ ಕಮಲ ಪಕ್ಷದ ರಾಮನೇ ಬೇರೆ. ನೀವು ಜಿ ರಾಮ್ ಜಿ ಅಂತ ಮಾಡ್ಕಂಡ್ರೆ ನಾವು ನಮ್ ರಾಜ್ಯದಲ್ಲಿ 'ಎಸ್ ರಾಮ್ ಜಿ' ಅಂತ ಮಾಡ್ಕಂತೀವಿ...' ಗುಡ್ಡೆಗೆ ಸಿಟ್ಟು ಬಂತು.

'ಎಸ್ ರಾಮ್ ಜಿ' ಅಂದ್ರೆ?'

'ಸಿದ್ದರಾಮ್ ಜಿ ಅಂತ... ಅಷ್ಟೇ ಅಲ್ಲ, ರಾಜಭವನಕ್ಕೆ ಲೋಕಭವನ ಅಂತಾನೂ ಹೆಸರಿಡಲ್ಲ, ಏನ್ ಮಾಡ್ಕಂತೀರಿ?'

'ಕೇಂದ್ರದ ಅನುದಾನ ನಿಲ್ಲಿಸ್ತೀವಿ, ಆಗೇನ್ಮಾಡ್ತೀರಿ?'

'ಈಗೇನ್ ಕೊಡ್ತಾ ಇದೀರಾ? ಎಷ್ಟ್ ಕೊಟ್ಟಿದೀರಿ?'

'ನೀವೂ ಗೃಹಲಕ್ಷ್ಮಿ ಹಣ ಎರಡು ತಿಂಗಳು ಕೊಟ್ಟಿದೀರಾ?' ಮಂಜಮ್ಮಗೂ ಸಿಟ್ಟು ಬಂತು.

'ಏಯ್, ನಿಮ್ ಜಗಳ ಸಾಕು, ಬೇರೇನರೆ ಮಾತಾಡ್ರಿ, ಅದ್ಯಾರೋ ಮೆಸ್ಸಿ ಅಂತಲ್ಲ, ಅವನ ಜತಿ ಫೋಟೊ ತೆಗೆಸ್ಕಳಾಕೆ ಹತ್ತು ಲಕ್ಷ ರೂಪಾಯಂತೆ ಹೌದಾ?' ಎಂದು ದುಬ್ಬೀರ ಮಾತು ಬದಲಿಸಿದ.

'ಅವ್ನು ವರ್ಲ್ಡ್ ಫೇಮಸ್ ಫುಟ್ಬಾಲ್ ಆಟಗಾರ. ಬಾಳ ಚೆನ್ನಾಗಿ ಬಾಲ್ ಒದೀತಾನೆ...' ತೆಪರೇಸಿ ಹೇಳಿದ.

'ಅಲ್ಲ, ಅವನ ಕೈ ಕುಲುಕೋಕೆ ಒಂದು ಕೋಟಿ ರೂಪಾಯಂತೆ?' ಕೊಟ್ರೇಶಿಗೆ ಆಶ್ಚರ್ಯ.

'ಲೇಯ್, ಅದ್ಯಾವ ದೊಡ್ಡ ವಿಷ್ಯಲೆ? ಅವ್ನು ಕೈ ಕುಲುಕೋಕೆ ಒಂದು ಕೋಟಿ ತಗಂಡಿರಬೋದು, ನಮ್ ಎಮ್ಮೆಲ್ಲೆಗಳು ಅವರು ಗೆದ್ದ ಪಕ್ಷಕ್ಕೆ 'ಕೈ ಕೊಡೋಕೆ' ₹50ರಿಂದ ₹60 ಕೋಟಿ ತಗಂಡಿಲ್ವಾ? ತಗಂಡು ಬೇರೆ ಪಕ್ಷ ಸೇರ್ಕಂಡಿಲ್ವಾ?' ಗುಡ್ಡೆ ವಾದಿಸಿದ.

'ಯೂ ಆರ್ ಎಜ್ಯಾಟ್ ಲೀ ಕರೆಕ್ಟ್ ಗುಡ್ಡೆಜೀ' ಎಂದ ಕೊಟ್ರ.

ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ರಾಜ್ಯಕ್ಕೆ ಪರ್ಯಾಯ ರಾಜಕಾರಣ ಬೇಡವೆ?

ಭ್ರಷ್ಟಾಚಾರವೇ 'ಕನಿಷ್ಠ ಸಾಮಾನ್ಯ ಕಾರ್ಯಕ್ರಮ' ಆಗಿರುವ ಪಕ್ಷಗಳಿಂದ ಜನಹಿತ ಅಸಾಧ್ಯ. ರಾಜ್ಯದ ಹಿತಕ್ಕಾಗಿ 'ಪರ್ಯಾಯ ರಾಜಕಾರಣ' ಈ ಹೊತ್ತಿನ ಅಗತ್ಯ.

• ಪ್ರಕಾಶ ಕೆ.

ಪರ್ಯಾಯ ರಾಜಕಾರಣವೋ ಅಥವಾ ರಾಜಕೀಯ ಪರ್ಯಾಯವೋ ಎಂಬ ಚರ್ಚೆ ತಾತ್ವಿಕವಾದದ್ದು. ಪರ್ಯಾಯ ರಾಜಕಾರಣ ಎಂಬುದು ಜನರನ್ನು ಕೇಂದ್ರವಾಗುಳ್ಳ ರಾಜಕೀಯ ಸಂಕಥನ. ಇದರಲ್ಲಿ, ಚುನಾವಣೆಗಳಲ್ಲಿ ಗೆಲ್ಲುವುದು ಒಂದು ಅಂಶವಾದರೂ, ಅದೇ ಎಲ್ಲವೂ ಅಲ್ಲ. ಪ್ರಧಾನವಾದ ರಾಜಕೀಯ ಆಳ್ವಿಕೆಯನ್ನು, ಆಳುವ ವರ್ಗಗಳ ಯಜಮಾನಿಕೆಯನ್ನು, ಬುಡ ಮಟ್ಟದಿಂದ ಎದುರಿಸುವ, ಅಧಿಕಾರ ಮತ್ತು ಸಂಪತ್ತನ್ನು ಜನತೆಯ ಕೈಯಲ್ಲಿರಿಸುವ, ಸಾಮಾಜಿಕ ಸಮಾನತೆಗಾಗಿ ಸೆಣಸಾಡುವ ತಳಮಟ್ಟದ ಜನ ಚಳವಳಿಗಳ ಚಿಂತನೆಯಿದು.

ಇದುವರೆಗೂ ರಾಜ್ಯದಲ್ಲಿ ಆಡಳಿತ ಮಾಡಿರುವ ಯಾವುದಾದರೂ ರಾಜಕೀಯ ಪಕ್ಷ ಇಂತಹ ಪರ್ಯಾಯವನ್ನು ಪ್ರತಿಪಾದಿಸಿದೆಯೆ? ರಾಜ್ಯದಲ್ಲಿ ಕಾಂಗ್ರೆಸ್ ದೀರ್ಘಕಾಲ ಆಳ್ವಿಕೆ ನಡೆಸಿದೆ. ತುರ್ತು ಪರಿಸ್ಥಿತಿಯ ನಂತರ ರಾಜ್ಯದಲ್ಲಿ ತಡವಾಗಿ ಆಳ್ವಿಕೆಗೆ ಬಂದ ಜನತಾ ಪಕ್ಷ ಅಥವಾ ಜನತಾದಳ, ನಂತರ ಸಮ್ಮಿಶ್ರ ನೆಲೆಯಲ್ಲಿ ಆಳ್ವಿಕೆ ನಡೆಸಿದ ಬಿಜೆಪಿ ರಾಜಕೀಯ ಪರ್ಯಾಯವಾಗಿ ಅಧಿಕಾರ ಹಿಡಿದವೇ ಹೊರತು, ಪರ್ಯಾಯ ರಾಜಕಾರಣವನ್ನು ಪ್ರತಿಪಾದಿಸಲಿಲ್ಲ. ಬಿಜೆಪಿಯ ಆಳ್ವಿಕೆಯನ್ನು ಪರ್ಯಾಯ ರಾಜಕಾರಣದ ನೆಲೆಯಲ್ಲಿ ಕೆಲವರು ನೋಡಬಯಸುತ್ತಾರೆ. ಆದರೆ, ಇದಕ್ಕೆ ಮತೀಯ ಕೋಮುವಾದಿ ನೆಲೆಗಟ್ಟಿನ ಆಯಾಮವಲ್ಲದೆ ಪರ್ಯಾಯವೇನೂ ಇಲ್ಲ.

ಸ್ವಾತಂತ್ರ್ಯೋತ್ತರ ಭರವಸೆಯ ಕಾಲಘಟ್ಟದಲ್ಲಿ (ಬ್ರಿಟಿಷರ ವಸಾಹತು ರಾಜಕಾರಣಕ್ಕೆ) ಪರ್ಯಾಯ ರಾಜಕಾರಣದ ಸೆಲೆ ಸ್ವಲ್ಪ ಮಟ್ಟಿಗೆ ಕೆಲಸ ಮಾಡಿತು. ಶಿಕ್ಷಣ, ಆರೋಗ್ಯ, ಸಾರ್ವಜನಿಕ ಉದ್ಯಮ–ಸೇವೆ, ವಸತಿ, ಆಹಾರ, ವಿದ್ಯುತ್, ನೀರಾವರಿ, ಹೀಗೆ ಸಾರ್ವಜನಿಕ ಹಿತಾಸಕ್ತಿಯ ಆಳ್ವಿಕೆಗೆ ಅವಕಾಶವಿತ್ತು. ಇದಕ್ಕೆ ಮುಖ್ಯವಾಗಿ ಸ್ವಾತಂತ್ರ್ಯ ಹೋರಾಟದ ಮತ್ತು ಜನ ಚಳವಳಿಗಳ ಒತ್ತಾಸೆಯಿತ್ತು. 1970ರ ದಶಕದಲ್ಲಿ ಈ ಭರವಸೆಯ ಕುಸಿತವು ಆರಂಭವಾಗಿ, 1991ರ 'ಎಲ್‌ಪಿಜಿ' ಕಾಲಘಟ್ಟದಲ್ಲಿ ಬೇರೊಂದು ಮಜಲನ್ನು ತಲುಪಿತು. ಜನ ಕೇಂದ್ರಿತ ಹಿತಾಸಕ್ತಿಯ ಜಾಗದಲ್ಲಿ ಕಾರ್ಪೊರೇಟ್ ಹಿತಾಸಕ್ತಿ ನೆಲೆಯೂರಿತು. ಕೃಷಿ, ಭೂಮಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ರಸ್ತೆ, ನೀರು, ವಸತಿ, ಸಾರಿಗೆ, ಸೇವೆ, ಮಾಧ್ಯಮ, ನ್ಯಾಯ, ಹೀಗೆ ಎಲ್ಲವೂ ಉಳ್ಳವರ ಪಾಲಾಗಲು ಆರಂಭಿಸಿತು. ಸರ್ಕಾರಗಳ ನೀತಿಗಳಲ್ಲಿ ಸಂಪೂರ್ಣವಾದ ಪಲ್ಲಟ ಸಂಭವಿಸಿತು. ಇಂತಹ ಪಲ್ಲಟಗಳ ಭಾಗವಾಗಿಯೇ ಸಮಾಜದಲ್ಲಿ ಜಾತಿವಾದ ಮತ್ತು ಕೋಮುವಾದ ಆಳ್ವಿಕೆ ಮಾಡುವ ಪಕ್ಷಗಳ ಅಸ್ಮಿತೆಗಳಾದವು. ವಿಭಜನೆಯ ಅಸ್ತ್ರಗಳಾದವು.



ಜನರ ಬದುಕನ್ನು ಹಿಂಡಿ ಹಿಪ್ಪೆ ಮಾಡುವ ನವ-ಉದಾರವಾದಿ ಆರ್ಥಿಕ ನೀತಿಗಳನ್ನು ಜಾರಿ ಮಾಡುವ ವಿಷಯದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಇತರೆ ಪ್ರಾದೇಶಿಕ ಬಂಡವಾಳಶಾಹಿ ಪಕ್ಷಗಳ ನಡುವೆ ವ್ಯತ್ಯಾಸವೇನಿಲ್ಲ, ಬದಲಿಗೆ ಕಾರ್ಪೊರೇಟ್ ಪರವಾದ ನೀತಿಗಳ ಜಾರಿಯಲ್ಲಿ ಪೈಪೋಟಿ ಕಾಣಬಹುದು. ಉದಾಹರಣೆಗೆ, ರೈತರಿಂದ ಭೂಮಿಯನ್ನು ಕಿತ್ತುಕೊಳ್ಳುವ ಕರ್ನಾಟಕದ ಭೂಸುಧಾರಣಾ ಕಾಯ್ದೆ ತಿದ್ದುಪಡಿ ಮಾಡಿದ್ದು ಬಿಜೆಪಿ; ಅದನ್ನು ಪಟ್ಟು ಹಿಡಿದು ಜಾರಿ ಮಾಡುತ್ತಿರುವುದು ಕಾಂಗ್ರೆಸ್. ಈ ವಿಷಯದಲ್ಲಿ ಜೆಡಿಎಸ್ ಭಿನ್ನವಾಗಿಲ್ಲ. ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಿಸಲು ಕೇಂದ್ರದ ಬಿಜೆಪಿ ಸರ್ಕಾರ 'ರಾಷ್ಟ್ರೀಯ ನಗದೀಕರಣ ಯೋಜನೆ' ಜಾರಿಗೊಳಿಸಿದರೆ, ಕರ್ನಾಟಕದ ಕಾಂಗ್ರೆಸ್ ಸರ್ಕಾರ ಇಡೀ ಸರ್ಕಾರಿ ಸ್ವತ್ತುಗಳನ್ನು ಖಾಸಗೀಕರಿಸಲು 'ನಗದೀಕರಣ ಸಮಿತಿ'ಯನ್ನೇ ರಚಿಸಿದೆ. ಜೆಡಿಎಸ್ ಇದರ ಪರವಾಗಿದೆ. ಶಿಕ್ಷಣ ಮತ್ತು ಆರೋಗ್ಯದ ಖಾಸಗೀಕರಣದ ವಿಷಯದಲ್ಲಿ ಈ ಮೂರೂ ಪಕ್ಷಗಳಲ್ಲಿ ವ್ಯತ್ಯಾಸವಿಲ್ಲ. ಭ್ರಷ್ಟಾಚಾರದಲ್ಲಿ ಈ ಪಕ್ಷಗಳ ನಡುವೆ ಏನಾದರೂ ವ್ಯತ್ಯಾಸವನ್ನು ಯಾರಾದರೂ ಕಾಣಲು ಸಾಧ್ಯ ಇದೆಯೇ? ಇಂತಹ ಯಾವುದೇ ವಿಷಯಗಳಲ್ಲಿ ಜನರ ಜೀವನಕ್ಕೆ ಸಹಾಯಕವಾಗುವ 'ಪರ್ಯಾಯ ರಾಜಕಾರಣ'ದ ವಾಸನೆಯೂ ಇಲ್ಲವೆಂಬುದೇ ವಾಸ್ತವ.

ಪರ್ಯಾಯ ರಾಜಕಾರಣವೆಂದರೆ, ಅಧಿಕಾರದಲ್ಲಿ ಪಕ್ಷಗಳ ಬದಲಾವಣೆಯ ಪ್ರಶ್ನೆ ಮಾತ್ರವಲ್ಲ, ನೀತಿಗಳ ಬದಲಾವಣೆ. ಮೂಲಭೂತವಾಗಿ ಸಾಂಪ್ರದಾಯಿಕವಾದ ಬಂಡವಾಳಶಾಹಿ ಮತ್ತು ಶ್ರೀಮಂತ ವರ್ಗಗಳ ಪರವಾದ ಪಕ್ಷಗಳು ಮತ್ತು ಜನ ಚಳವಳಿಗಳನ್ನು ಕೇಂದ್ರವಾಗುಳ್ಳ ಕಮ್ಯುನಿಸ್ಟ್, ಪ್ರಗತಿಪರ, ಇತ್ಯಾದಿ ಪಕ್ಷಗಳ ನಡುವಿನ ವ್ಯತ್ಯಾಸ ಇಲ್ಲೇ ಇರುವುದು. 'ನೇತಾಗಳ ಬದಲಾವಣೆಯಲ್ಲ, ನೀತಿಗಳ ಬದಲಾವಣೆ'ಗೆ ಸಂಬಂಧಿಸಿದ ವಿಷಯವಿದು. ಕರ್ನಾಟಕದಲ್ಲಿ ಭೂರಹಿತರ ಸಂಖ್ಯೆ ಹೆಚ್ಚುತ್ತಿದೆ, ಅದರಲ್ಲೂ ದಲಿತರಲ್ಲಿ ಭೂಹೀನತೆ ಹೆಚ್ಚುತ್ತಿದೆ. ಬಡವ– ಶ್ರೀಮಂತರ ಅಂತರ ಹೆಚ್ಚುತ್ತಿದೆ. ನಿರುದ್ಯೋಗ ಹೆಚ್ಚುತ್ತಿದೆ. ಅಪೌಷ್ಟಿಕತೆ, ಹಸಿವಿನ ಸೂಚ್ಯಂಕ ಏರುತ್ತಿದೆ. ಶಿಕ್ಷಣ, ಆರೋಗ್ಯ, ಇತರೆ ಸೇವೆಗಳು ಹಣವುಳ್ಳವರ ಸರಕಾಗುತ್ತಿವೆ. ಭ್ರಷ್ಟಾಚಾರ ಅಳತೆ ಮೀರಿದೆ. ಇವೆಲ್ಲವುಗಳ ದುಃಸ್ಥಿತಿಗೆ ಈ ಮೂರು ಪಕ್ಷಗಳ ನೀತಿಗಳೇ ಕಾರಣ. ಹೀಗಾಗಿಯೇ ಪರ್ಯಾಯ ರಾಜಕಾರಣ ಆಗಬೇಕಾಗಿದೆ. ಅದು ನೀತಿಗಳ ಬದಲಾವಣೆಯಲ್ಲಿ ಬರಬೇಕಾಗಿದೆ.

ಇದುವರೆಗಿನ ಆಳ್ವಿಕೆ ಮಾಡಿದ ಪಕ್ಷಗಳ ಶ್ರೀಮಂತರ ಪರವಾದ ನೀತಿಗಳಿಂದಾಗಿ ಸಾಮಾನ್ಯ ಜನರಲ್ಲಿ ಅತೃಪ್ತಿ, ಅಸಮಾಧಾನ, ಸಿಟ್ಟು ಹೆಚ್ಚಾಗುತ್ತಿದೆ. ಇದು ಜನತೆಯ ಸಹಜವಾದ ಪ್ರಜಾಸತ್ತಾತ್ಮಕ ಅಭಿವ್ಯಕ್ತಿಯಾಗಿದೆ. ಇವುಗಳಿಗೆ ಸ್ಪಷ್ಟವಾದ ಮತ್ತು ನೀತಿಗಳ ಆಧಾರದ ಪರಿಹಾರವನ್ನು ಕಾಣಬೇಕಾಗಿದೆ. ಆದರೆ, ಅಂತಹ ಸಾಧ್ಯತೆ ಕಡಿಮೆ. ಇದರಿಂದಾಗಿಯೇ ಆಳ್ವಿಕೆ ಮಾಡುವ ಶ್ರೀಮಂತ ವರ್ಗಗಳು ಜನರಲ್ಲಿ ಜಾತಿ ವಿಭಜನೆಯನ್ನು ಹೆಚ್ಚು ಮಾಡುತ್ತಿದ್ದಾರೆ. ಮತ–ಧರ್ಮದ ವಿಭಜನೆಗಳನ್ನು ತೀವ್ರಗೊಳಿಸುತ್ತಿದ್ದಾರೆ. ಒಂದು ನೈಜ ಜನಪರ ಪರ್ಯಾಯ ಸಾಧ್ಯವೇ ಇಲ್ಲವೆನ್ನುವಂತಹ ಅಸಹಾಯಕತೆ ಸೃಷ್ಟಿಸಲಾಗುತ್ತಿದೆ.

ಜನರ ಸಮಸ್ಯೆಗಳಿಗೆ ಸ್ಪಷ್ಟವಾದ ಪರಿಹಾರ, ಜನರ ನಡುವೆ ಸಹಬಾಳ್ವೆ ಮತ್ತು ಸೌಹಾರ್ದ ಬೆಳೆಸುವುದು, ಸಮಾಜದಲ್ಲಿ ಅಸಮಾನತೆಯನ್ನು ಕೊನೆಗಾಣಿಸುವುದು, ಮುಂತಾದವು ಈ ಹೊತ್ತಿಗೆ ಅಗತ್ಯವಾದ ನೈಜ ಪರ್ಯಾಯಗಳಾಗಿವೆ. ಕಮ್ಯುನಿಸ್ಟ್ ಪಕ್ಷಗಳು, ಪ್ರಜಾಪ್ರಭುತ್ವ ಪಕ್ಷಗಳು ಸೇರಿದಂತೆ ಜನಪರ ಧೋರಣೆಯ ವ್ಯಕ್ತಿಗಳು, ಸಂಘ–ಸಂಸ್ಥೆಗಳು ಸೇರಿದಂತೆ ರಾಜ್ಯದಲ್ಲಿ ಒಂದು ನೈಜವಾದ ರಾಜಕೀಯ ಪರ್ಯಾಯವನ್ನು ರೂಪಿಸಲು ಇದು ಸಕಾಲವಾಗಿದೆ.

ಲೇಖಕ: ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕರ್ನಾಟಕ ಬಾಡಿಗೆ (ತಿದ್ದುಪಡಿ) ಮಸೂದೆ–2025 ಅಂಗೀಕಾರ: ಜೈಲುಶಿಕ್ಷೆ ರದ್ದು, ದಂಡ ಹೆಚ್ಚಳ ಪ್ರಸ್ತಾವ

ಸಮಸ್ಯೆ ಬಗೆಹರಿಸುವುದೇ ಕಾಯ್ದೆ?

ಪ್ರಜಾವಾಣಿ ವಾರ್ತೆ

ಬಾಡಿಗೆಯು ರಾಜ್ಯ ಪಟ್ಟಿಗೆ ಬರುವ ವಿಚಾರ. ರಾಜ್ಯವೇ ಈ ಸಂಬಂಧದ ನಿಯಮಗಳನ್ನು ರೂಪಿಸಬೇಕು. ಈ ದಿಸೆಯಲ್ಲಿ ಮಾದರಿ ಬಾಡಿಗೆದಾರರ ಕಾಯ್ದೆ (2021), ಮನೆ ಬಾಡಿಗೆ ನಿಯಮಗಳು (2025) ಆಧರಿಸಿ ಹಲವು ರಾಜ್ಯಗಳಲ್ಲಿ ಮನೆ ಬಾಡಿಗೆ ನಿಯಮಗಳಲ್ಲಿ ಬದಲಾವಣೆ ಮಾಡಲಾಗಿತ್ತು. ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ ಮತ್ತು ಅಸ್ಸಾಂನಂತಹ ಕೆಲವು ರಾಜ್ಯಗಳು ಬಾಡಿಗೆ ಕಾಯ್ದೆಗಳನ್ನು ತಿದ್ದುಪಡಿ ಮಾಡಿದ್ದವು. ಆದರೆ, ಕರ್ನಾಟಕದಲ್ಲಿ ಹಳೆಯ (1999) ಕಾಯ್ದೆಯೇ ಜಾರಿಯಲ್ಲಿತ್ತು.

ಇದೀಗ ಕರ್ನಾಟಕವು ಕೇಂದ್ರ ಸರ್ಕಾರ ಹೊರಡಿಸಿದ್ದ ಬಾಡಿಗೆ ನಿಯಂತ್ರಣ ಮಾರ್ಗಸೂಚಿಯ ಚೌಕಟ್ಟಿನ ಆಧಾರದಲ್ಲಿ ಕರ್ನಾಟಕ ಬಾಡಿಗೆ ಕಾಯ್ದೆ–1999 ಅನ್ನು ಬದಲಾವಣೆ ಮಾಡಿ, ಕರ್ನಾಟಕ ಬಾಡಿಗೆ (ತಿದ್ದುಪಡಿ) ಮಸೂದೆ–2025 ಅನ್ನು ರೂಪಿಸಿದೆ. ವಿಧಾನ ಮಂಡಲದಲ್ಲಿ ಮಸೂದೆ ಅಂಗೀಕಾರವಾಗಿದೆ. ರಾಜ್ಯಪಾಲರ ಅಂಕಿತ ಪಡೆದ ನಂತರ ಇದು ಕಾಯ್ದೆಯಾಗಿ ಜಾರಿಯಾಗಲಿದೆ.

ಮಸೂದೆಯಲ್ಲಿ, ಕರ್ನಾಟಕ ಬಾಡಿಗೆ ಕಾಯ್ದೆಯಲ್ಲಿನ (1999) ಸೆಕ್ಷನ್ 53 (ನ್ಯಾಯಾಂಗ ಪ್ರಕ್ರಿಯೆ ಮತ್ತು ಶಿಕ್ಷೆ ವಿಧಿಸುವುದು) ಅನ್ನು ತೆಗೆದುಹಾಕಲಾಗಿದೆ. ಜತೆಗೆ, ಸೆಕ್ಷನ್ 24 (ನಿಯಂತ್ರಣಾಧಿಕಾರಿಯ ಅಧಿಕಾರ), ಸೆಕ್ಷನ್ 54 (ಅಪರಾಧಗಳು ಮತ್ತು ದಂಡ) ಮತ್ತು ಸೆಕ್ಷನ್ 55ಕ್ಕೆ (ಕಂಪನಿಗಳಿಂದ ಅಪರಾಧಗಳು) ತಿದ್ದುಪಡಿ ಮಾಡಲಾಗಿದೆ.

ಜನವಿಶ್ವಾಸ ಕಾಯ್ದೆ

ಕೇಂದ್ರ ಸರ್ಕಾರದ 42 ಕಾಯ್ದೆಗಳಿಗೆ ಸಂಬಂಧಿಸಿದ ನಿಯಮಗಳನ್ನು ಸರಳಗೊಳಿಸಲು ಮತ್ತು ಸಣ್ಣಪುಟ್ಟ ಉಲ್ಲಂಘನೆಗಳನ್ನು ಅಪರಾಧ ವ್ಯಾಪ್ತಿಯಿಂದ ಹೊರತರಲು ಜನವಿಶ್ವಾಸ (ನಿಯಮಗಳ ತಿದ್ದುಪಡಿ) ಕಾಯ್ದೆ–2023 ಅನ್ನು ಜಾರಿಗೊಳಿಸಿತ್ತು. ಈ ಕಾಯ್ದೆಯ ಮೂಲಕ 19 ಇಲಾಖೆಗಳಿಗೆ ಸಂಬಂಧಿಸಿದ ಉಲ್ಲಂಘನೆಗಳನ್ನು ಅಪರಾಧಮುಕ್ತಗೊಳಿಸುವ ಉದ್ದೇಶದಿಂದ ಒಟ್ಟು 183 ನಿಯಮಗಳನ್ನು ರೂಪಿಸಲಾಗಿತ್ತು. ಸಣ್ಣಪುಟ್ಟ ಉಲ್ಲಂಘನೆಗಳಿಗೂ ಜೈಲುಶಿಕ್ಷೆ ವಿಧಿಸುವ ನಿಯಮ ತಿದ್ದುಪಡಿ ಮಾಡಿ ದಂಡ ವಿಧಿಸಲು ಅನುಕೂಲವಾಗುವ ನಿಯಮ ರೂಪಿಸಲಾಗಿತ್ತು. ಇದರಿಂದ ಜನರ ಮೇಲಿನ ಹೊರೆ ಕಡಿಮೆಯಾಗಲಿದೆ ಎಂದು ಕೇಂದ್ರ ಪ್ರತಿಪಾದಿಸಿತ್ತು.

ಈ ಕಾಯ್ದೆಯ ಅನುಸಾರವೇ ಕರ್ನಾಟಕ ಬಾಡಿಗೆ (ತಿದ್ದುಪಡಿ) ಮಸೂದೆಯಲ್ಲಿ ಬಾಡಿಗೆಗೆ ಸಂಬಂಧಿಸಿದ ಕೆಲವು ಉಲ್ಲಂಘನೆಗಳನ್ನು ಅಪರಾಧದ ವ್ಯಾಪ್ತಿಯಿಂದ ಹೊರತರಲಾಗಿದೆ. ಆದರೆ, ದಂಡದ ಪ್ರಮಾಣವನ್ನು ಹೆಚ್ಚಿಸಲಾಗಿದೆ.

ಬೆಂಗಳೂರಿಗರಿಗೆ ಅನುಕೂಲ?

ಅಂದಾಜು 1.5 ಕೋಟಿ ಜನಸಂಖ್ಯೆ ಇರುವ ಬೆಂಗಳೂರಿನಲ್ಲಿ ಬಾಡಿಗೆದಾರರು–ಮಾಲೀಕರ ಸಂಘರ್ಷ ಹೆಚ್ಚು. ಬಾಡಿಗೆದಾರರ ವಿರುದ್ಧ ಮಾಲೀಕರು, ಮಾಲೀಕರ ವಿರುದ್ಧ ಬಾಡಿಗೆದಾರರು ಆರೋಪ ಹೊರಿಸುವುದು ಸಾಮಾನ್ಯ. ಹತ್ತು ತಿಂಗಳ ಬಾಡಿಗೆ ಹಣ ಮುಂಗಡವಾಗಿ ಪಡೆಯುವುದು, ಮನೆ ಖಾಲಿ ಮಾಡುವಾಗ ಮುಂಗಡ ವಾಪಸ್ ನೀಡದಿರುವುದು, ಮನಸೋಇಚ್ಛೆ ಹಣ ಕಡಿತ ಮಾಡುವುದರಂಥ ದೂರುಗಳು ಮಾಲೀಕರ ವಿರುದ್ಧ ಕೇಳಿಬರುತ್ತವೆ. ಕೆಲವು ಮಾಲೀಕರು ಬಾಡಿಗೆಯನ್ನು ಬೇಕಾಬಿಟ್ಟಿ ಹೆಚ್ಚಿಸುತ್ತಾರೆ ಎಂದೂ ದೂರುಗಳಿವೆ. ಬಾಡಿಗೆ ಸರಿಯಾಗಿ ಪಾವತಿಸದಿರುವುದು, ಮನೆ ವ್ಯವಸ್ಥಿತವಾಗಿ ಇಡದಿರುವುದರಂಥ ದೂರುಗಳು ಬಾಡಿಗೆದಾರರ ವಿರುದ್ಧ ಕೇಳುಬರುತ್ತಿವೆ. ಬಾಡಿಗೆ ಸಂಬಂಧ ಘರ್ಷಣೆ, ವಿವಾದ ಉಂಟಾಗಿ ಪೊಲೀಸ್ ಸ್ಟೇಷನ್, ಕೋರ್ಟ್ ಮೊರೆ ಹೋಗುವುದು, ನ್ಯಾಯಕ್ಕಾಗಿ ವರ್ಷಾನುಗಟ್ಟಲೇ ಅಲೆಯುವುದು ಸಾಮಾನ್ಯ ವಿದ್ಯಮಾನವಾಗಿದೆ.

ಹೊಸ ಮಸೂದೆಯು ಕಾಯ್ದೆಯಾಗಿ ಸಮರ್ಪಕವಾಗಿ ಜಾರಿಯಾದರೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡದಂಥ ನಗರಗಳಲ್ಲಿ ವಾಸಿಸುವ ಜನರ ಇಂಥ ಅನೇಕ ಸಮಸ್ಯೆಗಳು ಪರಿಹಾರವಾಗಲಿವೆ.

ಏನೇನು ತಿದ್ದುಪಡಿ?

ಸೆಕ್ಷನ್ 24: ಮೂಲ ಕಾಯ್ದೆಯ ಸೆಕ್ಷನ್ 24 ನಿಯಂತ್ರಣಾಧಿಕಾರಿಯ ಅಧಿಕಾರದ ಬಗ್ಗೆ ವಿವರಿಸುತ್ತದೆ. ತಿದ್ದುಪಡಿ ಮಸೂದೆಯಲ್ಲಿ ಸೆಕ್ಷನ್ 24ರ ಉಪ ಸೆಕ್ಷನ್‌ನ ಬಳಿಕ 1–ಎ ಎಂಬ ಮತ್ತೊಂದು ಉಪ ಸೆಕ್ಷನ್ ಸೇರಿಸುವ ಪ್ರಸ್ತಾವವನ್ನು ಮಾಡಲಾಗಿದೆ.

ಸೆಕ್ಷನ್ 24 (1): 1908ರ ನಾಗರಿಕ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಇರುವಷ್ಟೇ ಅಧಿಕಾರ ಈ ಕೆಳಗಿನ ವಿಚಾರಗಳಲ್ಲಿ ನಿಯಂತ್ರಣಾಧಿಕಾರಿಯವರಿಗೆ ಇರುತ್ತದೆ.

ತಿದ್ದುಪಡಿ ಮಸೂದೆಯಲ್ಲಿ ಈ ಉಪ ಸೆಕ್ಷನ್ ನಂತರ ಉಪ ಸೆಕ್ಷನ್ (1–ಎ) ಸೇರಿಸಲಾಗಿದೆ.
ಹೊಸ ಉಪ ಸೆಕ್ಷನ್ ಪ್ರಕಾರ, 54ನೇ ಸೆಕ್ಷನ್‌ನಲ್ಲಿ ಉಲ್ಲೇಖಿಸಿದ ದಂಡಗಳನ್ನು ನಿರ್ಧರಿಸುವುದಕ್ಕಾಗಿ ನ್ಯಾಯ ನಿರ್ಣಯ ಅಧಿಕಾರಗಳನ್ನು ನಿಯಂತ್ರಣಾಧಿಕಾರಿಯು ಹೊಂದಿರಬೇಕು

ಸೆಕ್ಷನ್ 53: ಈ ಸೆಕ್ಷನ್ ನ್ಯಾಯಾಂಗ ಪ್ರಕ್ರಿಯೆ ಮತ್ತು ಶಿಕ್ಷೆ ವಿಧಿಸುವ ಅಧಿಕಾರದ ಕುರಿತಾಗಿ ಇದೆ.
ಇದರಲ್ಲಿ ಮೂರು ಸೆಕ್ಷನ್‌ಗಳಿವೆ.

(1) ಮೊದಲ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ಶ್ರೇಣಿಗಿಂತ ಕೆಳಗಿನ ನ್ಯಾಯಾಲಯವು ನ್ಯಾಯಾಂಗ ಪ್ರಕ್ರಿಯೆ ನಡೆಸುವಂತಿಲ್ಲ ಮತ್ತು ಶಿಕ್ಷೆ ವಿಧಿಸುವಂತಿಲ್ಲ
(2) ಈ ಕಾಯ್ದೆಯ ಅಡಿಯಲ್ಲಿ ಪ್ರತಿಯೊಂದು ಅಪರಾಧವೂ ಜಾಮೀನಿಗೆ ಅರ್ಹವಾದದ್ದು ಮತ್ತು ಗಂಭೀರವಲ್ಲದ್ದು
(3) ನಿಯಂತ್ರಣಾಧಿಕಾರಿ ಅಥವಾ ರಾಜ್ಯ ಸರ್ಕಾರ ನೇಮಿಸುವ ಇತರ ಯಾವ ಅಧಿಕಾರಿಯೂ ಈ ಕಾಯ್ದೆಯ ಯಾವುದೇ ನಿಯಮಗಳನ್ನು ಉಲ್ಲಂಘಿಸುವ ವ್ಯಕ್ತಿಯನ್ನು ದಂಡಿಸಬಹುದು

ತಿದ್ದುಪಡಿ ಮಸೂದೆಯಲ್ಲಿ ಈ ಸೆಕ್ಷನ್ ಅನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ.

ಸೆಕ್ಷನ್ 54: ಈ ಸೆಕ್ಷನ್ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿದವರಿಗೆ ವಿಧಿಸಲಾಗುವ ಶಿಕ್ಷೆ ಮತ್ತು ದಂಡದ ಬಗ್ಗೆ ಪ್ರಸ್ತಾಪಿಸುತ್ತದೆ

ಈ ಸೆಕ್ಷನ್‌ನ ಎಲ್ಲ ಉಪಸೆಕ್ಷನ್‌ಗಳಿಗೆ ತಿದ್ದುಪಡಿ ಮಾಡಲಾಗಿದೆ. ಜೈಲು ಶಿಕ್ಷೆಯ ಪ್ರಸ್ತಾಪವನ್ನು ಕೈಬಿಡಲಾಗಿದ್ದು, ಈಗಿದ್ದ ದಂಡದ ಮೊತ್ತವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ.

1999ರ ಕಾಯ್ದೆಯ ಸೆಕ್ಷನ್ 54ರ ಅಡಿಯಲ್ಲಿ ಬರುವ (i) ಕಲಂ ಅನ್ನು ಇಲ್ಲಿ 1ನೇ ಉಪ ಸೆಕ್ಷನ್ ಎಂದು ಕರೆಯಲಾಗಿದೆ.
1 ನೇ ಉಪ ಸೆಕ್ಷನ್‌ಗೆ ಮಾಡಲಾದ ತಿದ್ದುಪಡಿಗಳು ಇಂತಿವೆ:

ಉಲ್ಲಂಘನೆ	1999ರ ಕಾಯ್ದೆ	ತಿದ್ದುಪಡಿ ಮಸೂದೆ
(ಎ) ಕಲಂ (i) ಮಾಲೀಕ ಅಥವಾ ಬಾಡಿಗೆದಾರ ಗುತ್ತಿಗೆ ಒಪ್ಪಂದದ ಪ್ರತಿ/ವಿವರಗಳನ್ನು ಸಲ್ಲಿಸಲು ತಪ್ಪಿದರೆ	₹2000ದವರೆಗೆ ದಂಡ ಮತ್ತು ಒಂದು ತಿಂಗಳವರೆಗೆ ಸಾಮಾನ್ಯ ಕಾರಾಗೃಹ ಶಿಕ್ಷೆ ಅಥವಾ ಇವೆರಡೂ ಹಾಗೂ ಒಪ್ಪಂದದ ಪ್ರತಿ/ವಿವರಗಳನ್ನು ಸಲ್ಲಿಸುವವರೆಗೆ ಪ್ರತಿ ದಿನಕ್ಕೂ ₹500 ಹೆಚ್ಚುವರಿ ದಂಡ	₹2000 ಸಾವಿರ ಮತ್ತು ಒಪ್ಪಂದದ ಪ್ರತಿ/ವಿವರ ಸಲ್ಲಿಸುವವರೆಗೆ ಪ್ರತಿಯೊಂದು ದಿನಕ್ಕೆ ಹೆಚ್ಚುವರಿಯಾಗಿ ₹5000 ದಂಡ
(ಬಿ) ಕಲಂ (ii): ಯಾವೊಬ್ಬ ವ್ಯಕ್ತಿಯು ಕಾನೂನು ಬಾಹಿರವಾಗಿ ವೆಚ್ಚಗಳನ್ನು ಪಡೆದರೆ	ಪಡೆದ ಮೊತ್ತವನ್ನೂ ಮೀರಿ ಗರಿಷ್ಠ ₹2,500ವರೆಗೆ ದಂಡ ಅಥವಾ ಒಂದು ತಿಂಗಳ ಸಾಮಾನ್ಯ ಜೈಲು ಶಿಕ್ಷೆ ಅಥವಾ ಇವೆರಡೂ	ಪಡೆದ ಮೊತ್ತವನ್ನೂ ಮೀರಿ ಗರಿಷ್ಠ ₹20 ಸಾವಿರದ ವರೆಗೆ ದಂಡ
(ಸಿ) ಕಲಂ (iii) ಮಧ್ಯವರ್ತಿ ಅಥವಾ ಏಜೆಂಟ್...		
(ಎ) ಹೆಸರು ನೋಂದಾಯಿಸದಿದ್ದರೆ	₹2,000 ದಂಡ ಅಥವಾ ತಿಂಗಳ ಸಾಮಾನ್ಯ ಜೈಲು ಶಿಕ್ಷೆ ಅಥವಾ ಇವೆರಡೂ ಹಾಗೂ ನೋಂದಣಿ ಮಾಡಿಸುವವರೆಗೆ ಪ್ರತಿ ದಿನಕ್ಕೂ ₹200 ಹೆಚ್ಚುವರಿ ದಂಡ	₹2,000 ದಂಡ, ನೋಂದಣಿಯಾಗುವವರೆಗೆ ಪ್ರತಿ ದಿನಕ್ಕೆ ₹20 ಸಾವಿರ ಹೆಚ್ಚುವರಿ ದಂಡ
(ಬಿ) ವಿವರಣೆ ಪತ್ರಗಳನ್ನು ಸಲ್ಲಿಸಲು ವಿಫಲವಾದಲ್ಲಿ	₹1,000 ದಂಡ ಅಥವಾ ಒಂದು ತಿಂಗಳ ಸಾದಾ ಶಿಕ್ಷೆ ಅಥವಾ ಇವೆರಡೂ ಮತ್ತು ವಿವರಣೆ ಪತ್ರವನ್ನು ಸಲ್ಲಿಸುವವರೆಗೂ ಪ್ರತಿ ದಿನಕ್ಕೆ ಹೆಚ್ಚುವರಿಯಾಗಿ ₹100 ದಂಡ	₹1,000 ದಂಡ ಮತ್ತು ವಿವರಣೆ ಪತ್ರವನ್ನು ಸಲ್ಲಿಸುವವರೆಗೂ ಪ್ರತಿ ದಿನಕ್ಕೆ ಹೆಚ್ಚುವರಿಯಾಗಿ ₹2,000 ದಂಡ
(ಸಿ)21ನೇ ಸೆಕ್ಷನ್‌ನ 2ನೇ ಉಪ ಸೆಕ್ಷನ್‌ನ ಅಡಿಯಲ್ಲಿ ಅಗತ್ಯವಾದ ವಿವರಗಳನ್ನು ಸಲ್ಲಿಸಲು ವಿಫಲವಾದಲ್ಲಿ	₹2,000 ದಂಡ ಅಥವಾ ಒಂದು ತಿಂಗಳ ಸಾದಾ ಜೈಲು ಶಿಕ್ಷೆ ಅಥವಾ ಎರಡೂ ಮತ್ತು ವಿವರ ಪಟ್ಟಿ ಸಲ್ಲಿಸುವವರೆಗೂ ಪ್ರತಿ ದಿನಕ್ಕೆ ಹೆಚ್ಚುವರಿಯಾಗಿ ₹200 ದಂಡ	₹2000 ದಂಡ ಮತ್ತು ವಿವರ ಸಲ್ಲಿಸುವವರೆಗೂ ಪ್ರತಿಯೊಂದು ದಿನಕ್ಕೂ ಹೆಚ್ಚುವರಿಯಾಗಿ ₹2000 ದಂಡ
(ಡಿ) ಕಲಂ (iv) ಯಾವುದೇ ಬಾಡಿಗೆದಾರ ಕಟ್ಟಡದ ಪೂರ್ಣ ಅಥವಾ ಒಂದು ಭಾಗವನ್ನು ಒಳಬಾಡಿಗೆಗೆ ನೀಡಿದ್ದರೆ/ ಸ್ವಾಧೀನತೆ ವರ್ಗಾಯಿಸಿದ್ದರೆ/ ಬಿಟ್ಟುಕೊಟ್ಟದ್ದರೆ	₹5,000ದವರೆಗೆ ಅಥವಾ ಬಾಡಿಗೆದಾರ ಪ್ರತಿ ತಿಂಗಳು ಪಡೆಯುತ್ತಿದ್ದ ಬಾಡಿಗೆಯ ಎರಡರಷ್ಟು ಮೊತ್ತ, ಇವುಗಳಲ್ಲಿ ಯಾವುದು ಹೆಚ್ಚೋ ಅಷ್ಟು ದಂಡ ಅಥವಾ ಒಂದು ತಿಂಗಳ ಸಾದಾ ಶಿಕ್ಷೆ ಅಥವಾ ಎರಡೂ	₹50 ಸಾವಿರದವರೆಗೆ ದಂಡ
(ಇ) ಕಲಂ (v) ಮಾಲೀಕ ಪ್ರಮಾಣಪತ್ರದಲ್ಲಿ ಸುಳ್ಳು ಹೇಳಿಕೆ ನೀಡಿದ್ದರೆ	₹5,000ವರೆಗೆ ಅಥವಾ ಮನೆಯನ್ನು ಮರು ಬಾಡಿಗೆಗೆ ಕೊಟ್ಟ ನಂತರ ಮೂರು ತಿಂಗಳ ಅವಧಿಗೆ ಪಡೆದ ಬಾಡಿಗೆಯ ಎರಡರಷ್ಟು ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಅಷ್ಟು ದಂಡ ಅಥವಾ ಒಂದು ತಿಂಗಳ ಸಾದಾ ಜೈಲು ಶಿಕ್ಷೆ ಅಥವಾ ಇವೆರಡೂ	₹50 ಸಾವಿರದವರೆಗೆ ದಂಡ ಅಥವಾ ಮರು ಬಾಡಿಗೆಗೆ ಕೊಟ್ಟ ನಂತರ ಮೂರು ತಿಂಗಳಿಗೆ ಬಾಡಿಗೆಯಾಗಿ ಪಡೆಯುವ ಮೊತ್ತದ ಎರಡರಷ್ಟರಲ್ಲಿ ಯಾವುದು ಹೆಚ್ಚೋ ಅಷ್ಟು ದಂಡ
(ಜಿ) ಕಲಂ (vii) ಮಾಲೀಕನು ಮನೆಯ ಅಥವಾ ಯಾವುದೇ ಭಾಗವನ್ನು ಮರು ಬಾಡಿಗೆಗೆ ಕೊಟ್ಟರೆ	₹5,000ದವರೆಗೆ ದಂಡ ಅಥವಾ ಮರು ಬಾಡಿಗೆಗೆ ಕೊಟ್ಟ ನಂತರ ಪಡೆಯುವ ಬಾಡಿಗೆಯ ಎರಡರಷ್ಟು ಮೊತ್ತ, ಇವೆರಡರಲ್ಲಿ ಯಾವುದು ಹೆಚ್ಚೋ ಅಷ್ಟು ಮೊತ್ತದ ದಂಡ ಅಥವಾ ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ಎರಡೂ	₹50 ಸಾವಿರದವರೆಗೆ ಅಥವಾ ಮರು ಬಾಡಿಗೆಗೆ ಕೊಟ್ಟ ನಂತರ ಪಡೆಯುವ ಬಾಡಿಗೆಯ ಎರಡರಷ್ಟು ಮೊತ್ತ, ಇವೆರಡರಲ್ಲಿ ಯಾವುದು ಹೆಚ್ಚೋ ಅಷ್ಟು ಮೊತ್ತದ ದಂಡ
(ಎಚ್) ಕಲಂ (ix) ಮಾಲೀಕ ಅಗತ್ಯ ಸೌಕರ್ಯಗಳನ್ನು/ ಸೇವೆಗಳನ್ನು ಕಡಿತಗೊಳಿಸಿದರೆ	ಮೂರು ತಿಂಗಳ ಬಾಡಿಗೆ ಮೊತ್ತಕ್ಕೆ ಸಮನಾದ ದಂಡ ಅಥವಾ ಒಂದು ತಿಂಗಳ ಜೈಲು ಶಿಕ್ಷೆ ಅಥವಾ ಇವೆರಡೂ ಅತ್ಯವಶ್ಯಕ ಸೌಲಭ್ಯ/ಸೇವೆ ಮತ್ತು ಸೇವೆ ಮತ್ತೆ ಪೂರೈಕೆ ಮಾಡುವವರೆಗೆ ದಿನವೊಂದಕ್ಕೆ ₹100 ಹೆಚ್ಚುವರಿ ದಂಡ	ಮೂರು ತಿಂಗಳ ಬಾಡಿಗೆ ಮೊತ್ತಕ್ಕೆ ಸಮನಾದ ದಂಡ ಮತ್ತು ಅತ್ಯವಶ್ಯಕ ಸೌಲಭ್ಯ/ಸೇವೆ ಕಡಿತಗೊಳಿಸಿದಂದಿನಿಂದ ಮತ್ತೆ ಪೂರೈಕೆ ಮಾಡುವವರೆಗೆ ದಿನವೊಂದಕ್ಕೆ ₹1,000 ಹೆಚ್ಚುವರಿ ದಂಡ
(ಐ) ಕಲಂ (x) ಮಾಲೀಕ ಅಥವಾ ಬಾಡಿಗೆದಾರ ಕಟ್ಟಡಕ್ಕೆ ಸಂಬಂಧಿಸಿದ ವಿವರಗಳನ್ನು ನಿಯಂತ್ರಣಾಧಿಕಾರಿಗೆ ನೀಡದಿದ್ದರೆ	₹1,000 ದಂಡ ಅಥವಾ ಒಂದು ತಿಂಗಳ ಸಾಮಾನ್ಯ ಜೈಲುಶಿಕ್ಷೆ ಅಥವಾ ಇವೆರಡೂ	₹10 ಸಾವಿರದವರೆಗೆ ದಂಡ

54ನೇ ಸೆಕ್ಷನ್‌ನ (1)ನೇ ಉಪ ಸೆಕ್ಷನ್ ನಂತರ (2)ನೇ ಉಪಸೆಕ್ಷನ್ ಅನ್ನು ತಿದ್ದುಪಡಿ ಮಸೂದೆಯಲ್ಲಿ ಸೇರಿಸಲಾಗಿದೆ. ಅದರ ಪ್ರಕಾರ, ನಿಗದಿಪಡಿಸಿದ ದಂಡಗಳನ್ನು ಕರ್ನಾಟಕ ಬಾಡಿಗೆ (ತಿದ್ದುಪಡಿ) ಕಾಯ್ದೆ–2025 ಜಾರಿಗೆ ಬಂದ ದಿನಾಂಕದಿಂದ ಪ್ರತಿ ಮೂರು ವರ್ಷಗಳ ಅವಧಿ ಮುಗಿದ ನಂತರ, ವಿಧಿಸಲಾಗುವ ದಂಡವನ್ನು, ದಂಡದ ಕನಿಷ್ಠ ಮೊತ್ತದ ಶೇ 10ರಷ್ಟು ಹೆಚ್ಚಿಸಬೇಕು.

ಕಂಪನಿ ನಿಯಮ ಬದಲು

ಕರ್ನಾಟಕ ಬಾಡಿಗೆ ಕಾಯ್ದೆ 1999ರ 55ನೇ ಸೆಕ್ಷನ್ ಕಂಪನಿಗಳಿಂದ ಘಟಿಸುವ ಅಪರಾಧಗಳಿಗೆ ಸಂಬಂಧಿಸಿದೆ. ಒಂದು ಕಂಪನಿಯಿಂದ ಅಪರಾಧ ನಡೆದಿದ್ದರೆ, ಅದರಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವವರನ್ನು ತಪ್ಪಿತಸ್ಥರೆಂದು ಪರಿಗಣಿಸಲಾಗುತ್ತದೆ ಮತ್ತು ಅದಕ್ಕನುಗುಣವಾಗಿ ಶಿಕ್ಷೆ ವಿಧಿಸಲಾಗುತ್ತದೆ ಎಂದು ನಿಯಮ ಹೇಳುತ್ತದೆ. ಆದರೆ, ಆ ಅಪರಾಧವು ತನಗೆ ಗೊತ್ತಿಲ್ಲದಂತೆ ನಡೆದಿದೆ ಎಂದು ಕಂಪನಿಯ ಅಧಿಕಾರಿ ಸಾಬೀತುಪಡಿಸಿದರೆ, ಅವರಿಗೆ ಶಿಕ್ಷೆ ನೀಡಲಾಗುವುದಿಲ್ಲ.

ಉಪಸೆಕ್ಷನ್ 2(1)ರ ಪ್ರಕಾರ, ಅಪರಾಧದಲ್ಲಿ ಕಂಪನಿಯ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ/ ಇತರ ಅಧಿಕಾರಿಯ ಪ್ರತ್ಯಕ್ಷ/ ಪರೋಕ್ಷ ಪಾತ್ರ ಇರುವುದು ಸಾಬೀತಾದರೆ, ಅವರನ್ನು ನ್ಯಾಯಾಂಗ ಪ್ರಕ್ರಿಯೆಗೆ, ದಂಡನೆಗೆ ಒಳಪಡಿಸಬಹುದು.

ಏನು ಬದಲಾವಣೆ?: 1999ರ ಕಾಯ್ದೆಯ 55ನೇ ಸೆಕ್ಷನ್‌ನಲ್ಲಿ ‘ಅಪರಾಧಗಳು’ ಎಂದು ಇರುವ ಕಡೆ ‘ಉಲ್ಲಂಘನೆಗಳು’ ಎಂದು ಬದಲಾಯಿಸಲಾಗಿದೆ. ಉಲ್ಲಂಘನೆ ತನ್ನ ಅರಿವಿಗೆ ಬಾರದಂತೆ ನಡೆಯಿತೆಂದು ಅಥವಾ ಅದನ್ನು ತಡೆಯಲು ತಾನು ಸಾಧ್ಯವಿರುವ ಎಲ್ಲ ಪ್ರಯತ್ನ ನಡೆಸಿದೆನೆಂದು ಅಧಿಕಾರಿ ಸಾಬೀತುಪಡಿಸಿದರೆ, ಅವರಿಂದ ದಂಡ ಸಂಗ್ರಹಿಸಲಾಗುವುದಿಲ್ಲ ಎಂದು ಬದಲಿಸಲಾಗಿದೆ.

ಜತೆಗೆ, ಉಲ್ಲಂಘನೆಯಲ್ಲಿ ಕಂಪನಿಯ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಪ್ರತ್ಯಕ್ಷ ಅಥವಾ ಪರೋಕ್ಷ ಪಾತ್ರ ಇರುವುದು ಸಾಬೀತಾದರೆ ಅಥವಾ ಅವರ ನಿರ್ಲಕ್ಷ್ಯದಿಂದ ಉಲ್ಲಂಘನೆ ನಡೆದಿದೆ ಎಂದು ಸಾಬೀತಾದರೆ, ಅವರನ್ನು ಕೃತ್ಯಕ್ಕೆ ಹೊಣೆಗಾರನೆಂದು ಭಾವಿಸತಕ್ಕದ್ದು ಮತ್ತು ದಂಡ ವಿಧಿಸುವುದು ಎಂದು ಬದಲಾವಣೆ ಮಾಡಲಾಗಿದೆ.

ಜಾರಿಯಾಗುವುದೇ ನಿಯಮ?

ಕರ್ನಾಟಕ ಬಾಡಿಗೆ (ತಿದ್ದುಪಡಿ) ಕಾಯ್ದೆಯಿಂದ ಮನೆ ಮಾಲೀಕ ಮತ್ತು ಬಾಡಿಗೆದಾರ ಇಬ್ಬರಿಗೂ ಅನುಕೂಲವಾಗಲಿದೆ ಎಂದು ಸರ್ಕಾರ ಪ್ರತಿಪಾದಿಸಿದೆ. ಆದರೆ, ಇದುವರೆಗೆ ಬಾಡಿಗೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ನಿಯಮಗಳು ಕಾಗದದ ಮೇಲಷ್ಟೇ ಇವೆ ಎನ್ನುವ ಭಾವನೆ ಇದೆ. ಬಾಡಿಗೆದಾರರು ಹಲವು ರೀತಿಯಲ್ಲಿ ಶೋಷಣೆಗೆ ಗುರಿಯಾಗುತ್ತಲೇ ಇದ್ದಾರೆ ಎನ್ನುವ ದೂರುಗಳಿವೆ. ಈ ಸ್ಥಿತಿಯಲ್ಲಿ ಹೊಸ ನಿಯಮಗಳು ಎಷ್ಟರ ಮಟ್ಟಿಗೆ ಜಾರಿಗೆ ಬರುತ್ತವೆ, ಮಾಲೀಕರು ಮತ್ತು ಬಾಡಿಗೆದಾರರ ಹಿತವನ್ನು ಎಷ್ಟರ ಮಟ್ಟಿಗೆ ಕಾಯುತ್ತವೆ ಎನ್ನುವ ಪ್ರಶ್ನೆ ಹುಟ್ಟಿಕೊಂಡಿದೆ.

ರಾಷ್ಟ್ರೀಯ

ಪಿಎಸಿಎಲ್‌ನ ₹3,436 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ನವದೆಹಲಿ (ಪಿಟಿಐ): ಚಂಡೀಗಢದ ಪರ್ಲ್ಸ್ ಆಗ್ರೋಟೆಕ್ ಕಾರ್ಪೊರೇಷನ್ ಲಿಮಿಟೆಡ್ (ಪಿಎಸಿಎಲ್) ವಿರುದ್ಧದ ಹಣ ಅಕ್ರಮ ವರ್ಗಾವಣೆ ತನಿಖೆ ಭಾಗವಾಗಿ ಪಂಜಾಬ್‌ನ ಜಲಂಧರ್‌ನಲ್ಲಿ ₹3,436.56 ಕೋಟಿ ಮೌಲ್ಯದ 169 ಸ್ಥಿರಾಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಪಿಎಸಿಎಲ್ ಸಾಮೂಹಿಕ ಹೂಡಿಕೆ ಯೋಜನೆಗಳ ಮೂಲಕ ವಂಚನೆ ಎಸಗಿದೆ. ಕಂಪನಿ ಮತ್ತು ಅದರ ಸಹವರ್ತಿಗಳು ದೇಶದಾದ್ಯಂತ ಹೂಡಿಕೆದಾರರಿಂದ ಸುಮಾರು ₹48 ಸಾವಿರ ಕೋಟಿ ಸಂಗ್ರಹಿಸಿ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಈ ಹಣದ ಒಂದು ಭಾಗವನ್ನು 169 ಸ್ವತ್ತುಗಳ ಖರೀದಿಗೆ ಬಳಸಲಾಗಿದೆ ಎಂದು ಇ.ಡಿ ಗುರುವಾರ ತಿಳಿಸಿದೆ.

ಈ ಪ್ರಕರಣದಲ್ಲಿ ಇಲ್ಲಿಯವರೆಗೆ ಮುಟ್ಟುಗೋಲು ಹಾಕಿಕೊಳ್ಳಲಾದ ಒಟ್ಟು ಚರ ಮತ್ತು ಸ್ಥಿರಾಸ್ತಿಗಳ ಮೌಲ್ಯ ಸುಮಾರು ₹5,602 ಕೋಟಿಗಳಾಗಿದೆ. ಇದರಲ್ಲಿ ದೇಶ ಮತ್ತು ವಿದೇಶದಲ್ಲಿರುವ ಆಸ್ತಿಗಳು ಸೇರಿವೆ. ಇದುವರೆಗೆ ಮೂರು ಆರೋಪಪಟ್ಟಿಗಳನ್ನು ಸಲ್ಲಿಸಲಾಗಿದೆ ಎಂದು ಹೇಳಿದೆ.

ಪಿಎಸಿಎಲ್‌ನ ಪ್ರವರ್ತಕ ದಿವಂಗತ ನಿರ್ಮಲ್ ಸಿಂಗ್ ಭಂಗೂ ಮತ್ತು ಇತರರ ವಿರುದ್ಧ ಸಿಬಿಐ ದಾಖಲಿಸಿದ್ದ ಪ್ರಕರಣದ ಆಧಾರದ ಮೇಲೆ ಇ.ಡಿ ತನಿಖೆ ನಡೆಸುತ್ತಿದೆ. ಭಂಗೂ ಕಳೆದ ವರ್ಷ ಆಗಸ್ಟ್‌ನಲ್ಲಿ ನಿಧನರಾದರು.

ಟಿಟಿಡಿ ಚರಿತ್ರೆಯಲ್ಲೇ ದೊಡ್ಡ ಹಗರಣ ಎನ್‌ಡಿಎ ವಿರುದ್ಧ ರೆಡ್ಡಿ ಆರೋಪ

ತಿರುಪತಿ (ಪಿಟಿಐ): ‘ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಕೋಟ್ಯಂತರ ರೂಪಾಯಿ ಬೆಲೆಬಾಳುವ ಜಮೀನನ್ನು ಒಬೆರಾಯ್ ಹೋಟೆಲ್ಸ್‌ಗೆ ಹಸ್ತಾಂತರಿಸಲು ಎನ್‌ಡಿಎ ದೊಡ್ಡ ಪಿತೂರಿ ನಡೆಸಿದೆ. ಇದು ದೇವಸ್ಥಾನದ ಇತಿಹಾಸದಲ್ಲೇ ಅತಿ ದೊಡ್ಡ ಹಗರಣ’ ಎಂದು ವೈಎಸ್‌ಆರ್‌ಸಿಪಿ ನಾಯಕ ಬಿ.ಕರುಣಾಕರ ರೆಡ್ಡಿ ಆರೋಪಿಸಿದ್ದಾರೆ.

‘ಸ್ಥಿರಾಸ್ತಿ ಮಾರ್ಗಸೂಚಿ ದರದ ಪ್ರಕಾರ ₹460ಕೋಟಿಗೂ ಹೆಚ್ಚಿನ ಬೆಲೆಬಾಳುವ, ಮುಕ್ತ ಮಾರುಕಟ್ಟೆಯಲ್ಲಿ ₹3 ಸಾವಿರ ಕೋಟಿಗಿಂತ ಹೆಚ್ಚಿನ ಮೌಲ್ಯ ಇರುವ, ಅಲಿಪಿರಿ ಸಮೀಪದ ಸುಮಾರು 20 ಎಕರೆ ಜಮೀನನ್ನು ಪ್ರವಾಸೋದ್ಯಮ ಇಲಾಖೆಯ ₹18 ಕೋಟಿ ಮೌಲ್ಯದ ಜಮೀನಿನೊಂದಿಗೆ ವಿನಿಮಯ ಮಾಡಿಕೊಳ್ಳಲಾಗಿದೆ. ಪ್ರವಾಸೋದ್ಯಮ ಅಭಿವೃದ್ಧಿ ಹೆಸರಿನಲ್ಲಿ ಟಿಟಿಡಿಯ ಕೋಟ್ಯಂತರ ರೂಪಾಯಿ ಮೌಲ್ಯದ ಜಮೀನನ್ನು ಒಬೆರಾಯ್ ಹೋಟೆಲ್ಸ್ ವಶಕ್ಕೆ ಒಪ್ಪಿಸಲು ಎನ್‌ಡಿಎ ಯೋಜನೆ ರೂಪಿಸಿದೆ’ ಎಂದು ಕರುಣಾಕರ ರೆಡ್ಡಿ ದೂರಿದ್ದಾರೆ.

‘ಎನ್‌ಡಿಎ ಅತ್ಯಂತ ವ್ಯವಸ್ಥಿತವಾಗಿ ವೆಂಕಟೇಶ್ವರ ಸ್ವಾಮಿಯ ಜಮೀನು ಕೊಳ್ಳೆ ಹೊಡೆಯುತ್ತಿದೆ. ಪ್ರವಾಸೋದ್ಯಮ ಇಲಾಖೆಯ ಜಮೀನು ವಿನಿಮಯವು ಪಾರದರ್ಶಕವಾಗಿ ನಡೆದಿಲ್ಲ. ಸದ್ದಿಲ್ಲದೆ ನೋಂದಣಿ ನಡೆದಿದೆ. ಒಟ್ಟಾರೆ ಪ್ರಕ್ರಿಯೆ ಅನುಮಾನ ಮೂಡಿಸುವಂತಿದೆ. ಈಗಾಗಲೇ ಒಬೆರಾಯ್ ಸಮೂಹಕ್ಕೆ ಕಟ್ಟಡ ನಿಧಿ ರೂಪದಲ್ಲಿ ₹2 ಕೋಟಿ ಮತ್ತು ಮುದ್ರಾಂಕ ಮತ್ತು ಇತರೆ ಶುಲ್ಕವಾಗಿ ₹26 ಕೋಟಿ ಮನ್ನಾ ಮಾಡಲಾಗಿದೆ. ಈಗಾಗಲೇ ನಡೆದಿರುವ ಜಮೀನು ನೋಂದಣಿಯನ್ನು ರದ್ದುಪಡಿಸಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘2040ಕ್ಕೆ ಕ್ಯಾನ್ಸರ್ ರೋಗಿಗಳು 20 ಲಕ್ಷಕ್ಕೆ’

ನವದೆಹಲಿ (ಪಿಟಿಐ): ‘ಜಗತ್ತಿನಲ್ಲಿ ಕ್ಯಾನ್ಸರ್ ಹರಡುವಿಕೆಯಲ್ಲಿ ಚೀನಾ, ಅಮೆರಿಕದ ನಂತರ ಭಾರತ ಮೂರನೇ ಸ್ಥಾನದಲ್ಲಿದೆ. 2040ರ ವೇಳೆಗೆ ದೇಶದಲ್ಲಿ ಸುಮಾರು 20 ಲಕ್ಷ ಪ್ರಕರಣಗಳಿಗೆ ಏರಿಕೆಯಾಗುವ ಸಾಧ್ಯತೆಯಿದೆ’ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಗುರುವಾರ ಹೇಳಿದರು.

ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ರಜನಿ ಅಶೋಕರಾವ್ ಪಾಟೀಲ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ವಿಶ್ವದಾದ್ಯಂತ ಕ್ಯಾನ್ಸರ್ ಹೆಚ್ಚಾಗಿದೆ. ಪ್ರತಿ ವರ್ಷ 2 ಕೋಟಿ ಮಂದಿ ಕ್ಯಾನ್ಸರ್ ಬಾಧಿತರಾಗುತ್ತಿದ್ದಾರೆ. ಭಾರತದಲ್ಲಿ 15 ಲಕ್ಷ ಮಂದಿ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ’ ಎಂದು ಮಾಹಿತಿ ನೀಡಿದರು.

‘ಮಹಿಳೆಯರ ಗರ್ಭಕಂಠದ ಕ್ಯಾನ್ಸರ್ ಚಿಕಿತ್ಸೆಗಾಗಿ ಮೊದಲ ಬಾರಿಗೆ ಎಚ್‌ಪಿವಿ ಲಸಿಕೆಯನ್ನು ಜೈವಿಕ ತಂತ್ರಜ್ಞಾನ ಇಲಾಖೆ ಅಭಿವೃದ್ಧಿಪಡಿಸಿದೆ. ಇದು ಹೆಚ್ಚಿನ ಜನರಿಗೆ ಕೈಗೆಟುಕುವ ದರದಲ್ಲಿ ಅಥವಾ ಉಚಿತವಾಗಿ ಲಭ್ಯವಾಗುವಂತೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ’ ಎಂದು ತಿಳಿಸಿದರು.

ಪದಬಂಧ 6258

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹರಸುವಾಗ ಕಾಣಿಸಿದ ಆಕಳು (2)
3.ಪ್ರಕೃತಿಗೆ ಸಂಬಂಧಿಸಿದ್ದು (4)
4.ಮರದ ಹತ್ತಿರ ಸಂಭವಿಸಿದ ಸಾವು (3)
6.ಏರುತಗ್ಗಿಲ್ಲದೆ ಸಮನಾಗಿರುವುದು (3)
8.ಪಯಣದಲ್ಲಿ ಕಟ್ಟಿರುವ ಬಾಜಿ! (2)
9.ರಾಜನ ಉತ್ತರಾಧಿಕಾರಿ (4)
12.ಇನ್ನೂ ಮರಿ! ಈ ಹೆಣ್ಣುದುಂಬಿ! (4)
14.ಜನಾನದಲ್ಲಿರುವ ಮಂದಿ! (2)
15.ದಶಕಗಳಿಂದಲೂ ಕಾಡುತ್ತಿರುವ ಸೊಳ್ಳೆ (3)
17.ರಾಮನ ಹತ್ತಿರವಿರುವವನು ಕೃತಘ್ನ (3)
18.ಕ್ರಮವಾಗಿಲ್ಲದಿರುವುದು (4)
19.ಮೂಗಿಗೇರಿಸುವ ತಂಬಾಕಿನ ಹುಡಿ (2)

ಮೇಲಿಂದ ಕೆಳಕ್ಕೆ
2.ಇದು ಹೂವಿನ ಶರ (4)
3.ಆಮ್ಲಜನಕವನ್ನು ಹೀಗೂ ಹೇಳುವರು (4)
5.ಅಟ್ಟಹಾಸ ತೋರುವಾಗ ಮಹಡಿ ಕಾಣಿಸಿದೆಯಲ್ಲಾ! (2)
6.ಮಜವಾಗಿ ಕಾಣುತ್ತಿರುವ ಹಂತ (3)
7.ನೆಮ್ಮದಿ ಈ ರೀತಿ ಬಂದಿದೆ (4)
8.ಶ್ರೇಷ್ಠವಾದ ನೆಲೆ (4)
10.ತರ್ಕ ಮಾಡುತ್ತಿರುವ ವ್ಯಾಪಾರಿ (3)
11.ರಾಗಬದ್ಧವಾಗಿ ಅರ್ಥಪೂರ್ಣವಾಗಿ ಕಾವ್ಯಗಳನ್ನು ಓದುವುದು (3)
13.ಖಾಲಿಯಾದ ಕೈ (4)
14.ಮಂದಿಯ ಮನಸ್ಸು (4)
16.ಮನೋನಿಗ್ರಹವಿದು (2)



6257ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ದೂರದರ್ಶಕ 4.ಸತ್ಕಾರ್ಯ
5.ಮಾತುಲ 6.ಗಮಾರ
8.ಸಾಂದ್ರತೆ 9.ಜಾಮಿತಿ
12.ತಕಲಿ 15.ಲಾವಣಿ
16.ಹಗೇವು 17.ಗರಡಿಮನೆ

ಮೇಲಿಂದ ಕೆಳಕ್ಕೆ:
1.ದೂತಾವಾಸ 2.ದಟ್ಟದರಿದ್ರ
3.ಕಮಾನು 4.ಸಲಗ
7.ಮಾರುತಿ 8.ಸಾಂಘಿಕ
10.ಮಿಟಕಲಾಡಿ 11.ಸೆರೆಮನೆ
13.ಲಿಲಾವು 14.ತಣಿಗ

ಸುಡೊಕು 6642

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6				8			5
1		3		6		8	9	4
	8		5					
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	

6641 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ಸಾಮಾನ್ಯನೊಬ್ಬನ ಅಸಾಮಾನ್ಯ ಸಾಧನೆ

ನುಡಿ ಬೆಳಗು

ರೇಣುಕಾ ನಿಡಗುಂದಿ

ದಶರಥ್ ಮಾಂಝಿ ಹೆಸರನ್ನು ಕೇಳದವರು ಬಹುಶಃ ಇರಲಿಕ್ಕಿಲ್ಲ. ಬೆಟ್ಟವನ್ನೇ ಕಡಿದು ರಸ್ತೆ ನಿರ್ಮಿಸಿದವರು ಮಾಂಝಿ. ಬಿಹಾರದ ಗಹ್ಲೌರ್ ಗ್ರಾಮದಲ್ಲಿ ದಶರಥ್ ಮಾಂಝಿ ಎಂಬ ಕೂಲಿಯಾಳು ವಾಸಿಸುತ್ತಿದ್ದ. ಆ ಕುಗ್ರಾಮದಲ್ಲಿ ಒಂದು ಆಸ್ಪತ್ರೆಯೂ ಇದ್ದಿಲ್ಲ. ಅಲ್ಲಿಂದ ಪಕ್ಕದ ಇನ್ನೊಂದು ಗ್ರಾಮಕ್ಕೆ ಹೋಗಲು ರಸ್ತೆಯೂ ಇದ್ದಿಲ್ಲ. ಏನಾದರೂ ಆಪತ್ಕಾಲ ಸಂಭವಿಸಿದರೆ ತಮ್ಮ ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬೇಕೆಂದರೆ ಎರಡೂ ಹಳ್ಳಿಗಳ ನಡುವಿನ ಆ ಬೃಹತ್ ಬೆಟ್ಟವನ್ನು ಹತ್ತಿ ದಾಟಿಹೋಗಬೇಕಿತ್ತು. ಒಮ್ಮೆ ಅವನ ಪತ್ನಿ ಫಲ್ಗುಣಿ ರೋಗಿಯಾಗಿ ಬೆಟ್ಟ ದಾಟಿ ಆಸ್ಪತ್ರೆಗೆ ತಲುಪಲಾಗದೆ ಮಡಿದಳು. ಆ ನೋವು, ಹತಾಶೆಯಲ್ಲಿ ದಶರಥ್ ಕೇವಲ ಸುತ್ತಿಗೆ ಮತ್ತು ಚಾಣದಿಂದ ಬೆಟ್ಟವನ್ನು ಕಡಿಯತೊಡಗಿದ.

ರಸ್ತೆ ನಿರ್ಮಾಣ ಸುಲಭದ್ದಾಗಿರಲಿಲ್ಲ. ದಿನಗಳು ತಿಂಗಳಾದವು, ತಿಂಗಳುಗಳು ವರ್ಷಗಳಾದವು. ಎಷ್ಟೋ ಬಾರಿ ಕೈಯಲ್ಲಿ ಬೊಬ್ಬೆಗಳೆದ್ದವು, ಕೈಯಲ್ಲಿ ರಕ್ತ ಒಸರಿತು. ಬೆನ್ನುಮೂಳೆ ನೋವಿನಿಂದ ನರಳಿತು. ಎಷ್ಟೋ ಬಾರಿ ಹಸಿವೆಯಿಂದ ಕಣ್ಣು ಕತ್ತಲಿಟ್ಟು ಕುಸಿದು ಬಿದ್ದ. ಆದರೂ ಬೆಟ್ಟ ಕಡಿಯುವ ಅವನ ಕೈಗಳು ನಿಲ್ಲಲಿಲ್ಲ. ಸುತ್ತಿಗೆಯ ಪೆಟ್ಟು ದುರ್ಬಲಗೊಳ್ಳಲಿಲ್ಲ. ಜನರು ಅವನನ್ನು ತಡೆದರೂ ದಶರಥ ನಿಲ್ಲಲಿಲ್ಲ. ಹತ್ತು ವರ್ಷ ಕಳೆದಾಗ ಒಂದು ಕಿರುದಾರಿ ಮಾತ್ರ ಕಾಣಿಸಿತು. ಹದಿನೈದು ವರ್ಷಗಳಲ್ಲಿ ಮನುಷ್ಯ ನಡೆದಾಡುವಷ್ಟು ಹಾದಿ ತಯಾರಾಯ್ತು. 20 ವರ್ಷಗಳ ಬಳಿಕ ಕತ್ತಲಿನಲ್ಲಿ ಬೆಳಕು ಕಾಣುವಷ್ಟು ಹಾದಿ. 22ನೇ ವರ್ಷದಲ್ಲಿ ಆ ಬೃಹತ್ ಬೆಟ್ಟ ಕರಗಿ ಜನರ ಜೀವ ರಕ್ಷಿಸುವ ದಾರಿಯಾಯ್ತು.

ಊರವರು ಹುಚ್ಚನೆಂದು ಗೇಲಿ ಮಾಡಿದರು, ಕೆಲ ಹಿತೈಷಿಗಳು ಇದು ಆಗದ ಕೆಲಸ, ಸರ್ಕಾರಕ್ಕೂ ಅಸಾಧ್ಯವಾಗಿದೆ ಎಂದು ಬುದ್ಧಿ ಹೇಳಿ ನೋಡಿದರು. ಆದರೂ ದಶರಥ್ ಧೈರ್ಯಗುಂದಲಿಲ್ಲ. ತನ್ನ ಕಾಯಕವನ್ನು ನಿಲ್ಲಿಸಲಿಲ್ಲ. ಕಡೆಗೂ ತನ್ನ ನಿರಂತರ ಪರಿಶ್ರಮದಿಂದ 360 ಅಡಿ ಉದ್ದ, 30 ಅಡಿ ಅಗಲದ ರಸ್ತೆ ನಿರ್ಮಿಸಿದರು. ಹೀಗೆ ಅಸಾಧ್ಯವೆಂದು ಹೀಗಳೆದ ಕಾರ್ಯವನ್ನು ದಶರಥ್ ಮಾಂಝಿ ಸಾಧಿಸಿ ತೋರಿಸಿದ್ದರು. ಅದು ತನಗೊಬ್ಬನಿಗಾಗಿ ಅಲ್ಲ, ಸಮಸ್ತ ಮಾನವಕುಲಕ್ಕಾಗಿ. ತಾನುಂಡ ನೋವು ಇನ್ನೊಬ್ಬರು ಉಣ್ಣದಿರಲಿ ಎಂದು. ಹೀಗಾದರೂ ತನ್ನ ಜನ್ಮ ಸಾರ್ಥಕಗೊಳ್ಳಲಿ ಎಂದು. ಇಂದು ಆ ರಸ್ತೆಯಿಂದ 60 ಗ್ರಾಮಗಳ ಜನರಿಗೆ ಆಸ್ಪತ್ರೆ, ಮಕ್ಕಳಿಗೆ ಶಾಲೆ ಸಿಗುವಂತಾಗಿದೆ. ಕುಗ್ರಾಮವಾಗಿದ್ದ ಹಳ್ಳಿಗೆ ಎಲ್ಲ ಸವಲತ್ತುಗಳೂ ಸಿಗುವಂತಾಗಿದೆ. ಇದೇ ದಶರಥ್ ಮಾಂಝಿಯ ಪ್ರೇರಣೆ ಪಡೆದ ‘ದಿ ಮೌಂಟನ್ ಮ್ಯಾನ್’ ಎಂಬ ಸಿನಿಮಾವೂ ತೆರೆಗೆ ಬಂದಿದ್ದು ನೆನಪಿರಬಹುದು.

ಒಬ್ಬನ ನೋವು ಧೃಡ ಸಂಕಲ್ಪ ಸಮಾಜಕ್ಕೆ ಬೆಳಕಾಗಬಹುದು, ಇಡೀ ಹಳ್ಳಿಯ ಭವಿಷ್ಯವನ್ನೇ ಬದಲಿಸಬಹುದು ಎಂಬುದಕ್ಕೆ ದಶರಥ್ ಮಾಂಝಿ ಬದುಕೇ ಸಾಕ್ಷಿ. ಆದರೆ ಸ್ವಾರ್ಥವೇ ತುಂಬಿದ ಜಗತ್ತಿನಲ್ಲಿ ಸಮಾಜಕ್ಕಾಗಿ, ಸಮುದಾಯದ ಹಿತಕ್ಕಾಗಿ ನಿಸ್ವಾರ್ಥವಾಗಿ ಶ್ರಮಿಸುವವರು ತೀರಾ ವಿರಳ.

ಗಣೇಶನ ಪೂಜೆ, ದುರ್ಗಾ ಪೂಜೆ ಇತ್ಯಾದಿಗಳಿಗೆ ಚಂದಾ ಕೊಡುವ, ದೇವಸ್ಥಾನದ ಹುಂಡಿಗಳಿಗೆ, ದೇವರುಗಳಿಗೆ ಚಿನ್ನ ಬೆಳ್ಳಿಯ ಕಾಣಿಕೆಯನ್ನು ಹಾಕುವ ಜನರು ತಮ್ಮ ಮುಂದೆಯೇ ಕಷ್ಟದಲ್ಲಿರುವಾಗ ಅನುಕಂಪ ತೋರುವುದಿಲ್ಲ. ಅಂತಃಕರಣ ಕರಗುವುದಿಲ್ಲ. ಎಲ್ಲರೂ ಮಾಂಝಿಯಾಗಲು ಸಾಧ್ಯವಿಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

19 ಡಿಸೆಂಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಅಮಾವಾಸ್ಯೆ ಆಹೋರಾತ್ರ ನಕ್ಷತ್ರ: ಜ್ಯೇಷ್ಠ ಗಂ. 22-51 ಯೋಗ: ಶೂಲ ಗಂ. 15-47 ಕರಣ: ಚತುಷ್ಪಾದ ಗಂ. 18-08 ಧನು ಮಾಸದ 04 ನೇ ದಿನ. ಮಳೆ ನಕ್ಷತ್ರ : ಮೂಲ 2 ನೇ ಪಾದ. **ರಾಹುಕಾಲ :** ಬೆಳಿಗ್ಗೆ 10-30 - 12-00 , **ಸೂರ್ಯೋದಯ :** 06-51 **ಸೂರ್ಯಾಸ್ತ :** 06-04, **ಮುಸ್ಲಿಂ ದಿನಾಂಕ :** 27 ಜುಮಾದುಸ್ಸಾನಿ, **ಅದೃಷ್ಟ ಸಂಖ್ಯೆ :** 9, 11

ಮೇಷ: ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸಿ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಿ. ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳಾವಕಾಶ ಹುಡುಕಾಟದ ಕೆಲಸ ಆರಂಭಿಸುವಿರಿ.

ವೃಷಭ: ದೇಹದಲ್ಲಿ ಉತ್ಸಾಹವಿರುವುದರಿಂದ ಯಶಸ್ಸು ದೊರೆಯುವುದು. ಇನ್ನೊಬ್ಬರಿಗೆ ಬೆಲೆ ಕೊಟ್ಟು ನೀವು ಬೆಲೆ ಸಂಪಾದಿಸಿಕೊಳ್ಳುವುದನ್ನು ಅಭ್ಯಾಸಿಸಿ. ಶತ್ರುಗಳ ಬಾಧೆ ದೂರಾಗಿ ಯೋಜನೆಗಳು ಈಡೇರಲಿವೆ.

ಮಿಥುನ: ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯವನ್ನು ಸೂಕ್ತ ರೀತಿಯಲ್ಲಿ ಮಾಡಿಕೊಳ್ಳಿ. ಸಂಘ ಸಂಸ್ಥೆಗಳಲ್ಲಿ ಅಧಿಕಾರ ಹೊರುವ ಸಂದರ್ಭವು ಬಂದಲ್ಲಿ, ಹಿಂದೆ ಸರಿಯುವುದು ಉತ್ತಮ. ರಕ್ತದೊತ್ತಡವು ನಿಯಂತ್ರಣಕ್ಕೆ ಬರುವುದು.

ಕರ್ಕಾಟಕ: ದವಸ ಧಾನ್ಯ ಹಾಗೂ ಮಸಾಲಾ ಸಾಮಗ್ರಿಗಳ ಸಗಟು ಹಾಗೂ ರಫ್ತು ವ್ಯಾಪಾರಿಗಳಿಗೆ ಅನುಕೂಲವಾಗುವುದು. ಮನೆಯಲ್ಲಿ ದುರ್ಗಾ ಸ್ತೋತ್ರ ಪಠಿಸಿದರೆ ಯಶಸ್ಸು ದೊರೆಯುವುದು.

ಸಿಂಹ: ಹೆಚ್ಚಿನ ಆತ್ಮಸ್ಥೈರ್ಯದಿಂದ ಕೆಲಸವನ್ನು ಪ್ರಾರಂಭಿಸಿದರೂ ಜಯ ಕಾಣುವಿರಿ. ಧಾರ್ಮಿಕ ವಿಚಾರದಲ್ಲಿ ಆಸಕ್ತಿ ತೋರಿದಷ್ಟೂ ಸುಖ-ಶಾಂತಿ ಹೆಚ್ಚುವುದು. ಸ್ಪರ್ಧಾ ಮನೋಭಾವ ತೀವ್ರಗೊಳ್ಳುವುದು.

ಕನ್ಯಾ: ವೈಯಕ್ತಿಕ ಕೆಲಸಗಳಿಗೆ ಮೇಲಧಿಕಾರಿಗಳಿಂದ ಅಡಚಣೆ ಇರುವುದಿಲ್ಲ. ಹಿರಿಯರ ಆಶೀರ್ವಾದದಿಂದ ಕಾರ್ಯಗಳಲ್ಲಿ ಜಯ ಹೊಂದುವಿರಿ. ಗೆಳೆಯರೊಂದಿಗೆ ಪ್ರವಾಸ ಹೋಗಲು ದಿನ ನಿಶ್ಚಿತವಾಗುವುದು.

ತುಲಾ: ಕೀಳರಿಮೆ, ಹಿಂಜರಿಕೆಯ ಸ್ವಭಾವ ಅಥವಾ ಅಹಂಕಾರದ ನಡವಳಿಕೆಯನ್ನು ಬಿಟ್ಟು ಕಾರ್ಯ ಕೈಗೊಳ್ಳಲು ಮುಂದಾಗಿ, ಗೆಲುವು ನಿಮ್ಮದಾಗುತ್ತದೆ. ವಿದೇಶಿ ವಸ್ತುಗಳ ಖರೀದಿಗಾಗಿ ಅಧಿಕ ಮಟ್ಟದಲ್ಲಿ ಧನವ್ಯಯ ಮಾಡುವಿರಿ.

ವೃಶ್ಚಿಕ: ಮನೆಯ ದಾಖಲೆ ಪತ್ರಗಳನ್ನು, ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಸರಿಪಡಿಸಿಕೊಳ್ಳುವ ಕಾರ್ಯದ ಬಗ್ಗೆ ಯೋಚನೆ ಮಾಡಿ. ಪೊಲೀಸ್ ವೃತ್ತಿಯಲ್ಲಿರುವವರಿಗೆ ಸಂಚಾರ ಕಂಡುಬರಲಿದೆ.

ಧನು: ಮಾನಸಿಕ ನೆಮ್ಮದಿಗಾಗಿ ಧಾರ್ಮಿಕ ಕಾರ್ಯಗಳನ್ನು ಅಥವಾ ಪುಣ್ಯಕ್ಷೇತ್ರಗಳ ದರ್ಶನ ಮಾಡಲಿರುವಿರಿ. ವಿದ್ಯಾರ್ಥಿಗಳಿಗೆ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಲು ಅವಕಾಶಗಳು ಸಿಗಲಿವೆ.

ಮಕರ: ಅತಿಯಾದ ಔದಾರ್ಯತನ ತೋರಬೇಕೆನಿಸಿದಲ್ಲಿ ಹಣಕಾಸಿನ ಸ್ಥಿತಿಯನ್ನು ಗಮನಿಸಿಕೊಳ್ಳಿರಿ. ಸಂಗೀತದಲ್ಲಿ ಪರಿಣತಿ ಹೊಂದಿರುವವರಿಗೆ ಅವಕಾಶಗಳು ಅರಸಿ ಬರಲಿವೆ.

ಕುಂಭ: ಕಲೆ, ಅಲಂಕಾರಿಕ ಹಾಗೂ ವೈಭೋಗ ವಸ್ತುಗಳಿಂದ ಲಾಭಾಂಶವನ್ನು ನಿರೀಕ್ಷಿಸಬಹುದು. ಪರಿಸ್ಥಿತಿಯನ್ನು ಬುದ್ಧಿವಂತಿಕೆ ಮತ್ತು ಬಹಳ ಎಚ್ಚರಿಕೆಯಿಂದ ನಿಭಾಯಿಸಬೇಕು.

ಮೀನ: ವ್ಯವಹಾರದಲ್ಲಿ ಲಾಭಾಂಶ ಕಡಿಮೆಯಾದರೂ ಮೂಲಧನಕ್ಕೆ ಮೋಸವಾಗುವುದಿಲ್ಲ. ರಾಜಕೀಯ ವಿದ್ಯಮಾನಗಳಿಂದಾಗಿ ಓಡಾಟ ಅಧಿಕಗೊಳ್ಳುವುದು. ಶ್ರಮದ ಬದುಕಿನಿಂದ ಹೊಸ ಘಟ್ಟವನ್ನು ತಲುಪುವಂತಾಗಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,818
ಇಂದಿನ ಅಂತ್ಯ: 25,815
ದಿನದ ಕನಿಷ್ಠ: 25,726
3

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹690
12 ಕ್ಕೆ ₹96
ಮೈಸೂರು: 100 ಕ್ಕೆ ₹690

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹179.50
ಆರ್‌ಎಸ್‌ಎಸ್-5 ₹174.50
ಗುಡ್ ಲಾಟ್ ₹162.50

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹536-770
ದ್ವಿತಳಿ (ಬಿ.ವಿ) ₹435-935

ಮುದ್ರೆಮನೆ ಕಾಫಿ
ಎಪಿ ₹26900
ಎಸಿ ₹14840
ಆರ್‌ಪಿ ₹16500
ಆರ್‌ಸಿ ₹9360

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1570 (1500)
ಸೋಯಾ (ರಿಫೈನ್ಡ್) ₹1275 (1275)
ಸೂರ್ಯಕಾಂತಿ (ರಿಫೈನ್ಡ್) ₹1485 (1475)
ಪಾಮೋಲಿನ್ ₹1245 (1245)

ಭಾರತ–ಒಮಾನ್ ವ್ಯಾಪಾರ ಒಪ್ಪಂದಕ್ಕೆ ಸಹಿ

ಪ್ರಧಾನಿ ನರೇಂದ್ರ ಮೋದಿಗೆ 'ಆರ್ಡರ್ ಆಫ್ ಒಮಾನ್' ಪ್ರಶಸ್ತಿ

ಮಸ್ಕತ್ (ಪಿಟಿಐ): ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದಕ್ಕೆ (ಸಿಇಟಿಎ) ಭಾರತ ಮತ್ತು ಒಮಾನ್ ಗುರುವಾರ ಸಹಿ ಹಾಕಿವೆ. ಈ ಒಪ್ಪಂದವು ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಹೊಸ ಭರವಸೆ ಮತ್ತು ಬಲವನ್ನು ನೀಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಹೇಳಿದ್ದಾರೆ.

ಭಾರತ–ಒಮಾನ್ ವ್ಯಾಪಾರ ವೇದಿಕೆಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಈ ಒಪ್ಪಂದವು ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧಕ್ಕೆ ಹೊಸ ದಿಕ್ಕನ್ನು ನೀಡುತ್ತದೆ ಮತ್ತು ಪರಸ್ಪರ ಬೆಳವಣಿಗೆಗೆ ಅವಕಾಶ ಕಲ್ಪಿಸುತ್ತದೆ. ಪ್ರತಿಯೊಂದು ವಲಯದಲ್ಲಿಯೂ ಅವಕಾಶದ ಹೊಸ ಬಾಗಿಲನ್ನು ತೆರೆಯುತ್ತದೆ' ಎಂದಿದ್ದಾರೆ.

ಈ ಒಪ್ಪಂದವು ಗಲ್ಫ್ ದೇಶದ ಜವಳಿ, ಕೃಷಿ ಮತ್ತು ಚರ್ಮದ ಉತ್ಪನ್ನಗಳು ಸೇರಿದಂತೆ ಭಾರತದಿಂದ ರಫ್ತಾಗುವ ಶೇ 98ರಷ್ಟು ವಸ್ತುಗಳಿಗೆ ತೆರಿಗೆ ಮುಕ್ತ ಪ್ರವೇಶ ಒದಗಿಸುತ್ತದೆ.

'ಭಾರತವು ಯಾವಾಗಲೂ ಪ್ರಗತಿಪರ ಮತ್ತು ಸ್ವಾವಲಂಬಿ ದೇಶವಾಗಿದೆ. ಭಾರತ ಬೆಳೆದಂತೆಲ್ಲ, ಅದು ತನ್ನ ಸ್ನೇಹಿತರಿಗೂ ಬೆಳೆಯಲು ಸಹಾಯ ಮಾಡುತ್ತದೆ. ಭಾರತವು ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆ ರಾಷ್ಟ್ರವಾಗುವತ್ತ ಸಾಗಿದೆ. ಇದು ಇಡೀ ಜಗತ್ತಿಗೆ ಪ್ರಯೋಜನಕಾರಿ. ಅದರಲ್ಲೂ ಒಮಾನ್ ಭಾರತದ ಆತ್ಮೀಯ ದೇಶವಾಗಿರುವುದರಿಂದ ಅದಕ್ಕೆ ಹೆಚ್ಚು ಪ್ರಯೋಜನವಾಗಲಿದೆ' ಎಂದು ಹೇಳಿದ್ದಾರೆ.

'ಭಾರತ ಮತ್ತು ಒಮಾನ್‌ನ ವ್ಯಾವಹಾರಿಕ ಸಂಬಂಧವು ತಲೆಮಾರುಗಳಿಂದ ನಂಬಿಕೆಯ ಬುನಾದಿಯ ಮೇಲೆ ನಿಂತಿದೆ. ಉಭಯ ದೇಶಗಳ ನಾವು ಪರಸ್ಪರ ಮಾರುಕಟ್ಟೆಗಳನ್ನು ಅರ್ಥಮಾಡಿಕೊಂಡಿದ್ದೇವೆ' ಎಂದಿದ್ದಾರೆ.

ಅಭಿವೃದ್ಧಿಯಲ್ಲಿ ಪಾಲುದಾರರಾಗುವಂತೆ ಒಮಾನ್ ಕಂಪನಿಗಳಿಗೆ ಪ್ರಧಾನಿ ಕರೆ ನೀಡಿದ್ದಾರೆ.

ಎರಡು ದಿನಗಳ ಮಸ್ಕತ್ ಭೇಟಿಯನ್ನು ಪ್ರಧಾನಿ ಅಂತ್ಯಗೊಳಿಸಿ, ಭಾರತದತ್ತ ಪ್ರಯಾಣ ಬೆಳೆಸಿದರು.

'ಮೈತ್ರಿ ಪರ್ವ'ದಲ್ಲಿ ಪ್ರಧಾನಿ ಮಾತು

21ನೇ ಶತಮಾನದಲ್ಲಿ ಭಾರತವು ತ್ವರಿತವಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುತ್ತಿದೆ. ದೊಡ್ಡ ಗುರಿಗಳನ್ನು ಇಟ್ಟುಕೊಂಡು, ನಿರ್ದಿಷ್ಟ ಸಮಯದಲ್ಲಿ ಫಲಿತಾಂಶ ಪಡೆಯುವುದು ಇದರ ಉದ್ದೇಶ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಹೇಳಿದ್ದಾರೆ.

ಮಸ್ಕತ್‌ನಲ್ಲಿ ನಡೆದ 'ಮೈತ್ರಿ ಪರ್ವ' ಕಾರ್ಯಕ್ರಮದಲ್ಲಿ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಅವರು, 'ನಮ್ಮ ದೀಪ ಈಗ ನಮ್ಮ ಮನೆಗಳಲ್ಲಿ ಮಾತ್ರವಲ್ಲದೆ ಇಡೀ ಜಗತ್ತನ್ನೇ ಬೆಳಗುತ್ತಿದೆ' ಎಂದಿದ್ದಾರೆ.

'ದೀಪಾವಳಿ ಹಬ್ಬಕ್ಕೆ ದೊರೆತಿರುವ ಜಾಗತಿಕ ಮನ್ನಣೆಯು ಭರವಸೆ, ಸೌಹಾರ್ದ ಮತ್ತು ಮಾನವೀಯತೆಯ ಸಂದೇಶ ಹರಡುವ ನಮ್ಮ ಗುರಿಗೆ ಸಿಕ್ಕ ಗೌರವವಾಗಿದೆ. ಇದು ಎಲ್ಲ ಭಾರತೀಯರು ಹೆಮ್ಮೆಪಡುವ ವಿಷಯವಾಗಿದೆ' ಎಂದು ಹೇಳಿದ್ದಾರೆ.

ಮಸ್ಕತ್‌ನಲ್ಲಿ ಗುರುವಾರ ನಡೆದ ಮೈತ್ರಿ ಪರ್ವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾರತೀಯರನ್ನು ಭೇಟಿ ಮಾಡಿದರು ಪಿಟಿಐ ಚಿತ್ರ

ಒಮಾನ್ ಜೊತೆಗಿನ ಒಪ್ಪಂದದಲ್ಲಿ ಏನಿದೆ?

- ಒಮಾನ್‌ನಿಂದ ಭಾರತಕ್ಕೆ ಆಮದಾಗುವ ಹೈನುಗಾರಿಕಾ ಉತ್ಪನ್ನಗಳು, ಚಾಕಲೇಟ್, ಚಿನ್ನ, ಬೆಳ್ಳಿ, ಆಭರಣ, ಪಾದರಕ್ಷೆ, ಕ್ರೀಡಾ ಸರಕುಗಳಿಗೆ ತೆರಿಗೆ ವಿನಾಯಿತಿ ಇರುವುದಿಲ್ಲ. ಈ ಮೂಲಕ ಭಾರತವು ತನ್ನ ಕೃಷಿಕರ ಹಾಗೂ ಎಂಎಸ್‌ಎಂಇ ವಲಯದ ಹಿತವನ್ನುಕಾಯ್ದಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.
- ಚಹಾ, ಕಾಫಿ, ರಬ್ಬರ್, ತಂಬಾಕಿನ ಉತ್ಪನ್ನಗಳು, ಹಲವು ಕೃಷಿ ಉತ್ಪನ್ನಗಳಿಗೆ ಭಾರತವು ತೆರಿಗೆ ವಿನಾಯಿತಿ ನೀಡಿಲ್ಲ.
- ಖರ್ಜೂರ, ಅಮೃತಶಿಲೆ, ಪೆಟ್ರೊಕೆಮಿಕಲ್ ಉತ್ಪನ್ನಗಳಿಗೆ ಕೋಟಾ ನಿಗದಿ ಮಾಡಲಾಗುತ್ತದೆ. ಆ ಕೋಟಾ ಮಿತಿಯಲ್ಲಿ ತೆರಿಗೆ ವಿನಾಯಿತಿ ನೀಡಲಾಗುತ್ತದೆ. ಕೋಟಾದಲ್ಲಿ ನಿಗದಿ ಮಾಡಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಈ ಉತ್ಪನ್ನಗಳು ಭಾರತಕ್ಕೆ ಆಮದಾದಲ್ಲಿ ಅವುಗಳಿಗೆ ನಿಗದಿತ ಸುಂಕ ವಿಧಿಸಲಾಗುತ್ತದೆ.
- ಅಮೃತಶಿಲೆಯನ್ನು ರಫ್ತು ಮಾಡುವುದಕ್ಕೆ ಒಮಾನ್ ನಿಷೇಧ ಹೇರಿದ್ದರೂ ಭಾರತದ ಮಟ್ಟಿಗೆ ಆ ನಿಷೇಧವನ್ನು ಸಡಿಲಿಸಲಾಗಿದೆ ಎಂದು ಒಮಾನ್‌ನ ಅಧಿಕಾರಿಯೊಬ್ಬರು ಹೇಳಿದ್ದಾರೆ.
- ನೈಸರ್ಗಿಕ ಜೇನುತುಪ್ಪ, ಗೋಡಂಬಿ, ಆಲೂಗೆಡ್ಡೆ, ಬೋನ್‌ಲೆಸ್ ಮಾಂಸ, ಬೇಕರಿ ಉತ್ಪನ್ನಗಳು ಭಾರತದಿಂದ ಒಮಾನ್ ಮಾರುಕಟ್ಟೆಯನ್ನು ಸುಂಕರಹಿತವಾಗಿ ಪ್ರವೇಶಿಸಬಹುದು.
- ಭಾರತದಿಂದ ಬರುವ ಚೀಸ್, ಮೊಸರು, ಹಾಲು, ಘನೀಕರಿಸಿದ ಮೀನು, ಬೆಣ್ಣೆ, ಮಾಂಸ, ಯೋಗರ್ಟ್, ಬ್ರೆಡ್, ಪೇಸ್ಟ್ರಿ, ಕೇಕ್, ಚಾಕಲೇಟ್, ಸಕ್ಕರೆಯ ತಿನಿಸು, ಖನಿಜಯುಕ್ತ ನೀರಿನ ಮೇಲಿನ ಸುಂಕವನ್ನು ತೆಗೆಯುವುದಾಗಿ ಒಮಾನ್ ಹೇಳಿದೆ.
- ವರ್ಷವೊಂದರಲ್ಲಿ ಒಮಾನ್‌ನಿಂದ 2,000 ಟನ್‌ವರೆಗೆ ಖರ್ಜೂರವನ್ನು ಸುಂಕರಹಿತವಾಗಿ ಭಾರತಕ್ಕೆ ಆಮದು ಮಾಡಿಕೊಳ್ಳಬಹುದು.
- ಒಮಾನ್‌ನಲ್ಲಿ ಕಾರ್ಯ ನಿರ್ವಹಿಸುವ ಭಾರತೀಯ ಕಂಪನಿಗಳು ಅಲ್ಲಿನ ಕಚೇರಿಗಳಲ್ಲಿ ಕೆಲಸ ಮಾಡಬೇಕಿರುವ ಸಿಬ್ಬಂದಿಯ ಪೈಕಿ ಶೇ 50ರಷ್ಟು ಮಂದಿಯನ್ನು ಭಾರತದ ಕಚೇರಿಯಿಂದ ಕರೆಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ.

ಸುದ್ದಿ 2 ನಿಮಿಷ

ರೂಪಾಯಿ ಮೌಲ್ಯ ಕುಸಿತಕ್ಕೆ ತಲೆ ಕೆಡಿಸಿಕೊಂಡಿಲ್ಲ: ಸನ್ಯಾಲ್

ನವದೆಹಲಿ (ಪಿಟಿಐ): ರೂಪಾಯಿ ಮೌಲ್ಯದ ಕುಸಿತದ ಬಗ್ಗೆ ತಾವು ಒಂದಿನಿತೂ ತಲೆ ಕೆಡಿಸಿಕೊಂಡಿಲ್ಲ ಎಂದು ಪ್ರಧಾನ ಮಂತ್ರಿಯವರ ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಸಂಜೀವ್ ಸನ್ಯಾಲ್ ಗುರುವಾರ ಹೇಳಿದ್ದಾರೆ.

ಆರ್ಥಿಕ ಬೆಳವಣಿಗೆಯು ತೀವ್ರವಾಗಿದ್ದ ಅವಧಿಯಲ್ಲಿ ಚೀನಾ ಮತ್ತು ಜಪಾನ್‌ನ ಕರೆನ್ಸಿಗಳು ಕೂಡ ಇದೇ ಬಗೆಯಲ್ಲಿ ಕುಸಿತ ಕಂಡಿದ್ದವು ಎಂದು ಸನ್ಯಾಲ್ ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, '90ರ ದಶಕದ ನಂತರದಲ್ಲಿ ರೂಪಾಯಿಗೆ ತನ್ನ ಮೌಲ್ಯವನ್ನು ತಾನಾಗಿಯೇ ಕಂಡುಕೊಳ್ಳಲು ಅವಕಾಶ ನೀಡಲಾಗಿದೆ. ಆದರೆ ಅತಿಯಾದ ಅಸ್ಥಿರತೆಯನ್ನು ತಡೆಯಲು ಆರ್‌ಬಿಐ ತನ್ನಲ್ಲಿನ ಮೀಸಲನ್ನು ಬಳಕೆ ಮಾಡಿಕೊಳ್ಳುತ್ತದೆ' ಎಂದು ತಿಳಿಸಿದ್ದಾರೆ.

'ರೂಪಾಯಿ ಮತ್ತು ಅದು ಈಗ ಕಾಣುತ್ತಿರುವ ಅಪಮೌಲ್ಯವನ್ನು ಯಾವುದೋ ಆರ್ಥಿಕ ಚಿಂತೆಯ ಜೊತೆ ಸಮೀಕರಿಸಬಾರದು. ಏಕೆಂದರೆ, ಇತಿಹಾಸವನ್ನು ಗಮನಿಸಿದರೆ ಅರ್ಥ ವ್ಯವಸ್ಥೆಯು ಬಹಳ ವೇಗದ ಬೆಳವಣಿಗೆ ಕಾಣುವ ಸಂದರ್ಭದಲ್ಲಿ ಕರೆನ್ಸಿಯ ಮೌಲ್ಯ ಹಲವು ಬಾರಿ ಕುಸಿತ ಕಂಡಿರುವುದು ಗೊತ್ತಾಗುತ್ತದೆ' ಎಂದು ಅವರು ಹೇಳಿದ್ದಾರೆ.

ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಮಂಗಳವಾರ 91ಕ್ಕಿಂತ ಕಡಿಮೆ ಮಟ್ಟಕ್ಕೆ ಕುಸಿದಿದೆ. 'ಜಪಾನಿನ ಅರ್ಥ ವ್ಯವಸ್ಥೆಯು ಬಹಳ ವೇಗವಾಗಿ ಬೆಳೆಯುತ್ತಿದ್ದಾಗ ಅಲ್ಲಿನ ಕರೆನ್ಸಿಯು ಬಹಳ ದುರ್ಬಲವಾಗಿತ್ತು. ಚೀನಾ ಇದೇ ಪರಿಸ್ಥಿತಿಯನ್ನು 90ರ ದಶಕದಲ್ಲಿ ಹಾಗೂ 2000ನೇ ಇಸವಿಯ ನಂತರದಲ್ಲಿ ಕಂಡಿತ್ತು' ಎಂದಿದ್ದಾರೆ.

'ಹೀಗಾಗಿ ರೂಪಾಯಿ ಮೌಲ್ಯದ ಇಳಿಕೆಯು ದೇಶದಲ್ಲಿ ಹಣದುಬ್ಬರಕ್ಕೆ ಕಾರಣವಾಗುತ್ತಿಲ್ಲದಿದ್ದರೆ, ಮೌಲ್ಯ ಇಳಿಕೆಯೊಂದೇ ಏನನ್ನೂ ಧ್ವನಿಸುವುದಿಲ್ಲ. ಮೌಲ್ಯ ಇಳಿಕೆಯಿಂದಾಗಿ ಹಣದುಬ್ಬರ ಹೆಚ್ಚಾಗುತ್ತಲೂ ಇಲ್ಲ' ಎಂದು ಅವರು ಹೇಳಿದ್ದಾರೆ.

ವೀಸಾ ಕೇಂದ್ರ ಪುನರಾರಂಭ

ಢಾಕಾ (ಪಿಟಿಐ): ಭದ್ರತಾ ಕಾರಣಗಳಿಂದಾಗಿ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ಢಾಕಾದಲ್ಲಿರುವ ಭಾರತೀಯ ವೀಸಾ ಕೇಂದ್ರವು ಗುರುವಾರ ಮತ್ತೆ ತನ್ನ ಕಾರ್ಯಾಚರಣೆ ಆರಂಭಿಸಿದೆ.

ಭಾರತ ವಿರೋಧಿ ಗುಂಪಿನ ಪ್ರತಿಭಟನಕಾರರು ಬುಧವಾರ ಭಾರತೀಯ ಹೈಕಮಿಷನ್‌ನತ್ತ ಧಾವಿಸಿದ ಕಾರಣ ಎದುರಾಗಬಹುದಾದ ಭದ್ರತಾ ಸವಾಲುಗಳನ್ನು ಪರಿಗಣಿಸಿ, ಢಾಕಾದಲ್ಲಿನ ವೀಸಾ ಕೇಂದ್ರವು ತಾತ್ಕಾಲಿಕವಾಗಿ ಕಾರ್ಯಾಚರಣೆ ಸ್ಥಗಿತಗೊಳಿಸಿತ್ತು.

ಇದಕ್ಕೆ ಸಂಬಂಧಿಸಿದಂತೆ ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಬಾಂಗ್ಲಾ ರಾಯಭಾರಿಗೆ ಸಮನ್ಸ್ ನೀಡಿತ್ತು. ಬಳಿಕ ಗುರುವಾರ ಎಂದಿನಂತೆ ವೀಸಾ ಕೇಂದ್ರದ ಕಾರ್ಯಾಚರಣೆ ಆರಂಭವಾಗಿದೆ.

ಆದರೆ, ಖುಲ್ನಾ ಮತ್ತು ರಾಜಶಾಹಿ ಪ್ರದೇಶಗಳಲ್ಲಿರುವ ಭಾರತೀಯ ವೀಸಾ ಕೇಂದ್ರಗಳಲ್ಲಿ ಭದ್ರತಾ ಕಾರಣಗಳಿಂದ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ. ಈ ಕೇಂದ್ರಗಳಲ್ಲಿ ಗುರುವಾರದ ಸ್ಲಾಟ್ ಪಡೆದಿದ್ದ ಅರ್ಜಿದಾರರಿಗೆ ಬೇರೊಂದು ದಿನಾಂಕ ನಿಗದಿಪಡಿಸಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

22nd Year Remembrance

Dr. A.N. Raja Venkata Reddy
Expired on 19-12-2003
You will always live in our Hearts & Memories Guiding & Inspiring us at all times
Inserted By-
Wife:- Y.P. Hemamalini Reddy
Late. A.V. Narasimha Reddy Family

ಕಾಫಿ ಸಂಶೋಧನಾ ಸಂಸ್ಥೆಗೆ ನೂರರ ಸಂಭ್ರಮ

ನಾಳೆಯಿಂದ ಮೂರು ದಿನ ಬಾಳೆಹೊನ್ನೂರಿನಲ್ಲಿ ಶತಮಾನೋತ್ಸವ

ಪ್ರಜಾವಾಣಿ ವಾರ್ತೆ

ಹಾಸನ: 'ಬಾಳೆಹೊನ್ನೂರಿನ ಕೇಂದ್ರ ಕಾಫಿ ಸಂಶೋಧನಾ ಕೇಂದ್ರದ (ಸಿಸಿಆರ್‌ಐ) ಶತಮಾನೋತ್ಸವದ ಅಂಗವಾಗಿ ಕಾಫಿ ಮಂಡಳಿ ವತಿಯಿಂದ ಡಿ. 20ರಿಂದ 22ರವರೆಗೆ ಮೂರು ದಿನಗಳ ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದು ಕಾಫಿ ಮಂಡಳಿ ಸದಸ್ಯ ಉದಯ್ ಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಕಾಫಿ ಉದ್ಯಮದ ಸವಾಲು ಮತ್ತು ಪರಿಹಾರ, ತಾಂತ್ರಿಕ ಮತ್ತು ವೈಜ್ಞಾನಿಕ ಅಂಶಗಳನ್ನು ಒಳಗೊಳ್ಳುವ ಬಗ್ಗೆ, ಮಾನವ ಪ್ರಾಣಿ ಸಂಘರ್ಷ, ವಿಶೇಷ ಕಾಫಿ ಮತ್ತು ಜಾಗತಿಕ ಮಾರುಕಟ್ಟೆ ವಿಷಯ ಸೇರಿ ಹತ್ತು ಚರ್ಚಾಗೋಷ್ಠಿಗಳು ನಡೆಯಲಿವೆ. ಸಮಗ್ರ ಕೃಷಿ ಆರ್ಥಿಕ ನಿರ್ವಹಣೆ, ಮಣ್ಣು ಮತ್ತು ಪರಿಸರಕ್ಕೆ ಧಕ್ಕೆಯಾಗದಂತೆ ಕಾಫಿ ಬೆಳೆಯುವ ವಿಧಾನ, ಕಾಫಿ ತೋಟಗಳ ನಿರ್ವಹಣೆ ಬಗ್ಗೆ ಕಾರ್ಯಾಗಾರಗಳು ನಡೆಯಲಿವೆ. ಇದೇ ವೇಳೆ, ಕಾಫಿಯ 2 ಹೊಸ ತಳಿ ಬಿಡುಗಡೆ ಮಾಡಲಾಗುತ್ತಿದೆ' ಎಂದರು.

'1925ರಲ್ಲಿ ಮೈಸೂರು ಮಹಾರಾಜರ ಆಡಳಿತ ಸಂದರ್ಭದಲ್ಲಿ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಚಿಕ್ಕಮಗಳೂರು ಜಿಲ್ಲೆಯು ಕಾಫಿ ಬೆಳೆಯಲ್ಲಿ ಎರಡು ಜಿ.ಐ. ಟ್ಯಾಗ್‌ಗಳನ್ನು ಹೊಂದಿರುವುದು ಹೆಮ್ಮೆಯ ಸಂಗತಿ. ಭಾರತೀಯ ಕಾಫಿಗೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಹೆಚ್ಚಿದ್ದರೂ ಬ್ರ್ಯಾಂಡಿಂಗ್ ಸಮಸ್ಯೆ ಇದೆ. ಭಾರತೀಯ ಕಾಫಿ ಬ್ರ್ಯಾಂಡಿಂಗ್ ಹೆಚ್ಚಿಸುವ ಬಗ್ಗೆಯೂ ಚರ್ಚಿಸಲಾಗುವುದು. ರಾಜ್ಯ, ಹೊರ ರಾಜ್ಯಗಳಿಂದ ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಲಿದ್ದಾರೆ' ಎಂದರು.

'ಉದ್ಘಾಟನೆ ಸಮಾರಂಭದಲ್ಲಿ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್, ಕೇಂದ್ರ ವಾಣಿಜ್ಯ ಖಾತೆ ರಾಜ್ಯ ಸಚಿವ ಜಿತೇಂದ್ರ ಪ್ರಸಾದ್, ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್, ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಸಮಾವೇಶ ಭಾಗವಹಿಸಲಿದ್ದಾರೆ' ಎಂದರು.

7 ಲಕ್ಷ ಟನ್‌ಗೆ ಹೆಚ್ಚಿಸಲು ನೀಲನಕ್ಷೆ

'ರಾಜ್ಯದಲ್ಲಿ ಸದ್ಯ 3.5 ಲಕ್ಷ ಟನ್ ಕಾಫಿ ಉತ್ಪಾದಿಸಲಾಗುತ್ತಿದ್ದು, 7 ಲಕ್ಷ ಟನ್ ಉತ್ಪಾದಿಸಲು ನೀಲನಕ್ಷೆ ಸಿದ್ಧಪಡಿಸಲಾಗುತ್ತಿದೆ. ಉದ್ಯಮಕ್ಕೆ ಬರುತ್ತಿರುವ ಯುವಜನರನ್ನು ಪ್ರೋತ್ಸಾಹಿಸಲು ಕಾರ್ಯಾಗಾರ ಆಯೋಜಿಸಲಾಗಿದೆ' ಎಂದು ಉದಯ್ ಕುಮಾರ್ ಹೇಳಿದರು.

'ಆಧುನಿಕ ತಂತ್ರಜ್ಞಾನ ಬಳಕೆಯ ಬಗ್ಗೆ ಸಂಸ್ಥೆಯಲ್ಲಿ ಅಧ್ಯಯನ ನಡೆದಿದ್ದು, ಕಾಫಿಯನ್ನು ಉತ್ಕೃಷ್ಟ ಗುಣಮಟ್ಟಕ್ಕೆ ಕೊಂಡೊಯ್ಯಲು ಮಾರ್ಗಸೂಚಿ ಮತ್ತು ಸಿದ್ಧತೆಗಳನ್ನು ನಡೆಸಲಾಗಿದೆ' ಎಂದರು.

'ಉತ್ಪಾದನೆ ಹೆಚ್ಚಿಸಲು ಕಾಫಿ ಬೆಳೆಯುವ ಜಾಗ ವಿಸ್ತರಿಸಬೇಕೆಂದೇನಿಲ್ಲ. ತಂತ್ರಜ್ಞಾನ ಸಹಿತ ತೋಟಗಳ ನಿರ್ವಹಣೆಯಲ್ಲಿ ಬದಲಾವಣೆ ಮಾಡಿಕೊಂಡರೆ ಇಳುವರಿಯನ್ನು ದುಪ್ಪಟ್ಟು ಮಾಡಿಕೊಳ್ಳಬಹುದು. ಈ ಬಗ್ಗೆಯೂ ಸಮಾವೇಶದಲ್ಲಿ ಚರ್ಚೆಯಾಗಲಿದೆ' ಎಂದರು.

ಮುಂಬೈ ಧಾರಣೆ (ಶೇಂಗಾ)

18-12-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1580 (1510)
ಒಂದು ವಾರದ ಡೆಲಿವರಿ	1575 (1505)
ಪಾಮ್ ವಾರದ ಡೆಲಿವರಿ	1243 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1425 (1415)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,32,300 (1,32,500)
ಬೆಳ್ಳಿ ಕೆ.ಜಿಗೆ	2,01,300 (2,00,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)
ದೊಡ್ಡ ₹1400-2800
ಮಧ್ಯಮ ₹1000-1400
ಸಣ್ಣ ₹200-1000

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ
₹28000-28000
ತಿಪಟೂರು
₹27000-28600

ಸಕ್ಕರೆ ಎಂಎಸ್‌ಪಿ ಪರಿಷ್ಕರಣೆ: ಸರ್ಕಾರದಿಂದ ಪರಿಗಣನೆ

ನವದೆಹಲಿ (ಪಿಟಿಐ): ಸಕ್ಕರೆಗೆ ನೀಡುವ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಪರಿಷ್ಕರಿಸುವ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ಹೇಳಿದ್ದಾರೆ.

ಸಕ್ಕರೆ ಕಾರ್ಖಾನೆಗಳ ಬಾಕಿ ಪಾವತಿಗಳ ಮೊತ್ತವು ಹೆಚ್ಚಾಗುತ್ತಿದೆ, ಅದು ನವೆಂಬರ್ ಅಂತ್ಯಕ್ಕೆ ಮಹಾರಾಷ್ಟ್ರದಲ್ಲೇ ₹2,000 ಕೋಟಿಯಷ್ಟಾಗಿದೆ. ದಾಸ್ತಾನು ಹೆಚ್ಚಿರುವುದು, ಉತ್ಪಾದನಾ ವೆಚ್ಚ ಹೆಚ್ಚಳ, ಎಥೆನಾಲ್ ಉತ್ಪಾದನೆಗೆ ಸಕ್ಕರೆ ಬಳಕೆಗೆ ಮಿತಿ, ದೇಶಿ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ಇಳಿಕೆಯ ಕಾರಣಗಳಿಂದಾಗಿ ಸಕ್ಕರೆ ಕಾರ್ಖಾನೆಗಳು ನಗದು ಕೊರತೆಯನ್ನು ಎದುರಿಸುತ್ತಿವೆ ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘವು (ಐಎಸ್‌ಎಂಎ) ಹೇಳಿದೆ.

ಐಎಸ್‌ಎಂಎ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಮಾತನಾಡಿದ ಚೋಪ್ರಾ, 'ಅವರು (ಐಎಸ್‌ಎಂಎ) ನಮಗೆ ಸಮಸ್ಯೆಗಳನ್ನು ಹೇಳಿದ್ದಾರೆ... ಮುಂದಿನ ಒಂದೆರಡು ತಿಂಗಳಲ್ಲಿ ನಾವು ಕಾರ್ಖಾನೆಗಳಿಗೆ ನೆರವಾಗುವ ರೀತಿಯಲ್ಲಿ ಹಾಗೂ ರೈತರಿಗೆ ಸಕಾಲದಲ್ಲಿ ಪಾವತಿಗಳು ಆಗುವ ರೀತಿಯಲ್ಲಿ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ' ಎಂದು ತಿಳಿಸಿದ್ದಾರೆ.



ಎಂಎಸ್‌ಪಿ ಪರಿಷ್ಕರಣೆ, ಸಕ್ಕರೆಯನ್ನು ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲು ಅವಕಾಶ ನೀಡುವುದು, ಎಥೆನಾಲ್ ಉತ್ಪಾದನೆಗೆ ಹೆಚ್ಚಿನ ಸಕ್ಕರೆ ಬಳಸಲು ಅವಕಾಶ ಕಲ್ಪಿಸುವುದು ಸೇರಿ ಎಲ್ಲ ಆಯ್ಕೆಗಳನ್ನು ಸರ್ಕಾರ ಪರಿಶೀಲಿಸುತ್ತಿದೆ.

ಸಕ್ಕರೆ ಎಂಎಸ್‌ಪಿ ದರ ಕೆ.ಜಿ.ಗೆ ₹31ರ ಮಟ್ಟದಲ್ಲಿ 2019ರ ಫೆಬ್ರುವರಿಯಿಂದ ಇದೆ. ಇದನ್ನು ಕೆ.ಜಿ.ಗೆ ₹41.66ಕ್ಕೆ ಹೆಚ್ಚಿಸಬೇಕು ಎಂಬುದು ಐಎಸ್‌ಎಂಎ ಬೇಡಿಕೆ.

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಿಸಿ
90083 66666
support@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
https://bit.ly/40dPCqy

ಅಡಿಕೆ ಧಾರಣೆ

ಚಿತ್ರದುರ್ಗ					
ಆಪಿ	52719-53129	ರಾಶಿ	43999-60988	ಹೊಸಚಾಲಿ	33000-37500
ಬೆಟ್ಟೆ	35649-36079	ಸಿಪ್ಪೆಗೋಟು	7899-23799	ಕೆಂಪುಗೋಟು	30119-30699
ಕೆಂಪುಗೋಟು	29609-30010	**ಕುಮಟಾ**		ರಾಶಿ	46699-55399
ರಾಶಿ	52239-52669	ಚಾಲಿ	42299-47119	ತಟ್ಟಿಬೆಟ್ಟೆ	42599-48699
ಸಾಗರ		ಚಿಪ್ಪು	15001-36609	**ಶಿರಸಿ**	
ಬಿಳಿಗೋಟು	18099-34025	ಕೋಕ	10569-31899	ಬೆಟ್ಟೆ	41899-51299
ಚಾಲಿ	23829-42509	ಹೊಸಚಾಲಿ	30799-37219	ಬಿಳಿಗೋಟು	23199-37509
ಕೋಕ	12099-33109	**ಸಿದ್ದಾಪುರ**		ಚಾಲಿ	45298-48761
ಕೆಂಪುಗೋಟು	28999-38899	ಬಿಳಿಗೋಟು	26599-34699	ಕೆಂಪುಗೋಟು	26199-34699
		ಚಾಲಿ	41309-47599	ರಾಶಿ	52099-58099
		ಕೋಕ	21019-26619		

'ಎನ್‌ಪಿಎಸ್: 25 ಕೋಟಿ ಚಂದಾದಾರರ ಸೇರ್ಪಡೆ ಗುರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಐದು ವರ್ಷಗಳಲ್ಲಿ ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯ (ಎನ್‌ಪಿಎಸ್) ವ್ಯಾಪ್ತಿಗೆ ಖಾಸಗಿ ವಲಯದ 25 ಕೋಟಿ ಹೊಸ ಚಂದಾದಾರರನ್ನು ಸೇರಿಸುವ ಗುರಿ ಹೊಂದಲಾಗಿದೆ ಎಂದು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಪಿಎಫ್‌ಆರ್‌ಡಿಎ) ಅಧ್ಯಕ್ಷ ಶಿವಸುಬ್ರಮಣಿಯನ್ ರಾಮನ್ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿಕಸಿತ ಭಾರತ ದೃಷ್ಟಿಕೋನಕ್ಕೆ ಅನುಗುಣವಾಗಿ ಎನ್‌ಪಿಎಸ್ ವಿಸ್ತರಿಸಲು ಉದ್ದೇಶಿಸಲಾಗಿದೆ. ಎನ್‌ಪಿಎಸ್ ಅಡಿಯಲ್ಲಿ ಸಂಗ್ರಹವಾಗುವ ಹಣವನ್ನು ಪ್ರಮುಖ ಮೂಲಸೌಕರ್ಯ ಮತ್ತು ಕಾರ್ಪೊರೇಟ್ ಯೋಜನೆಗಳಿಗೆ ಬಳಸಲಾಗುವುದು. ಚಂದಾದಾರರ ಉಳಿತಾಯವನ್ನು ಹೂಡಿಕೆಗಳನ್ನಾಗಿ ಪರಿವರ್ತಿಸಲಾಗುತ್ತಿದ್ದು, ಇದಕ್ಕಾಗಿ ಹೂಡಿಕೆ ಮಾರ್ಗಸೂಚಿಗಳನ್ನು ಬದಲಾಯಿಸುವ ಕೆಲಸ ಮಾಡುತ್ತಿದ್ದೇವೆ' ಎಂದರು.

ಪ್ರಸ್ತುತ, ಎನ್‌ಪಿಎಸ್ ಮತ್ತು ಅಟಲ್ ಪಿಂಚಣಿ ಯೋಜನೆಯ (ಎಪಿವೈ) ಸಂಪತ್ತಿನ ಮೌಲ್ಯವು (ಎಯುಎಂ) ₹16 ಲಕ್ಷ ಕೋಟಿ ದಾಟಿದೆ. ಈ ಪೈಕಿ ಶೇ 50ರಷ್ಟು ಮೊತ್ತ ಸರ್ಕಾರಿ ಸಾಲಪತ್ರಗಳಲ್ಲಿ, ಶೇ 23ರಷ್ಟನ್ನು ಕಾರ್ಪೊರೇಟ್ ಸಾಲಪತ್ರಗಳಲ್ಲಿ, ಶೇ 18ರಷ್ಟನ್ನು ಷೇರುಗಳಲ್ಲಿ ಹೂಡಿಕೆ ಮಾಡಲಾಗಿದೆ ಎಂದರು.

ಜೊಮಾಟೊ ಕಂಪನಿಯು ತನ್ನ ನೌಕರರಿಗೆ ಎನ್‌ಪಿಎಸ್ ಆರಂಭಿಸಿದೆ. ಸ್ವಿಗ್ಗಿ, ಓಲಾ ಮತ್ತು ಉಬರ್ ಕಂಪನಿಗಳು ಎನ್‌ಪಿಎಸ್ ಕುರಿತು ಮಾತುಕತೆ ನಡೆಸುತ್ತಿದ್ದು, ಸ್ವಿಗ್ಗಿ ಮಾತುಕತೆ ಅಂತಿಮ ಹಂತದಲ್ಲಿದೆ
ಶಿವಸುಬ್ರಮಣಿಯನ್ ರಾಮನ್, ಅಧ್ಯಕ್ಷ, ಪಿಎಫ್‌ಆರ್‌ಡಿಎ

ಎನ್‌ಪಿಎಸ್ ಸುಧಾರಣೆಗಳ ಮೂಲಕ ವ್ಯವಸ್ಥೆಯನ್ನು ಹೆಚ್ಚು ಗ್ರಾಹಕಸ್ನೇಹಿ ಆಗಿಸಲಾಗಿದ್ದು, ಎಲ್ಲ ವರ್ಗದವರು ಎನ್‌ಪಿಎಸ್ ಪಡೆಯುವಂತೆ ಮಾಡಲಾಗಿದೆ. ಚಂದಾದಾರರು 15 ವರ್ಷಗಳ ನಂತರ ತಮ್ಮ ಹೂಡಿಕೆಯ ಶೇ 80ರವರೆಗಿನ ಮೊತ್ತವನ್ನು ಹಿಂಪಡೆಯಲು ಅವಕಾಶವಿದೆ ಎಂದು ತಿಳಿಸಿದರು.

ರೈತ ಉತ್ಪಾದಕ ಸಂಸ್ಥೆಗಳು, ಎಂಎಸ್‌ಎಂಇ ವಲಯದಲ್ಲಿನ ಕಾರ್ಮಿಕರನ್ನು ಸಹ ಎನ್‌ಪಿಎಸ್ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ. ಅಲ್ಲದೆ, ವಿವಿಧ ಫಿನ್‌ಟೆಕ್ ವೇದಿಕೆಗಳಲ್ಲಿ ಸಹ ಎನ್‌ಪಿಎಸ್ ಲಭ್ಯವಾಗುವಂತೆ ಮಾಡಲು ಫಿನ್‌ಟೆಕ್ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತನ್ಮಯಿ ಆಯಿಲ್ ಕಂಪನಿಯಲ್ಲಿ ಪ್ಯಾಕಿಂಗ್ ಮಾಡಲು 10 ಜನ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 15 ರಿಂದ 18 ಸಾವಿರ. ಶೇಷಾದ್ರಿಪುರಂ ಬೆಂಗಳೂರು 9019626612.

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೋರಿಯರ್ ಸೌಲಭ್ಯವಿದೆ. 9019593297, 8095133188.

Wanted

ಕಂಪನಿಗಳಿಗೆ ಆಫೀಸ್ ಗಳಿಗೆ ಬೇಕಾಗಿದ್ದಾರೆ. 7th,PUC, Degree ಡಿಪ್ಲೋಮೋದವರು ಯುವಕರು ಯುವತಿಯರಿಗೆ ಸಂಬಳ 20000, 45000 (ವಿದ್ಯಾರ್ಹತೆಹಿಲ್ಲದವರಿಗೂ) ವಸತಿಯೂಟವಿರುತ್ತದೆ. 9916788422.

ಪ್ರವಾಸ

Travel

26.12.25 5ದಿನಗಳು ದೆಹಲಿ,ಅಗ್ರಾ,ಜೈಪುರ್, ಫತೇಪುರ್ ಶಿಕ್ರಿ,ಇತ್ಯಾದಿ 38000 16.01.26 ಮತ್ತು`02.02.26 ಮಾಘಮೇಳ ಪ್ರಯುಕ್ತ 6ದಿನಗಳು ವಿಮಾನದಲ್ಲಿ ಪ್ರಯಾಗ್‌ರಾಜ್, ಕಾಶಿ,ಗಯಾ,ಅಯೋಧ್ಯ`33000 20.02.26 11ದಿನಗಳು ನೇಪಾಳ ಮುಕ್ತಿನಾಥ ಇತ್ಯಾದಿ.48000 "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9739847429/ 9845560219

ಶ್ರೀಮಹಾದೇಶ್ವರ ಟೂರ್ಸ್ &.ಟ್ರಾವೆಲ್ಸ್, 08 ದಿನಗಳ ಕಾಶಿಪ್ರವಾಸ. 10ದಿನಗಳ ಗುಜರಾತ್`ಪ್ರವಾಸ. 06ದಿನಗಳ ಪುರಿಜಗನ್ನಾಥ್`ಪ್ರವಾಸ. 12ದಿನಗಳ ನೇಪಾಳಪ್ರವಾಸ. ಹೆಚ್ಚಿನ.ವಿವರಗಳಿಗಾಗಿ ಸಂಪರ್ಕಿಸಿ: 9611801143/ 9742810701.

11 ದಿನಗಳ ಗುಜರಾತ್ ರನ್ನಆಫ್ ಕಚ್. 12ದಿನಗಳ ಮಧ್ಯಪ್ರದೇಶ. 7 ದಿನಗಳ ಕಾಶಿಯಾತ್ರೆ ಅಯೋಧ್ಯ. 10 ದಿನಗಳ ನೇಪಾಳ,ಮುಕ್ತಿನಾಥ್. ಸಂಪರ್ಕಿಸಿ. ನಂದಿ ಹಾಲಿಡೇಸ್ 9740228186 9035513332

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ತೈವಾನ್‌ಗೆ ಅಮೆರಿಕ ಶಸ್ತ್ರಾಸ್ತ್ರ ಪ್ಯಾಕೇಜ್: ಚೀನಾ ಆಕ್ರೋಶ

ವಾಷಿಂಗ್ಟನ್(ಎಪಿ): ಮಧ್ಯಮ ಶ್ರೇಣಿ ಕ್ಷಿಪಣಿ, ಹೋವಿಟ್ಜರ್ ಫಿರಂಗಿ, ಡ್ರೋನ್‌ಗಳು ಸೇರಿದಂತೆ 10 ಶತಕೋಟಿ ಡಾಲರ್‌ಗೂ ಅಧಿಕ ಮೌಲ್ಯದ ಭಾರಿ ಶಸ್ತ್ರಾಸ್ತ್ರಗಳನ್ನು ತೈವಾನ್‌ಗೆ ಮಾರಾಟ ಮಾಡುವ ಬೃಹತ್ ಪ್ಯಾಕೇಜನ್ನು ಅಮೆರಿಕದ ಟ್ರಂಪ್ ಸರ್ಕಾರ ಘೋಷಿಸಿದೆ. ಈ ಪ್ಯಾಕೇಜ್‌ಗೆ ಚೀನಾ ಆಕ್ರೋಶ ವ್ಯಕ್ತಪಡಿಸಿದೆ.

ಬುಧವಾರ ರಾಷ್ಟ್ರೀಯ ವಾಹಿನಿಯಲ್ಲಿ ಅಧ್ಯಕ್ಷ ಟ್ರಂಪ್ ಅವರು ಮಾಡಿದ ಭಾಷಣದ ವೇಳೆ ಸರ್ಕಾರಿ ಇಲಾಖೆಯು ಶಸ್ತ್ರಾಸ್ತ್ರ ಮಾರಾಟದ ಘೋಷಣೆ ಮಾಡಿದೆ. ವಿದೇಶಾಂಗ ನೀತಿ ಬಗ್ಗೆ ಟ್ರಂಪ್ ಮಾತನಾಡಿದರೂ ಚೀನಾ ಅಥವಾ ತೈವಾನ್ ಬಗ್ಗೆ ಪ್ರಸ್ತಾಪ ಮಾಡಿರಲಿಲ್ಲ.

ವ್ಯಾಪಾರ ಮತ್ತು ಪ್ರತಿಸುಂಕ ವಿಚಾರ, ತೈವಾನ್ ಅನ್ನು ತನ್ನ ಪ್ರಮುಖ ಭೂಪ್ರದೇಶಕ್ಕೆ ಸೇರಿಸಿಕೊಳ್ಳುವ ಚೀನಾದ ಆಕ್ರಮಣಕಾರಿ ನಡೆಯು ಟ್ರಂಪ್ ಅವರ ಎರಡನೇ ಅವಧಿಯಲ್ಲಿ ಚೀನಾ ಮತ್ತು ಅಮೆರಿಕ ನಡುವೆ ಬಿಕ್ಕಟ್ಟುಗಳನ್ನು ಹೆಚ್ಚಿಸಿದೆ. ಅಮೆರಿಕ ಸಂಸತ್ತು (ಕಾಂಗ್ರೆಸ್) ಪ್ಯಾಕೇಜ್‌ಗೆ ಸಮ್ಮತಿಸಿದರೆ ಇದು ತೈವಾನ್‌ಗೆ ಅಮೆರಿಕದ ಈವರೆಗಿನ ಬೃಹತ್ ಶಸ್ತ್ರಾಸ್ತ್ರ ಮಾರಾಟ ಪ್ಯಾಕೇಜ್ ಆಗಲಿದೆ. ಬೈಡನ್ ಆಡಳಿತದಲ್ಲಿ 8.4 ಶತಕೋಟಿ ಡಾಲರ್ ಪ್ಯಾಕೇಜ್ ನೀಡಲಾಗಿತ್ತು.

ಚೀನಾ ವಾಗ್ದಾಳಿ: ಅಮೆರಿಕದ ಈ ನಡೆಗೆ ತೀವ್ರ ಆಕ್ರೋಶ ಹೊರ ಹಾಕಿರುವ ಚೀನಾ ವಿದೇಶಾಂಗ ಇಲಾಖೆಯು, 'ಅಮೆರಿಕ ಮತ್ತು ಚೀನಾ ನಡುವಿನ ರಾಜತಾಂತ್ರಿಕ ಒಪ್ಪಂದವನ್ನು ಇದು ಉಲ್ಲಂಘಿಸುತ್ತದೆ. ಚೀನಾದ ಸಾರ್ವಭೌಮತೆ, ಸುರಕ್ಷತೆ, ಪ್ರಾದೇಶಿಕ ಸಮಗ್ರತೆಗೆ ಹಾನಿ ಉಂಟು ಮಾಡುತ್ತದೆ' ಎಂದು ಹೇಳಿದೆ.

ಹೊಸ ವಾಹನಗಳ ಬಿಡುಗಡೆಗೆ ನಿಸ್ಸಾನ್ ಸಜ್ಜು

ನವದೆಹಲಿ (ಪಿಟಿಐ): ಮುಂದಿನ 14ರಿಂದ 16 ತಿಂಗಳಿನಲ್ಲಿ ಮೂರು ಹೊಸ ಮಾದರಿಯ ವಾಹನಗಳನ್ನು ದೇಶದ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು ಎಂದು ಜಪಾನ್‌ನ ವಾಹನ ತಯಾರಿಕಾ ಕಂಪನಿ ನಿಸ್ಸಾನ್ ಗುರುವಾರ ಹೇಳಿದೆ.

ಮಾರುಕಟ್ಟೆಗೆ ಬರಲಿರುವ ತನ್ನ ಏಳು ಆಸನ ಸಾಮರ್ಥ್ಯದ ವಾಹನದ ಹೆಸರು 'ಗ್ರಾವೈಟ್' ಎಂದು ಕಂಪನಿ ತಿಳಿಸಿದೆ. ಕಂಪನಿಯು ಈಗ ದೇಶದಲ್ಲಿ 155 ಮಳಿಗೆಗಳನ್ನು ಹೊಂದಿದ್ದು, 2026–27ರ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಈ ಸಂಖ್ಯೆಯನ್ನು 250ಕ್ಕೆ ಹೆಚ್ಚಿಸುವ ಗುರಿ ಹೊಂದಿದೆ.

'ಗ್ರಾವೈಟ್' ಎಂಪಿವಿಯನ್ನು ಮುಂದಿನ ವರ್ಷದ ಆರಂಭದಲ್ಲಿ ಬಿಡುಗಡೆ ಮಾಡಲಾಗುವುದು. ಮಧ್ಯಮ ಗಾತ್ರದ ಎಸ್‌ಯುವಿ ಟೆಕ್ಟಾನ್ ಅನ್ನು 2026ರ ಮಧ್ಯ ಭಾಗದಲ್ಲಿ ಮತ್ತು ಏಳು ಆಸನದ ಎಸ್‌ಯುವಿ ಅನ್ನು 2027ರ ಆರಂಭದಲ್ಲಿ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದೆ.

ಸಿಡ್ನಿ ದಾಳಿ: ಶೌರ್ಯ ಮೆರೆದ ಸಿಂಗ್ ಬೋಲಾ

ಮೆಲ್ಬೋರ್ನ್ (ಪಿಟಿಐ): ಸಿಡ್ನಿಯ ಬೋಂಡಿ ಬೀಚ್‌ನಲ್ಲಿ ಡಿ. 14ರಂದು ನಡೆದ ಗುಂಡಿನ ದಾಳಿ ವೇಳೆ ಆರೋಪಿತ ಬಂದೂಕುಧಾರಿ ಒಬ್ಬನ ಅಟ್ಟಹಾಸ ತಡೆಯಲು ಭಾರತ ಮೂಲದ ವ್ಯಕ್ತಿಯೊಬ್ಬರು ಪೊಲೀಸರಿಗೆ ನೆರವಾಗಿ, ಶೌರ್ಯ ಮೆರೆದಿದ್ದರು.

'ಹನುಕ್ಕಾ' ಯಹೂದಿ ಹಬ್ಬದ ಪ್ರಾರಂಭೋತ್ಸವಕ್ಕಾಗಿ ಸೇರಿದ್ದ ಅಪಾರ ಜನರ ಮೇಲೆ ಬಂದೂಕುಧಾರಿಗಳಿಬ್ಬರು ಯದ್ವಾತದ್ವಾ ಗುಂಡಿನ ದಾಳಿ ನಡೆಸಿ 15 ಜನರನ್ನು ಕೊಂದಿದ್ದರು. ಈ ವೇಳೆ ಮೂವರು ಭಾರತೀಯ ವಿದ್ಯಾರ್ಥಿಗಳೂ ಸೇರಿದಂತೆ 40 ಜನರು ಗಾಯಗೊಂಡಿದ್ದರು.

ಆರೋಪಿಗಳನ್ನು ಸಿಡ್ನಿ ನಿವಾಸಿ ಸಾಜಿದ್ ಅಕ್ರಂ (50) ಮತ್ತು ಆತನ ಮಗ ನವೀದ್ ಅಕ್ರಂ (24) ಎಂದು ಗುರುತಿಸಲಾಗಿದೆ. ಈ ಪೈಕಿ ಸಾಜಿದ್‌ನನ್ನು ಪೊಲೀಸರು ಸ್ಥಳದಲ್ಲೇ ಗುಂಡಿಕ್ಕಿ ಹತ್ಯೆ ಮಾಡಿದ್ದರು.

ಭಾರತೀಯ ಮತ್ತು ನ್ಯೂಜಿಲೆಂಡ್‌ನ ಪೋಷಕರಿಗೆ ನ್ಯೂಜಿಲೆಂಡ್‌ನಲ್ಲಿ ಜನಿಸಿದ ಅಮನ್‌ದೀಪ್ ಸಿಂಗ್ ಬೋಲಾ ಶೌರ್ಯ ಪ್ರದರ್ಶಿಸಿದ ವ್ಯಕ್ತಿ. ಸಾಜಿದ್ ಅಕ್ರಂ ಮನಬಂದಂತೆ ಗುಂಡು ಹಾರಿಸುತ್ತಿದ್ದ ವೇಳೆ, ಸೇತುವೆಯ ಮೇಲಿಂದ ಓಡಿ ಬಂದು ಪೊಲೀಸರ ನೆರವಿನಿಂದ ಆತನನ್ನು ತಡೆಯುವಲ್ಲಿ ಸಿಂಗ್ ಬೋಲಾ ಯಶಸ್ವಿಯಾಗಿದ್ದರು ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

'ನಾನು ಬಂದೂಕುಧಾರಿಯ ಮೇಲೆ ಎರಗಿ, ಆತನ ತೋಳುಗಳನ್ನು ಗಟ್ಟಿಯಾಗಿ ಹಿಡಿದುಕೊಂಡೆ. ಆಗ ನನ್ನ ನೆರವಿಗೆ ಬಂದ ಪೊಲೀಸ್ ಅಧಿಕಾರಿಯೊಬ್ಬರು ಆತನನ್ನು ಹೋಗಲು ಬಿಡಬೇಡ ಎಂದು ಹೇಳಿದರು' ಎಂದು ಸಿಂಗ್ ಬೋಲಾ ಮಾಹಿತಿ ನೀಡಿದ್ದಾರೆ.

'ಬೀಚ್ ಬಳಿ ಕಬಾಬ್ ತಿನ್ನುತ್ತಾ ಸೂರ್ಯಾಸ್ತವನ್ನು ನೋಡುತ್ತಿದ್ದ ಸಂದರ್ಭದಲ್ಲಿ ದಿಢೀರನೆ ಗುಂಡಿನ ಶಬ್ದ ಕೇಳಿಸಿತು. ಆರಂಭದಲ್ಲಿ ಪಟಾಕಿ ಇರಬಹುದು ಎಂದುಕೊಂಡಿದ್ದೆ. ಆದರೆ ಪಟಾಕಿಯಲ್ಲ ಎಂಬುದು ಕೆಲ ಕ್ಷಣದಲ್ಲಿಯೇ ಗೊತ್ತಾಯಿತು. ಬಂದೂಕುಧಾರಿ ಎಲ್ಲಿದ್ದಾನೆ ಎಂದು ನೋಡಿದ ಕೂಡಲೇ, ಆತನ ಅಟ್ಟಹಾಸವನ್ನು ಮಟ್ಟಹಾಕಬೇಕು ಎಂದು ಮುನ್ನುಗ್ಗಿದೆ ಎಂದು ಅವರು ಹೇಳಿದ್ದಾರೆ' ಎಂದು ವರದಿಯಾಗಿದೆ.

ಅಮೆರಿಕದ ಸುಂಕ: ಪ್ರಧಾನಿ ಮಧ್ಯಪ್ರವೇಶಕ್ಕೆ ಸ್ಟಾಲಿನ್ ಆಗ್ರಹ

ಚೆನ್ನೈ (ಪಿಟಿಐ): 'ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕ ಶೇ 50ರಷ್ಟು ಸುಂಕ ವಿಧಿಸಿರುವುದರಿಂದ ತಮಿಳುನಾಡಿನ ಸಿದ್ಧ ಉಡುಪುಗಳ ರಫ್ತು ಕ್ಷೇತ್ರವು ತೀವ್ರ ಸಂಕಷ್ಟದಲ್ಲಿದ್ದು, ಅಂದಾಜು ₹15 ಸಾವಿರ ಕೋಟಿಯಷ್ಟು ನಷ್ಟ ಉಂಟಾಗಿದೆ. ಕೂಡಲೇ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರವೇಶಿಸಿ, ದ್ವಿಪಕ್ಷೀಯ ಒಪ್ಪಂದದಡಿ ಸುಂಕ ತಗ್ಗಿಸುವ ನಿರ್ಣಯ ಕೈಗೊಳ್ಳಬೇಕು' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಆಗ್ರಹಿಸಿದ್ದಾರೆ.



ಸ್ಟಾಲಿನ್

ಭಾರತದ ಸಿದ್ಧ ಉಡುಪುಗಳ ರಾಜಧಾನಿ ಎಂದೇ ತಿರುಪ್ಪೂರು ಹೆಸರಾಗಿದೆ. ಇಲ್ಲಿ ಮಾತ್ರವಲ್ಲ, ಕೊಯಮತ್ತೂರು, ಈರೋಡ್, ಕರೂರು ಜಿಲ್ಲೆಗಳಲ್ಲೂ ಪ್ರತಿ ದಿನ ಸಿದ್ಧ ಉಡುಪು ರಫ್ತುದಾರರು ಅಂದಾಜು ₹60 ಕೋಟಿಯಷ್ಟು ನಷ್ಟ ಅನುಭವಿಸುತ್ತಿದ್ದಾರೆ. ಸಾವಿರಾರು ಜನರು ಉದ್ಯೋಗ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ ಎಂದು ಸ್ಟಾಲಿನ್ ಅವರು ಪ್ರಧಾನಿಯವರಿಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಅಂಕಿ ಅಂಶಗಳು

28% ದೇಶದ ಜವಳಿ ರಫ್ತಿನಲ್ಲಿ ತಮಿಳುನಾಡಿನ ಪಾಲು

40% ಚರ್ಮ, ಪಾದರಕ್ಷೆ ರಫ್ತಿನಲ್ಲಿ ತಮಿಳುನಾಡಿನ ಪಾಲು

75 ಲಕ್ಷ ಜವಳಿ ವಲಯದ ಕಾರ್ಮಿಕರ ಸಂಖ್ಯೆ

10 ಲಕ್ಷ ಚರ್ಮೋದ್ಯಮದಲ್ಲಿ ತೊಡಗಿರುವ ಕಾರ್ಮಿಕರ ಸಂಖ್ಯೆ

ಸುಂಕ ಏರಿಕೆ ಬೆನ್ನಲ್ಲೇ ಸಿದ್ಧ ಉಡುಪುಗಳ ಬೇಡಿಕೆ ಮತ್ತು ತಯಾರಿಕೆ ಶೇ 30ರಷ್ಟು ತಗ್ಗಿದೆ. ಸಣ್ಣ ಮತ್ತು ಮಧ್ಯಮ ಪ್ರಮಾಣದ ಹಲವು ಘಟಕಗಳು ಈಗಾಗಲೇ ಬಾಗಿಲು ಮುಚ್ಚಿವೆ. ಸುಂಕ ನೀತಿ ಹೀಗೆಯೇ ಮುಂದುವರಿದರೆ ಅದು ದೇಶದ ಒಟ್ಟಾರೆ ರಫ್ತು ಉದ್ಯಮ ಮತ್ತು ಆರ್ಥಿಕತೆಯ ಮೇಲೆ ದೊಡ್ಡ ಪರಿಣಾಮ ಬೀರಲಿದೆ. ಈ ನಿಟ್ಟಿನಲ್ಲಿ ತುರ್ತು ಕ್ರಮ ವಹಿಸುವುದು ಅಗತ್ಯ ಎಂದು ಮನವಿ ಮಾಡಿದ್ದಾರೆ.

ಸರಣಿ ಕಿರೀಟದ ಮೇಲೆ ಭಾರತದ ಕಣ್ಣು

ಟಿ20 ಕ್ರಿಕೆಟ್: ಕೊನೆಯ ಪಂದ್ಯ ಇಂದು • ಪ್ರವಾಸಿಗರಿಗೆ ಸಮಬಲದ ಛಲ

ಅಹಮದಾಬಾದ್(ಪಿಟಿಐ): ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡವು ಶುಕ್ರವಾರ ಇಲ್ಲಿ ನಡೆಯಲಿರುವ ದಕ್ಷಿಣ ಆಫ್ರಿಕಾ ಎದುರಿನ ಐದನೇ ಮತ್ತು ಕೊನೆಯ ಟಿ20 ಪಂದ್ಯದಲ್ಲಿ ಗೆದ್ದು ಸರಣಿ ಕಿರೀಟ ಧರಿಸುವ ಛಲದಲ್ಲಿದೆ.

ಐದು ಪಂದ್ಯಗಳ ಸರಣಿಯಲ್ಲಿ ಆತಿಥೇಯ ತಂಡವು 2–1ರಿಂದ ಮುನ್ನಡೆಯಲ್ಲಿದೆ. ಲಖನೌದಲ್ಲಿ ಬುಧವಾರ ಆಯೋಜನೆಯಾಗಿದ್ದ ಪಂದ್ಯವು ಹವಾಮಾನ ವೈಪರಿತ್ಯದಿಂದಾಗಿ ರದ್ದಾಗಿತ್ತು. ಅದರಿಂದಾಗಿ ದಕ್ಷಿಣ ಆಫ್ರಿಕಾದ ಸರಣಿ ಗೆಲುವಿನ ಆಸೆ ಕಮರಿದೆ. ಈಗ ಏನಿದ್ದರೂ ಕೊನೆಯ ಪಂದ್ಯದಲ್ಲಿ ಜಯಿಸಿ ಸರಣಿ ಸಮಬಲ ಮಾಡಿಕೊಳ್ಳುವ ಅವಕಾಶವಷ್ಟೇ ಪ್ರವಾಸಿ ತಂಡಕ್ಕಿದೆ. ಟೆಸ್ಟ್ ಸರಣಿಯನ್ನು 2–0 ಗೆದ್ದಿದ್ದ ತಂಡವು ಏಕದಿನ ಸರಣಿಯಲ್ಲಿ ಶರಣಾಗಿತ್ತು.

ದಕ್ಷಿಣ ಆಫ್ರಿಕಾ ತಂಡದ ನಾಯಕ ಏಡನ್ ಮರ್ಕರಂ

ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಬ್ಯಾಟರ್ ಸಂಜು ಸ್ಯಾಮ್ಸನ್ ಪಿಟಿಐ ಚಿತ್ರ

ಭಾರತ ತಂಡಕ್ಕೆ ಬ್ಯಾಟಿಂಗ್ ವಿಭಾಗದಲ್ಲಿ ಈಗ ಸಮಸ್ಯೆ ಕಾಡುತ್ತಿದೆ. ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಬಿರುಸಿನ ಆರಂಭವನ್ನೇನೋ ನೀಡುತ್ತಿದ್ದಾರೆ. ಆದರೆ ದೊಡ್ಡ ಇನಿಂಗ್ಸ್ ಕಟ್ಟಲು ಅವರಿಗೆ ಸಾಧ್ಯವಾಗುತ್ತಿಲ್ಲ. ಸತತ ವೈಫಲ್ಯ ಅನುಭವಿಸಿದ್ದ ಶುಭಮನ್ ಗಿಲ್ ಈಗ ಗಾಯಗೊಂಡು ಹೊರಬಿದ್ದಿದ್ದಾರೆ. ಬಹುಶಃ ಅವರ ಬದಲಿಗೆ ಸಂಜು ಸ್ಯಾಮ್ಸನ್ ಸ್ಥಾನ ಪಡೆಯಬಹುದು.

ನಾಯಕ ಸೂರ್ಯಕುಮಾರ್ ಅವರ ಬ್ಯಾಟ್‌ನಿಂದ ರನ್‌ಗಳು ಹರಿಯುತ್ತಿಲ್ಲ. ಇದರಿಂದಾಗಿ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಮೇಲೆ ಹೆಚ್ಚು ಒತ್ತಡ ಬೀಳುತ್ತಿದೆ. ತಿಲಕ್ ವರ್ಮಾ, ಶಿವಂ ದುಬೆ, ಹಾರ್ದಿಕ್ ಪಾಂಡ್ಯ, ವಾಷಿಂಗ್ಟನ್ ಸುಂದರ್ ಹಾಗೂ ಜಿತೇಶ್ ಶರ್ಮಾ ಅವರ ಆಟ ಮಹತ್ವದ್ದಾಗಿದೆ. ಆಲ್‌ರೌಂಡರ್ ಅಕ್ಷರ್ ಪಟೇಲ್ ಅನುಪಸ್ಥಿತಿಯೂ ತಂಡವನ್ನು ಕಾಡಬಹುದು. ಪ್ರವಾಸಿ ಬಳಗದ ಪರಿಣಾಮಕಾರಿ ಬೌಲರ್‌ಗಳಾದ ಲುಂಗಿ ಎನ್‌ಗಿಡಿ, ಲುಥೊ ಸಿಪಾಮ್ಲಾ ಮತ್ತು ಮಾರ್ಕೊ ಯಾನ್ಸೆನ್ ಅವರನ್ನು ಎದುರಿಸಿ ನಿಲ್ಲುವ ಸವಾಲು ಬ್ಯಾಟರ್‌ಗಳಿಗೆ ಇದೆ.

ಈ ಪಂದ್ಯಕ್ಕೆ ವೇಗಿ ಜಸ್‌ಪ್ರೀತ್ ಬೂಮ್ರಾ ಮರಳುವುದು ಖಚಿತ. ಎಡಗೈ ವೇಗಿ ಅರ್ಷದೀಪ್ ಸಿಂಗ್, ಹರ್ಷಿತ್ ರಾಣಾ ಉತ್ತಮ ಲಯದಲ್ಲಿದ್ದಾರೆ. ಕುಲದೀಪ್ ಯಾದವ್ ಮತ್ತು ವರುಣ್ ಚಕ್ರವರ್ತಿ ಅವರಿಬ್ಬರಿಗೂ ಅವಕಾಶ ಸಿಗುವುದೇ ಎಂಬುದು ಖಚಿತವಿಲ್ಲ. ವಾಷಿಂಗ್ಟನ್ ಸುಂದರ್ ಇರುವುದರಿಂದ ಕುಲದೀಪ್ ಅಥವಾ ವರುಣ್ ಅವರಲ್ಲಿ ಒಬ್ಬರು ಮಾತ್ರ ಕಣಕ್ಕಿಳಿಯುವ ಸಾಧ್ಯತೆ ಇದೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್

ಸಿ.ವಿ.ಎಲ್. ಶಾಸ್ತ್ರಿ ಸ್ಮಾರಕ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್

ಆಕಾಶ್, ಸಹನಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಲುವಿನ ಓಟ ಮುಂದುವರಿಸಿದ ಆಕಾಶ್ ಕೆ.ಜೆ. ಹಾಗೂ ಸಹನಾ ಎಚ್.ಮೂರ್ತಿ ಅವರು ಮಲ್ಲೇಶ್ವರದ ಕೆನರಾ ಯೂನಿಯನ್‌ನಲ್ಲಿ ನಡೆಯುತ್ತಿರುವ ಸಿ.ವಿ.ಎಲ್. ಶಾಸ್ತ್ರಿ ಸ್ಮಾರಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಆಕಾಶ್ ಅವರು ಪುರುಷರ ವಿಭಾಗದ ಫೈನಲ್‌ನಲ್ಲಿ 11–5, 11–9, 11–7, 11–6ರಿಂದ ಅಭಿನವ್ ಮೂರ್ತಿ ಅವರನ್ನು ಸುಲಭವಾಗಿ ಮಣಿಸಿ, ಪ್ರಶಸ್ತಿ ಎತ್ತಿಹಿಡಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಅಭಿನವ್ 13–11, 11–9, 6–11, 12–10, 11–8ರಿಂದ ಸಂಜಯ್ ಮಾಧವನ್ ವಿರುದ್ಧ ಹಾಗೂ ಆಕಾಶ್ 11–6, 7–11, 11–4, 11–6, 11–7ರಿಂದ ರೋಹಿತ್ ಶಂಕರ್ ವಿರುದ್ಧ ಜಯಿಸಿದರು.

ರೋಚಕವಾಗಿದ್ದ ಮಹಿಳೆಯರ ಸಿಂಗಲ್ಸ್ ಫೈನಲ್ ಹಣಾಹಣಿಯಲ್ಲಿ ಸಹನಾ 5–11, 6–11, 11–9, 11–9, 11–5, 11–7ರಿಂದ ದೇಶ್ನಾ ವಂಶಿಕಾ ಅವರನ್ನು ಸೋಲಿಸಿದರು. ಸಹನಾ ಮೊದಲ ಎರಡು ಸೆಟ್ ಕಳೆದುಕೊಂಡರೂ, ನಂತರ ಪುಟಿದೆದ್ದು ಮೇಲುಗೈ ಸಾಧಿಸಿದರು.

ಸಹನಾ ಅವರು ನಾಲ್ಕರ ಘಟ್ಟದ ಹಣಾಹಣಿಯಲ್ಲಿ 11–6, 11–5, 9–11, 5–11, 7–11, 11–7, 11–7ರಿಂದ ತನಿಷ್ಕಾ ಕಪಿಲ್ ಕಾಲಭೈರವ ವಿರುದ್ಧ ಪ್ರಯಾಸದಾಯಕ ಗೆಲುವು ಸಾಧಿಸಿದ್ದರು. ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ವಂಶಿಕಾ 11–5, 10–12, 8–11, 11–9, 11–8, 11–9ರಿಂದ ಖುಷಿ ವಿ. ಅವರನ್ನು ಸೋಲಿಸಿದ್ದರು.

ಪ್ರಶಸ್ತಿಯೊಂದಿಗೆ ಆಕಾಶ್ ಕೆ.ಜೆ., ಸಹನಾ ಮೂರ್ತಿ ಹಾಗೂ ಹಿಮಾಂಶಿ ಚೌಧರಿ

ಹಿಮಾಂಶಿಗೆ ಕಿರೀಟ: ಉದಯೋನ್ಮುಖ ಆಟಗಾರ್ತಿ ಹಿಮಾಂಶಿ ಚೌಧರಿ ಅವರು 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಅವರು ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 11–6, 13–15, 11–1, 11–1ರಿಂದ ತನಿಷ್ಕಾ ಅವರನ್ನು ಸುಲಭವಾಗಿ ಮಣಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ತನಿಷ್ಕಾ 11–8, 7–11, 11–6, 11–6ರಿಂದ ಸಾಕ್ಷ್ಯಾ ಸಂತೋಷ್ ಅವರನ್ನು ಹಾಗೂ ಹಿಮಾನ್ಶಿ 11–8, 11–8, 11–8ರಿಂದ ಕೈರಾ ಬಾಳಿಗಾ ಅವರನ್ನು ಸೋಲಿಸಿದ್ದರು.

ಹೊಂಜು ಕವಿದ ತಾಣಗಳಲ್ಲಿ ಪಂದ್ಯಗಳೇಕೆ?

ಲಖನೌ ಪಂದ್ಯ ರದ್ದು • ಬಿಸಿಸಿಐ ವೇಳಾಪಟ್ಟಿ ಬಗ್ಗೆ ಕ್ರಿಕೆಟ್‌ಪ್ರೇಮಿಗಳ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಇದೇ ಮೊದಲ ಬಾರಿಗೆ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯವೊಂದು 'ಹೊಂಜು' ಸಮಸ್ಯೆಯಿಂದಾಗಿ ರದ್ದಾಗಿದೆ.

ಲಖನೌನಲ್ಲಿರುವ ಏಕನಾ ಕ್ರೀಡಾಂಗಣದಲ್ಲಿ ಬುಧವಾರ ದಟ್ಟ ಹೊಂಜಿನಿಂದಾಗಿ (ಹೊಗೆ ಮತ್ತು ಮಂಜು ಸೇರಿದ ವಾತಾವರಣ) ಭಾರತ ಹಾಗೂ ದಕ್ಷಿಣ ಆಫ್ರಿಕಾ ನಡುವಣ ಟಿ20 ಪಂದ್ಯವು ರದ್ದಾಯಿತು. ಅಂಪೈರ್‌ಗಳು ಐದಾರು ಬಾರಿ ಕ್ರೀಡಾಂಗಣವನ್ನು ಪರಿಶೀಲಿಸಿದರು. ದಟ್ಟ ಹೊಂಜಿನಲ್ಲಿ ಚೆಂಡಿನ ಚಲನೆಯನ್ನು ಗುರುತಿಸಲು ಸಾಧ್ಯವೇ ಇಲ್ಲ ಎಂದು ಖಚಿತಪಡಿಸಿಕೊಂಡ ಅವರು ರಾತ್ರಿ 10 ಗಂಟೆಗೆ ಪಂದ್ಯ ರದ್ದು ಮಾಡಿದರು. ಕ್ರೀಡಾಂಗಣದಲ್ಲಿ ಸೇರಿದ್ದ ಕ್ರಿಕೆಟ್‌ಪ್ರೇಮಿಗಳು ಆಯೋಜಕರಿಗೆ ಹಿಡಿಶಾಪ ಹಾಕುತ್ತ ಹೊಂಜಿನಲ್ಲಿ ಮರೆಯಾದರು. ಸಾಮಾಜಿಕ ಜಾಲತಾಣಗಳಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯನ್ನು ಹಲವಾರು ಜನರು ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಹಿಂದೆಯೂ ಕೆಲವು ಅಂತರರಾಷ್ಟ್ರೀಯ ಮತ್ತು ದೇಶಿ ಕ್ರಿಕೆಟ್ ಪಂದ್ಯಗಳ ಸಂದರ್ಭದಲ್ಲಿ ಇಂತಹದೇ ಹವಾಮಾನ ವೈಪರಿತ್ಯ ಕಾಡಿದ ನಿದರ್ಶನಗಳಿವೆ. 2017ರ ನವೆಂಬರ್‌ನಲ್ಲಿ ದೆಹಲಿಯಲ್ಲಿ ನಡೆದ ಭಾರತ ಮತ್ತು ಶ್ರೀಲಂಕಾ ನಡುವಣ ಟೆಸ್ಟ್ ಪಂದ್ಯಕ್ಕೂ ಹವಾಮಾನ ವೈಪರಿತ್ಯ ಕಾಡಿತ್ತು. ಲಂಕಾ ತಂಡದ ಕೆಲವು ಆಟಗಾರರು ಉಸಿರಾಟದ ತೊಂದರೆಯಿಂದಾಗಿ ಅಸ್ವಸ್ಥಗೊಂಡಿದ್ದರು. ಮೈದಾನದಲ್ಲಿಯೇ ವಾಂತಿ ಮಾಡಿಕೊಂಡಿದ್ದರು. 2019ರಲ್ಲಿ ದೆಹಲಿಯಲ್ಲಿ ಭಾರತ ಮತ್ತು ಬಾಂಗ್ಲಾ ತಂಡಗಳು ಇಂತಹದೇ ಕೆಟ್ಟ ವಾತಾವರಣದಲ್ಲಿ ಟಿ20 ಪಂದ್ಯ ಆಡಿದ್ದವು. ದೇಶದ ರಾಜಧಾನಿಯಲ್ಲಿ 2023ರ ನವೆಂಬರ್ 6ರಂದು ಆಯೋಜನೆಯಾಗಿದ್ದ ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯಕ್ಕೂ ವಾಯುಮಾಲಿನ್ಯದ ಬಿಸಿ ತಟ್ಟಿತ್ತು. ಅಪಾಯದ ಮಟ್ಟ ಮೀರಿದ ಮಾಲಿನ್ಯದಿಂದಾಗಿ ಬಾಂಗ್ಲಾದೇಶ ಮತ್ತು ಶ್ರೀಲಂಕಾ ತಂಡಗಳು ನೆಟ್ಸ್ ಅಭ್ಯಾಸವನ್ನು ರದ್ದುಗೊಳಿಸಿದ್ದವು.

ಇಷ್ಟಾದರೂ ಬಿಸಿಸಿಐ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಸರಣಿಗಳ ವೇಳಾಪಟ್ಟಿಯನ್ನು ಸಿದ್ಧಗೊಳಿಸುವಾಗ ಉತ್ತರ ಭಾರತದ ತಾಣಗಳಿಗೆ ಹೆಚ್ಚು ಪಂದ್ಯಗಳನ್ನು ನೀಡಿದ್ದು ಯಾಕೆ ಎಂಬ ಪ್ರಶ್ನೆ ಕಾಡುತ್ತಿದೆ. ಮೂರು ಏಕದಿನ ಹಾಗೂ ಐದು ಟಿ20 ಪಂದ್ಯಗಳಿಗೆ ರಾಯಪುರ, ನವ ಚಂಡೀಗಢ, ಧರ್ಮಶಾಲಾ ಮತ್ತು ಲಖನೌಗಳಲ್ಲಿ ಪಂದ್ಯ ಆಯೋಜಿಸಲಾಗಿದೆ. ಇವೆಲ್ಲವೂ ಉತ್ತರ ಭಾರತದಲ್ಲಿವೆ. ವೇಳಾಪಟ್ಟಿಯನ್ನು ಸಿದ್ಧಗೊಳಿಸುವಲ್ಲಿ ಬಿಸಿಸಿಐ ಅಸಮರ್ಥತೆಯನ್ನು ಇದು ತೋರಿಸುತ್ತದೆ.

ಲಖನೌನ ಏಕನಾ ಕ್ರೀಡಾಂಗಣದಲ್ಲಿ ಮುಸುಕಿದ್ದ ಹೊಂಜಿನಲ್ಲಿ ಮುಖಗವಸು ಧರಿಸಿ ಅಭ್ಯಾಸ ಮಾಡಿದ ಭಾರತ ತಂಡದ ಹಾರ್ದಿಕ್ ಪಾಂಡ್ಯ ಪಿಟಿಐ ಚಿತ್ರ

ಅಷ್ಟಕ್ಕೂ ಉತ್ತರ ಭಾರತದಲ್ಲಿ ಡಿಸೆಂಬರ್ ತಿಂಗಳಲ್ಲಿ ಇಂತಹ ಹವಾಮಾನ ಸರ್ವೇಸಾಮಾನ್ಯ. ಹೊಗೆ, ಮಂಜು ಮತ್ತು ವಿಪರೀತ ಚಳಿಯಿಂದಾಗಿ ಇಲ್ಲಿ ಜನಜೀವನ ಅಸ್ತವ್ಯಸ್ತಗೊಳ್ಳುವುದು ಹೊಸದೇನಲ್ಲ. ಅದನ್ನು ಕಂಡುಹಿಡಿಯಲು ಹವಾಮಾನ ಪರಿಣತರೇ ಆಗಬೇಕೆಂದಿಲ್ಲ. ಲಖನೌನಲ್ಲಿ ಎಕ್ಯೂಐ (ವಾಯು ಗುಣಮಟ್ಟ ಸೂಚ್ಯಂಕ) 400ರಷ್ಟು ಅಪಾಯ ಮಟ್ಟವನ್ನು ದಾಟಿತ್ತೆನ್ನಲಾಗಿದೆ.

ಕ್ರಿಕೆಟ್ ಅಭಿಮಾನಿಗಳನ್ನು ವಂಚಿಸಬಾರದು: ತರೂರ್

ನವದೆಹಲಿ (ಪಿಟಿಐ): ಡಿಸೆಂಬರ್–ಜನವರಿ ತಿಂಗಳುಗಳಲ್ಲಿ ಹೊಂಜು ಸಮಸ್ಯೆ ವಿಪರೀತವಾಗಿರುವ ಉತ್ತರ ಭಾರತದಲ್ಲಿ ಕ್ರಿಕೆಟ್ ಪಂದ್ಯಗಳನ್ನು ಆಯೋಜಿಸುವುದು ಸರಿಯಲ್ಲ. ಇದರಿಂದಾಗಿ ಬಿಸಿಸಿಐ ತಮಗೆ ಮೋಸ ಮಾಡುತ್ತಿದೆ ಎಂಬ ಭಾವನೆಯು ಕ್ರಿಕೆಟ್ ಅಭಿಮಾನಿಗಳಲ್ಲಿ ಮೂಡಬಹುದು ಎಂದು ಕಾಂಗ್ರೆಸ್ ಪಕ್ಷದ ಸಂಸದ ಶಶಿ ತರೂರ್ ಹೇಳಿದ್ದಾರೆ.

ಲೋಕಸಭೆಯಲ್ಲಿ ಗುರುವಾರ ಕಾಂಗ್ರೆಸ್ ಪಕ್ಷದ ಸಂಸದರೂ ಆಗಿರುವ ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಮತ್ತು ತರೂರ ಅವರು ಮುಖಾಮುಖಿಯಾದರು. ಈ ಸಂದರ್ಭದಲ್ಲಿ ಅವರಿಬ್ಬರ ನಡುವೆ ಆಪ್ತ ಸಂವಾದ ನಡೆಯಿತು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ತರೂರ್, 'ದಕ್ಷಿಣ ಭಾರತದಲ್ಲಿ ಬಂದು ಪಂದ್ಯಗಳನ್ನು ಆಡಿ. ಕೇರಳವು ಪಂದ್ಯಗಳ ಆಯೋಜನೆಗೆ ಸದಾ ಸಿದ್ಧವಾಗಿರುತ್ತದೆ ಎಂಬ ವಿಶ್ವಾಸ ನನಗಿದೆ. ದಕ್ಷಿಣ ಭಾರತದಲ್ಲಿ ದಟ್ಟ ಮಂಜಿನ ಸಮಸ್ಯೆ ಇರುವುದಿಲ್ಲ. ದಯವಿಟ್ಟು ಜನವರಿ ಮಧ್ಯಭಾಗ ಮುಗಿಯುವವರೆಗೂ ಉತ್ತರ ಭಾರತದಲ್ಲಿ ಕ್ರಿಕೆಟ್ ಪಂದ್ಯ ಆಯೋಜಿಸಬಾರದು. ಕ್ರಿಕೆಟ್ ಅಭಿಮಾನಿಗಳಿಗೆ ವಂಚಿಸಬೇಡಿ' ಎಂದರು.

ಭಾರತದ ದಕ್ಷಿಣ ಅಥವಾ ಪೂರ್ವ ನಗರಗಳಲ್ಲಿ ಪಂದ್ಯಗಳನ್ನು ಆಯೋಜಿಸಬಹುದಿತ್ತು. ಮುಂದಿನ ತಿಂಗಳು ಭಾರತಕ್ಕೆ ಬರಲಿರುವ ನ್ಯೂಜಿಲೆಂಡ್ ತಂಡದ ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳು ನಡೆಯಲಿವೆ. ಅವುಗಳೆಲ್ಲವೂ ಪೂರ್ವ ಮತ್ತು ದಕ್ಷಿಣದ ನಗರಗಳಲ್ಲಿ ಆಯೋಜನೆಗೊಂಡಿವೆ. ದಕ್ಷಿಣ ಆಫ್ರಿಕಾ ಎದುರಿನ ಸರಣಿಯ ಪಂದ್ಯಗಳನ್ನೂ ಅದೇ ರೀತಿ ಮಾಡಿದ್ದರೆ ಸೂಕ್ತವಾಗಿರುತ್ತಿತ್ತು. ರೊಟೇಷನ್ ಪದ್ಧತಿಗೆ ಅಂಟಿಕೊಂಡಿರುವ ಮಂಡಳಿಯು ಹವಾಮಾನ ವೈಪರಿತ್ಯದ ವಿಷಯವನ್ನು ಲಘುವಾಗಿ ಪರಿಗಣಿಸುತ್ತಿದೆ ಎಂಬ ಮಾತುಗಳೂ ಕೇಳಿಬರುತ್ತಿವೆ.

ಟೆನಿಸ್: ಪ್ರಶಸ್ತಿ ಸುತ್ತಿಗೆ ಕಲಾ, ರಚೆಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ರಚೆಲ್ ರಾಯುಡು ಹಾಗೂ ತೆಲಂಗಾಣದ ಜೆ.ಕೆ.ಕಲಾ ಅವರು ಎಐಟಿಎ ಟಿಎಸ್–7 ರಾಷ್ಟ್ರೀಯ ಸರಣಿಯ ಟೆನಿಸ್ ಟೂರ್ನಿಯ (12 ವರ್ಷದೊಳಗಿನವರ) ಬಾಲಕಿಯರ ಸಿಂಗಲ್ಸ್‌ನಲ್ಲಿ ಗುರುವಾರ ಫೈನಲ್ ಪ್ರವೇಶಿಸಿದರು.

ಸುಂಕದಕಟ್ಟೆಯ 'ಫೋಕಸ್ ಟೆನಿಸ್ ಮತ್ತು ಪಿಕಲ್‌ಬಾಲ್ ಅಕಾಡೆಮಿ'ಯಲ್ಲಿ ನಡೆಯುತ್ತಿರುವ ಟೂರ್ನಿಯ ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಅಗ್ರ ಶ್ರೇಯಾಂಕದ ಆಟಗಾರ್ತಿ ಕಲಾ ಅವರು 6–1, 6–2ರಿಂದ ಕರ್ನಾಟಕದ ಶೆಲ್ಸೀ ಔರಾ ಮೆನನ್ ವಿರುದ್ಧ ಹಾಗೂ ರಚೆಲ್ 6–4, 5–7, 10–5ರಿಂದ ಮೂರನೇ ಶ್ರೇಯಾಂಕದ ಆಟಗಾರ್ತಿ ಎಸ್.ಬಿ.ಧಾತ್ರಿ ವಿರುದ್ಧ ಗೆಲುವು ಸಾಧಿಸಿದರು.

ಬಾಲಕರ ವಿಭಾಗದಲ್ಲಿ ಕರ್ನಾಟಕದ ಆಟಗಾರರಾದ ದರ್ಶ್ ಮಲ್ಹಾನ್ ಹಾಗೂ ಹೋಜಸ್ವಿನ್ ಎಚ್.ಎಚ್. ಅವರು ಪ್ರಶಸ್ತಿ ಸುತ್ತು ಪ್ರವೇಶಿಸಿದರು.

ನಾಲ್ಕನೇ ಶ್ರೇಯಾಂಕದ ಆಟಗಾರ ಹೋಜಸ್ವಿನ್ ಅವರು ಸೆಮಿಫೈನಲ್ ಪಂದ್ಯದಲ್ಲಿ 6–1, 3–6, 10–8ರಿಂದ ಅಗ್ರ ಶ್ರೇಯಾಂಕದ ಆಟಗಾರ ಶ್ರವಿನ್ ರುಬೇಷ್ ಅವರಿಗೆ ಆಘಾತ ನೀಡಿದರು. ಇನ್ನೊಂದು ಸೆಮಿಫೈನಲ್‌ನಲ್ಲಿ ದರ್ಶ್ ಅವರು 6–2, 6–3ರಿಂದ ಮೂರನೇ ಶ್ರೇಯಾಂಕದ ಆಟಗಾರ ಆಹಾನ್ ಶಾ ವಿರುದ್ಧ ಸುಲಭ ಜಯ ದಾಖಲಿಸಿದರು.

ಡಬ್ಲ್ಯುಎಫ್‌ಐ ನಿಯಮ: ಕುಸ್ತಿಪಟುಗಳಿಗೆ ಬಿಗಿ ಪಟ್ಟು

ತರಬೇತಿ ಶಿಬಿರದಲ್ಲಿ ಹಾಜರಿ ಕಡ್ಡಾಯ

ನವದೆಹಲಿ (ಪಿಟಿಐ): ಕುಸ್ತಿಪಟುಗಳು ರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ಇಲ್ಲದಿದ್ದರೆ ರಾಷ್ಟ್ರೀಯ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುವುದಿಲ್ಲ ಎಂದು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ನಿಯಮ ರೂಪಿಸಿದೆ.

ಈಚೆಗೆ ಅಹಮದಾಬಾದಿನಲ್ಲಿ ನಡೆದ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ಸಂದರ್ಭದಲ್ಲಿ ಸರ್ವಸದಸ್ಯರ ಕೌನ್ಸಿಲ್ ಸಭೆ ನಡೆಯಿತು. ಅದರಲ್ಲಿ ಹೊಸ ನಿಯಮದ ಕುರಿತು ಚರ್ಚಿಸಿ ನಿರ್ಣಯಿಸಲಾಯಿತು. ಕುಸ್ತಿಪಟುಗಳು ಪ್ರತ್ಯೇಕವಾಗಿ (ಸ್ವತಂತ್ರ ಕೋಚ್) ತರಬೇತಿ ಪಡೆಯುವಂತಿಲ್ಲ. ಒಲಿಂಪಿಕ್ ಗೇಮ್ಸ್ ಕೋಟಾ ಪಡೆದ ಸ್ಪರ್ಧಿಗಳು ಒನ್ ಬೌಟ್ ಫೈನಲ್ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು ಎಂದೂ ನಿಯಮದಲ್ಲಿ ಹೇಳಲಾಗಿದೆ. ಈ ನಿಯಮಾವಳಿಯ ಪ್ರತಿಯನ್ನು ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ)ಕ್ಕೆ ಸಲ್ಲಿಸಲಾಗಿದೆ.

'ರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳುವುದು ಎಲ್ಲ ಹಂತದ ಕುಸ್ತಿಪಟುಗಳಿಗೂ ಕಡ್ಡಾಯ. ಈ ಶಿಬಿರದಲ್ಲಿ ಪಾಲ್ಗೊಳ್ಳುವ ಅರ್ಹತೆ ಪಡೆಯಲು ಆ ವರ್ಷದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪದಕ ಜಯಿಸಿರಲೇಬೇಕು. ಆಯ್ಕೆಯಾದವರು ಅಧಿಕೃತ ಶಿಬಿರದಲ್ಲಿಯೇ ತರಬೇತಿ ಪಡೆಯಬೇಕು. ಬೇರೆ ತಾಣಗಳಲ್ಲಿ ಅಥವಾ ಪ್ರತ್ಯೇಕವಾಗಿ ತರಬೇತಿ ಪಡೆಯುವಂತಿಲ್ಲ' ಎಂದು ನಿಯಮದಲ್ಲಿ ವಿವರಿಸಲಾಗಿದೆ.

ಇತ್ತೀಚೆಗೆ ತಮ್ಮ ನಿವೃತ್ತಿ ನಿರ್ಧಾರವನ್ನು ಮರಳಿ ಪಡೆದು ಕಣಕ್ಕೆ ಮರಳುತ್ತಿರುವ ಒಲಿಂಪಿಯನ್ ವಿನೇಶ್ ಫೋಗಟ್ ಅವರೂ ದೇಶಿ ಟೂರ್ನಿಯಲ್ಲಿ ತಮ್ಮ ಸಾಮರ್ಥ್ಯ ತೋರಬೇಕಾಗಬಹುದು. ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯಲು ಅರ್ಹತಾ ಪ್ರಕ್ರಿಯೆಗಳ ಮೂಲಕವೇ ಬರಬೇಕಿದೆ.

'ಆಯ್ಕೆ ಟ್ರಯಲ್ಸ್‌ನಿಂದ ಯಾರಿಗೂ ವಿನಾಯಿತಿ ಕೊಡುವುದಿಲ್ಲ. ಹಳೆಯ ಸಾಧನೆಗಳು ಮಾನದಂಡವಾಗುವುದಿಲ್ಲ. ವರ್ಷಗಳ ಹಿಂದಿನ ಸಾಧನೆಗಳನ್ನು ಪರಿಗಣಿಸಿ ಟ್ರಯಲ್ಸ್ ವಿನಾಯಿತಿ ನೀಡಬೇಕು ಎಂದು ಬಹಳಷ್ಟು ಕುಸ್ತಿಪಟುಗಳು ಕೇಳಿಕೊಂಡಿದ್ದರು. ಆದರೆ ಆಯಾ ಸಾಲಿನಲ್ಲಿ ಹೊಸದಾಗಿ ಬರುವ ಕುಸ್ತಿಪಟುಗಳು ಮತ್ತು ಹಳಬರನ್ನು ಸಮನಾಗಿ ಕಾಣುವ ಉದ್ದೇಶ ನಮ್ಮದು. ಆದ್ದರಿಂದ ಇಬ್ಬರಿಗೂ ತಮ್ಮ ಸಾಮರ್ಥ್ಯ ತೋರುವ ಅವಕಾಶ ನೀಡಿ ಅರ್ಹರನ್ನು ಆಯ್ಕೆ ಮಾಡಲಾಗುವುದು' ಎಂದು ಡಬ್ಲ್ಯುಎಫ್‌ಐ ಅಧಿಕಾರಿ ಹೇಳಿದ್ದಾರೆ.

ನೂತನ ನಿಯಮದಡಿಯಲ್ಲಿ ತಂಡದಲ್ಲಿ ಮೀಸಲು ಕುಸ್ತಿಪಟುಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ಮುಖ್ಯ ಸ್ಪರ್ಧಾಳು ಗಾಯಗೊಂಡರೆ ಮೀಸಲು ಕುಸ್ತಿಪಟುವನ್ನು ಕಣಕ್ಕಿಳಿಸಬಹುದು. ಅಂತರರಾಷ್ಟ್ರೀಯ ಸ್ಪರ್ಧೆಗಳ ಸಂದರ್ಭದಲ್ಲಿ ಕುಸ್ತಿಪಟುಗಳು ನಿಗದಿಗಿಂತ ಹೆಚ್ಚಿನ ದೇಹತೂಕ ಹೊಂದಿದ್ದರೆ ಡಬ್ಲ್ಯುಎಫ್‌ಐ ಕ್ರಮ ಕೈಗೊಳ್ಳಬಹುದು.

ರಾಷ್ಟ್ರೀಯ ಫಿನ್ ಸ್ವಿಮ್ಮಿಂಗ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಫಿನ್ ಸ್ವಿಮ್ಮಿಂಗ್ ಸಂಸ್ಥೆ, ಅಂಡರ್ ವಾಟರ್ ಸ್ಪೋರ್ಟ್ಸ್ ಫೆಡರೇಷನ್ ಆಫ್ ಇಂಡಿಯಾ, ಫಿಸಿಕಲ್ ಎಜುಕೇಷನ್ ಫೌಂಡೇಷನ್ ಆಫ್ ಇಂಡಿಯಾ ಹಾಗೂ ಕೇಂದ್ರ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಆಯೋಜಿಸಿರುವ ರಾಷ್ಟ್ರಮಟ್ಟದ ಫಿನ್ ಸ್ವಿಮ್ಮಿಂಗ್ (ಮೀನಿನ ರೆಕ್ಕೆಯಂಥ ವಸ್ತು–ಫಿನ್‌ಗಳನ್ನು ಪಾದಗಳಿಗೆ ಕಟ್ಟಿ ಈಜುವುದು) ಚಾಂಪಿಯನ್‌ಷಿಪ್ ಡಿ.19ರಿಂದ 22ರವರೆಗೆ ನಗರದ ಎಮ್ಮೆಕೆರೆ ಈಜುಕೊಳದಲ್ಲಿ ನಡೆಯಲಿದೆ.

8 ವರ್ಷದಿಂದ 70 ವರ್ಷದವರ ವಯೋಮಾನ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಮಣಿಪುರ, ನಾಗಾಲ್ಯಾಂಡ್, ಜಮ್ಮು ಮತ್ತು ಕಾಶ್ಮೀರ, ಹಿಮಾಚಲಪ್ರದೇಶದ ಸ್ಪರ್ಧಿಗಳು ಕೂಡ ಸ್ಪರ್ಧಿಸಲಿದ್ದಾರೆ ಎಂದು ಫಿನ್ ಸ್ವಿಮ್ಮಿಂಗ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ತಪನ್ ಕುಮಾರ್ ಪಾಣಿಗ್ರಾಹಿ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

'ಫಿನ್ ಸ್ವಿಮ್ಮಿಂಗ್ ಕ್ರೀಡೆಗೆ ಭಾರತದಲ್ಲಿ ಉತ್ತೇಜನ ಸಿಗುತ್ತಿದೆ. 2021ರಲ್ಲಿ ಗೋವಾದ ಪೋಂಡಾದಲ್ಲಿ ಆಯೋಜಿಸಿದ್ದ ಮೊದಲ ಚಾಂಪಿಯನ್‌ಷಿಪ್‌ನಲ್ಲಿ 700ರಷ್ಟು ಸ್ಪರ್ಧಿಗಳು ಭಾಗವಹಿಸಿದ್ದರು. ನಂತರ 2 ವರ್ಷ ಪುಣೆಯಲ್ಲಿ, ಕಳೆದ ಬಾರಿ ನವದೆಹಲಿಯಲ್ಲಿ ಚಾಂಪಿಯನ್‌ಷಿಪ್ ಆಯೋಜಿಸಲಾಗಿತ್ತು. ಪ್ರತಿವರ್ಷ ಸ್ಪರ್ಧಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. 5ನೇ ಚಾಂಪಿಯನ್‌ಷಿಪ್‌ಗೆ 1,300 ಸ್ಪರ್ಧಿಗಳು ಈಗಾಗಲೇ ನೋಂದಣಿ ಮಾಡಿಕೊಂಡಿದ್ದಾರೆ. ವಿಮಾನಯಾನ ಸೇವೆಯಲ್ಲಿ ಆಗಿರುವ ಏರುಪೇರಿನಿಂದಾಗಿ ಕೆಲವರಿಗೆ ಮಂಗಳೂರು ತಲುಪಲು ಸಮಸ್ಯೆಯಾಗಿದೆ' ಎಂದು ಅವರು ಹೇಳಿದರು.

ಫೆಡರೇಷನ್ ಪದಾಧಿಕಾರಿಗಳಾದ ರಾಮಕೃಷ್ಣ, ಅಚಿಂತ್ಯ, ರೆಹಾನ್ ಸಿದ್ದಿಕಿ ಹಾಗೂ ಬಿ.ಕೆ ನಾಯಕ್ ಪಾಲ್ಗೊಂಡಿದ್ದರು.

ದ್ವೇಷ ಭಾಷಣ ತಡೆ ಮಸೂದೆಗೆ ಅಸ್ತು

ಒಂದನೇ ಪುಟದಿಂದ...

ಪರಮೇಶ್ವರ ಹೇಳಿದ್ದೇನು?: 'ರಾಜ್ಯದಲ್ಲಿ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರಸರಣ, ಪ್ರಕಟಣೆ ಅಥವಾ ಪ್ರಚಾರ ಮಾಡಿ ಸಮಾಜದ ಸಾಮರಸ್ಯ ಹದಗೆಡಿಸುವುದು ಮತ್ತು ದ್ವೇಷ ಹರಡುವವರಿಗೆ ಕಡಿವಾಣ ಹಾಕಲು ಮತ್ತು ಅಂತಹ ಅಪರಾಧಗಳನ್ನು ಎಸಗುವ ವ್ಯಕ್ತಿ, ವ್ಯಕ್ತಿಗಳು, ಸಂಘಟನೆಯವರಿಗೆ ಶಿಕ್ಷೆ ವಿಧಿಸುವ ಉದ್ದೇಶದಿಂದ ಈ ಮಸೂದೆ ರೂಪಿಸಲಾಗಿದೆ' ಎಂದು ಪರಮೇಶ್ವರ ಪ್ರತಿಪಾದಿಸಿದರು.

'ಇತ್ತೀಚೆಗೆ ದ್ವೇಷ ಮಾತು, ಶಬ್ದಗಳ ಬಳಕೆಯಿಂದ ಒಂದು ಸಮುದಾಯದ ವಿರುದ್ಧ ಮತ್ತೊಂದು ಸಮುದಾಯ ಎತ್ತಿ ಕಟ್ಟುವ ಕೆಲಸಗಳಾಗುತ್ತಿವೆ. ದ್ವೇಷ ಭಾಷಣಗಳಿಂದ ಎಷ್ಟೋ ಕೊಲೆಗಳು, ಹೊಡೆದಾಟಗಳು ನಡೆದಿವೆ. ಇದರಿಂದ ಸಮಾಜದ ಸ್ವಾಸ್ಥ್ಯ ಮತ್ತು ಸಾಮರಸ್ಯ ಹಾಳಾಗುತ್ತಿದೆ. ಪೂರ್ವಗ್ರಹಪೀಡಿತವಾಗಿ ಧರ್ಮ, ಜನಾಂಗ, ಭಾಷೆ, ಜನ್ಮಸ್ಥಳ, ಜಾತಿ, ಲಿಂಗ ಆಧಾರದಲ್ಲಿ ದ್ವೇಷದ ಭಾಷಣ ಮಾಡುವವರನ್ನು ನಿರ್ಬಂಧಿಸಲು ಈ ಮಸೂದೆ ರೂಪಿಸಲಾಗಿದೆ' ಎಂದರು.

'ಗುಪ್ತಚರ ವರದಿ ಆಧರಿಸಿ ಇತ್ತೀಚೆಗೆ ವ್ಯಕ್ತಿಯೊಬ್ಬರನ್ನು ಬೇರೆ ಜಿಲ್ಲೆಗೆ ಹೋಗದಂತೆ ನಿಷೇಧಿಸಿದ್ದೇವೆ. ಹೀಗೆ ಎಷ್ಟು ಜನರ ಭೇಟಿಯನ್ನು ನಿಷೇಧಿಸುವುದು? ಇಂತಹ ದ್ವೇಷ ಭಾಷಣ ಹಾಗೂ ದ್ವೇಷಾಪರಾಧಿಗಳಿಗೆ ಕಡಿವಾಣ ಹಾಕಲು ಕಾನೂನು ಅಗತ್ಯವಿದೆ. ಧಾರ್ಮಿಕ, ಜನಾಂಗೀಯ, ಜಾತಿ ಅಥವಾ ಸಮುದಾಯ, ಲಿಂಗ, ಲೈಂಗಿಕ ದೃಷ್ಟಿಕೋನ, ಜನ್ಮಸ್ಥಳ, ಭಾಷೆ, ವಾಸಸ್ಥಳ, ಅಂಗವೈಕಲ್ಯ ಅಥವಾ ಬುಡಕಟ್ಟು ಜನರ ಕುರಿತು ಯಾವುದೇ ವ್ಯಕ್ತಿಗೆ ಹಾನಿ ಮಾಡುವುದು ಅಥವಾ ದ್ವೇಷ ಉತ್ತೇಜಿಸುವುದು ಅಥವಾ ಪ್ರಚಾರ ಮಾಡುವುದನ್ನು ದ್ವೇಷಾಪರಾಧ ಎಂದು ಪರಿಗಣಿಸಲಾಗುವುದು' ಎಂದು ಹೇಳಿದರು.

'ದ್ವೇಷಾಪರಾಧವನ್ನು ಜಾಮೀನು ರಹಿತ ಅಪರಾಧ ಎಂದು ಪರಿಗಣಿಸಲಾಗುವುದು. ನೋಂದಾಯಿತ, ನೋಂದಾಯಿತವಲ್ಲದ ಸಂಘಟನೆಗಳು, ಸಂಸ್ಥೆಗಳು, ವಿದ್ಯುನ್ಮಾನ ಮಾಧ್ಯಮಗಳು, ಯುಟ್ಯೂಬ್‌ಗಳು ಈ ಮಸೂದೆಯ ವ್ಯಾಪ್ತಿಗೆ ಬರುತ್ತವೆ. ದ್ವೇಷ ಬಿತ್ತುವ ಪುಸ್ತಕಗಳು, ಚಿತ್ರಗಳು, ಪ್ರಕಟಣೆಗಳು, ಕರಪತ್ರಗಳಿಗೂ ಅನ್ವಯವಾಗುತ್ತದೆ' ಎಂದು ಪರಮೇಶ್ವರ ವಿವರಿಸಿದರು.

ಆಗ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ವಿ. ಸುನಿಲ್ ಕುಮಾರ್, 'ಇದು ಮುಂದಾಲೋಚನೆ ಇಲ್ಲದೆ ತಂದ ಮಸೂದೆಯಾಗಿದ್ದು, ಅಪಾಯದ ಸೂಚನೆ ನೀಡುತ್ತಿದೆ' ಎಂದರು. ಅದಕ್ಕೆ ಪರಮೇಶ್ವರ, 'ಬಿಎನ್‌ಎಸ್ ಕಾಯ್ದೆ ವ್ಯಾಪ್ತಿಗೆ ಬಾರದ್ದನ್ನು ಈ ಮಸೂದೆಯಡಿ ತಂದಿದ್ದೇವೆ. ಹೀಗಾಗಿ ಮಸೂದೆಗೆ ಅಂಗೀಕಾರ ನೀಡಬೇಕು' ಎಂದು ಕೋರಿದರು.

'ಕರಾವಳಿ ಬೆಂಕಿ'ಯ ಕಿಡಿ

ಚರ್ಚೆಯ ವೇಳೆ ಸಚಿವ ಸಂತೋಷ್ ಲಾಡ್ ಅವರ ಮಾತಿನಿಂದ ಕೆರಳಿದ ಕರಾವಳಿ ಭಾಗದ ಬಿಜೆಪಿ ಸದಸ್ಯರು, 'ಅಂಬೇಡ್ಕರ್ ಸತ್ತಾಗ ಸಮಾಧಿ ಮಾಡಲು ದೆಹಲಿಯಲ್ಲಿ ಜಾಗ ಕೊಡಲಿಲ್ಲ' ಎಂದು ಆಡಳಿತ ಪಕ್ಷದವರ ಕಾಲೆಳೆದರು. ಈ ವೇಳೆ ಸದನದಲ್ಲಿ ಗದ್ದಲ ಏರ್ಪಟ್ಟಿತು. ಆಗ ಸಚಿವ ಬೈರತಿ ಸುರೇಶ್, 'ನೀವು ಏಕೆ ಪಕ್ಷಪಾತಿಗಳಾಗಿದ್ದೀರಿ' ಎಂದು ಪ್ರಶ್ನಿಸಿದರು. ಅದಕ್ಕೆ ಕರಾವಳಿ ಭಾಗದ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ರೊಚ್ಚಿಗೆದ್ದ ಸಚಿವ ಬೈರತಿ, 'ಕರಾವಳಿಯಲ್ಲಿ ಬೆಂಕಿ ಹಾಕಿ, ಈಗ ಇಲ್ಲಿ ಏಕೆ ಬೆಂಕಿ ಹಾಕುವಿರಿ' ಎಂದು ಹರಿಹಾಯ್ದರು. ಈ ಮಾತಿನಿಂದ ಸದನದಲ್ಲಿ ಗದ್ದಲ ಹೆಚ್ಚಾಯಿತು. ಕರಾವಳಿ ಭಾಗದ ಶಾಸಕರು ಆಕ್ರೋಶ ವ್ಯಕ್ತಪಡಿಸಿದಾಗ ಕೆರಳಿದ ಸಚಿವ ಬೈರತಿ, 'ನಿಮ್ಮ ಬಾಸಿಸಂಗೆ ಹೆದರುವುದಿಲ್ಲ' ಎಂದು ಕಿಡಿಕಾರಿದರು. ಬಿಜೆಪಿಯ ವಿ.ಸುನಿಲ್ ಕುಮಾರ್, 'ಕರಾವಳಿ ಬಿಟ್ಟಿ ಬಿದ್ದಿದೆಯಾ? ಕರಾವಳಿ ಬಗ್ಗೆ ಹಗುರವಾಗಿ ಮಾತನಾಡಬಾರದು' ಎಂದರು. 'ಕರಾವಳಿ ಬಗ್ಗೆ ಹಗುರವಾಗಿ ಮಾತನಾಡಿದ ಸಚಿವರು ಕ್ಷಮೆ ಕೇಳಬೇಕು' ಎಂದು ಆ ಭಾಗದ ಸದಸ್ಯರು ಆಗ್ರಹಿಸಿದರು. 'ಸಭಾಧ್ಯಕ್ಷರೇ ನೀವೂ ಕರಾವಳಿ ಭಾಗದವರು. ಇಂತಹ ಮಾತು ಕೇಳಿಯೂ ನೀವು ಹೇಗೆ ಪೀಠದ ಮೇಲೆ ಕೂರುತ್ತೀರಿ' ಎಂದು ಕೇಳಿದರು. ಬಳಿಕ ಬಿಜೆಪಿ, ಜೆಡಿಎಸ್ ಶಾಸಕರು ಸಭಾಧ್ಯಕ್ಷರ ಪೀಠದ ಎದುರು ಪ್ರತಿಭಟಿಸಿದರು.

ಪೊಲೀಸರು ಹಿಟ್ಲರ್ ಆಗುತ್ತಾರೆ: ಅಶೋಕ

ಒಂದನೇ ಪುಟದಿಂದ...

'ಪತ್ರಿಕಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಿದೆ. ಭ್ರಷ್ಟಾಚಾರದ ಸುದ್ದಿ ಪ್ರಸಾರ ಮಾಡಿದವರು ಜೈಲು ಸೇರಬೇಕಾಗುತ್ತದೆ. ವ್ಯಕ್ತಿ ಹೇಳಿಕೆ ನೀಡಿದರೆ, ಸಂಸ್ಥೆ ಮೇಲೆ ಕೇಸ್. ಯಾವ ಉದ್ದೇಶಕ್ಕೆ ಈ ಮಸೂದೆ ತರುತ್ತಿದ್ದೀರಿ? ಪೊಲೀಸ್ ಇಲಾಖೆ ಮತ್ತಷ್ಟು ಭ್ರಷ್ಟಾಚಾರ, ದುಡ್ಡು ವಸೂಲಿ ಮಾಡಲು ಅವಕಾಶ ನೀಡುತ್ತಿದ್ದೀರಾ? ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದವರಿಂದ ಮತ್ತೇನು ನಿರೀಕ್ಷೆ ಮಾಡಲು ಸಾಧ್ಯ?' ಎಂದು ಟೀಕಿಸಿದರು.

ಜೆಜೆಎಂ: ರಾಜ್ಯಕ್ಕಿಲ್ಲ ₹16,863 ಕೋಟಿ

ಒಂದನೇ ಪುಟದಿಂದ...

ಬಾಕಿ ಅನುದಾನ ಬಿಡುಗಡೆಗೆ ಒತ್ತಾಯಿಸಿ ರಾಜ್ಯ ಸರ್ಕಾರವು ಪ್ರಧಾನಿ ಅವರಿಗೆ ಮನವಿ ಮಾಡಿತ್ತು ಹಾಗೂ ಸಚಿವಾಲಯಕ್ಕೆ ಪತ್ರ ಬರೆದಿತ್ತು.

ಕೇಂದ್ರದ ಪಾಲಿನ ಅನುದಾನವನ್ನು ರಾಜ್ಯಕ್ಕೆ ಯಾಕೆ ನೀಡುತ್ತಿಲ್ಲ ಎಂಬ ಬಗ್ಗೆ ಜಲಶಕ್ತಿ ಖಾತೆಯ ರಾಜ್ಯ ಸಚಿವ ವಿ.ಸೋಮಣ್ಣ ಲೋಕ ಸಭೆಯಲ್ಲಿ ಗುರುವಾರ ಸವಿಸ್ತಾರವಾದ ಉತ್ತರ ನೀಡಿದ್ದಾರೆ. ಕೋಲಾರ ಸಂಸದ ಎಂ. ಮಲ್ಲೇಶಬಾಬು ಕೇಳಿರುವ ಪ್ರಶ್ನೆಗೆ ಉತ್ತರ ನೀಡಿರುವ ಅವರು, 'ಕೇಂದ್ರದ ನಿಧಿಯನ್ನು ಅನುಮೋದಿತ ಮಿಷನ್ ಅವಧಿಗೆ ಮಾತ್ರ ಸೀಮಿತಗೊಳಿಸಲಾಗಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಸ್ಪಷ್ಟಪಡಿಸಲಾಗಿದೆ. ರಾಜ್ಯ ಸರ್ಕಾರವು ಸ್ವಂತ ಸಂಪನ್ಮೂಲಗಳಿಂದ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಲಹೆ ನೀಡಲಾಗಿದೆ' ಎಂದು ತಿಳಿಸಿದ್ದಾರೆ.


ವಿ.ಸೋಮಣ್ಣ

ಸಚಿವರ ಉತ್ತರದಲ್ಲೇನಿದೆ: ಕೇಂದ್ರ ಸಚಿವ ಸಂಪುಟವು 2019-20ರಿಂದ 2023-24ರವರೆಗೆ ಜಲ ಜೀವನ್ ಮಿಷನ್ ಅನುಷ್ಠಾನಕ್ಕೆ ಅನುಮೋದನೆ ನೀಡಿತ್ತು. ಈ ಅವಧಿಯಲ್ಲಿ, ರಾಜ್ಯ ಸರ್ಕಾರಗಳು ಯೋಜನೆ ರೂಪಿಸಿ ಅನುಮೋದನೆ ಪಡೆದು, ಅನುಷ್ಠಾನ ಮಾಡಬೇಕಿತ್ತು. ರಾಜ್ಯಗಳಲ್ಲಿ ಅನಗತ್ಯವಾಗಿ ಹಣ ಪೋಲಾಗುವುದನ್ನು ತಪ್ಪಿಸಲು ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳಿಗೆ 'ಸಮಯಕ್ಕೆ ಸರಿಯಾಗಿ ಹಣ ಪಾವತಿ' ತತ್ವದ ಅಡಿಯಲ್ಲಿ ಹಣಕಾಸು ಸಚಿವಾಲಯದ ಸುತ್ತೋಲೆಗಳ ಪ್ರಕಾರ ಹಣ ಬಿಡುಗಡೆ ಮಾಡಲಾಗಿತ್ತು.

ರಾಜ್ಯಕ್ಕೆ ₹28,623.89 ಕೋಟಿ ಹಂಚಿಕೆ ಮಾಡಲಾಗಿತ್ತು. ಆದರೆ, ಎಂಒಎಫ್ ಮತ್ತು ಜೆಜೆಎಂ ಮಾರ್ಗಸೂಚಿ ಪ್ರಕಾರ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವಗಳನ್ನು ಸಲ್ಲಿಸಲು ವಿಳಂಬ ಮಾಡಿದ ಕಾರಣಕ್ಕೆ ರಾಜ್ಯವು ಮಿಷನ್ ಅವಧಿಯಲ್ಲಿ ₹11,760 ಕೋಟಿ ಮಾತ್ರ ಪಡೆದಿದೆ. ಕೇಂದ್ರ ಸಚಿವ ಸಂಪುಟವು ಅನುಮೋದಿಸಿದ ಕೇಂದ್ರದ ಪಾಲನ್ನು ಈವರೆಗೆ ನೀಡಲಾಗಿದೆ.

ದೇಶದಲ್ಲಿ ಯೋಜನೆಯ ಪ್ರಗತಿ ಪರಿಗಣಿಸಿ 2028ರವರೆಗೆ ಮಿಷನ್ ವಿಸ್ತರಿಸುವುದಾಗಿ ಕೇಂದ್ರ ಹಣಕಾಸು ಸಚಿವರು ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಯೋಜನೆಯ ವಿಸ್ತರಣೆಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ ಮತ್ತು ಮಾರ್ಗಸೂಚಿ ಪ್ರಕಾರ ಕೇಂದ್ರದ ಅನುದಾನವನ್ನು ಅರ್ಹ ರಾಜ್ಯಗಳಿಗೆ ಬಿಡುಗಡೆ ಮಾಡಲು ಅವಕಾಶ ಇದೆ.

ಭದ್ರಾ ಮೇಲ್ದಂಡೆ: ವೆಚ್ಚದ ವಿವರ ಕೇಳಿದ ಜಲ ಆಯೋಗ

ಭದ್ರಾ ಮೇಲ್ದಂಡೆ ಯೋಜನೆಗೆ ಈವರೆಗೆ ಮಾಡಿರುವ ವೆಚ್ಚ, ಯೋಜನೆಗೆ ಭವಿಷ್ಯದಲ್ಲಿ ಬೇಕಾಗುವ ಮೊತ್ತ, ಯೋಜನೆಯ ನಕ್ಷೆ ಸೇರಿದಂತೆ ಸಮಗ್ರ ವಿವರ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಜಲ ಆಯೋಗ ಸೂಚಿಸಿದೆ.

ಈ ಸಂಬಂಧ ಜಲಸಂಪನ್ಮೂಲ ಇಲಾಖೆಗೆ ಜಲ ಆಯೋಗವು ನ.28ರಂದು ಪತ್ರ ಬರೆದಿದೆ.

ಲೋಕಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಬಳ್ಳಾರಿ ಸಂಸದ ಇ.ತುಕಾರಾಂ ಕೇಳಿರುವ ಪ್ರಶ್ನೆಗೆ ಉತ್ತರ ನೀಡಿರುವ ಜಲಶಕ್ತಿ ಖಾತೆ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ, 'ಈ ಯೋಜನೆಯನ್ನು ಪ್ರಸ್ತುತ ಕೇಂದ್ರ ಸರ್ಕಾರದ ಯಾವುದೇ ಯೋಜನೆಯಡಿ ಸೇರಿಸಿಲ್ಲ. ಹಾಗಾಗಿ, ಇಲ್ಲಿಯವರೆಗೆ ಯೋಜನೆಗೆ ಕೇಂದ್ರದಿಂದ ಹಣ ಬಿಡುಗಡೆ ಮಾಡಿಲ್ಲ. ₹16,125.48 ಕೋಟಿ ಅಂದಾಜು ವೆಚ್ಚದ ಈ ಯೋಜನೆಯನ್ನು ಹಣಕಾಸು ಸಚಿವಾಲಯದ ಸಾರ್ವಜನಿಕ ಹೂಡಿಕೆ ಮಂಡಳಿ 2022ರ ಅಕ್ಟೋಬರ್‌ನಲ್ಲಿ ಮೌಲ್ಯಮಾಪನ ಮಾಡಿತ್ತು. ಪ್ರಸ್ತುತ ಯೋಜನೆಯ ಪರಿಷ್ಕೃತ ವೆಚ್ಚ ಮತ್ತು ಲಾಭ–ವೆಚ್ಚ ಅನುಪಾತದೊಂದಿಗೆ ಹೊಸ ಪ್ರಸ್ತಾವವನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ ಎಂದಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಗೆ ಅಕ್ಟೋಬರ್ ಅಂತ್ಯದವರೆಗೆ ರಾಜ್ಯ ಸರ್ಕಾರ ₹11,051 ಕೋಟಿ ವೆಚ್ಚ ಮಾಡಿದೆ.

ಬಕೆಟ್ ವಿಷಯವಾಗಿ ಜಗಳ: ಬುಡಕಟ್ಟು ವಿದ್ಯಾರ್ಥಿ ಹತ್ಯೆ

ಒಂದನೇ ಪುಟದಿಂದ...

'ಬಾಲಕನ ಹತ್ಯೆ ವಿಷಯವನ್ನು ಬಹಿರಂಗಪಡಿಸದಂತೆ ಸಾಕ್ಷಿಗಳನ್ನು ಬೆದರಿಸಿದ, ಸಾಕ್ಷ್ಯ ನಾಶಪಡಿಸಿದ ಮತ್ತು ಅಪರಾಧಿಗಳಿಗೆ ಆಶ್ರಯ ನೀಡಿದ ಆರೋಪದಲ್ಲಿ ಕೆಐಎಸ್‌ಎಸ್‌ನ ಹೆಚ್ಚುವರಿ ಸಿಇಒ ಮತ್ತು ಇಬ್ಬರು ಶಿಕ್ಷಕರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಎಸ್. ದೇವದತ್ತ ಇಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

'ಬಾಲಕನ ಸಾವು ಆಕಸ್ಮಿಕವಾಗಿ ಸಂಭವಿಸಿದ್ದಲ್ಲ, ಕೊಲೆ ಎನ್ನುವುದು ತನಿಖೆಯಲ್ಲಿ ಬಹಿರಂಗೊಂಡಿತ್ತು. ಮರಣೋತ್ತರ ಪರೀಕ್ಷೆಯಲ್ಲಿ ಬಾಲಕನ ಕುತ್ತಿಗೆ ಬಳಿ ಹಗ್ಗ, ಬಟ್ಟೆ ಅಥವಾ ಇತರೆ ಒರಟಾದ ವಸ್ತುವಿನಿಂದ ಗಾಯವಾಗಿರುವುದು ಮತ್ತು ಇದರಿಂದಲೇ ಸಾವು ಸಂಭವಿಸಿ ರುವುದು ದೃಢಪಟ್ಟಿತ್ತು. ಕೃತ್ಯದಲ್ಲಿ ಕಾನೂನಿ ನೊಂದಿಗೆ ಸಂಘರ್ಷಕ್ಕೆ ಒಳಗಾದ ಮೂವರು ಬಾಲಕರ ಪಾತ್ರ ಇರುವುದನ್ನು ಮೃತ ವಿದ್ಯಾರ್ಥಿಯ ಸಹಪಾಠಿಗಳು ಮತ್ತು ಆತನೊಂದಿಗೆ ವಸತಿ ನಿಲಯದಲ್ಲಿ ಇದ್ದ ಇತರೆ ವಿದ್ಯಾರ್ಥಿಗಳು ಖಚಿತಪಡಿಸಿದ್ದರು' ಎಂದು ತಿಳಿಸಿದ್ದಾರೆ.

ಕಾಲುಜಾರಿ ಬಿದ್ದಿದ್ದಾಗಿ ಹೇಳಿದ್ದರು: ಡಿ.11ರ ರಾತ್ರಿ ಬಾಲಕನ ಹತ್ಯೆ ನಡೆದಿತ್ತು. ಡಿ.12ರಂದು ಬಾಲಕನ ಶವವನ್ನು ಆತನ ತಂದೆಗೆ ಹಸ್ತಾಂತರಿಸಿದ್ದ ಕೆಐಎಸ್‌ಎಸ್ ಸಿಬ್ಬಂದಿ, 'ಆತ ಸ್ನಾನಗೃಹದಲ್ಲಿ ಜಾರಿಬಿದ್ದು, ಗಾಯಗೊಂಡು ಮೃತಪಟ್ಟಿದ್ದಾನೆ' ಎಂದು ಹೇಳಿದ್ದರು. ಬಾಲಕನ ಸಾವಿನ ಬಗ್ಗೆ ಪೊಲೀಸರಿಗೆ ಸಂಸ್ಥೆ ಮಾಹಿತಿ ನೀಡಿರಲಿಲ್ಲ.

'ಸ್ನಾನಗೃಹದಲ್ಲಿ ಕಾಲು ಜಾರಿ ಬಿದ್ದು, ಗಾಯಗೊಂಡಿರುವ ಪುತ್ರನಿಗೆ, ಕಳಿಂಗ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಕೆಐಎಂಎಸ್) ಚಿಕಿತ್ಸೆ ನೀಡಲಾಗುತ್ತಿದೆ. ಬನ್ನಿ' ಎಂದು ಎಂದು ಸಂಸ್ಥೆಯ ಸಿಬ್ಬಂದಿ ಕರೆ ಮಾಡಿ ತಿಳಿಸಿದ್ದರು. ಅಲ್ಲಿಗೆ ಹೋದಾಗ, ಪುತ್ರ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು. ಆದರೆ, 'ನನ್ನ ಮಗನ ಸಾವು ಆಕಸ್ಮಿಕವಲ್ಲ, ಕೊಲೆ' ಎಂದು ಮೃತ ಬಾಲಕನ ತಂದೆ, ಕಿಯೊಂಜರ್ ಠಾಣೆಗೆ ಡಿ.13ರಂದು ದೂರು ನೀಡಿದ್ದರು.

ಜನಾಕ್ರೋಶ, ಪ್ರತಿಭಟನೆ

ಬುಡಕಟ್ಟು ಬಾಲಕನ ಹತ್ಯೆಯು ಕಿಯೊಂಜರ್ ಜಿಲ್ಲೆಯಲ್ಲಿ ಜನಾಕ್ರೋಶಕ್ಕೆ ಕಾರಣವಾಗಿದೆ. ಡಿ. 13ರಂದು ಸ್ಥಳೀಯರು ಬಾಲಕನ ಮೃತದೇಹದೊಂದಿಗೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದ್ದರು.

ಕಿಯೊಂಜರ್ ನಗರ ಠಾಣೆಯಲ್ಲಿ ದಾಖಲಾದ ಝೀರೊ ಎಫ್‌ಐಆರ್ (ಬೇರೊಂದು ಠಾಣೆಯ ವ್ಯಾಪ್ತಿಯಲ್ಲಿ ನಡೆದ ಅಪರಾಧದ ದೂರು) ಆಧರಿಸಿ, ಇನ್ಫೊಸಿಟಿ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವಿನ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಹೇಳಿದ್ದಾರೆ.

'ಜಿ ರಾಮ್ ಜಿ'ಗೆ ಅಂಗೀಕಾರ

ಒಂದನೇ ಪುಟದಿಂದ...

₹10–11 ಲಕ್ಷ ಕೋಟಿಯನ್ನು ಕೇವಲ ವೇತನ ಪಾವತಿಸಲು ಖರ್ಚು ಮಾಡಬಾರದು. ಬದಲಾಗಿ, ಶಾಶ್ವತ ಆಸ್ತಿಗಳನ್ನು ಸೃಷ್ಟಿಸಲು ಬಳಸಬೇಕು ಎಂದು ಭಾವಿಸಿ ಆಳವಾದ ಚರ್ಚೆಯ ಬಳಿಕ 'ಜಿ ರಾಮ್ ಜಿ' ಮಸೂದೆಯನ್ನು ತರಲಾಗಿದೆ ಎಂದು ಸರ್ಕಾರದ ನಿರ್ಧಾರ ಸಮರ್ಥಿಸಿಕೊಂಡರು.

ಲೋಕಸಭೆ ಕಲಾಪದ ಬಳಿಕ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಮತ್ತು 'ಇಂಡಿ' ಮೈತ್ರಿಕೂಟದ ಸದಸ್ಯರು ಸಂಸತ್ತಿನಲ್ಲಿ ತೋರಿದ ಅವಮಾನಕರ ವರ್ತನೆಯನ್ನು ನಾನು ಬಲವಾಗಿ ಖಂಡಿಸುತ್ತೇನೆ. ಕೆಟ್ಟ ನಡವಳಿಕೆ ಮೂಲಕ ಅವರು ಸಂಸದೀಯ ಸಂಪ್ರದಾಯಗಳನ್ನು ಮುರಿದಿದ್ದಾರೆ' ಎಂದು ಟೀಕಿಸಿದರು. ಪ್ರತಿಪಕ್ಷಗಳ ಈ ರೀತಿಯ 'ಅವಮಾನಕರ' ನಡವಳಿಕೆಯನ್ನು ಬಾಪು ಅವರು ಒಪ್ಪಿಕೊಳ್ಳುವರೇ ಎಂದು ಪ್ರಶ್ನಿಸಿದರು.

ವಿಪಕ್ಷ ಸದಸ್ಯರಿಂದ ಧರಣಿ

'ಜಿ ರಾಮ್ ಜಿ' ಮಸೂದೆಯನ್ನು ವಿರೋಧಿಸಿ ವಿರೋಧ ಪಕ್ಷಗಳ ಹಲವು ಸದಸ್ಯರು 'ಮಹಾತ್ಮ ಗಾಂಧಿ ನರೇಗಾ' ಎಂಬ ಬರಹ ಇದ್ದ ಬ್ಯಾನರ್ ಹಿಡಿದು ಸಂಸತ್ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

'ಮೋದಿ ಸರ್ಕಾರವು ಮಹಾತ್ಮ ಗಾಂಧಿ ಅವರಿಗೆ ಮಾಡಿದ ಅವಮಾನವನ್ನು ದೇಶವು ಸಹಿಸುವುದಿಲ್ಲ' ಎಂದು ಘೋಷಣೆ ಕೂಗಿದರು. ಪ್ರೇರಣಾ ಸ್ಥಳದಲ್ಲಿರುವ ಗಾಂಧಿ ಪ್ರತಿಮೆ ಬಳಿಯಿಂದ ಮಕರ ದ್ವಾರದವರೆಗೆ ಪ್ರತಿಭಟನಾ ಜಾಥಾ ನಡೆಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಡಿಎಂಕೆಯ ಕನಿಮೊಳಿ, ಟಿ.ಆರ್.ಬಾಲು, ಎ.ರಾಜಾ, ಐಯುಎಂಎಲ್‌ನ ಇ.ಟಿ.ಮೊಹಮ್ಮದ್ ಬಶೀರ್ ಮತ್ತು ಶಿವಸೇನಾದ (ಯುಬಿಟಿ) ಅರವಿಂದ ಸಾವಂತ್ ಸೇರಿದಂತೆ ಹಲವರು ಪಾಲ್ಗೊಂಡರು.

'ಯೋಜನೆಯ ಅಂತ್ಯ ಖಚಿತ'

ಎಲ್ಲ ವಿರೋಧ ಪಕ್ಷಗಳು ಈ ಮಸೂದೆಯನ್ನು ಬಲವಾಗಿ ವಿರೋಧಿಸುತ್ತವೆ. ಕೆಲಸದ ದಿನಗಳನ್ನು 100ರಿಂದ 125ಕ್ಕೆ ಹೆಚ್ಚಿಸಿರುವುದು ಜನರ ಕಣ್ಣಿಗೆ ಮಣ್ಣೆರಚುವ ತಂತ್ರವಲ್ಲದೆ ಬೇರೇನೂ ಅಲ್ಲ. ಮುಂದಿನ ಕೆಲವು ದಿನಗಳಲ್ಲಿ ಈ ಉದ್ಯೋಗ ಖಾತರಿ ಯೋಜನೆಯ ಅಂತ್ಯ ಖಚಿತ ಎಂಬುದು ಈ ಮಸೂದೆ ಯನ್ನು ಎಚ್ಚರಿಕೆಯಿಂದ ಓದುವ ಯಾರಿಗಾದರೂ ತಿಳಿಯುತ್ತದೆ. ರಾಜ್ಯಗಳ ಮೇಲೆ ಹೊರೆ ಬಿದ್ದ ತಕ್ಷಣ, ಯೋಜನೆ ನಿಧಾನವಾಗಿ ಹಳ್ಳ ಹಿಡಿಯುತ್ತದೆ. ಏಕೆಂದರೆ, ರಾಜ್ಯ ಸರ್ಕಾರಗಳ ಬಳಿ ಸಾಕಷ್ಟು ಹಣವಿಲ್ಲ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಹೇಳಿದರು.

ಬೋಪಣ್ಣ–ಮೆಡ್ವೆಡೇವ್ ಚೆಂದದ ಆಟ

ಬೆಂಗಳೂರಿನಲ್ಲಿ ವಿಶ್ವ ಟೆನಿಸ್ ಲೀಗ್: ಸುಮಿತ್ ನಗಾಲ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯಲ್ಲಿ ಗುರುವಾರ ಸಂಜೆ ಸೇರಿದ್ದ ಕ್ರೀಡಾಪ್ರಿಯರಿಗೆ ದಿಗ್ಗಜ ಆಟಗಾರರ ಜೋಡಿಯು ರಸದೌತಣ ನೀಡಿತು. ಸ್ಥಳೀಯ ಹೀರೊ ರೋಹನ್ ಬೋಪಣ್ಣ ಅವರ ಆಟವನ್ನು ಕಣ್ತುಂಬಿ ಕೊಳ್ಳುವ ಅವಕಾಶ ಟೆನಿಸ್‌ಪ್ರಿಯರಿಗೆ ಲಭಿಸಿತು.

ಇಲ್ಲಿ ನಡೆಯುತ್ತಿರುವ ವಿಶ್ವ ಟೆನಿಸ್ ಲೀಗ್ (ಡಬ್ಲ್ಯುಟಿಎಲ್) ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಫಾಲ್ಕನ್ಸ್ ತಂಡವನ್ನು ಪ್ರತಿನಿಧಿಸುತ್ತಿರುವ ರೋಹನ್ ಮತ್ತು ಡೇನಿಯಲ್ ಮೆಡ್ವೆಡೇವ್ ಅವರು 6-3ರಿಂದ ಡೆನಿಸ್ ಶಪೊವಲೋವ್ ಹಾಗೂ ಭಾರತದ ಯೂಕಿ ಭಾಂಬ್ರಿ ವಿರುದ್ಧ ಜಯಗಳಿಸಿದರು.

ಮಿಶ್ರ ಡಬಲ್ಸ್‌ನಲ್ಲಿಯೂ ಕೊಡಗಿನ ಆಟಗಾರ ರೋಹನ್ ಬೋಪಣ್ಣ ಅವರು ಮ್ಯಾಗ್ಡಾ ಲಿನೆಟ್ ಅವರೊಂದಿಗೆ 6-3ರಿಂದ ಹಾಕ್ಸ್ ತಂಡದ ಯೂಕಿ ಬಾಂಬ್ರಿ ಹಾಗೂ ಮಾಯಾ ರೇವತಿ ಜೋಡಿಯನ್ನು ಸೋಲಿಸಿದರು.

ಮಹಿಳಾ ಸಿಂಗಲ್ಸ್‌ನಲ್ಲಿ ಹಾಕ್ಸ್ ತಂಡದ ಎಲಿನಾ ಸ್ವಿಟೋಲಿನಾ 6-2ರಿಂದ ಫಾಲ್ಕನ್ಸ್‌ನ ಮ್ಯಾಗ್ಡಾ ಲಿನೆಟ್ ವಿರುದ್ಧ ಜಯಭೇರಿ ಬಾರಿಸಿದರು. ಈಗಲ್ಸ್‌ನ ಪೌಲಾ ಬಡೋಸಾ 6-1ರಿಂದ ಕೈಟ್ಸ್ ತಂಡದ ಮಾರ್ತಾ ಕಾಸ್ತ್ಯುಕ್ ವಿರುದ್ಧ ಜಯಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಈಗಲ್ಸ್ ತಂಡದ ಸುಮಿತ್ ನಗಾಲ್ 7-6ರಿಂದ ಕೈಟ್ಸ್ ತಂಡದ ದಕ್ಷಿಣೇಶ್ವರ ಸುರೇಶ್ ವಿರುದ್ಧ ಗೆದ್ದರು. ಡಬಲ್ಸ್‌ನಲ್ಲಿ ಸುಮಿತ್ ನಗಾಲ್-ಗೇಲ್ ಮಾನ್ಫಿಲ್ಸ್ ಜೋಡಿಯು ಕೈಟ್ಸ್‌ನ ನಿಕ್ ಕಿರ್ಗಿಯೋಸ್–ದಕ್ಷಿಣೇಶ್ವರ ಸುರೇಶ್ ವಿರುದ್ಧ ಜಯಿಸಿತು.

ಪಂದ್ಯಗಳನ್ನು ವೀಕ್ಷಿಸಲು ಆಗಮಿಸಿದ್ದ ಕ್ರಿಕೆಟ್ ತಾರೆ ಶ್ರೇಯಸ್ ಅಯ್ಯರ್ ಅವರು ರೋಹನ್ ಬೋಪಣ್ಣ, ಮೆಡ್ವೆಡೇವ್ ಅವರೊಂದಿಗೆ ಮಾತುಕತೆ ನಡೆಸಿದರು.

ಕ್ರಿಕೆಟಿಗ ಶ್ರೇಯಸ್ ಅಯ್ಯರ್ ಮತ್ತು ಟೆನಿಸ್ ದಿಗ್ಗಜ ರೋಹನ್ ಬೋಪಣ್ಣ ಮಾತುಕತೆ ಚಿತ್ರ: ಬಿ.ಕೆ. ಜನಾರ್ಧನ್

ವಿಶ್ವ ಬ್ಯಾಡ್ಮಿಂಟನ್ ಟೂರ್ ಫೈನಲ್ಸ್ • ಭಾರತದ ಜೋಡಿಗೆ ಸತತ 2ನೇ ಗೆಲುವು

ನಾಕೌಟ್ ಸನಿಹದಲ್ಲಿ ಸಾತ್ವಿಕ್–ಚಿರಾಗ್

ಹಾಂಗ್ಝು (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಇಲ್ಲಿ ನಡೆಯುತ್ತಿರುವ ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಟೂರ್ ಫೈನಲ್ಸ್‌ನಲ್ಲಿ ಗೆಲುವಿನ ಓಟ ಮುಂದುವರಿಸಿದ್ದು, ನಾಕೌಟ್ ಹಂತಕ್ಕೆ ಹತ್ತಿರವಾದರು.

ವಿಶ್ವ ಬ್ಯಾಡ್ಮಿಂಟನ್ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಭಾರತದ ಜೋಡಿಯು ಗುರುವಾರ ನಡೆದ ಬಿ ಗುಂಪಿನ ತಮ್ಮ ಎರಡನೇ ಪಂದ್ಯದಲ್ಲಿ 21-11, 16-21, 21-11ರಿಂದ ಇಂಡೊನೇಷ್ಯಾದ ಫಜರ್ ಅಲ್ಫಿಯಾನ್ ಮತ್ತು ಮೊಹಮ್ಮದ್ ಶೋಹಿಬುಲ್ ಫಿಕ್ರಿ ಅವರನ್ನು ಸೋಲಿಸಿದರು. ಭಾರತದ ಆಟಗಾರರು ಬುಧವಾರ 12–21, 22–20, 21–14ರಿಂದ ಚೀನಾದ ಲಿಯಾಂಗ್ ವೀ ಕೆಂಗ್ ಮತ್ತು ವಾಂಗ್ ಚಾಂಗ್ ಜೋಡಿಯನ್ನು ಮಣಿಸಿ ಅಭಿಯಾನ ಆರಂಭಿಸಿದ್ದರು.

ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ –ಎಎಫ್‌ಪಿ ಚಿತ್ರ

ಆಡಿದ ಎರಡೂ ಪಂದ್ಯಗಳನ್ನು ಗೆದ್ದಿರುವ ಭಾರತದ ಜೋಡಿಯು ಗುಂಪಿನಲ್ಲಿ ಅಗ್ರ-ಸ್ಥಾನದಲ್ಲಿದೆ. ಚೀನಾ, ಮಲೇಷ್ಯಾ ಮತ್ತು ಇಂಡೋನೇಷ್ಯಾದ ಜೋಡಿಗಳು ಕ್ರಮವಾಗಿ ನಂತರದ ಸ್ಥಾನದಲ್ಲಿವೆ. ವಿಶ್ವದ ಮಾಜಿ ಅಗ್ರಮಾನ್ಯ ಜೋಡಿಯು ಶುಕ್ರವಾರ ತಮ್ಮ ಕೊನೆಯ ಗುಂಪು ಹಂತದ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಆರನ್ ಚಿಯಾ ಮತ್ತು ಸೋಹ್ ವೂಯಿ ಯಿಕ್ (ಮಲೇಷ್ಯಾ) ಅವರನ್ನು ಎದುರಿಸಲಿದ್ದಾರೆ.

ಅಮೋಘ ಲಯದಲ್ಲಿರುವ ಭಾರತದ ಜೋಡಿಯು ಪ್ರಸಕ್ತ ಋತುವಿನಲ್ಲಿ ಹಾಂಗ್‌ಕಾಂಗ್ ಓಪನ್ ಮತ್ತು ಚೀನಾ ಮಾಸ್ಟರ್ಸ್ ಟೂರ್ನಿಗಳಲ್ಲಿ ಫೈನಲ್ ಪ್ರವೇಶಿಸಿತ್ತು. ಅಲ್ಲದೆ, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಸಾಧನೆ ಮಾಡಿತ್ತು.

ಸಂತೋಷ್ ಟ್ರೋಫಿ ಫುಟ್‌ಬಾಲ್ ಚಾಂಪಿಯನ್‌ಷಿಪ್ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಯುನೈಟೆಡ್ ಫುಟ್‌ಬಾಲ್ ಕ್ಲಬ್ ತಂಡದ ನಿಖಿಲ್ ರಾಜ್ ಮುರುಗೇಶ್ ಅವರು 'ಸಂತೋಷ್ ಟ್ರೋಫಿ'ಗಾಗಿ ನಡೆಯಲಿರುವ 79ನೇ ಸೀನಿಯರ್ ಪುರುಷರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯ ತಂಡವನ್ನು ಮುನ್ನಡೆಸಲಿದ್ದಾರೆ. ಟೂರ್ನಿಯು ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಡಿಸೆಂಬರ್ 20ರಿಂದ (ಶನಿವಾರ) 24ರ ವರೆಗೆ ನಡೆಯಲಿದೆ.

ತಂಡ ಹೀಗಿದೆ: ಸುಜಯ್ ಎಸ್., ಸುಬ್ರಹ್ಮಣ್ಯಂ, ಕಿರಣ್ ಶರವಣನ್, ರಾಜಿಲ್ ಸಜಿ, ಅಜಿತ್ ಅರಸು, ಅರ್ಜುನ್ ಗೌಡ, ಅಬಿ ಎಸ್., ಅರವಿಂದ್ ಬಾಬು ಜಿ., ಅರುಣ್ ಕುಮಾರ್ ಡಿ., ಕಾರ್ತಿಕ್ ಜಿ., ವಿಶಾಲ್ ಆರ್., ಮಂಗ್ಲೆಂಥಂಗ್ ಸಿಂಗಸಿತ್, ಧನುಷ್ ಆರ್., ಶ್ರೇಯಸ್ ಕೆ., ಗಾಡ್ವಿನ್ ಜಾಸನ್, ಸಿ.ರೋಹನ್ ಸಿಂಗ್, ಕ್ರಿಸ್ಟಿನ್ ಸಿ. ಕ್ಲೀಟಸ್, ನಿಖಿಲ್ ರಾಜ್ ಮುರುಗೇಶ್ (ನಾಯಕ), ಮ್ಯಾಕರ್ಟನ್ ಲೂಯಿಸ್ ಹಾಗೂ ನಿಕ್ಸನ್. ಮುಖ್ಯ ಕೋಚ್: ರವಿಬಾಬು ರಾಜು, ಸಹಾಯಕ ಕೋಚ್: ಸಿ.ಚಂದ್ರಶೇಖರ್ ರಾವ್, ಮ್ಯಾನೇಜರ್: ಬಿ.ಭಟ್ಟಾಚಾರ್‌ಜೀ.

ಕರ್ನಾಟಕ ತಂಡದ ಪಂದ್ಯಗಳು	
ದಿನಾಂಕ	ಎದುರಾಳಿ
ಡಿ.20	ಲಕ್ಷದ್ವೀಪ
ಡಿ.22	ಸರ್ವೀಸಸ್
ಡಿ.24	ಗೋವಾ
ಎಲ್ಲ ಪಂದ್ಯಗಳು ಮಧ್ಯಾಹ್ನ 3ಕ್ಕೆ ಆರಂಭವಾಗಲಿವೆ	

ಕಮಿನ್ಸ್ ದಾಳಿಗೆ ಕುಸಿದ ಇಂಗ್ಲೆಂಡ್

ಅಡಿಲೇಡ್ (ಎಪಿ): ವೇಗಿ ಪ್ಯಾಟ್ ಕಮಿನ್ಸ್ ಅವರ ನಿಖರ ದಾಳಿಯ ಮುಂದೆ ಇಂಗ್ಲೆಂಡ್ ತಂಡವು ಕುಸಿಯಿತು.

ಇಲ್ಲಿ ನಡೆಯುತ್ತಿರುವ ಆ್ಯಷಸ್ ಟೆಸ್ಟ್ ಸರಣಿಯ ಪಂದ್ಯದ ಎರಡನೇ ದಿನದಾಟದಲ್ಲಿ ಇಂಗ್ಲೆಂಡ್ ತಂಡವು ಮೊದಲ ಇನಿಂಗ್ಸ್ ಹಿನ್ನಡೆಯ ಆತಂಕದಲ್ಲಿದೆ.

ಅಲೆಕ್ಸ್ ಕ್ಯಾರಿ ಶತಕ, ಉಸ್ಮಾನ್ ಖ್ವಾಜಾ ಮತ್ತು ಮಿಚೆಲ್ ಸ್ಟಾರ್ಕ್ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 91.2 ಓವರ್‌ಗಳಲ್ಲಿ 371 ರನ್ ಗಳಿಸಿತು. ಗುರುವಾರ ಅದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡವು ಕಮಿನ್ಸ್ (54ಕ್ಕೆ3) ಅವರ ದಾಳಿಗೆ ಆರಂಭದಲ್ಲಿಯೇ ಕುಸಿಯಿತು. ಕಮಿನ್ಸ್ ಅವರಿಗೆ ಸ್ಕಾಟ್ ಬೊಲ್ಯಾಂಡ್ (31ಕ್ಕೆ2) ಮತ್ತು ಸ್ಪಿನ್ನರ್ ನೇಥನ್ ಲಯನ್ (51ಕ್ಕೆ2) ಉತ್ತಮ ಬೆಂಬಲ ಕೊಟ್ಟರು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ ಇಂಗ್ಲೆಂಡ್ ತಂಡವು 68 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 213 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್:ಆಸ್ಟ್ರೇಲಿಯಾ: 91.2 ಓವರ್‌ಗಳಲ್ಲಿ 371 (ಮಿಚೆಲ್ ಸ್ಟಾರ್ಕ್ 54, ಸ್ಕಾಟ್ ಬೋಲ್ಯಾಂಡ್ ಔಟಾಗದೇ 14, ಜೋಫ್ರಾ ಆರ್ಚರ್ 53ಕ್ಕೆ5, ಬ್ರೈಡನ್ ಕಾರ್ಸ್ 89ಕ್ಕೆ2, ವಿಲ್ ಜ್ಯಾಕ್ಸ್ 105ಕ್ಕೆ2) ಇಂಗ್ಲೆಂಡ್: 68 ಓವರ್‌ಗಳಲ್ಲಿ 8ಕ್ಕೆ213 (ಬೆನ್ ಡಕೆಟ್ 29, ಹ್ಯಾರಿ ಬ್ರೂಕ್ 45, ಬೆನ್ ಸ್ಟೋಕ್ಸ್ ಬ್ಯಾಟಿಂಗ್ 45, ಜೆಮಿ ಸ್ಮಿತ್ 22, ಜೋಫ್ರಾ ಆರ್ಚರ್ ಬ್ಯಾಟಿಂಗ್ 30, ಪ್ಯಾಟ್ ಕಮಿನ್ಸ್ 31ಕ್ಕೆ2, ನೇಥನ್ ಲಯನ್ 51ಕ್ಕೆ2).

ಎಸ್‌ಎಂಎಟಿ: ಜಾರ್ಖಂಡ್ ಚಾಂಪಿಯನ್

ಪುಣೆ (ಪಿಟಿಐ): ನಾಯಕ ಇಶಾನ್ ಕಿಶನ್ ಅವರ ಶತಕ ಹಾಗೂ ಕುಮಾರ್ ಕುಶಾಗ್ರ ಅವರ ಬಿರುಸಿನ ಅರ್ಧಶತಕದ ನೆರವಿನಿಂದ ಜಾರ್ಖಂಡ್ ತಂಡವು 69 ರನ್‌ಗಳಿಂದ ಹರಿಯಾಣ ತಂಡವನ್ನು ಮಣಿಸಿತು. ಅದರೊಂದಿಗೆ, ಸೈಯದ್ ಮುಷ್ತಾಕ್ ಅಲಿ ಟ್ರೋಫಿಯನ್ನು ಚೊಚ್ಚಲ ಬಾರಿಗೆ ಜಯಿಸಿತು.

ಟೂರ್ನಿಯುದ್ದಕ್ಕೂ ಅಮೋಘ ಪ್ರದರ್ಶನ ನೀಡಿದ್ದ ಜಾರ್ಖಂಡ್ ತಂಡವು ಇಲ್ಲಿನ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಫೈನಲ್ ಪಂದ್ಯದಲ್ಲಿಯೂ ಸಂಪೂರ್ಣ ಮೇಲುಗೈ ಸಾಧಿಸಿತು.

ಕಿಶನ್ (101; 49 ಎ, 4x6, 6x10) ಶತಕ ಗಳಿಸಿದರೆ, ಕುಮಾರ್ (81; 38ಎ, 4x8, 6x5) ಬಿರುಸಿನ ಅರ್ಧಶತಕ ಗಳಿಸಿದರು. ಅದರಿಂದ ಜಾರ್ಖಂಡ್ ನಿಗದಿತ ಓವರ್‌ಗಳಲ್ಲಿ 3 ವಿಕೆಟ್‌ಗೆ 262 ರನ್ ಗಳಿಸಿತು.

ದೊಡ್ಡ ಗುರಿ ಬೆನ್ನಟ್ಟಿದ ಹರಿಯಾಣ, ಒತ್ತಡಕ್ಕೆ ಸಿಲುಕಿ ಆರಂಭದಿಂದಲೇ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿತು. ಸುಶಾಂತ್ ಮಿಶ್ರಾ (27ಕ್ಕೆ3) ಹಾಗೂ ಬಾಲಕೃಷ್ಣ (38ಕ್ಕೆ3) ಪರಿಣಾಮಕಾರಿ ಬೌಲಿಂಗ್ ಎದುರು 18.3 ಓವರ್‌ಗಳಲ್ಲಿ 193 ರನ್‌ಗಳಿಗೆ ಕುಸಿಯಿತು. ಯಶವರ್ಧನ್ ದಲಾಲ್ (53; 22ಎ) ಹಾಗೂ ಸಮಂತ್ ಜಾಖಡ್ (38; 17ಎ) ಹೋರಾಟ ತೋರಿದರು.

ಸಂಕ್ಷಿಪ್ತ ಸ್ಕೋರು: ಜಾರ್ಖಂಡ್: 20 ಓವರ್‌ಗಳಲ್ಲಿ 3 ವಿಕೆಟ್‌ಗೆ 262(ಇಶಾನ್ ಕಿಶನ್ 101, ಕುಮಾರ್ ಕುಶಾಗ್ರ 81, ಅನುಕುಲ್ ರಾಯ್ ಔಟಾಗದೇ 40). ಹರಿಯಾಣ: 18.3 ಓವ್‌ಗಳಲ್ಲಿ 193 (ಯಶವರ್ಧನ್ ದಲಾಲ್ 53, ಸಮಂತ್ ಜಾಖಡ್ 38; ಸುಶಾಂತ್ ಮಿಶ್ರಾ 27ಕ್ಕೆ3, ಬಾಲಕೃಷ್ಣ 38ಕ್ಕೆ3).

ಪಂದ್ಯದ ಆಟಗಾರ: ಇಶಾನ್ ಕಿಶನ್.

ಸರಣಿಯ ಆಟಗಾರ: ಅನುಕುಲ್ ರಾಯ್.

ಕ್ರಿಕೆಟ್: ಕುತೂಹಲ ಘಟ್ಟದಲ್ಲಿ ಪಂದ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ವರುಣ್ ಪಟೇಲ್ ಅವರ ಅರ್ಧಶತಕ ಬಲದಿಂದ ಕರ್ನಾಟಕವು ಇಲ್ಲಿ ನಡೆಯುತ್ತಿರುವ ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಮಹಾರಾಷ್ಟ್ರ ವಿರುದ್ಧ ಅಲ್ಪ ಮುನ್ನಡೆ ಪಡೆಯಿತು.

ಇಲ್ಲಿನ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಗುರುವಾರ ಮೂರನೇ ದಿನದಾಟ ಮುಂದುವರಿಸಿದ ಕರ್ನಾಟಕವು 104 ಓವರ್‌ಗಳಲ್ಲಿ 320 ರನ್ ಗಳಿಸಿ ಆಲೌಟ್ ಆಯಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಮಹಾರಾಷ್ಟ್ರ ತಂಡಕ್ಕೆ ಮಂಗಳೂರಿನ ವೇಗಿ ಈಸಾ ಹಕೀಮ್ ಪುತ್ತಿಗೆ (18ಕ್ಕೆ 3) ಅವರು ನಾಯಕ ಸಾಹಿಲ್ ಪಾರಕ್, ಸುಶ್ರುತ್ ಸಾವಂತ್ ಮತ್ತು ಸಂಕಿತ್ ಸುರಾನ ವಿಕೆಟ್ ಪಡೆದು ಆರಂಭಿಕ ಆಘಾತ ನೀಡಿದರು. ಎಡಗೈ ಸ್ಪಿನ್ನರ್ ಬಿ.ಆರ್.ರತನ್ ಎರಡು ವಿಕೆಟ್ ಪಡೆದು ಎದುರಾಳಿ ತಂಡದ ಮಧ್ಯಮ ಕ್ರಮಾಂಕದ ಬೆನ್ನೆಲುಬು ಮುರಿದರು.

ಮೂರನೇ ದಿನದಾಟದ ಅಂತ್ಯಕ್ಕೆ ಮಹಾರಾಷ್ಟ್ರ 59 ಓವರ್‌ಗಳಲ್ಲಿ 6ಕ್ಕೆ 176 ರನ್ ಗಳಿಸಿ 160 ರನ್ ಮುನ್ನಡೆ ಪಡೆದಿದೆ. ಆರ್ಕಮ್ ಸಯ್ಯದ್ (36), ಸ್ವಶಿಕ್ ಜಗತಾಪ್ (24) ಕ್ರೀಸ್‌ನಲ್ಲಿದ್ದಾರೆ. ಕಡೇ ದಿನದಾಟ ಬಾಕಿಯಿದ್ದು, ಪಂದ್ಯ ಕುತೂಹಲ ಘಟ್ಟದಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಮಹಾರಾಷ್ಟ್ರ: 94.2 ಓವರ್‌ಗಳಲ್ಲಿ 304; ಕರ್ನಾಟಕ: 104 ಓವರ್‌ಗಳಲ್ಲಿ 320 (ವರುಣ್ ಪಟೇಲ್ 50, ಸ್ವಶಿಕ್ ಜಗತಾಪ್ 93ಕ್ಕೆ 4, ಅನೀಶ್ ಜೋಶಿ 22ಕ್ಕೆ2). ಎರಡನೇ ಇನಿಂಗ್ಸ್: ಮಹಾರಾಷ್ಟ್ರ: 59 ಓವರ್‌ಗಳಲ್ಲಿ 6ಕ್ಕೆ176 (ಆರ್ಕಮ್ ಸಯ್ಯದ್ ಔಟಾಗದೇ 36; ಈಸಾ ಹಕೀಮ್ ಪುತ್ತಿಗೆ 18ಕ್ಕೆ 3).

ವಿಜಯ್ ಮರ್ಚೆಂಟ್ ಟ್ರೋಫಿ: ಕರ್ನಾಟಕ ತಂಡಕ್ಕೆ ಸುಕೃತ್ ಆಸರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರೋಡಾ ತಂಡದ ಸಂಘಟಿತ ಬೌಲಿಂಗ್ ದಾಳಿ ಎದುರು ಕುಸಿಯುತ್ತಿದ್ದ ಕರ್ನಾಟಕ ತಂಡಕ್ಕೆ ಸುಕೃತ್ ಜೆ. (107 ರನ್; 211 ಎ; 4x12, 6x2) ಆಸರೆಯಾದರು. ಅವರ ಶತಕದ ಬಲದಿಂದ ರಾಜ್ಯ ತಂಡವು ಗುರುವಾರ ಆರಂಭಗೊಂಡ ವಿಜಯ್ ಮರ್ಚಂಟ್ ಟ್ರೋಫಿ (16 ವರ್ಷದೊಳಗಿನವರ) ಎಲೀಟ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 9 ವಿಕೆಟ್‌ಗೆ 225 ರನ್ ಗಳಿಸಿತು.

ರಾಯಪುರದ ಶಹೀದ್ ವೀರ ನಾರಾಯಣ ಸಿಂಗ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ತಂಡದ ನಾಯಕ ಆರೂಷ್ ಜೈನ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆದರೆ, ಯುವರಾಜ್ ಸಿಂಹ (63ಕ್ಕೆ3), ಪ್ರಣವ್ ಕೆ. (36ಕ್ಕೆ2) ಹಾಗೂ ಸುಮಿತ್ ಮಕ್ವಾನಾ (48ಕ್ಕೆ2) ಅವರ ಪರಿಣಾಮಕಾರಿ ಬೌಲಿಂಗ್ ಎದುರಿಸುವಲ್ಲಿ ಕರ್ನಾಟಕದ ಬ್ಯಾಟರ್‌ಗಳು ಎಡವಿದರು.

46 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ರಾಜ್ಯ ತಂಡಕ್ಕೆ ಶ್ಯಮಂತಕ್ ಅನಿರುದ್ಧ್ (44) ಹಾಗೂ ಸುಕೃತ್ ಅವರು 52 ರನ್ ಜೊತೆಯಾಟವಾಡಿ ಚೇತರಿಕೆ ನೀಡಿದರು. ಆದರೆ, ಅದೇ ವೇಳೆ ಶ್ಯಮಂತಕ್ ರನ್ ಔಟ್ ಆದರು. ಮತ್ತೆ ವಿಕೆಟ್‌ಗಳು ಬೇಗಬೇಗನೆ ಉದುರಿದವು. 127 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡಿದ್ದ ರಾಜ್ಯ ತಂಡವು ಅಲ್ಪ ಮೊತ್ತಕ್ಕೆ ಕುಸಿಯುವ ಅತಂಕ ಎದುರಾಗಿತ್ತು.

ಆದರೂ, ತಾಳ್ಮೆ ಕಳೆದುಕೊಳ್ಳದ ಸುಕೃತ್ ಹಾಗೂ ಸಮರ್ಥ್ ಎಂ. ಕುಲಕರ್ಣಿ (ಔಟಾಗದೇ 15; 99 ಎ; 4x3) 9ನೇ ವಿಕೆಟ್ ಜೊತೆಯಾಟದಲ್ಲಿ 92 ರನ್ ಸೇರಿಸಿದರು. ಶತಕ ಗಳಿಸಿದ್ದ ಸುಕೃತ್ ಅವರನ್ನು ಯುವರಾಜ್ ಕೊನೆಗೂ ಬೌಲ್ಡ್ ಮಾಡಿದರು. ಸಮರ್ಥ್ ಅವರೊಂದಿಗೆ ವಿಧಾತ್ ಎಸ್. (ಔಟಾಗದೇ 5; 4ಎ, 4x1) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 90 ಓವರ್‌ಗಳಲ್ಲಿ 9 ವಿಕೆಟ್‌ಗೆ 225 (ಸುಕೃತ್ ಜೆ. 107, ಶ್ಯಮಂತಕ್ ಅನಿರುದ್ಧ್ 44, ಸಮರ್ಥ್ ಎಂ. ಕುಲಕರ್ಣಿ ಔಟಾಗದೇ 15; ಯುವರಾಜ್ ಸಿನ್ಹ್ 63ಕ್ಕೆ3, ಪ್ರಣವ್ ಕೆ. 36ಕ್ಕೆ2, ಸುಮಿತ್ ಮಕ್ವಾನಾ 48ಕ್ಕೆ2). ಬರೋಡಾ ವಿರುದ್ಧ.